ಸೋಮವಾರ, ಮಾರ್ಚ್ 27, 2023 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕಣಿವೆಯ ಸಾಸಿವೆ
ಕಾಶ್ಮೀರದ ಪುಲ್ವಾಮ ಜಿಲ್ಲೆಯ ಸಾಸಿವೆ ಹೊಲದಲ್ಲಿ ಭಾನುವಾರ ಬಾಲಕಿಯೊಬ್ಬಳು ಫಸಲನ್ನು ಹೊತ್ತು ಸಾಗಿದ ದೃಶ್ಯ



ಪಂಚರತ್ನ ಸಮಾರೋಪ: ದೇವೇಗೌಡರಿಗೆ ಚಿನ್ನಲೇಪಿತ ನೇಗಿಲು ಕಲಾಕೃತಿ ನೀಡಿದ ಕಾರ್ಯಕರ್ತ

ಚುನಾವಣೆಗೆ ರಣಕಹಳೆ ಮೊಳಗಿಸಿದ ಜೆಡಿಎಸ್

ಪ್ರಜಾವಾಣಿ ವಾರ್ತೆ

ಮೈಸೂರು: ರಾಜ್ಯದ ಮೂಲೆ ಮೂಲೆಗಳಿಂದ ಬಂದಿದ್ದ ಲಕ್ಷಾಂತರ ಅಭಿಮಾನಿಗಳ ಜಯಘೋಷ ಹಾಗೂ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಭಾವುಕ ಭಾಷಣದೊಂದಿಗೆ ಜೆಡಿಎಸ್ ಇಲ್ಲಿ ವಿಧಾನಸಭೆ ಚುನಾವಣೆ ಪ್ರಚಾರಕ್ಕೆ ಭಾನುವಾರ ರಣಕಹಳೆ ಮೊಳಗಿಸಿತು.

ಉತ್ತನಹಳ್ಳಿ ರಿಂಗ್ ರಸ್ತೆಯ ಜ್ವಾಲಾಮುಖಿ ತ್ರಿಪುರ ದೇಗುಲ ಸಮೀಪದ 100 ಎಕರೆ ವಿಶಾಲ ಮೈದಾನದಲ್ಲಿ ನಿರ್ಮಿಸಿದ್ದ ವೇದಿಕೆಯನ್ನು ಜೆಡಿಎಸ್ ನಾಯಕರು ಹಾಗೂ ಮುಖಂಡರು ಏರುತ್ತಿದ್ದಂತೆ ನೆರೆದಿದ್ದ ಕಾರ್ಯಕರ್ತರಲ್ಲಿ ಮಿಂಚಿನ ಸಂಚಲನ ಉಂಟು ಮಾಡಿತು. ನಾಯಕರೆಲ್ಲರೂ ಚಾಮುಂಡೇಶ್ವರಿಯ ಸ್ಮರಣೆ ಮಾಡಿದರು. ಪಕ್ಷಕ್ಕೆ ಶಕ್ತಿ ತುಂಬುವಂತೆಯೂ ಪ್ರಾರ್ಥಿಸಿದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಮಾತನಾಡಿ, 'ನಾಡದೇವತೆ ಚಾಮುಂಡೇಶ್ವರಿ ಶಕ್ತಿ ತುಂಬಿದ್ದಾಳೆ. ವೈದ್ಯರ ಅನುಮತಿ ಪಡೆದಿದ್ದೇನೆ. ದಯವಿಟ್ಟು ಜನರತ್ತ ಕೈ ಬೀಸುತ್ತಾ ಬನ್ನಿ. ಎಲ್ಲರನ್ನೂ ಒಮ್ಮೆ ನೋಡಿ ಬನ್ನಿ' ಎಂದು ಎಚ್.ಡಿ.ದೇವೇಗೌಡ ಅವರನ್ನು ಕೇಳಿಕೊಂಡರು. ಆ ಕ್ಷಣದಲ್ಲಿ ಕುಮಾರಸ್ವಾಮಿ ಹಾಗೂ ದೇವೇಗೌಡರಿಬ್ಬರೂ ಕಣ್ಣೀರಾದರು. ಈ ಕ್ಷಣ ನೆರೆದಿದ್ದವರನ್ನೂ ಭಾವುಕರನ್ನಾಗಿಸಿತು. ಎಲ್ಲರೂ ಎದ್ದುನಿಂತು ನೆಚ್ಚಿನ ನಾಯಕನಿಗೆ ಕೈಮುಗಿದು ಅಭಿಮಾನ ಪ್ರದರ್ಶಿಸಿದರು.

ಅನಾರೋಗ್ಯದ ಕಾರಣ, ಗಾಲಿಕುರ್ಚಿಯಲ್ಲಿ ಕುಳಿತಿದ್ದ ದೇವೇಗೌಡರು ಜನರತ್ತ ಕೈಬೀಸಿದರು; ಕೈಮುಗಿದರು. ಅವರೊಂದಿಗೆ ಶಾಸಕ ಎಚ್.ಡಿ.ರೇವಣ್ಣ, ಸಂಸದ ಪ್ರಜ್ವಲ್ ರೇವಣ್ಣ, ವಿಧಾನಪರಿಷತ್ ಸದಸ್ಯ ಸೂರಜ್ ರೇವಣ್ಣ, ಪಕ್ಷದ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೆಜ್ಜೆ ಹಾಕಿದರು.

'ಪಂಚರತ್ನ' ಯಾತ್ರೆಯ ಸಮಾರೋಪ ಭಾಷಣ ಮಾಡಿದ ಎಚ್.ಡಿ.ದೇವೇಗೌಡ ಅವರು, 'ಜಾತಿ, ಧರ್ಮದ ನಡುವೆ ವೈಷಮ್ಯ ಬಿತ್ತಿ ಜನರನ್ನು ಆಳುವ ಮಾದರಿ ನಮ್ಮದಲ್ಲ. ನಾವು ರೈತರ ಮಕ್ಕಳು. ಬೆವರು ಸುರಿಸಿ ಅನ್ನ ತಿನ್ನುತ್ತೇವೆ. ಇಲ್ಲಸಲ್ಲದ ಬಣ್ಣದ ಮಾತುಗಳಿಂದ ಮೇಲೆ ಬರುವ ಪ್ರಯತ್ನ ಮಾಡುವುದಿಲ್ಲ. ಇತ್ತೀಚಿನ ಬೆಳವಣಿಗೆಗಳನ್ನು ಗಮನಿಸುತ್ತಿದ್ದೇನೆ, ಬ್ರಿಟಿಷರು ಒಡೆದು ಆಳುವ ನೀತಿಯನ್ನೇ ದಶಕದ ಹಿಂದೆ ಅಧಿಕಾರಕ್ಕೆ ಬಂದ ಪಕ್ಷವು ಮಾಡುತ್ತಿದೆ' ಎಂದು ಚಾಟಿ ಬೀಸಿದರು. ಆದರೆ, ನಿರ್ದಿಷ್ಟವಾಗಿ ಯಾರನ್ನಾಗಲಿ, ವ್ಯಕ್ತಿಯನ್ನಾಗಲಿ ಪ್ರಸ್ತಾಪಿಸಲಿಲ್ಲ.

'ಆರೋಗ್ಯವನ್ನೂ ಲೆಕ್ಕಿಸದೇ ಪಂಚರತ್ನ ಯಾತ್ರೆಯನ್ನು ರಾಜ್ಯದ ಉದ್ದಗಲಕ್ಕೂ ಎಚ್.ಡಿ.ಕುಮಾರಸ್ವಾಮಿ ಮಾಡಿದ್ದಾರೆ. ಸಮಾರೋಪದಲ್ಲಿ ನಿಮ್ಮನ್ನು ನೋಡುತ್ತೇನೆಯೋ, ಇಲ್ಲವೋ ಎನಿಸಿತ್ತು. ದೇವರು ನಿಮ್ಮ ಮುಂದೆ ತಂದು ನಿಲ್ಲಿಸಿದ್ದಾನೆ' ಎಂದರು.

'ಏಳು ದಶಕದ ರಾಜಕೀಯದಲ್ಲಿ ಜನರ ಕಣ್ಣಿಗೆ ಮಣ್ಣೆರಚಲಿಲ್ಲ. ಮಾಡಿದ ಕಾರ್ಯಗಳನ್ನು ಆಧರಿಸಿ ಮತ ಭಿಕ್ಷೆ ಬೇಡಿದ್ದೇನೆ. ಹೋರಾಟ ಫಲಿಸದೇ ಇದ್ದಾಗ ರಾಜೀನಾಮೆ ಕೊಟ್ಟಿದ್ದೇನೆ. ಪಂಜಾಬ್ ಜನ ಅನ್ನಕ್ಕೆ ನನ್ನ ಹೆಸರಿಟ್ಟುಕೊಂಡಿದ್ದಾರೆ. ಅದಕ್ಕಿಂತ ಇನ್ನಾವ ಸಮ್ಮಾನ ಬೇಕಿಲ್ಲ' ಎಂದರು.

'ಬೆಂಗಳೂರು ಇಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ಗರ್ಜಿಸುತ್ತಿದೆ. ನಾನು ಮಾಡಿರುವ ಕೆಲಸ ಎಲ್ಲರಿಗೂ ಗೊತ್ತಿದೆ. ಅದು ಕಡತಗಳಲ್ಲಿದೆ. ಪ್ರಚಾರಕ್ಕಾಗಿ ಹಣ ವ್ಯಯ ಮಾಡಲಿಲ್ಲ. ಯಾರೋ ಮಾಡಿದ ಕೆಲಸವನ್ನು ನನ್ನದೆನ್ನಲಿಲ್ಲ' ಎಂದರು.

'ನಾಲ್ವಡಿ ಕೃಷ್ಣರಾಜ ಒಡೆಯರ್, ಬಸವಣ್ಣ, ಕುವೆಂಪು, ಟಿಪ್ಪು ಸುಲ್ತಾನ್, ಕನಕದಾಸ, ಪುರಂದರದಾಸ, ಸರ್ ಎಂ.ವಿಶ್ವೇಶ್ವರಯ್ಯ ಸೇರಿದಂತೆ ಎಲ್ಲ ಮಹನೀಯರ ತತ್ವಾದರ್ಶದಲ್ಲಿ ಸಣ್ಣ ದೀಪ ಹಚ್ಚುವ ಕೆಲಸ ಮಾಡಿದ್ದೇನಷ್ಟೇ' ಎಂದು ಹೇಳಿದರು.

ಪಕ್ಷದ ಕಾರ್ಯಕರ್ತ ಸತೀಶ್ ಗೌಡ ಅವರು ದೇವೇಗೌಡ ಅವರಿಗೆ ಚಿನ್ನ ಲೇಪಿತ ನೇಗಿಲು ಕಲಾಕೃತಿ ನೀಡಿ ಹಾಗೂ ಇಮ್ಮಡಿ ಪುಲಿಕೇಶಿ ಕಿರೀಟ ತೊಡಿಸಿ ಸನ್ಮಾನಿಸಿದರು.



ಎಚ್.ಡಿ. ದೇವೇಗೌಡ ಅವರು ಗಾಲಿ ಕುರ್ಚಿಯಲ್ಲಿ ಕುಳಿತು ಜನಸ್ತೋಮಕ್ಕೆ ನಮಸ್ಕರಿಸಿದರು. ಎಚ್.ಡಿ.ಕುಮಾರಸ್ವಾಮಿ, ಪ್ರಜ್ವಲ್ ರೇವಣ್ಣ, ಮತ್ತು ನಿಖಿಲ್ ಕುಮಾರಸ್ವಾಮಿ ಅವರೊಂದಿಗೆ ಇದ್ದರು. ಚಿತ್ರ ಕೃಪೆ / ಜೆಡಿಎಸ್



ಮೈಸೂರು ಸಮೀಪದ ಉತ್ತನಹಳ್ಳಿಯಲ್ಲಿ ಭಾನುವಾರ ನಡೆದ ಜೆಡಿಎಸ್ 'ಪಂಚರತ್ನ' ಯಾತ್ರೆ ಸಮಾರೋಪದಲ್ಲಿ ಸೇರಿದ್ದ ಅಪಾರ ಸಂಖ್ಯೆಯ ಜನರು. ಪ್ರಜಾವಾಣಿ ಚಿತ್ರ

5 ವರ್ಷ ಪೂರ್ಣಾವಧಿ ಸರ್ಕಾರಕ್ಕೆ ಆಶೀರ್ವದಿಸಿ: ಕುಮಾರಸ್ವಾಮಿ

ಎಚ್.ಡಿ.ಕುಮಾರಸ್ವಾಮಿ ಮಾತನಾಡಿ, 'ನ.18ರಿಂದ ಕೋಲಾರದ ಮುಳಬಾಗಿಲಿನಿಂದ ಆರಂಭವಾದ ಪಂಚರತ್ನ ಯಾತ್ರೆಯಲ್ಲಿ ಜನರ ಕಷ್ಟ ನೋಡಿದ್ದೇನೆ. ಪಂಚರತ್ನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದೇ ನನ್ನ ಗುರಿ. ಅಮೃತ ಕಾಲಕ್ಕೆ 2047ರ ವರೆಗೆ ಕಾಯಬೇಕಿಲ್ಲ. 5 ವರ್ಷ ಪೂರ್ಣಾವಧಿ ಸರ್ಕಾರ ಕೊಟ್ಟು ಆಶೀರ್ವದಿಸಿ' ಎಂದು ಕೋರಿದರು.

'ಸ್ತ್ರೀಶಕ್ತಿ ಸ್ವಸಹಾಯ ಸಂಘಗಳ ಸಾಲ ಮನ್ನಾ ಮಾಡಲಾಗುವುದು. ರೈತರ ಮಕ್ಕಳ ಮದುವೆಗೆ ₹ 2 ಲಕ್ಷ ಸಹಾಯ ನೀಡಲಾಗುವುದು. ₹ 30 ಲಕ್ಷದವರೆಗಿನ ಚಿಕಿತ್ಸಾ ವೆಚ್ಚವನ್ನು ಭರಿಸಲಾಗುವುದು. ನಗರದ ಶಾಲೆಗಳಂತೆಯೇ ಹಳ್ಳಿಗಳಲ್ಲೂ ಇಂಗ್ಲಿಷ್ ಹಾಗೂ ಕನ್ನಡ ಮಾಧ್ಯಮದಲ್ಲಿ ಗುಣಮಟ್ಟದ ಶಿಕ್ಷಣ ನೀಡಲಾಗುವುದು. ಮಳೆಗಾಲದಲ್ಲಿ ಪ್ರತಿ ರೈತನಿಗೂ ಎಕರೆಗೆ ₹ 10ಸಾವಿರ ಸಹಾಯಧನ ಕೊಡಲಾಗುವುದು' ಎಂದು ಭರವಸೆ ನೀಡಿದರು.

ಕಾಂಗ್ರೆಸ್ ಎರಡನೇ ಪಟ್ಟಿ: ಸ್ಕ್ರೀನಿಂಗ್ ಸಮಿತಿ ಸಭೆ ಇಂದು

ಬೆಂಗಳೂರು: ಬಾಕಿ ಉಳಿದಿರುವ 100 ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆಯನ್ನೂ ತ್ವರಿತವಾಗಿ ಮುಗಿಸಲು ಕಾಂಗ್ರೆಸ್ ವರಿಷ್ಠರು ಕಸರತ್ತು ನಡೆಸುತ್ತಿದ್ದು, ಎಐಸಿಸಿ ನೇಮಕ ಮಾಡಿರುವ ಸ್ಕ್ರೀನಿಂಗ್ ಸಮಿತಿ ಸೋಮವಾರ ಸಭೆ ನಡೆಸಲಿದೆ.

ಹೆಚ್ಚು ಪೈಪೋಟಿ ಇಲ್ಲದ 124 ವಿಧಾನಸಭಾ ಕ್ಷೇತ್ರಗಳಿಗೆ ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿಯನ್ನು ಶನಿವಾರ ಪ್ರಕಟಿಸಿತ್ತು. ಹೆಚ್ಚಿನ ಆಕಾಂಕ್ಷಿಗಳಿರುವ 100 ಕ್ಷೇತ್ರಗಳ ಅಭ್ಯರ್ಥಿ ಆಯ್ಕೆಯನ್ನು ಇನ್ನೂ ಅಂತಿಮಗೊಳಿಸಿಲ್ಲ. ಮೊದಲ ಪಟ್ಟಿ ಪ್ರಕಟವಾದ ಬಳಿಕ ಬಾಕಿ ಉಳಿದಿರುವ ಕ್ಷೇತ್ರಗಳ ಟಿಕೆಟ್ ಆಕಾಂಕ್ಷಿಗಳು ಕಾಂಗ್ರೆಸ್ ನಾಯಕರ ಮೇಲೆ ತೀವ್ರ ಒತ್ತಡ ಹೇರಲಾರಂಭಿಸಿದ್ದಾರೆ.

ಎರಡನೇ ಪಟ್ಟಿಯನ್ನು ಅಂತಿಮಗೊಳಿಸುವುದು ವಿಳಂಬವಾದರೆ ಬಾಕಿ ಉಳಿದಿರುವ ಕ್ಷೇತ್ರಗಳಲ್ಲಿ ಆಂತರಿಕ ಪೈಪೋಟಿ ಹೆಚ್ಚಾಗಿ, ಪಕ್ಷ ಸಂಘಟನೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಬಹುದು ಎಂಬ ಆತಂಕ ಕಾಂಗ್ರೆಸ್ ನಾಯಕರನ್ನು ಕಾಡುತ್ತಿದೆ. ಈ ಕಾರಣದಿಂದ ಬಾಕಿ ಇರುವ 100 ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆಯನ್ನು ವಾರದೊಳಗೆ ಪೂರ್ಣಗೊಳಿಸಲು ನಿರ್ಧರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನಗರದ ಹೊರ ವಲಯದ ಖಾಸಗಿ ರೆಸಾರ್ಟ್‌ನಲ್ಲಿ ಸೋಮವಾರ ಮಧ್ಯಾಹ್ನ ಸಭೆ ಆರಂಭವಾಗಲಿದೆ. ಸ್ಕ್ರೀನಿಂಗ್ ಸಮಿತಿ ಅಧ್ಯಕ್ಷ ಮೋಹನ್ ಪ್ರಕಾಶ್, ಸದಸ್ಯರಾದ ನೀರಜ್ ಡಾಂಗಿ, ಮೊಹಮ್ಮದ್ ಜಾವೇದ್, ಸಪ್ತಗಿರಿ ಉಲಾಕ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ, ಪ್ರಣಾಳಿಕೆ ಸಮಿತಿ ಅಧ್ಯಕ್ಷ ಜಿ. ಪರಮೇಶ್ವರ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಮೊದಲ ಪಟ್ಟಿ ಪ್ರಕಟವಾದ ನಂತರ ಬಾಕಿ ಇರುವ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಆಗಿರುವ ಬೆಳವಣಿಗೆಗಳ ಕುರಿತು ಸ್ಕ್ರೀನಿಂಗ್ ಸಮಿತಿ ಸದಸ್ಯರು ಪರಾಮರ್ಶೆ ನಡೆಸುವರು. ಆ ಬಳಿಕ ಸಂಭವನೀಯ ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸುವರು. ನಂತರ ದೆಹಲಿಯಲ್ಲಿ ಎಐಸಿಸಿ ವರಿಷ್ಠರು ಮತ್ತು ಸ್ಕ್ರೀನಿಂಗ್ ಸಮಿತಿ ಸದಸ್ಯರು ಮತ್ತೊಂದು ಸುತ್ತಿನ ಸಭೆ ನಡೆಸುವರು. ಆ ಬಳಿಕ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಬೊಮ್ಮಾಯಿ– ಜಾರಕಿಹೊಳಿ ಭೇಟಿ

ಹುಬ್ಬಳ್ಳಿ: ಗೋಕಾಕ ಶಾಸಕ ರಮೇಶ ಜಾರಕಿಹೊಳಿ ಅವರು ಭಾನುವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನಿವಾಸಕ್ಕೆ ಭೇಟಿ ನೀಡಿ ಚರ್ಚಿಸಿರುವುದು ಕುತೂಹಲಕ್ಕೆ ಕಾರಣವಾಗಿದೆ. ಅಥಣಿ ಕ್ಷೇತ್ರದ ಟಿಕೆಟ್ ವಿಚಾರ ಕುರಿತು ಸುಮಾರು ಒಂದು ತಾಸು ಚರ್ಚೆ ನಡೆಸಿದ್ದಾರೆ ಎನ್ನಲಾಗಿದೆ. ಸುದ್ದಿಗಾರರೊಂದಿಗೆ ಮಾತನಾಡಿದ ಜಾರಕಿಹೊಳಿ, 'ಕ್ಷೇತ್ರದ ಕೆಲ ವಿಷಯಗಳ ಕುರಿತು ಚರ್ಚೆ ನಡೆಸಲಾಗಿದೆ. ಅಥಣಿ ಟಿಕೆಟ್ ಕುರಿತು ಪಕ್ಷದ ಹೈಕಮಾಂಡ್ ನಿರ್ಧಾರ ಕೈಗೊಳ್ಳಲಿದೆ' ಎಂದರು.

ಮಹದಾಯಿ ಟೆಂಡರ್‌ಗೆ ತೊಡಕಿಲ್ಲ: ಮಹದಾಯಿ ಕಳಸಾ–ಬಂಡೂರಿ ಕಾಮಗಾರಿ ಟೆಂಡರ್ ಪ್ರಕ್ರಿಯೆ ನಡೆಯುತ್ತಿದ್ದು, ಅರಣ್ಯ ಇಲಾಖೆಯಿಂದ ಅನುಮತಿ ಸಿಗುವ ವಿಶ್ವಾಸವಿದೆ. ನೀತಿ ಸಂಹಿತೆ ಜಾರಿಯಾದರೂ ಟೆಂಡರ್‌ಗೆ ಯಾವುದೇ ತೊಡಕಾಗುವುದಿಲ್ಲ. ಚುನಾವಣೆ ನಂತರ ಕಾಮಗಾರಿ ಆರಂಭವಾಗಲಿದೆ' ಎಂದರು.

'₹50 ಕೋಟಿ ವೆಚ್ಚದಲ್ಲಿ ಗೋರಟಾ ಸ್ಮಾರಕ ಅಭಿವೃದ್ಧಿ'

ಬೀದರ್: 'ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬಂದರೆ ಗೋರಟಾ (ಬಿ) ಹುತಾತ್ಮ ಸ್ಮಾರಕವನ್ನು ₹ 50 ಕೋಟಿ ವೆಚ್ಚದಲ್ಲಿ ರಾಷ್ಟ್ರೀಯ ಸ್ಮಾರಕವಾಗಿ ಅಭಿವೃದ್ಧಿಪಡಿಸಲಾಗುವುದು' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಘೋಷಿಸಿದರು.

ಜಿಲ್ಲೆಯ ಹುಲಸೂರು ತಾಲ್ಲೂಕಿನ ಗೋರಟಾ (ಬಿ) ಗ್ರಾಮದ ಹೊರ ವಲಯದಲ್ಲಿ ಹುತಾತ್ಮ ಸ್ಮಾರಕ ಹಾಗೂ ಸರ್ದಾರ್ ವಲ್ಲಭಭಾಯಿ ಪಟೇಲ್ ಪ್ರತಿಮೆ ಅನಾವರಣಗೊಳಿಸಿ ಮಾತನಾಡಿದರು.

'ಗೋರಟಾದಲ್ಲಿ ಧ್ವನಿ ಬೆಳಕಿನ ವ್ಯವಸ್ಥೆ ಮಾಡಲಾಗುವುದು. ಸಾಕ್ಷ್ಯ ಚಿತ್ರದ ಮೂಲಕ ನಿಜಾಮರ ವಿರುದ್ಧದ ಹೋರಾಟದಲ್ಲಿ ಹುತಾತ್ಮರಾದವರ ಸಾಕ್ಷ್ಯಚಿತ್ರ ಪ್ರದರ್ಶಿಸಲಾಗುವುದು. ರಾಷ್ಟ್ರ ಮಟ್ಟದ ಪ್ರವಾಸಿ ಕೇಂದ್ರವನ್ನಾಗಿ ರೂಪಿಸಲಾಗುವುದು' ಎಂದರು.

'ತೆಲಂಗಾಣ ಸರ್ಕಾರ ಹೈದರಾಬಾದ್ ವಿಮೋಚನಾ ದಿನ ಆಚರಿಸುತ್ತಿಲ್ಲ. ಆದರೆ, ಕಳೆದ ವರ್ಷ ಬಿಜೆಪಿ ಹೈದರಾಬಾದ್‌ನಲ್ಲಿ ಹೈದರಾಬಾದ್ ವಿಮೋಚನಾ ದಿನ ಆಚರಿಸಿದೆ. ತೆಲಂಗಾಣದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ರಾಷ್ಟ್ರ ಮಟ್ಟದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಿದೆ' ಎಂದು ತಿಳಿಸಿದರು.

ಕಾಂಗ್ರೆಸ್ ಪ್ರತಿಯೊಂದು ಕೆಲಸವನ್ನು ಲಟಕಾನಾ, ಅಟಕಾನಾ, ಭಟಕಾನಾ (ನೇತಾಡಿಸುವುದು, ಸಿಕ್ಕಿಸುವುದು, ಅಲೆದಾಡಿಸುವುದು) ಮಾಡುತ್ತಿತ್ತು. ಅಂತೆಯೇ ಪ್ರಧಾನಿ ನರೇಂದ್ರ ಮೋದಿ ಅವರು ವಿಶೇಷ ನ್ಯಾಯಪೀಠ ರಚಿಸಿ ಅಯೋಧ್ಯೆಯ ರಾಮಮಂದಿರ ಸಮಸ್ಯೆಯನ್ನು ನಿವಾರಿಸಿದರು. ಕಾಶ್ಮೀರ ಸಮಸ್ಯೆಯನ್ನೂ ಬಗೆಹರಿಸಲಾಯಿತು' ಎಂದು ತಿಳಿಸಿದರು.

ಶಾಸಕ ಬಿ.ಎಸ್. ಯಡಿಯೂರಪ್ಪ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಕೇಂದ್ರ ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ, ಪಶು ಸಂಗೋಪನೆ ಸಚಿವ ಪ್ರಭು ಚವಾಣ್, ರಾಜ್ಯ ಮರಾಠ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಜಿ.ಮುಳೆ, ಶಾಸಕ ಶರಣು ಸಲಗರ ಇದ್ದರು.

ಪ್ರತಿಭಟನಾ ಸಭೆಯಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನೆ

'ಕಳ್ಳರನ್ನು ಸಮಾಜ ಸುಧಾರಕರು ಎನ್ನಬೇಕೇ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಳ್ಳರನ್ನು ಕಳ್ಳ ಎಂದು ಕರೆಯದೇ ಸಾಧುಗಳು, ಸಂತರು, ಸಮಾಜ ಸುಧಾರಕರೆಂದು ಕರೆಯಬೇಕೇ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದರು.

ರಾಹುಲ್ ಗಾಂಧಿ ಅವರ ಸಂಸತ್ ಸ್ಥಾನದ ಅನರ್ಹತೆಯ ಕ್ರಮ ಖಂಡಿಸಿ, ಬೆಂಗಳೂರು ಕೇಂದ್ರ, ದಕ್ಷಿಣ ಹಾಗೂ ಉತ್ತರ ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ಭಾನುವಾರ ಆಯೋಜಿಸಿದ್ದ ಪ್ರತಿಭಟನಾ ಸಭೆಯಲ್ಲಿ ಅವರು ಮಾತನಾಡಿದರು.

'ಭಾರತ್ ಜೋಡೊ ಯಾತ್ರೆಯ ಬಳಿಕ ರಾಹುಲ್ ಗಾಂಧಿ ಅವರ ವರ್ಚಸ್ಸು ವೃದ್ಧಿಯಾಗಿದೆ. ಇದು ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮಿತ್ ಶಾ ಅವರ ಆತಂಕ ಹೆಚ್ಚಿಸಿದೆ. ರಾಜಕೀಯ ದ್ವೇಷದಿಂದ ಅನರ್ಹತೆ ಮಾಡಲಾಗಿದೆ' ಎಂದು ವಾಗ್ದಾಳಿ ನಡೆಸಿದರು.

'ಇದು ಹಿಟ್ಲರ್‌ನ ಜರ್ಮನಿಯೂ ಅಲ್ಲ. ಮುಸೊಲಿನಿಯ ಇಟಲಿಯೂ ಅಲ್ಲ. ನಾವು ಪ್ರಜಾಪ್ರಭುತ್ವ ಒಪ್ಪಿಕೊಂಡು ಬದುಕುತ್ತಿದ್ದೇವೆ. ಅನರ್ಹತೆ ಕ್ರಮವು ಪ್ರಜಾಪ್ರಭುತ್ವ ವ್ಯವಸ್ಥೆಗೆ ದೊಡ್ಡ ಆಘಾತ ತಂದಿದೆ. ಅಭಿವ್ಯಕ್ತಿ ಸ್ವಾತಂತ್ರ್ಯ ದಮನ ಮಾಡಲಾಗುತ್ತಿದೆ' ಎಂದು ವಾಗ್ದಾಳಿ ನಡೆಸಿದರು.

'ಕೋಲಾರದ ಕೆಜಿಎಫ್‌ನಲ್ಲಿ ರಾಹುಲ್ ಗಾಂಧಿ ಅವರು ಭಾಷಣ ಮಾಡುವ ವೇಳೆ ನಾನೂ ವೇದಿಕೆಯಲ್ಲಿದ್ದೆ. ಜಾತಿ ನಿಂದನೆ ಅಥವಾ ಮಾನಹಾನಿಕರ ರೀತಿಯಲ್ಲಿ ಮಾತನಾಡಿಲ್ಲ. ದೇಶದ ಜನರ ಹಣವನ್ನು ಕೊಳ್ಳೆ ಹೊಡೆದು ವಿದೇಶಕ್ಕೆ ಹೋದವರ ಹೆಸರು ಪ್ರಸ್ತಾಪಿಸಿದ್ದರು. ಅವರನ್ನು ಕಳ್ಳರು ಎಂದು ಕರೆಯುವ ಸ್ವಾತಂತ್ರ್ಯವೂ ಇಲ್ಲವೇ? ಹಾಗಿದ್ದರೆ ಅವರು ಸಮಾಜ ಸುಧಾರಕರೇ? ಹಿಟ್ಲರ್, ಮುಸೊಲಿನಿ ವಂಶಸ್ಥರಿಂದ ನಾವು ದೇಶ ಭಕ್ತಿಯ ಪಾಠ ಕಲಿಯಬೇಕಿಲ್ಲ' ಎಂದು ಹೇಳಿದರು.

ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಮಾತನಾಡಿ, ಲಲಿತ್ ಮೋದಿ, ನೀರವ್ ಮೋದಿ ಸೇರಿ ಹಲವರು ಬ್ಯಾಂಕ್‌ಗಳನ್ನು ಕೊಳ್ಳೆ ಹೊಡೆದು ವಿದೇಶದಲ್ಲಿದ್ದಾರೆ. ಅದು ನರೇಂದ್ರ ಮೋದಿ, ಬಸವರಾಜ ಬೊಮ್ಮಾಯಿ, ನಳಿನ್‌ಕುಮಾರ್ ಕಟೀಲ್, ನಡ್ಡಾ, ಅಮಿತ್ ಶಾ ಅವರ ಹಣ ಅಲ್ಲ. ಜನರ ದುಡ್ಡು. ಪ್ರಜಾಪ್ರಭುತ್ವದ ತಾಯಿ ಭಾರತವೆಂದು ಕರೆಯಲಾಗುತ್ತಿತ್ತು. ಅದನ್ನೇ ನಾಶಪಡಿಸಲಾಗುತ್ತಿದೆ' ಎಂದು ಆಕ್ರೋಶ ಹೊರಹಾಕಿದರು.

ಶಾಸಕ ದಿನೇಶ್ ಗುಂಡೂರಾವ್ ಮಾತನಾಡಿ, 'ತನ್ನ ವಿರುದ್ಧ ಮಾತನಾಡುವವರನ್ನು ಬಿಜೆಪಿ ಅನರ್ಹಗೊಳಿಸುತ್ತಿದೆ. ಪ್ರಜಾಪ್ರಭುತ್ವದ ವಿರೋಧಿ ನಡೆಯನ್ನು ಮಾಧ್ಯಮಗಳೂ ಪ್ರಶ್ನಿಸುತ್ತಿಲ್ಲ. ತಪ್ಪು ಮಾಡಿದಾಗ ಟೀಕೆಗಳು ಪ್ರಜಾತಂತ್ರ ವ್ಯವಸ್ಥೆಯ ಭಾಗ. ದುರುದ್ದೇಶದಿಂದ ರಾಹುಲ್ ಅವರ ಬಾಯಿ ಮುಚ್ಚಿಸಲು ಅನರ್ಹತೆ ಕ್ರಮ ಬಳಸಲಾಗಿದೆ' ಎಂದು ಕಿಡಿಕಾರಿದರು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್, ಶಾಸಕರಾದ ಕೆ.ಜೆ.ಜಾರ್ಜ್, ಎನ್.ಎ. ಹ್ಯಾರೀಸ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮ್ಮದ್ ಹಾಜರಿದ್ದರು.



ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಭಾನುವಾರ ನಡೆದ ಪ್ರತಿಭಟನಾ ಸಭೆಯಲ್ಲಿ ಶಾಸಕ ದಿನೇಶ್ ಗುಂಡೂರಾವ್, ಎಐಸಿಸಿ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಮುಖಂಡರಾದ ಸಲೀಂ ಅಹಮದ್, ಬಿ.ಕೆ.ಹರಿಪ್ರಸಾದ್, ಎಚ್.ಎಂ.ರೇವಣ್ಣ ಹಾಗೂ ಇತರರು ಇದ್ದರು — ಪ್ರಜಾವಾಣಿ ಚಿತ್ರ

'ಡಿ.ಕೆ. ಸಹೋದರರ ಷಡ್ಯಂತ್ರಕ್ಕೆ ಬಲಿಪಶು'



ಎಸ್.ಪಿ.ಮುದ್ದ ಹನುಮೇಗೌಡ

ಕುಣಿಗಲ್: 'ಎರಡನೇ ಬಾರಿ ನಾನು ತುಮಕೂರು ಸಂಸದನಾಗುವುದನ್ನು ತಪ್ಪಿಸಲು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಸಂಸದ ಡಿ.ಕೆ. ಸುರೇಶ್ ಸಹೋದರರು ಷಡ್ಯಂತ್ರ ರೂಪಿಸಿದ್ದರು. ಆ ಷಡ್ಯಂತ್ರದ ಭಾಗವಾಗಿಯೇ ಕಳೆದ ಬಾರಿ ತುಮಕೂರು ಲೋಕಸಭಾ ಕ್ಷೇತ್ರವನ್ನು ಜೆಡಿಎಸ್‌ಗೆ ಬಲವಂತವಾಗಿ ಬಿಟ್ಟುಕೊಟ್ಟರು' ಎಂದು ಮಾಜಿ ಸಂಸದ ಎಸ್.ಪಿ. ಮುದ್ದಹನುಮೇಗೌಡ ಆರೋಪ ಮಾಡಿದ್ದಾರೆ.

ತಾಲ್ಲೂಕಿನ ಅಂಚೇಪಾಳ್ಯದಲ್ಲಿ ನಡೆದ ಪಕ್ಷದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ಎಲ್ಲ ವಿಚಾರ ಗೊತ್ತಿದ್ದರೂ ಡಾ.ಜಿ.ಪರಮೇಶ್ವರ ಮೌನ ವಹಿಸಿದ್ದರು. ಷಡ್ಯಂತ್ರದಲ್ಲಿ ಅವರೂ ಪಾಲುದಾರರಾದರು ಎಂದರು.

ಒಕ್ಕಲಿಗರೊಬ್ಬರು ಎರಡನೇ ಬಾರಿಗೆ ಸಂಸದನಾಗುವುದನ್ನು ಡಿ.ಕೆ. ಸಹೋದರರು ತಡೆದರು. ಕಾಂಗ್ರೆಸ್‌ನಲ್ಲಿ ನಿರಂತರವಾಗಿ ಅವರಿಬ್ಬರೂ ಅನ್ಯಾಯ ಮಾಡುತ್ತಲೇ ಬಂದರು ಎಂದು ಅಸಮಾಧಾನ ತೋಡಿಕೊಂಡರು.

ಬೆಳಗಾವಿ: ದಾಖಲೆ ಇಲ್ಲದ 9 ಕೆ.ಜಿ ಬೆಳ್ಳಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಕಾಗವಾಡ(ಬೆಳಗಾವಿ ಜಿಲ್ಲೆ): ಪಟ್ಟಣದ ಕಾಗವಾಡ-ಗಣೇಶವಾಡಿ ಚೆಕ್ ಪೋಸ್ಟ್‌ನಲ್ಲಿ ದಾಖಲೆ ಇಲ್ಲದೆ ಸಾಗಿಸುತ್ತಿದ್ದ 9.390 ಕೆ.ಜಿ ಬೆಳ್ಳಿ ಆಭರಣಗಳು ಮತ್ತು ಕೃತ್ಯಕ್ಕೆ ಬಳಸಿದ ವಾಹನವನ್ನು ಪೊಲೀಸರು ಭಾನುವಾರ ವಶಕ್ಕೆ ಪಡೆದಿದ್ದಾರೆ.

ಮಹಾರಾಷ್ಟ್ರದ ರೆಂದಾಳದಿಂದ ಅಥಣಿ ಕಡೆಗೆ ಹೊರಟಿದ್ದ ಕಾರನ್ನು ಈ ಚೆಕ್‌ಪೋಸ್ಟ್‌ನಲ್ಲಿ ತಪಾಸಣೆ ನಡೆಸಿದಾಗ, ಬೆಳ್ಳಿಯ ಕಾಲ್ಗೆಜ್ಜೆ ಮತ್ತಿತರ ಆಭರಣ ಪತ್ತೆಯಾಗಿವೆ. ಈ ಪ್ರಕರಣದಲ್ಲಿ ಇಬ್ಬರು ಆರೋಪಿಗಳನ್ನು ಪೊಲೀಸರು ವಶಕ್ಕೆ ಪಡೆದು, ವಿಚಾರಣೆ ನಡೆಸುತ್ತಿದ್ದಾರೆ.

₹15 ಲಕ್ಷ ನಗದು ವಶ (ಹುಬ್ಬಳ್ಳಿ ವರದಿ): ಟಿಂಬರ್ ವ್ಯಾಪಾರಿಯೊಬ್ಬರು ತಮ್ಮ ಕಾರಿನಲ್ಲಿ ದಾಖಲೆಗಳಿಲ್ಲದೆ ಸಾಗಿಸುತ್ತಿದ್ದ ₹15 ಲಕ್ಷ ನಗದನ್ನು ನಗರದ ಕಾರವಾರ ರಸ್ತೆಯ ಚೆಕ್ ಪೋಸ್ಟ್‌ನಲ್ಲಿ ಕರ್ತವ್ಯ ನಿರತ ಚುನಾವಣಾ ಸಿಬ್ಬಂದಿ ಭಾನುವಾರ ವಶಪಡಿಸಿಕೊಂಡಿದ್ದಾರೆ.

ಅಂಕೋಲಾ ಕಡೆಯಿಂದ ಹುಬ್ಬಳ್ಳಿಗೆ ಬರುತ್ತಿದ್ದ ಕಾರನ್ನು ತಡೆದ ಸಿಬ್ಬಂದಿ, ಪರಿಶೀಲಿಸಿದಾಗ ಹಣ ಪತ್ತೆಯಾಗಿದೆ. 'ಮರದ ವ್ಯವಹಾರಕ್ಕೆ ಸಂಬಂಧಿಸಿದ ಹಣ ಎಂದು ವ್ಯಾಪಾರಿ ವಿಚಾರಣೆ ವೇಳೆ ತಿಳಿಸಿದ್ದಾರೆ. ಈ ಕುರಿತು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ. ಅವರು ಬಂದು ವಿಚಾರಣೆ ನಡೆಸಲಿದ್ದಾರೆ' ಎಂದು ತಹಶೀಲ್ದಾರ್ ಆರ್.ಕೆ. ಪಾಟೀಲ ತಿಳಿಸಿದ್ದಾರೆ.

ಇಸ್ತ್ರಿ ಪೆಟ್ಟಿಗೆ,₹16 ಲಕ್ಷ ನಗದು ವಶ (ಬಾಗಲಕೋಟೆ ವರದಿ): ದಾಖಲೆಗಳಿಲ್ಲದೆ ಸಾಗಿಸುತ್ತಿದ್ದ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ 6,798 ಇಸ್ತ್ರಿ ಪೆಟ್ಟಿಗೆ ಹಾಗೂ ₹ 16 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ.

ನಗರದ ಹೊರವಲಯ ಮಹಾರುದ್ರಪ್ಪನನ ಹಳ್ಳದ ಬಳಿ ಭಾನುವಾರ ಲಾರಿ ತಡೆದು ಪರಿಶೀಲಿಸಿದಾಗ ಇಸ್ತ್ರಿ ಪೆಟ್ಟಿಗೆಗಳನ್ನು ಸಾಗಿಸುತ್ತಿರುವುದು ಕಂಡು ಬಂದಿದೆ. ₹35 ಲಕ್ಷ ಮೌಲ್ಯ ಎಂದು ಅಂದಾಜಿಸಲಾಗಿದೆ. ಸೂಕ್ತ ದಾಖಲೆ ಹೊಂದಿರದ ಕಾರಣ ಅವುಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ.

ಹುನಗುಂದ ತಾಲ್ಲೂಕಿನ ಗುಡೂರು ಚೆಕ್ ಪೋಸ್ಟ್‌ನಲ್ಲಿ ದಾಖಲೆಯಿಲ್ಲದೆ ಕಾರಿನಲ್ಲಿ ಸಾಗಿಸುತ್ತಿದ್ದ ₹16 ಲಕ್ಷ ವಶಪಡಿಸಿಕೊಳ್ಳಲಾಗಿದೆ. ಯಲಬುರ್ಗಾದ ಸುನೀಲ್ ಉಪ್ಪಾರ, ಬಸನಗೌಡ, ಕಳಕಪ್ಪ, ಹುಸೇನಸಾಬ್ ಎಂಬುವವರನ್ನು ವಶಕ್ಕೆ ಪಡೆಯಲಾಗಿದೆ.

₹8 ಲಕ್ಷ ನಗದು ವಶ: ಹೊಸಪೇಟೆ (ವಿಜಯನಗರ) ವರದಿ: ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ದಾಖಲೆ ರಹಿತ ₹8 ಲಕ್ಷ ನಗದು ಹಣವನ್ನು ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನಲ್ಲಿ ಶನಿವಾರ ರಾತ್ರಿ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಹರಪನಹಳ್ಳಿ ತಾಲ್ಲೂಕಿನ ಹೊಸಪೇಟೆ- ಶಿವಮೊಗ್ಗ ರಾಜ್ಯ ಹೆದ್ದಾರಿ 25ರ ದುಗ್ಗಾವತಿ ಚೆಕ್ ಪೋಸ್ಟ್‌ನಲ್ಲಿ ಸಂತೋಷ್ ಎಂಬುವರು ಮುತ್ತೂಟ್ ಫೈನಾನ್ಸ್ ಹರಿಹರ ಶಾಖೆಯಿಂದ ಬೈಕ್‌ನಲ್ಲಿ ₹5 ಲಕ್ಷ ತೆಗೆದುಕೊಂಡು ಹೋಗುತ್ತಿದ್ದರು. ಹಾಗೆಯೇ ದಾವಣಗೆರೆ ಜಿಲ್ಲೆಯ ಕಕ್ಕರಗೊಳ್ಳದ ತಿಮ್ಮೇಶ್ ಅವರ ಕಾರಿನಿಂದ ದಾಖಲೆಗಳಿಲ್ಲದ ₹3 ಲಕ್ಷ ಹಣ ವಶಕ್ಕೆ ತೆಗೆದುಕೊಳ್ಳಲಾಗಿದೆ.

₹6.40 ಲಕ್ಷ ನಗದು ವಶ (ಗದಗ ವರದಿ): ಗಜೇಂದ್ರಗಡ ತಾಲ್ಲೂಕಿನ ಇಳಕಲ್ ನಾಕಾ ಚೆಕ್‌ಪೋಸ್ಟ್‌ನಲ್ಲಿ ದಾಖಲೆ ಇಲ್ಲದೇ ಸಾಗಿಸುತ್ತಿದ್ದ ₹6.40 ಲಕ್ಷ ಹಣ ಹಾಗೂ ಗದಗ ತಾಲ್ಲೂಕಿನ ಮುಳಗುಂದ ಚೆಕ್‌ಪೋಸ್ಟ್‌ನಲ್ಲಿ ರಸೀದಿ ಇಲ್ಲದೇ ಸಾಗಿಸುತ್ತಿದ್ದ ₹5 ಲಕ್ಷ ಮೌಲ್ಯದ ಬಟ್ಟೆಗಳು ಹಾಗೂ ಲಾರಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

₹42.39 ಲಕ್ಷ ಮೌಲ್ಯದ ಸೀರೆ ಅಕ್ರಮ ದಾಸ್ತಾನು ಜಪ್ತಿ (ಮುದ್ದೇಬಿಹಾಳ ವರದಿ) : ಪಟ್ಟಣದ ಅಂಗಡಿಯೊಂದರಲ್ಲಿ ಅಕ್ರಮವಾಗಿ ದಾಸ್ತಾನು ಮಾಡಲಾಗಿದ್ದ ₹42.39 ಲಕ್ಷ ಮೌಲ್ಯದ ಸೀರೆಗಳನ್ನು ದಾಳಿ ನಡೆಸಿ ಪೊಲೀಸರು ಶನಿವಾರ ರಾತ್ರಿ ವಶಪಡಿಸಿಕೊಂಡಿದ್ದಾರೆ. ಪಟ್ಟಣದ ಹಳೇ ತಹಶೀಲ್ದಾರ್ ಕಚೇರಿ ಎದುರಿಗಿನ ಪುರಸಭೆ ಮಳಿಗೆಯ ಕಾಂಪ್ಲೆಕ್ಸ್ (ನಂ19) ಈ ದಾಸ್ತಾನು ಇಡಲಾಗಿತ್ತು.

ದಾಖಲೆ ಇಲ್ಲದ ₹ 19.98 ಲಕ್ಷ ಜಪ್ತಿ (ಕಲಬುರಗಿ ವರದಿ): ದಾಖಲೆ ಇಲ್ಲದೆ ಅಕ್ರಮವಾಗಿ ಸಾಗಿಸುತ್ತಿದ್ದ ₹ 19.98 ಲಕ್ಷ ಹಣವನ್ನು ಇಲ್ಲಿನ ಉಪನಗರ ಠಾಣೆ ಪೊಲೀಸರು ಜಪ್ತಿ ಮಾಡಿದ್ದಾರೆ.

ಆಳಂದ ಚೆಕ್ ಪೋಸ್ಟ್ ಸಮೀಪ ವಾಹನಗಳನ್ನು ತಪಾಸಣೆ ಮಾಡುವ ವೇಳೆ ಕಾರೊಂದರಲ್ಲಿ ಸುಮಾರು ₹ 19.98 ನಗದು ಇರುವುದು ಪತ್ತೆಯಾಯಿತು. ಈ ಬಗ್ಗೆ ಚಾಲಕನನ್ನು ವಿಚಾರಿಸಿದಾಗ ಯಾವುದೇ ದಾಖಲಾತಿಗಳು ಇರಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ₹33 ಲಕ್ಷ ಮೌಲ್ಯದ ಅಕ್ರ ಮದ್ಯ ವಶ

ಹುಕ್ಕೇರಿ ತಾಲ್ಲೂಕಿನ ಮಹಾರಾಷ್ಟ್ರ ಕರ್ನಾಟಕ ಗಡಿಯಲ್ಲಿರುವ ಬುಗುಟೆ ಆಲೂರ ಚೆಕ್ ಪೋಸ್ಟ್ ನಲ್ಲಿ ರಾಜಸ್ತಾನ ಹಾಗೂ ಗೋವಾ ರಾಜ್ಯದ ದಾಖಲಾತಿ ಹೊಂದಿರುವ ₹33 ಲಕ್ಷ ಮೌಲ್ಯದ 450 ಲೀಟರ್ ಅಕ್ರಮ ಮದ್ಯವನ್ನು ಅಬಕಾರಿ ಇಲಾಖೆ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ

ನಂದವಾಡಗಿ- 1.96 ಲಕ್ಷ ನಗದು, 156 ಸೀರೆ ವಶ (ಇಳಕಲ್ ವರದಿ): ಸಮೀಪದ ನಂದವಾಡಗಿ ಚೆಕ್ ಪೋಸ್ಟ್ ನಲ್ಲಿ ₹1.96 ಲಕ್ಷ ನಗದು ಹಾಗೂ 156 ಸೀರೆಗಳನ್ನು ವಶಪಡಿಸಿಕೊಳ್ಳಲಾಗಿದೆ.

ಸ್ಟೀಲ್ ಡಬ್ಬಿ, ಫಲ-ತಾಂಬೂಲ ವಶ

ಹಳೇಬೀಡು (ಹಾಸನ): ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಎಚ್.ಕೆ.ಸುರೇಶ್ ನೇತೃತ್ವದಲ್ಲಿ ಖಾಸಗಿಯಾಗಿ ನಡೆಸುತ್ತಿರುವ ಮಹಾರುದ್ರಯಾಗ ಹಾಗೂ ಗಿರಿಜಾ ಕಲ್ಯಾಣ ಮಹೋತ್ಸವದಲ್ಲಿ ಸಂಗ್ರಹಿಸಿ ಇಡಲಾಗಿದ್ದ ಸ್ಟೀಲ್ ಡಬ್ಬಿಗಳು ಹಾಗೂ ಫಲ–ತಾಂಬೂಲವನ್ನು ತಹಶೀಲ್ದಾರ್ ಮಮತಾ ನೇತೃತ್ವದಲ್ಲಿ ಭಾನುವಾರ ಪೊಲೀಸರು ವಶಪಡಿಸಿಕೊಂಡಿದ್ದಾರೆ.

1,387 ಸ್ಟೀಲ್ ಡಬ್ಬಿಗಳು, 3,019 ಕುಪ್ಪಸ ಬಟ್ಟೆ, 1,620 ಶಿವನ ಫೋಟೊ, 500 ಭಾವಚಿತ್ರದ ಸ್ಟಿಕ್ಕರ್, 12 ಬಾಕ್ಸ್‌ನಲ್ಲಿ ತುಂಬಿದ್ದ 2,500 ಲಾಡು, 2,476 ತೆಂಗಿನಕಾಯಿಗಳನ್ನು ವಶಕ್ಕೆ ಪಡೆಯಲಾಗಿದೆ. ಸುರೇಶ್ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ.

'ಸಾರ್ವಜನಿಕರಿಂದ ಬಂದ ಮಾಹಿತಿ ಆಧರಿಸಿ ಕಂದಾಯ ಹಾಗೂ ಪೊಲೀಸ್ ಇಲಾಖೆಯ ತಂಡ ಶೆಡ್ ಮೇಲೆ ದಾಳಿ ನಡೆಸಿ, ಪರಿಶೀಲನೆ ನಡೆಸಿತು. ಎಚ್.ಕೆ.ಸುರೇಶ್ ಹಾಗೂ ಅವರ ಪತ್ನಿಯ ಭಾವಚಿತ್ರ ಇರುವ ಸ್ಟಿಕ್ಕರ್ ಅಂಟಿಸಿರುವುದು ಕಂಡು ಬಂದಿದ್ದರಿಂದ ವಶಕ್ಕೆ ಪಡೆಯಲಾಗಿದೆ' ಎಂದು ತಹಶೀಲ್ದಾರ್ ಮಮತಾ ತಿಳಿಸಿದ್ದಾರೆ.

ಮಂಜುನಾಥ ಕುನ್ನೂರ ಬಿಜೆಪಿಗೆ ರಾಜೀನಾಮೆ




ಶಿಗ್ಗಾವಿ (ಹಾವೇರಿ ಜಿಲ್ಲೆ): 'ಬೇಡ್ತಿ–ವರದಾ ನದಿ ಜೋಡಣೆ ಬೇಡಿಕೆ ಕುರಿತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಿರ್ಲಕ್ಷ್ಯಕ್ಕೆ ಬೇಸತ್ತು ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿದ್ದೇನೆ' ಎಂದು ಮಾಜಿ ಸಂಸದ ಮಂಜುನಾಥ ಕುನ್ನೂರ ತಿಳಿಸಿದ್ದಾರೆ.

'ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿಯಲ್ಲಿನ ಅನ್ಯಾಯ ಖಂಡಿಸುತ್ತೇನೆ. ಅಲ್ಲದೆ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡುವ ಬದಲಾಗಿ ಬರಿ ಶೇ 2ರಷ್ಟು ಮೀಸಲಾತಿ ಹೆಚ್ಚಿಸಿರುವುದು ಮೂಗಿಗೆ ತುಪ್ಪ ಸವರಿಸಿದಂತಾಗಿದೆ. ಅಂತಹ ಅನ್ಯಾಯಗಳನ್ನು ಸಹಿಸಲಾಗದೇ ಬಿಜೆಪಿಗೆ ರಾಜೀನಾಮೆ ಸಲ್ಲಿಸಿದ್ದೇನೆ' ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮಂಜುನಾಥ ಕುನ್ನೂರ ಜೊತೆಗೆ ಅವರ ಪುತ್ರ ರಾಜು ಕುನ್ನೂರ ಅವರು ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಅಲ್ಲದೆ ಇತ್ತೀಚೆಗೆ ಸರ್ಕಾರದಿಂದ ನಾಮನಿರ್ದೇಶನಗೊಂಡ ರಾಜ್ಯ ಪ್ರವಾಸೋದ್ಯಮ ನಿಗಮದ ನಿರ್ದೇಶಕ ಸ್ಥಾನಕ್ಕೂ ರಾಜು ಕುನ್ನೂರ ರಾಜೀನಾಮೆ ಸಲ್ಲಿಸಿರುವುದಾಗಿ ಹೇಳಿದ್ದಾರೆ.

'ಕೈ'ಸಂಭಾವ್ಯ ಅಭ್ಯರ್ಥಿ ಪ್ರಸನ್ನ ಗೌಡ ಜೆಡಿಎಸ್‌ಗೆ



ರಾಮನಗರ: ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಸಂಭಾವ್ಯ ಅಭ್ಯರ್ಥಿ ಪ್ರಸನ್ನ ಗೌಡ ಅವರು ಭಾನುವಾರ ಜೆಡಿಎಸ್ ಸೇರಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತವರು ಜಿಲ್ಲೆಯ ಪ್ರತಿಷ್ಠಿತ ಕಣವಾಗಿರುವ ಚನ್ನಪಟ್ಟಣದಿಂದ ಒಟ್ಟು 8 ಆಕಾಂಕ್ಷಿಗಳು ಟಿಕೆಟ್ ಕೋರಿ ಅರ್ಜಿ ಸಲ್ಲಿಸಿದ್ದರು. ಇವರಲ್ಲಿ ಪ್ರಸನ್ನ ಗೌಡ ಹೆಸರನ್ನು ಅಂತಿಮಗೊಳಿಸಿ ಜಿಲ್ಲಾ ಕಾಂಗ್ರೆಸ್ ಸಮಿತಿ ಕೆಪಿಸಿಸಿಗೆ ಶಿಫಾರಸು ಮಾಡಿತ್ತು.

ಕಾಂಗ್ರೆಸ್ ಅಭ್ಯರ್ಥಿಗಳ ಮೊದಲ ಪಟ್ಟಿಯಲ್ಲಿ ರಾಮನಗರ ಜಿಲ್ಲೆಯ ನಾಲ್ಕು ಕ್ಷೇತ್ರಗಳ ಪೈಕಿ ಚನ್ನಪಟ್ಟಣ ಕ್ಷೇತ್ರಕ್ಕೆ ಮಾತ್ರ ಅಭ್ಯರ್ಥಿ ಘೋಷಣೆ ಆಗಿರಲಿಲ್ಲ. ಅವರ ಹೆಸರು ಇಲ್ಲದಿರುವುದು ಹಲವು ಸಂದೇಹಗಳಿಗೆ ಕಾರಣವಾಗಿತ್ತು.

'ನಾನು ಚನ್ನಪಟ್ಟಣದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಆಗಬೇಕಿತ್ತು. ಆದರೆ, ಕಾಂಗ್ರೆಸ್ ನಾಯಕತ್ವದಿಂದ ಬೇಸತ್ತಿದ್ದೇನೆ. ಆ ಪಕ್ಷದಲ್ಲಿ ಸ್ಪಷ್ಟ ನಿಲುವು ಇಲ್ಲ. ಸುಳ್ಳು ಘೋಷಣೆ ಮಾಡಿ ಜನರ ದಾರಿ ತಪ್ಪಿಸುತ್ತಿದ್ದಾರೆ. ಹೀಗಾಗಿ ಕುಮಾರಸ್ವಾಮಿ ನಾಯಕತ್ವ ಮೆಚ್ಚಿ ಜೆಡಿಎಸ್ ಸೇರುತ್ತಿದ್ದೇನೆ' ಎಂದರು. ಕುಮಾರಸ್ವಾಮಿ ಮಾತನಾಡಿ, 'ಈ ಬಾರಿಯ ಚುನಾವಣೆಯಲ್ಲಿ ಜೆಡಿಎಸ್ ಪರವಾಗಿ ಕೆಲಸ ಮಾಡುವುದಾಗಿ ಪ್ರಸನ್ನ ಹೇಳಿದ್ದಾರೆ' ಎಂದರು.

ಹೈಕಮಾಂಡ್ ಸೂಚನೆಯಂತೆ ಸ್ಪರ್ಧೆ: ಮುನಿಯಪ್ಪ

ವಿಜಯಪುರ (ಬೆಂಗಳೂರು ಗ್ರಾಮಾಂತರ): 'ನಾನು ಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷಿಯಲ್ಲ. ರಾಜ್ಯ ರಾಜಕಾರಣಕ್ಕೆ ಬರುವುದು ನನ್ನ ಉದ್ದೇಶವಾಗಿರಲಿಲ್ಲ' ಎಂದು ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಎಚ್. ಮುನಿಯಪ್ಪ ಹೇಳಿದ್ದಾರೆ.

ಭಟ್ರೇನಹಳ್ಳಿಯ ಸಾಯಿನಾಥ ಜ್ಞಾನ ಮಂದಿರದಲ್ಲಿ ಭಾನುವಾರ ಕುಟುಂಬ ಸಮೇತ ಪೂಜೆ ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

'ದೇವನಹಳ್ಳಿಯಿಂದ ಸ್ಪರ್ಧಿಸಲು ಟಿಕೆಟ್ ಕೋರಿ ಅರ್ಜಿ ಹಾಕಿರಲಿಲ್ಲ. ಚುನಾವಣೆಗೆ ಸ್ಪರ್ಧಿಸುವಂತೆ ಹೈಕಮಾಂಡ್ ಸೂಚಿಸಿದೆ. ನಾನು ಆದೇಶ ಪಾಲಿಸುತ್ತಿದ್ದೇನೆ' ಎಂದರು.

'ನಾನೇನೂ ಹೊರಗಿನವನಲ್ಲ. ದೇವನಹಳ್ಳಿಯವನೇ. ಚನ್ನಹಳ್ಳಿ ನನ್ನ ತಾಯಿಯ ತವರು ಮನೆ. ನನಗೂ ದೇವನಹಳ್ಳಿ ಕ್ಷೇತ್ರಕ್ಕೂ ಅವಿನಾಭಾವ ಸಂಬಂಧವಿದೆ. ನಾನು ವಿಜಯಪುರದಲ್ಲಿ ವ್ಯಾಪಾರ, ವಹಿವಾಟು ಮಾಡುತ್ತಿದ್ದೆ' ಎಂದರು.

ಬೊಮ್ಮಾಯಿ ಮತ್ತೆ ಸಿ.ಎಂ ಆದ್ರೆ ತಪ್ಪೇನಿಲ್ಲ: ಮುರುಗೇಶ ನಿರಾಣಿ

ಬಾಗಲಕೋಟೆ: 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ವಯಸ್ಸು, ಅನುಭವದಿಂದಲೂ ದೊಡ್ಡವರು. ಅವರು ಮತ್ತೆ ಮುಖ್ಯಮಂತ್ರಿಯಾದರೆ ತಪ್ಪೇನಿಲ್ಲ' ಎಂದು ಸಚಿವ ಮುರುಗೇಶ ನಿರಾಣಿ ಹೇಳಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ, 'ಬೀಳಗಿ ಕ್ಷೇತ್ರಕ್ಕೆ ಮತ್ತೆ ಸಿ.ಎಂ ಆಗಿ ಬರುತ್ತೇನೆ' ಎಂಬ ಬೊಮ್ಮಾಯಿ ಹೇಳಿಕೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆಗೆ ಬರುವಂತೆ ಕೇಳಿದಾಗ, ಸಹಜವಾಗಿ ಸಿ.ಎಂ ಆಗಿ ಮತ್ತೆ ಬರುವೆ ಎಂದಿದ್ದಾರೆ' ಎಂದರು. 'ನಾವೇನು ಕಾಂಗ್ರೆಸ್‌ನವರಿಗೆ ಮುಖ್ಯಮಂತ್ರಿ ಹುದ್ದೆ ಕೊಡುತ್ತಿದ್ದೇವೆಯಾ? ಅವ್ರು ಬಿಜೆಪಿಯವರೇ. ಬೇರೆಯವರು ಏನೇ ಹೇಳಲಿ. ನನಗೆ ಒಪ್ಪಿಗೆ ಇದೆ' ಎಂದು ಹೇಳಿದರು.

ಘಟಾನುಘಟಿ ನಾಯಕರನ್ನು ಮಣಿಸಲು ತಂತ್ರ: ಬಿಜೆಪಿ ಸಭೆಯಲ್ಲಿ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭಾ ಚುನಾವಣೆಯಲ್ಲಿ ಬಹುಮತ ಸಾಧಿಸಲು ರಾಜಿ ಮಾಡಿಕೊಳ್ಳದೇ ಕಠಿಣ ಸ್ಪರ್ಧೆ ಒಡ್ಡುವ ಉತ್ತಮ ಅಭ್ಯರ್ಥಿಗಳ ಆಯ್ಕೆ, ಪಕ್ಷದ ಸಂಘಟನೆಯನ್ನು ಬಲಪಡಿಸಲು ಆದ್ಯತೆ ನೀಡುವುದರ ಜತೆಗೆ ಕಾಂಗ್ರೆಸ್‌ನ ಘಟಾನುಘಟಿ ನಾಯಕರನ್ನೂ ಸೋಲಿಸಲು ತಂತ್ರ ಹೆಣೆಯುವ ಬಗ್ಗೆಯೂ ಚರ್ಚೆ ನಡೆದಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅಧ್ಯಕ್ಷತೆಯಲ್ಲಿ ಭಾನುವಾರ ರಾತ್ರಿ ನಡೆದ ಪಕ್ಷದ ಪ್ರಮುಖ ನಾಯಕರ ಸಭೆಯಲ್ಲಿ ಚುನಾವಣೆಗೆ 'ಮೈದಾನ ಸಜ್ಜು'ಗೊಳಿಸುವುದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಗಂಭೀರ ಚರ್ಚೆ ನಡೆಯಿತು.

ಯಾವುದೇ ಕ್ಷೇತ್ರದಲ್ಲೂ ವಿರೋಧಿ ಪಕ್ಷಗಳ ನಾಯಕರ ಬಗ್ಗೆ ಲವಲೇಶವೂ ಅನುಕಂಪ ತೋರದೇ ಹೋರಾಟ ನಡೆಸಬೇಕು ಎಂಬುದಾಗಿ ಅಮಿತ್ ಶಾ ಹೇಳಿದರೆಂದು ಬಿಜೆಪಿ ಮೂಲಗಳು ತಿಳಿಸಿವೆ. ನಾಯಕರು ಪರಸ್ಪರ ತಮ್ಮ ಸೀಟುಗಳನ್ನು ಉಳಿಸಿಕೊಳ್ಳಲು ವಿರೋಧಿ ಪಕ್ಷಗಳ ನಾಯಕರ ಜತೆ ಒಳ ಒಪ್ಪಂದ ಮಾಡಿಕೊಳ್ಳುವುದನ್ನು ಸಹಿಸುವುದಿಲ್ಲ. ಸಂಘಟಿತವಾಗಿ ಗರಿಷ್ಠ ಪ್ರಯತ್ನ ಹಾಕುವ ಮೂಲಕ 'ಮಿಷನ್– 150' ತಲುಪಬೇಕು. ಪ್ರತಿಕೂಲ ಪರಿಸ್ಥಿತಿಯಲ್ಲೂ ಉತ್ತರಪ್ರದೇಶ, ಉತ್ತರಾಖಂಡ್, ಗೋವಾ, ಗುಜರಾತ್ ಚುನಾವಣೆಗಳಲ್ಲಿ ಬಹುಮತ ಪಡೆಯಲು ಸಾಧ್ಯವಾಯಿತು. ಆ ಫಲಿತಾಂಶ ಕರ್ನಾಟಕದಲ್ಲೂ ಪುನರಾವರ್ತನೆಯಾಗಬೇಕು. ಕರ್ನಾಟಕದಲ್ಲಿ ವಿಧಾನಸಭಾ ಚುನಾವಣೆಯ ಗೆಲುವು ಮುಂಬರುವ ಲೋಕಸಭೆಗೆ ಮುನ್ನುಡಿಯಾಗಬೇಕು ಎಂದು ಶಾ ತಾಕೀತು ಮಾಡಿದ್ದಾರೆ ಎನ್ನಲಾಗಿದೆ.

ರಾಜ್ಯ ಚುನಾವಣಾ ಉಸ್ತುವಾರಿ ಧರ್ಮೇಂದ್ರ ಪ್ರಧಾನ್, ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಬಿ.ಎಸ್.ಯಡಿಯೂರಪ್ಪ, ಪ್ರಲ್ಹಾದ ಜೋಶಿ, ಬಿ.ಎಲ್.ಸಂತೋಷ್, ಮನ್ಸುಖ್ ಮಾಂಡವಿಯ, ಕೆ.ಅಣ್ಣಾಮಲೈ, ಶೋಭಾ ಕರಂದ್ಲಾಜೆ, ಬಿ.ವೈ.ವಿಜಯೇಂದ್ರ, ರಮೇಶ ಜಾರಕಿಹೊಳಿ ಸೇರಿ ಎಲ್ಲ ಪ್ರಮುಖ ನಾಯಕರು ಭಾಗವಹಿಸಿದ್ದರು.

ಸೋಮವಾರ, ಮಾರ್ಚ್ 27, 2023 | ಬೆಂಗಳೂರು | ₹ 6.00 | ಸಂಪುಟ 76 ಸಂಚಿಕೆ 85 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಮೀಸಲಾತಿ ಮರುಹಂಚಿಕೆ: ಜಟಾಪಟಿ

ವಿಧಾನಸಭೆ ಚುನಾವಣೆ ಹೊಸ್ತಿಲಲ್ಲೇ ರಾಜ್ಯ ಸರ್ಕಾರವು ಮೀಸಲಾತಿ ಮರುಹಂಚಿಕೆಯ ನಿರ್ಧಾರ ಕೈಗೊಂಡಿರುವುದು ಆಡಳಿತ ಮತ್ತು ವಿರೋಧ ಪಕ್ಷಗಳ ಮಧ್ಯೆ ವಾಗ್ವಾದಕ್ಕೆ ಕಾರಣವಾಗಿದೆ. ಈ ಚುನಾವಣೆಯಲ್ಲಿ ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಮುಸ್ಲಿಮರ ಮೀಸಲಾತಿ ಕಿತ್ತು ಹಂಚಿಕೆ ಮಾಡುವ ನಿರ್ಧಾರವನ್ನು ರದ್ದುಗೊಳಿಸುವುದಾಗಿ ಕಾಂಗ್ರೆಸ್ ಘೋಷಿಸಿದೆ. ತಾಕತ್ತಿದ್ದರೆ ಅಂತಹ ಕೆಲಸ ಮಾಡುವಂತೆ ಬಿಜೆಪಿ ನಾಯಕರೂ ಪ್ರತಿ ಸವಾಲು ಹಾಕಿದ್ದಾರೆ.

ಅವೈಜ್ಞಾನಿಕ ಮೀಸಲಾತಿ ವರ್ಗೀಕರಣ ರದ್ದು: ಕಾಂಗ್ರೆಸ್ ಭರವಸೆ

ಪ್ರಜಾವಾಣಿ ವಾರ್ತೆ




ಬೆಂಗಳೂರು: ಹಿಂದುಳಿದ ವರ್ಗಗಳ ಪ್ರವರ್ಗ 2–ಬಿ ಅಡಿಯಲ್ಲಿ ಮುಸ್ಲಿಮರಿಗೆ ನೀಡಿದ್ದ ಮೀಸಲಾತಿಯನ್ನು ಕಿತ್ತು ಲಿಂಗಾಯತರು ಮತ್ತು ಒಕ್ಕಲಿಗರಿಗೆ ಹಂಚಿಕೆ ಮಾಡುವ ಸರ್ಕಾರದ ನಿರ್ಧಾರ ಅವೈಜ್ಞಾನಿಕ ಎಂದು ಟೀಕಿಸಿರುವ ಕಾಂಗ್ರೆಸ್, ತಾನು ಅಧಿಕಾರಕ್ಕೆ ಬಂದರೆ ಈ ತೀರ್ಮಾನವನ್ನು ರದ್ದು ಮಾಡುವುದಾಗಿ ಭರವಸೆ ನೀಡಿದೆ.

ಮುಸ್ಲಿಂ ಶಾಸಕರ ಜತೆ ಭಾನುವಾರ ಜಂಟಿ ಪತ್ರಿಕಾಗೋಷ್ಠಿ ನಡೆಸಿದ ಕಾಂಗ್ರೆಸ್ ನಾಯಕರು, 'ಸೇಡಿನ ಮತ್ತು ದ್ವೇಷದ ರಾಜಕೀಯದಲ್ಲಿ ತೊಡಗಿರುವ ಬಿಜೆಪಿ, ಅವೈಜ್ಞಾನಿಕವಾಗಿ ಮೀಸಲಾತಿ ವಿಂಗಡಿಸಿದೆ. ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೆ ಬಂದರೆ ಈಗ ಪ್ರಕಟಿಸಿರುವ ಜನದ್ರೋಹಿ ತೀರ್ಮಾನವನ್ನು ರದ್ದುಪಡಿಸುತ್ತೇವೆ' ಎಂದು ಹೇಳಿದರು.

6ನೇ ಪುಟ ನೋಡಿ

ಜೇನ್ನೊಣಗಳಿಂದ ಕಚ್ಚಿಸಿಕೊಂಡೂ ಸಿಹಿ ಹಂಚಿರುವೆ: ಬೊಮ್ಮಾಯಿ




ಹುಬ್ಬಳ್ಳಿ: 'ಮೀಸಲಾತಿ ಜೇನುಗೂಡಿದ್ದಂತೆ. ಅಲ್ಲಿಗೆ ಕೈ ಹಾಕಿದರೆ ಕಚ್ಚಿಸಿಕೊಳ್ಳುವುದು ಖಚಿತ ಎಂದು ಕಾಂಗ್ರೆಸ್‌ನವರು ಹೇಳುತ್ತಲೇ ಬಂದಿದ್ದರು. ಜೇನ್ನೊಣಗಳಿಂದ ಕಚ್ಚಿಸಿಕೊಂಡರೂ ಜೇನು ಹಂಚುವ ಕೆಲಸ ಮಾಡಿದ್ದೇನೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'ಗೂಡಿಗೆ ಕೈ ಹಾಕದೆ ಜೇನಿನ ಹನಿ ಸಿಗುವುದಿಲ್ಲ ಎಂಬುದನ್ನು ಅರಿತುಕೊಂಡೇ, ನಮ್ಮ ಸರ್ಕಾರ ಮಹತ್ವದ ನಿರ್ಧಾರ ಕೈಗೊಂಡಿದೆ' ಎಂದು ಭಾನುವಾರ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

'ಮೀಸಲಾತಿ ವಿಚಾರ ಮೂವತ್ತು ವರ್ಷಗಳಿಂದಲೂ ಇದೆ. ಕಾಂಗ್ರೆಸ್ ಸರ್ಕಾರ ಆಶ್ವಾಸನೆ ಕೊಡುತ್ತಾ, ಮೂಗಿಗೆ ತುಪ್ಪ ಸವರಿಕೊಂಡು ಬಂದಿತ್ತು' ಎಂದರು.

6ನೇ ಪುಟ ನೋಡಿ

'ಧರ್ಮ ಆಧಾರಿತ ಮೀಸಲಾತಿ ಸಮಾಪ್ತಿ'



ಬೆಂಗಳೂರು: 'ಕರ್ನಾಟಕದಲ್ಲಿ ಧರ್ಮ ಆಧಾರದ ಮೀಸಲಾತಿಯನ್ನು ಸಮಾಪ್ತಿ ಮಾಡಲಾಗಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ವಿಧಾನಸೌಧದ ಮುಂಭಾಗ ಜಗಜ್ಯೋತಿ ಬಸವೇಶ್ವರ ಹಾಗೂ ನಾಡಪ್ರಭು ಕೆಂಪೇಗೌಡರ ಪ್ರತಿಮೆಗಳನ್ನು ಅನಾವರಣಗೊಳಿಸಿ ಭಾನುವಾರ ಅವರು ಮಾತನಾಡಿದರು.'ಕಾಂಗ್ರೆಸ್ ಹಾಗೂ ಅವರ ಮಿತ್ರಮಂಡಳಿ ಸರ್ಕಾರಗಳು ಸಂವಿಧಾನದ ಹೊರತಾಗಿ ಧರ್ಮದ ಆಧಾರದಲ್ಲಿ ಮೀಸಲಾತಿಯನ್ನು ನೀಡಿದ್ದವು. ಆದರೆ, ಕರ್ನಾಟಕದ ಬಿಜೆಪಿ ಸರ್ಕಾರ ಧರ್ಮ ಆಧರಿತವಾದ ಶೇ 4ರಷ್ಟು ಮೀಸಲಾತಿಯನ್ನು ಸಮಾಪ್ತಿ ಮಾಡಿದೆ. ಅದನ್ನು ಒಕ್ಕಲಿಗ ಹಾಗೂ ಲಿಂಗಾಯತ ಸಮುದಾಯಕ್ಕೆ ನೀಡಿದೆ. ಈ ಮೂಲಕ ನೀತಿಯನ್ನು ಬದಲಿಸಿ ಸಂವಿಧಾನದ ಆಶಯವನ್ನು ಎತ್ತಿ ಹಿಡಿಲಾಗಿದೆ. ಇದಕ್ಕಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಅಭಿನಂದಿಸುತ್ತೇನೆ' ಎಂದು ಹೇಳಿದರು.

ತಾಕತ್ತಿದ್ದರೆ ರದ್ದು ಮಾಡಲಿ: ಅಶೋಕ



ಬೆಂಗಳೂರು: 'ಕಾಂಗ್ರೆಸ್ ಪಕ್ಷಕ್ಕೆ ಧೈರ್ಯ, ತಾಕತ್ತು ಇದ್ದರೆ ಮೀಸಲಾತಿ ರದ್ದು ಮಾಡಲಿ ನೋಡೋಣ' ಎಂದು ಕಂದಾಯ ಸಚಿವ ಆರ್. ಅಶೋಕ ಸವಾಲು ಹಾಕಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, 'ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮೀಸಲಾತಿ ಹೆಚ್ಚಳ ರದ್ದು ಮಾಡುವುದಾಗಿ ಆ ಪಕ್ಷದ ನಾಯಕರು ಹೇಳಿಕೆ ನೀಡಿದ್ದಾರೆ. ಮೀಸಲಾತಿ ಹೆಚ್ಚಳ ಮಾಡಿರುವುದು ಸರಿಯಲ್ಲ ಎಂದು ತಮ್ಮ ಪ್ರಣಾಳಿಕೆಯಲ್ಲಿ ಪ್ರಕಟಿಸಲಿ. ರಾಜ್ಯದ ಜನತೆ ಅವರಿಗೆ ತಕ್ಕ ಪಾಠ ಕಲಿಸಲಿದ್ದಾರೆ' ಎಂದರು. 'ಕಾಂಗ್ರೆಸ್ ಪಕ್ಷ ಹಿಂದೆ ಏಕೆ ಮೀಸಲಾತಿ ಹೆಚ್ಚಳ ಮಾಡಲಿಲ್ಲ? ಒಳ ಮೀಸಲಾತಿ ಏಕೆ ಕೊಡಲಿಲ್ಲ, ಇಷ್ಟು ವರ್ಷ ಮಣ್ಣು ತಿನ್ನುತ್ತಾ ಕೂತಿದ್ದರಾ? ನಮ್ಮ ಸರ್ಕಾರ ನ್ಯಾಯಯುತವಾಗಿ ಮೀಸಲಾತಿ ಹೆಚ್ಚಳ ಮಾಡಿರುವುದು ಕಾಂಗ್ರೆಸ್ ಪಕ್ಷದ ಹೊಟ್ಟೆ ಉರಿಗೆ ಕಾರಣವಾಗಿದೆ. ಕಾಂಗ್ರೆಸ್‌ನವರು ಭಿಕ್ಷುಕರು ಇದ್ದ ಹಾಗೆ, ಭಿಕ್ಷುಕರಿಗೆ ಆಯ್ಕೆಗಳಿಲ್ಲ' ಎಂದು ಲೇವಡಿ ಮಾಡಿದರು.



ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖಂಡರಾದ ಕೆ.ಸಿ. ವೇಣುಗೋಪಾಲ್, ಪ್ರಿಯಾಂಕಾ ಗಾಂಧಿ ವಾದ್ರಾ ಮತ್ತಿತರರು ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು –ಪಿಟಿಐ ಚಿತ್ರ

ಅನರ್ಹತೆ: ದೇಶದಾದ್ಯಂತ ಕಾಂಗ್ರೆಸ್ ಸತ್ಯಾಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ವಿರುದ್ಧದ ಕೋರ್ಟ್ ತೀರ್ಪು ಮತ್ತು ಸಂಸತ್ ಸದಸ್ಯತ್ವದಿಂದ ಅನರ್ಹತೆಯನ್ನು ಖಂಡಿಸಿ ಪಕ್ಷವು ನಡೆಸುತ್ತಿರುವ ಪ್ರತಿಭಟನೆಯು ಭಾನುವಾರ ಇನ್ನಷ್ಟು ಬಿರುಸು ಪಡೆದುಕೊಂಡಿದೆ. ದೆಹಲಿಯ ರಾಜ್‌ಘಾಟ್‌ನ ಹೊರ ಭಾಗದಲ್ಲಿ ಕಾಂಗ್ರೆಸ್ ಮುಖಂಡರು 'ಸಂಕಲ್ಪ ಸತ್ಯಾಗ್ರಹ' ನಡೆಸಿದ್ದಾರೆ. ಇದರಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ತಮ್ಮನ್ನೂ ಸೆರೆಮನೆಗೆ ತಳ್ಳುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸವಾಲೆಸೆದಿದ್ದಾರೆ. ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ದೇಶದಾದ್ಯಂತ ಪ್ರತಿಭಟನೆ ನಡೆಸಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೂ ಮೋದಿ ಅವರ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

9ನೇ ಪುಟ ನೋಡಿ

ಗಾಂಧೀಜಿಗೆ ಅವಮಾನ: ಬಿಜೆಪಿ

ಕಾಂಗ್ರೆಸ್ ನಡೆಸುತ್ತಿರುವ 'ಸಂಕಲ್ಪ ಸತ್ಯಾಗ್ರಹ'ವನ್ನು ಬಿಜೆಪಿ ಖಂಡಿಸಿದೆ. ಇದು ಸಂವಿಧಾನ ಮತ್ತು ನ್ಯಾಯಾಲಯವು ರಾಹುಲ್ ವಿರುದ್ಧ ನೀಡಿರುವ ತೀರ್ಪನ್ನು ಖಂಡಿಸಿ ನಡೆಯುತ್ತಿರುವ ಪ್ರತಿಭಟನೆ. ದೇಶದ ಒಬಿಸಿಗಳ ವಿರುದ್ಧ ರಾಹುಲ್ ನೀಡಿದ್ದ ಹೇಳಿಕೆಯನ್ನು ಸಮರ್ಥಿಸಿಕೊಳ್ಳುವ ಪ್ರತಿಭಟನೆ ಎಂದು ಬಿಜೆಪಿ ಹೇಳಿದೆ.

ಇದು ಮಹಾತ್ಮ ಗಾಂಧಿ ಅವರಿಗೆ ಮಾಡಿರುವ ಅವಮಾನ. ಗಾಂಧೀಜಿ ಅವರು ಸಾಮಾಜಿಕ ಕಾರಣಗಳಿಗಾಗಿ ಸತ್ಯಾಗ್ರಹ ನಡೆಸಿದ್ದರು. ಕಾಂಗ್ರೆಸ್ ಪಕ್ಷವು ಮಾಡಿರುವ ಸತ್ಯಾಗ್ರಹವು ವೈಯಕ್ತಿಕ ಕಾರಣಗಳಿಗಾಗಿ ಎಂದು ಬಿಜೆಪಿ ವಕ್ತಾರ ಸುಧಾಂಶು ತ್ರಿವೇದಿ ಹೇಳಿದ್ದಾರೆ.

9ನೇ ಪುಟ ನೋಡಿ

ಸಂವಿಧಾನ, ಪ್ರಜಾಪ್ರಭುತ್ವ, ವಾಕ್ ಸ್ವಾತಂತ್ರ್ಯ ರಕ್ಷಣೆಗೆ ಕಾಂಗ್ರೆಸ್ ಕಾರ್ಯಕರ್ತರು ಯಾವ ತ್ಯಾಗಕ್ಕೂ ಸಿದ್ಧ. ದಮನಿಸಲು ಬಂದರೆ ತಕ್ಕ ಉತ್ತರ ಕೊಡುತ್ತೇವೆ

ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಅಧ್ಯಕ್ಷ




'ರಂಗ್ ದ ಬರ್ಸ' ಕಾರ್ಯಕ್ರಮಕ್ಕೆ ಬಜರಂಗದಳ ಅಡ್ಡಿ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಮರೋಳಿಯಲ್ಲಿ ಹೋಳಿ ಆಚರಣೆ ಪ್ರಯುಕ್ತ ಭಾನುವಾರ ಏರ್ಪಡಿಸಿದ್ದ 'ರಂಗ್ ದ ಬರ್ಸ 2023' ಕಾರ್ಯಕ್ರಮಕ್ಕೆ ಬಜರಂಗದಳದ ಕಾರ್ಯಕರ್ತರು ಅಡ್ಡಿಪಡಿಸಿದ್ದಾರೆ. ಈ ಸಂಬಂಧ ಆರು ಮಂದಿಯನ್ನು ವಶಕ್ಕೆ ಪಡೆಯಲಾಗಿದೆ.

'ರಂಗ್ ದ ಬರ್ಸ ಕಾರ್ಯಕ್ರಮದ ಆರನೇ ಆವೃತ್ತಿಯು ಮಧ್ಯಾಹ್ನ ನಡೆಯುತ್ತಿತ್ತು. ಅರ್ಜುನ್ ಎಂಬುವರು ಈ ಕಾರ್ಯಕ್ರಮಕ್ಕೆ ಅನುಮತಿ ಪಡೆದಿದ್ದರು. ಕೆಲ ಯುವಕ-ಯುವತಿಯರು ಹೋಳಿ ಆಚರಣೆಯಲ್ಲಿ ತೊಡಗಿದ್ದಾಗ ಬಜರಂಗ ದಳದ ಕಾರ್ಯಕರ್ತರು ನುಗ್ಗಿ ದಾಂದಲೆ ನಡೆಸಿ, ಅಲಂಕಾರಿಕ ಪರಿಕರಗಳನ್ನು ಮುರಿದಿದ್ದಾರೆ. ಬ್ಯಾನರ್‌ಗಳನ್ನು ಹರಿದು ಹಾಕಿದ್ದಾರೆ' ಎಂದು ಪೊಲೀಸರು ಮಾಹಿತಿ ನೀಡಿದರು.

6ನೇ ಪುಟ ನೋಡಿ



ಕಾರ್ಯಕ್ರಮದ ಸಲುವಾಗಿ ಅಳವಡಿಸಿದ್ದ ಅಲಂಕಾರಿಕ ಸಾಮಗ್ರಿಗಳನ್ನು ಒಡೆದು ಹಾಕಲಾಗಿದೆ



ವಿಶ್ವ ಬಾಕ್ಸಿಂಗ್: ನಿಖತ್, ಲವ್ಲಿನಾ ಚಾಂಪಿಯನ್



ನಿಖತ್ ಜರೀನ್



ಲವ್ಲಿನಾ ಬೋರ್ಗೊಹೈನ್

ನವದೆಹಲಿ (ಪಿಟಿಐ): ಭಾರತದ ನಿಖತ್ ಜರೀನ್ ಮತ್ತು ಲವ್ಲಿನಾ ಬೋರ್ಗೊಹೈನ್ ಅವರು ವಿಶ್ವ ಮಹಿಳಾ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಜಯಿಸಿದರು.

ಕೆ.ಡಿ.ಜಾಧವ್ ಒಳಾಂಗಣ ಕ್ರೀಡಾಂಗಣದಲ್ಲಿ ಕಿಕ್ಕಿರಿದು ಸೇರಿದ್ದ ಪ್ರೇಕ್ಷಕರ ಸಮ್ಮುಖದಲ್ಲಿ ಭಾನುವಾರ ನಡೆದ 52 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ನಿಖತ್ 5–0ಯಲ್ಲಿ ವಿಯೆಟ್ನಾಂನ ಗುಯೆನ್ ಥಿ ಟಾಮ್ ವಿರುದ್ಧ ಗೆದ್ದರು.

ಕಳೆದ ವರ್ಷವೂ ಚಾಂಪಿಯನ್ ಆಗಿದ್ದ ನಿಖತ್ ಅವರು ಮೇರಿ ಕೋಮ್ ಬಳಿಕ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಸತತ ಎರಡು ಕಿರೀಟ ಗೆದ್ದ ಭಾರತದ ಬಾಕ್ಸರ್ ಎಂಬ ಗೌರವಕ್ಕೆ ಪಾತ್ರರಾದರು. ನಿಖತ್ ಕಳೆದ ಸಲವೂ 52 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಿದ್ದರು.

75 ಕೆ.ಜಿ. ವಿಭಾಗದಲ್ಲಿ ಕಣಕ್ಕಿಳಿದ ಲವ್ಲಿನಾ 5–2ರಲ್ಲಿ ಆಸ್ಟ್ರೇಲಿಯಾದ ಕೈಟ್ಲಿನ್ ಪಾರ್ಕರ್ ಅವರನ್ನು ಮಣಿಸಿದರು. ಈ ಹಿಂದೆ ಎರಡು ಸಲ ಕಂಚು ಜಯಿಸಿದ್ದ ಲವ್ಲಿನಾ, ಚೊಚ್ಚಲ ಚಿನ್ನದ ಪದಕಕ್ಕೆ ಮುತ್ತಿಕ್ಕಿ ಸಂಭ್ರಮಿಸಿದರು.

ಈ ಚಾಂಪಿಯನ್‌ಷಿಪ್‌ನಲ್ಲಿ ಭಾರತ ಒಟ್ಟು ನಾಲ್ಕು ಚಿನ್ನ ಗೆದ್ದ ಸಾಧನೆ ಮಾಡಿದೆ. ನೀತು ಗಂಗಾಸ್ ಮತ್ತು ಸ್ವೀಟಿ ಬೂರಾ ಅವರು ಶನಿವಾರ ಕ್ರಮವಾಗಿ 48 ಕೆ.ಜಿ ಹಾಗೂ 81 ಕೆ.ಜಿ. ವಿಭಾಗಗಳಲ್ಲಿ ಚಾಂಪಿಯನ್ ಆಗಿದ್ದರು.

ವಿವರ 14

ಚಿನಕುರಳಿ

ಪ್ರಕಾಶ್ ಶೆಟ್ಟಿ



ಒಳ ಪುಟಗಳು





ಮಿಂಟೋ ಆಸ್ಪತ್ರೆಯ ಡಾ.ವೆಂಕಟೇಶ್‌ಗೆ ಸೇವಾರತ್ನ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಅಂತರರಾಷ್ಟ್ರೀಯ ಅಚೀವರ್ಸ್ ಕೌನ್ಸಿಲ್ ಮತ್ತು ಏಷಿಯಾ ವೇದಿಕ್ ಕಲ್ಚರಲ್ ಫೌಂಡೇಷನ್ ನೀಡುವ ಸೇವಾ ರತ್ನ ಅತ್ಯುತ್ತಮ ಸೇವಾ ಪ್ರಶಸ್ತಿಯು ಮಿಂಟೋ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಎಂ. ವೆಂಕಟೇಶ್ ಅವರಿಗೆ ಲಭಿಸಿದೆ.


ವೈದ್ಯಕೀಯ ಸೇವೆಯಲ್ಲಿ ಇವರ ಕಾಳಜಿ ಹಾಗೂ ಅವಿರತ ಶ್ರಮ ಗುರುತಿಸಿ ಈ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಅಂತರರಾಷ್ಟ್ರೀಯ ಮಕ್ಕಳ ಆರೋಗ್ಯ ಅಕಾಡೆಮಿಯ ಸಹಯೋಗದಲ್ಲಿ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.

'ಬೆಂಗಳೂರು ಹಬ್ಬ' ಸಮಾರೋಪ; 'ಸುರಕ್ಷತಾ ಲೊಗೊ' ಹಸ್ತಾಂತರ

ಬಸವೇಶ್ವರ, ಕೆಂಪೇಗೌಡ ಪ್ರತಿಮೆ ಅನಾವರಣ

ಪ್ರಜಾವಾಣಿ ವಾರ್ತೆ



ನಗರದ ವಿಧಾನಸೌಧದ ಮುಂದೆ ಭಾನುವಾರ ಅನಾವರಣಗೊಳಿಸಲಾದ ನಾಡಪ್ರಭು ಕೆಂಪೇಗೌಡ ಮತ್ತು ಜಗಜ್ಯೋತಿ ಬಸವೇಶ್ವರರ ಪ್ರತಿಮೆಗಳು
– ಪ್ರಜಾವಾಣಿ ಚಿತ್ರ: ಎಂ.ಎಸ್‌.ಮಂಜುನಾಥ್

ಬೆಂಗಳೂರು: 'ಬಸವಣ್ಣನವರ ಅನುಭವ ಮಂಟಪದ ಮೂಲಕ ಜಗತ್ತಿನಲ್ಲಿ ಪ್ರಥಮಬಾರಿಗೆ ಪ್ರಜಾಪ್ರಭುತ್ವ ಸ್ಥಾಪಿಸಲಾಯಿತು. ಹೀಗಾಗಿಯೇ ಮೊದಲು ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಆರಂಭವಾಗಿದ್ದು' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ವಿಧಾನಸೌಧದ ಮುಂಭಾಗ ಜಗಜ್ಯೋತಿ ಬಸವೇಶ್ವರ ಹಾಗೂ ನಾಡಪ್ರಭು ಕೆಂಪೇಗೌಡ ಪ್ರತಿಮೆಗಳನ್ನು ಅನಾವರಣಗೊಳಿಸಿ ಭಾನುವಾರ ಅವರು ಮಾತನಾಡಿದರು.

'ಕೋವಿಡ್ ಅಡೆತಡೆಯಲ್ಲೂ ಯಡಿಯೂರಪ್ಪ ಅತ್ಯಂತ ಯಶಸ್ವಿ ಕಾರ್ಯ ಮಾಡಿದ್ದಾರೆ. ನಮಗೆಲ್ಲರಿಗೂ ಕಾಳಜಿಯಿದ್ದ ಬೆಂಗಳೂರನ್ನು ರಕ್ಷಿಸಿದರು. ಅದಕ್ಕೆ ಅವರು ಅಭಿನಂದನಾರ್ಹರು. ಅದೇ ಹಾದಿಯಲ್ಲಿ ಬಸವರಾಜ ಬೊಮ್ಮಾಯಿ ಅವರ ಉತ್ತಮ ಆಡಳಿತ ಮುಂದುವರಿಯಿತು. ಬೆಂಗಳೂರಿನ ಪ್ರತಿ ಕ್ಷೇತ್ರದಲ್ಲೂ ಕಮಲ ಅರಳಬೇಕು. ಈ ನಗರವನ್ನು ಮತ್ತೊಂದು ಮಹತ್ತರ ಎತ್ತರಕ್ಕೆ ಕೊಂಡೊಯ್ಯುತ್ತೇವೆ' ಎಂದರು.

ಹಸ್ತಾಂತರ: ಕಲಾವಿದರು, ಸಾಹಿತಿಗಳು, ಸಾಂಸ್ಕೃತಿಕ ಲೋಕದ ಪ್ರತಿಭೆಗಳಿಗೆ ಮಹಾನ್ ವೇದಿಕೆ ಕಲ್ಪಿಸಿರುವ ' ನಮ್ಮ ಬೆಂಗಳೂರು ಹಬ್ಬ' ನಡೆದಿರುವುದು ಸಂತಸದ ಸಂಗತಿ ಎಂದು ಹೇಳಿದ ಅಮಿತ್ ಶಾ, ಬೆಂಗಳೂರು ಹಬ್ಬದ ಸಮಾರೋಪದಲ್ಲಿ ಹಬ್ಬವನ್ನು ಪ್ರತಿ ವರ್ಷ ಮುಂದುವರಿಸುವ 'ಸುರಕ್ಷತಾ ಲೊಗೊ'ವನ್ನು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಹಸ್ತಾಂತರಿಸಿದರು.

'ಬಸವೇಶ್ವರ ಹಾಗೂ ಕೆಂಪೇಗೌಡರ ಪ್ರತಿಮೆಗಳನ್ನು ಶಕ್ತಿ ಕೇಂದ್ರ ವಿಧಾನಸೌಧದ ಆವರಣದಲ್ಲಿ ಹಿಂದೆಯೇ ಸ್ಥಾಪನೆಯಾಗಬೇಕಿತ್ತು. ಯಾಕೆ ಸ್ಥಾಪಿಸಲಿಲ್ಲ ಎಂಬುದನ್ನು ಹಿಂದೆ ಅಧಿಕಾರದಲ್ಲಿದ್ದವರು ಆತ್ಮವಿಮರ್ಶೆ ಮಾಡಿಕೊಳ್ಳಬೇಕು. 75 ದಿನಗಳಲ್ಲಿ ಈ ಪ್ರತಿಮೆಗಳನ್ನು ಸ್ಥಾಪಿಸಿದ್ದೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಚನ್ನಮ್ಮ, ರಾಯಣ್ಣ ಪ್ರತಿಮೆ: ಬೆಂಗಳೂರಿನ ಬನಶಂಕರಿಯಲ್ಲಿ ಸುತ್ತೂರು ಶ್ರೀಗಳ ಪುತ್ಥಳಿ, ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಕಿತ್ತೂರು ರಾಣಿ ಚನ್ನಮ್ಮ, ಸಂಗೊಳ್ಳಿ ರಾಯಣ್ಣ, ಡಾ. ಅಂಬೇಡ್ಕರ್ ಅವರ ಪ್ರತಿಮೆಗಳನ್ನು ಮಾರ್ಚ್ 28ರಂದು ಪ್ರತಿಷ್ಠಾಪಿಸಲಾಗುತ್ತದೆ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿಯ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, 'ಬಸವೇಶ್ವರ ಹಾಗೂ ಕೆಂಪೇಗೌಡರು ನಾಡಿನ ಆಡಳಿತದಲ್ಲಿ ಉತ್ತಮ ಪುರುಷರು. ಅವರ ಪ್ರತಿಮೆ ಇಂದು ಅನಾವರಣಗೊಂಡಿರುವುದು ಎಲ್ಲರಿಗೂ ಸಂತಸದಾಯಕ ಹಾಗೂ ಮಾರ್ಗದರ್ಶಿ' ಎಂದರು.

ಶಾಸಕ ಬಿ.ಎಸ್. ಯಡಿಯೂರಪ್ಪ, ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರಹೆಗಡೆ ಕಾಗೇರಿ, ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಸಿದ್ಧಗಂಗಾಮಠದ ಸಿದ್ಧಲಿಂಗ ಸ್ವಾಮೀಜಿ, ಶಿರಾದ ಸ್ಫಟಿಕಪುರ ಮಹಾಸಂಸ್ಥಾನದ ನಂಜಾವಧೂತ ಸ್ವಾಮೀಜಿ, ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ, ಚಿತ್ರದುರ್ಗದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ಸಂಸದರಾದ ಪಿ.ಸಿ. ಮೋಹನ್, ತೇಜಸ್ವಿ ಸೂರ್ಯ ಹಾಗೂ ಬೆಂಗಳೂರಿನ ಸಚಿವರು ಹಾಗೂ ಬಿಜೆಪಿ ಶಾಸಕರು ಇದ್ದರು.

ಸಂಗೀತ ಸಂಜೆ: 'ಬೆಂಗಳೂರು ಹಬ್ಬ'ದ ಸಮಾರೋಪ ಸಮಾರಂಭದಲ್ಲಿ 'ಸಂಗೀತ ಸಂಜೆ' ಆಯೋಜಿಸಲಾಗಿತ್ತು. ಸಂಗೀತ ನಿರ್ದೇಶಕರಾದ ಅರ್ಜುನ್ ಜನ್ಯ, ಗುರುಕಿರಣ್, ಗಾಯಕರಾದ ಅರ್ಚನಾ ಉಡುಪ, ಶಮಿತಾ ಮಲ್ನಾಡ್, ಚೇತನ್ ಕನ್ನಡ ಹಾಡುಗಳಿಗೆ ಧ್ವನಿಯಾದರು. ಮಾಸ್ಟರ್ ಆನಂದ ನಿರೂಪಿಸಿದರು. ಕಲಾತಂಡಗಳಿಂದ ನೃತ್ಯ ಪ್ರದರ್ಶನವಿತ್ತು.

'ವಿಶ್ವದಲ್ಲೇ ಪ್ರಬಲ ರಾಜ್ಯ ಮಾಡ್ತೇವೆ'

'ಕರ್ನಾಟಕದಲ್ಲಿ ಮುಂದಿನ ಅವಧಿಗೆ ಬಿಜೆಪಿ ಸರ್ಕಾರ ರಚನೆಯಾದರೆ ದೇಶದಲ್ಲಿ ಅಷ್ಟೇ ಅಲ್ಲ, ವಿಶ್ವದ ಎಲ್ಲ ರಾಜ್ಯಗಳಲ್ಲಿ ಅತ್ಯಂತ ಪ್ರಬಲ ರಾಜ್ಯವನ್ನಾಗಿ ಮಾಡುವ ಯೋಜನೆ ಈ ಡಬಲ್ ಎಂಜಿನ್ ಸರ್ಕಾರ ಹೊಂದಿದೆ, ಅದನ್ನು ಸಾಧಿಸಲಿದೆ' ಎಂದು ಅಮಿತ್ ಶಾ ಹೇಳಿದರು.

'ಮುಖ್ಯಮಂತ್ರಿ ಕುರ್ಚಿಗಾಗಿ ಈಗಿನಿಂದಲೇ ಪರಸ್ಪರ ಕಾಲೆಳೆಯುವ ಕಾರ್ಯದಲ್ಲಿ ತೊಡಗಿರುವ ಪಕ್ಷದ ಆಡಳಿತ ಕರ್ನಾಟಕಕ್ಕೆ ಬೇಡ. ಪ್ರಧಾನಿ ನರೇಂದ್ರ ಮೋದಿ ಅವರ ಸದೃಢ, ದೂರದೃಷ್ಟಿಯ ಬಿಜೆಪಿ ಆಡಳಿತಕ್ಕೆ ನೀವೆಲ್ಲ ಆಶೀರ್ವಾದ ನೀಡಿ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

'ತೆರಿಗೆ ಹಾಗೂ ಸಹಾಯಧನ ಎರಡು ಬಾಬ್ತಿನಲ್ಲಿ 2009 ರಿಂದ 2014 ರವರೆಗೆ ಕರ್ನಾಟಕಕ್ಕೆ ₹94 ಸಾವಿರ ಕೋಟಿ ನೀಡಲಾಗಿತ್ತು. ಮೋದಿ ನೇತೃತ್ವದ 2014 ರಿಂದ 2019ರ ಸರ್ಕಾರ 2.25 ಲಕ್ಷ ಕೋಟಿ ನೀಡಿದೆ. ಶೇ 140ಕ್ಕೂ ಹೆಚ್ಚು ಅನುದಾನ ನೀಡಿದೆ. ಕೃಷ್ಣಾ ಮೇಲ್ದಂಡೆ, ಕಳಸಾ ಬಂಡೂರಿ, ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆ, ವಂದೇ ಭಾರತ ಸೇರಿದಂತೆ ಹಲವು ಯೋಜನೆಗಳು ನಮ್ಮ ಸರ್ಕಾರದ್ದವು' ಎಂದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, 'ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇಡೀ ದೇಶವನ್ನು ಮತ್ತೆ ಒಗ್ಗೂಡಿಸುವ ಕೆಲಸ ಮಾಡಿದ್ದಾರೆ. ನಮ್ಮ ರಾಜ್ಯ, ಆಂಧ್ರಪ್ರದೇಶ, ಒಡಿಶಾದಲ್ಲಿ ನಕ್ಸಲರ ಹಾವಳಿ ಇತ್ತು. ಇದೂ ಸೇರಿದಂತೆ ಅನೇಕ ವಿಚ್ಛಿದ್ರಕಾರಿ ಶಕ್ತಿಗಳನ್ನು ದಮನ ಮಾಡಿ ಇಡಿ ದೇಶವನ್ನು ಅಭಿವೃದ್ಧಿ ಪಥದಲ್ಲಿ ತೆಗೆದುಕೊಂಡು ಹೋಗುತ್ತಿದ್ದಾರೆ' ಎಂದು ಹೇಳಿದರು.

ಬ್ರಾಹ್ಮಣ ಮಹಾಸಭಾ ಅಧ್ಯಕ್ಷರ ಅವಧಿ 5 ವರ್ಷ

ಬೆಂಗಳೂರು: ಅಧ್ಯಕ್ಷರ ಅವಧಿಯನ್ನು ಮೂರು ವರ್ಷಗಳಿಂದ ಐದು ವರ್ಷಗಳಿಗೆ ಹೆಚ್ಚಿಸುವುದೂ ಸೇರಿದಂತೆ ಹಲವು ಮಹತ್ವದ ಬೈಲಾ ತಿದ್ದುಪಡಿಗಳಿಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸರ್ವಸದಸ್ಯರ ಸಭೆ ಸರ್ವಾನುಮತದ ಒಪ್ಪಿಗೆ ನೀಡಿತು.

ಬಸವನಗುಡಿಯ ಆಚಾರ್ಯ ಪಾಠ ಶಾಲಾ ಕಾಲೇಜು ಆವರಣದಲ್ಲಿ ಭಾನುವಾರ ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಅಧ್ಯಕ್ಷತೆಯಲ್ಲಿ ಸರ್ವ ಸದಸ್ಯರ ಸಭೆ ನಡೆಯಿತು.

ಸಭೆ ಆರಂಭದಲ್ಲಿ ಕೆಲವರು ಗದ್ದಲ ಎಬ್ಬಿಸಿದರು. ಅಧ್ಯಕ್ಷರು ಬೈಲಾದಲ್ಲಿನ ಅಂಶಗಳ ಬಗ್ಗೆ ಸ್ಪಷ್ಟನೆ ನೀಡಿದರು. ಸಮಾಧಾನದಿಂದ ಸಭೆ ನಡೆಯಲು ಸಹಕರಿಸುವಂತೆ ಕೋರಿದರು.

ಅಶೋಕ್ ಹಾರನಹಳ್ಳಿ ಮಾತನಾಡಿ, 'ಮಹಾಸಭಾದ ಬೈಲಾ ದಶಕಗಳ ಹಿಂದೆ ರಚನೆಗೊಂಡಿದ್ದು, ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ತಿದ್ದುಪಡಿ ಅವಶ್ಯಕತೆ ಇದೆ. ತಜ್ಞರು, ಅನುಭವಿ ವಕೀಲರು, ವಿವಿಧ ಜಿಲ್ಲಾ ಘಟಕಗಳ ಅಧ್ಯಕ್ಷರನ್ನು ಒಳಗೊಂಡ ಸಮಿತಿ ಸಮಗ್ರ ಅಧ್ಯಯನ ನಡೆಸಿ ಸೂಚಿಸಿದ ಶಿಫಾರಸು ಅಳವಡಿಸಿಕೊಂಡು ಬೈಲಾಕ್ಕೆ ತಿದ್ದುಪಡಿ ತರಲಾಗಿದೆ. ಕಾರ್ಯಕಾರಿ ಸಮಿತಿ ಮುಂದಿಟ್ಟು ಒಪ್ಪಿಗೆ ಪಡೆಯಲಾಗಿದೆ' ಎಂದರು.

ಸದಸ್ಯತ್ವ ಶುಲ್ಕವನ್ನು ಹೆಚ್ಚಿಸಲೂ ಸಭೆ ತೀರ್ಮಾನ ಕೈಗೊಂಡಿತು. ನಿಗದಿತ ಕೇಂದ್ರಗಳಿಂದ ಮಹಾಸಭಾ ಅಧ್ಯಕ್ಷರ ಚುನಾವಣೆಗೆ ಮತ ಚಲಾಯಿಸುವ ಸಂಬಂಧದ ತಿದ್ದುಪಡಿಗೂ ಸಭೆ ಅನುಮೋದನೆ ನೀಡಿತು.

'ಅಶೋಕ್ ಹಾರನಹಳ್ಳಿ ಅಧ್ಯಕ್ಷರಾದ ನಂತರ ಮಹಾಸಭೆಯ ಚಟುವಟಿಕೆಗಳನ್ನು ರಾಜ್ಯವ್ಯಾಪಿ ವಿಸ್ತರಿಸಲಾಗುತ್ತಿದೆ' ಎಂದು ಸದಸ್ಯರು ಹೇಳಿದರು.



ನಗರದಲ್ಲಿ ಭಾನುವಾರ ನಡೆದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸರ್ವ ಸದಸ್ಯರ ಸಭೆಯಲ್ಲಿ ಸಂಘಟನಾ ಕಾರ್ಯದರ್ಶಿ ರಾಘವೇಂದ್ರ ಭಟ್, ಮಹಾಸಭಾ ಖಜಾಂಚಿ ವಿ.ಎಸ್‌.ನಾಯಕ್, ಅಧ್ಯಕ್ಷ ಅಶೋಕ್ ಹಾರನಹಳ್ಳಿ, ವಿಧಾನ ಪರಿಷತ್ ಸದಸ್ಯ ಯು.ಬಿ.ವೆಂಕಟೇಶ್ ಇದ್ದರು.

ಸುದ್ದಿ 2 ನಿಮಿಷ

ಅಂಬರೀಷ್ ಪ್ರತಿಮೆ ಅನಾವರಣ ಇಂದು

ಬೆಂಗಳೂರು: ಅಂಬರೀಷ್ ರಸ್ತೆ ನಾಮಕರಣ, ಅವರ ಪ್ರತಿಮೆ ಹಾಗೂ ಪ್ರತಿಷ್ಠಾನದ ಉದ್ಘಾಟನೆ ಮಾರ್ಚ್ 27ರಂದು ನಡೆಯಲಿದೆ.

ಆನಂದರಾವ್ ವೃತ್ತದಿಂದ ಆರ್.ಸಿ. ಕಾಲೇಜ್‌ವರೆಗಿನ (ರೇಸ್‌ಕೋರ್ಸ್) ರಸ್ತೆಗೆ ಅಂಬರೀಷ್ ರಸ್ತೆ ಎಂದು ಹೆಸರಿಸಲಾಗುವುದು. ಸಂಜೆ 5 ಗಂಟೆಗೆ ರೇಸ್‌ಕೋರ್ಸ್ ಜಂಕ್ಷನ್‌ನಲ್ಲಿ ಅಂಬರೀಷ್ ಅವರ ಪ್ರತಿಮೆ ಅನಾವರಣ ನಡೆಯಲಿದೆ. ಸಂಜೆ 6 ಗಂಟೆಗೆ ಕಂಠೀರವ ಸ್ಟುಡಿಯೋ ಆವರಣದಲ್ಲಿ ಅಂಬರೀಷ್ ಸ್ಮಾರಕ ಹಾಗೂ ಪ್ರತಿಷ್ಠಾನದ ಉದ್ಘಾಟನೆ ನಡೆಯಲಿದೆ.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಕೌಶಲಾಭಿವೃದ್ಧಿ, ಉದ್ಯಮಶೀಲತೆ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆಯ ರಾಜ್ಯ ಸಚಿವ ಎಂ. ರಾಜೀವ್ ಚಂದ್ರಶೇಖರ್, ಸಂಸದರಾದ ಡಿ.ವಿ. ಸದಾನಂದಗೌಡ, ಸುಮಲತಾ ಅಂಬರೀಷ್, ಸಚಿವ ಕೆ. ಗೋಪಾಲಯ್ಯ, ಅಂಬರೀಷ್ ಪ್ರತಿಷ್ಠಾನದ ಸದಸ್ಯ, ನಟ ಅಭಿಷೇಕ್ ಅಂಬರೀಷ್ ಭಾಗವಹಿಸಲಿದ್ದಾರೆ ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಬಾಮ ಹರೀಶ್ ತಿಳಿಸಿದ್ದಾರೆ.

'ಮೀಸಲಾತಿ ರದ್ದು: ಕಾನೂನು ಹೋರಾಟಕ್ಕೆ ತೀರ್ಮಾನ'

ಬೆಂಗಳೂರು: ಮುಸ್ಲಿಮರಿಗೆ ನೀಡಲಾಗಿದ್ದ 2ಬಿ ಮೀಸಲಾತಿಯನ್ನು ರದ್ದುಪಡಿಸಿರುವ ಸರ್ಕಾರದ ನಿರ್ಧಾರದ ವಿರುದ್ಧ ಕಾನೂನು ಹೋರಾಟ ನಡೆಸಲು ಕರ್ನಾಟಕ ಮುಸ್ಲಿಂ ಜಮಾಅತ್ ತೀರ್ಮಾನಿಸಿದೆ.

ಭಾನುವಾರ ಕಾನೂನು ಪರಿಣತರು ಮತ್ತು ಸಮುದಾಯದ ಮುಖಂಡರೊಂದಿಗೆ ಸರಣಿ ಸಭೆ ನಡೆಸಿದ ಕರ್ನಾಟಕ ಮುಸ್ಲಿಂ ಜಮಾಅತ್ ಈ ಮಹತ್ವದ ತೀರ್ಮಾನ ಕೈಗೊಂಡಿದೆ.

ರಾಜ್ಯ ಮುಸ್ಲಿಂ ಜಮಾಅತ್ ಸಭೆಯಲ್ಲಿ ಈ ವಿಷಯಕ್ಕೆ ಅಂಗೀಕಾರ ನೀಡಿದೆ. ಮುಸ್ಲಿಂ ಜಮಾಅತ್ ರಾಜ್ಯ ಉಪಾಧ್ಯಕ್ಷ ಮೌಲಾನಾ ಶಾಫಿ ಸಅದಿ ನೇತೃತ್ವದಲ್ಲಿ ಈ ಹೋರಾಟ ನಡೆಯಲಿದೆ.

ಮುಸ್ಲಿಂ ಜಮಾಅತ್‌ನ ಯುವಜನ ಮತ್ತು ವಿದ್ಯಾರ್ಥಿ ಘಟಕಗಳಾದ ಎಸ್‌ವೈಎಸ್ ಮತ್ತು ಎಸ್‌ಎಸ್‌ಎಫ್ ಸಹ ಈ 2ಬಿ ಮೀಸಲಾತಿ ರದ್ದತಿ ವಿರುದ್ಧ ವಿವಿಧ ಹೋರಾಟಗಳನ್ನು ಸಂಘಟಿಸಲಿದೆ ಎಂದು ಮುಸ್ಲಿಂ ಜಮಾಅತ್ ಅಧ್ಯಕ್ಷ ಮಾಲಾನಾ ಮುಹಮ್ಮದ್ ಪಾಝಿಲ್ ರಝ್ವಿ ಕಾವಲ್ ಕಟ್ಟೆ ಮತ್ತು ರಾಜ್ಯ ಪ್ರಧಾನ ಕಾರ್ಯದರ್ಶಿ ಮೌಲಾನ ಅಬೂ ಸುಫ್ಯಾನ್ ಮದನಿ ಜಂಟಿ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಭವಿಷ್ಯ ನಿಧಿ ಅದಾಲತ್ ಇಂದು

ಬೆಂಗಳೂರು: ಭವಿಷ್ಯ ನಿಧಿಯ 'ನಿಧಿ ಆಪ್ ಕೆ ನಿಕಟ್' ಅದಾಲತ್' ಕೇಂದ್ರೀಯ ಸದನದ ಶ್ರುತಿ ಆಡಿಟೋರಿಯಂನಲ್ಲಿ ಮಾರ್ಚ್ 27ರಂದು ಬೆಳಿಗ್ಗೆ 9 ಗಂಟೆಗೆ ನಡೆಯಲಿದೆ.

ನೋಂದಣಿದಾರರು, ಉದ್ಯೋಗದಾತರು ಮತ್ತು ವಿನಾಯಿತಿ ಪಡೆದ ಸಂಸ್ಥೆಗಳು, ಕಂಪನಿಗಳು ಭವಿಷ್ಯ ನಿಧಿ ಮತ್ತು ಪಿಂಚಣಿಯ ಕುರಿತು ದೀರ್ಘಕಾಲದಿಂದ ಎದುರಿಸುತ್ತಿರುವ ಕುಂದುಕೊರತೆಗಳನ್ನು ಪರಿಹರಿಸಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ಮೀಸಲಾತಿ: ರಾಜ್ಯಪಾಲರಿಗೆ ದೂರು ನೀಡಲು ಎಎಪಿ ನಿರ್ಧಾರ

ಬೆಂಗಳೂರು: ಮುಸ್ಲಿಮರಿಗೆ ಪ್ರವರ್ಗ 2 'ಬಿ' ನೀಡಿದ್ದ ಮೀಸಲಾತಿ ರದ್ದು ಪಡಿಸಿದ ರಾಜ್ಯ ಸರ್ಕಾರದ ನಿರ್ಧಾರವನ್ನು ಆಮ್ ಆದ್ಮಿ ಪಕ್ಷದ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಫರೀದುದ್ದೀನ್ ಷರೀಫ್ ಖಂಡಿಸಿದ್ದಾರೆ.

'ಮುಸ್ಲಿಮರಿಗಿದ್ದ 2 'ಬಿ' ಮೀಸಲಾತಿಯನ್ನು ಯಾರೂ ಪ್ರಶ್ನಿಸಿರಲಿಲ್ಲ. ರದ್ದುಪಡಿಸಬೇಕೆಂಬ ನ್ಯಾಯಾಲಯದ ಆದೇಶವೂ ಇಲ್ಲ. ಆದರೂ, ಸರ್ಕಾರ ಮುಸ್ಲಿಮರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಮೀಸಲಾತಿ ರದ್ದುಪಡಿಸುವ ನಿರ್ಣಯ ಕೈಗೊಂಡಿದೆ. ಮುಸ್ಲಿಮರನ್ನು ಕೆರಳಿಸಿ ಕೋಮುಗಲಭೆ ಸೃಷ್ಟಿಸಲು ಹುನ್ನಾರ ನಡೆಸಿರುವುದು ಕಂಡುಬರುತ್ತಿದೆ. ರಾಜಕೀಯ ಲಾಭಕ್ಕಾಗಿ ಸಮಾಜದಲ್ಲಿ ಅಶಾಂತಿ ಸೃಷ್ಟಿಸಲು ಯತ್ನಿಸುತ್ತಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಈ ಕುರಿತು ರಾಜ್ಯಪಾಲರಿಗೂ ದೂರು ನೀಡಿ, ಸರ್ಕಾರಕ್ಕೆ ಸೂಕ್ತ ನಿರ್ದೇಶನ ನೀಡುವಂತೆ ಆಗ್ರಹಿಸಲು ನಿರ್ಧರಿಸಿದ್ದೇವೆ' ಎಂದು ಹೇಳಿದ್ದಾರೆ.



ರಾಹುಲ್ ಗಾಂಧಿ ಅವರನ್ನು ಸಂಸತ್ ಸದಸ್ಯತ್ವದಿಂದ ಅನರ್ಹಗೊಳಿಸಿರುವುದನ್ನು ಖಂಡಿಸಿ ನಗರದಲ್ಲಿ ಭಾನುವಾರ ರಾತ್ರಿ ಯುವ ಕಾಂಗ್ರೆಸ್ ಘಟಕದ ನೇತೃತ್ವದಲ್ಲಿ ಪಂಜಿನ ಮೆರವಣಿಗೆ ನಡೆಸಲಾಯಿತು.

ಪಂಜಿನ ಮೆರವಣಿಗೆ: ಯುವ ಕಾಂಗ್ರೆಸ್ ಕಾರ್ಯಕರ್ತರ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಹುಲ್ ಗಾಂಧಿ ಅವರನ್ನು ಸಂಸತ್ ಸದಸ್ಯತ್ವ ಸ್ಥಾನದಿಂದ ಅನರ್ಹಗೊಳಿಸಿರುವುದನ್ನು ಖಂಡಿಸಿ ನಗರದಲ್ಲಿ ಭಾನುವಾರ ರಾತ್ರಿ ಯುವ ಕಾಂಗ್ರೆಸ್ ಕಾರ್ಯಕರ್ತರು ಪಂಜಿನ ಮೆರವಣಿಗೆ ನಡೆಸಿದರು.

ರೇಸ್ ಕೋರ್ಸ್ ರಸ್ತೆಯ ಕಾಂಗ್ರೆಸ್ ಭವನದಿಂದ ಮೆರವಣಿಗೆ ಆರಂಭವಾಯಿತು. ಮಾರ್ಗ ಮಧ್ಯದಲ್ಲಿ ಪೊಲೀಸರು ಜಲಫಿರಂಗಿ ಬಳಸಿ ಚದುರಿಸಿ ವಶಕ್ಕೆ ಪಡೆದರು. ಬಳಿಕ, ಕಾರ್ಯಕರ್ತರನ್ನು ಬಿಡುಗಡೆ ಮಾಡಿದರು.

ಇದಕ್ಕೂ ಮೊದಲು ಪ್ರತಿಭಟನಕಾರರು ಕೇಂದ್ರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು.

ಹಸಿರು ನಿಶಾನೆ ತೋರಿದ್ದ ಮುಖ್ಯಮಂತ್ರಿ ಬೊಮ್ಮಾಯಿ • ಬಾಲಭವನಕ್ಕೆ ಬಂದಿದ್ದ ನೂರಾರು ಮಕ್ಕಳಿಗೆ ನಿರಾಸೆ

ಉದ್ಘಾಟನೆ ಮರುದಿನವೇ ಪುಟಾಣಿ ರೈಲು ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಘಾಟನೆಯ ಮರುದಿನವೇ ಬಾಲಭವನದ ಪುಟಾಣಿ ರೈಲು ಸಂಚಾರ ಮತ್ತು ಬೋಟಿಂಗ್ ಸ್ಥಗಿತಗೊಂಡಿದೆ.


ನವೀಕರಿಸಿದ ಬಾಲಭವನ, ಬೋಟಿಂಗ್ ಮತ್ತು ಪುಟಾಣಿ ರೈಲಿಗೆ ಶನಿವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಸಿರು ನಿಶಾನೆ ತೋರಿಸಿದ್ದರು.

ಆದರೆ, ಮರುದಿನವೇ ಬಾಲಭವನದ ಗೇಟಿಗೆ ಪುಟಾಣಿ ರೈಲು, ಬೋಟಿಂಗ್ ಅಮ್ಯೂಸ್‌ಮೆಂಟ್ ಯಾವುದು ಲಭ್ಯವಿರುವುದಿಲ್ಲ. ಮುಂದಿನ ವಾರದೊಳಗೆ ಪ್ರಾರಂಭಿಸಲಾಗುವುದು ಎಂಬ ಫಲಕ ಅಳವಡಿಸಲಾಗಿದೆ. ಇದರಿಂದ ಭಾನುವಾರ ಬಾಲಭವನಕ್ಕೆ ಬಂದ ನೂರಾರು ಮಕ್ಕಳು ಮತ್ತು ಅವರ ಪಾಲಕರಿಗೆ ನಿರಾಸೆಯಾಗಿದೆ.

‘ನಗರದಲ್ಲಿ ಮಕ್ಕಳ ಆಕರ್ಷಣೆಯ ಕೇಂದ್ರವಾಗಿರುವ ಬಾಲಭವನದಲ್ಲಿ ಸದಾ ಮಕ್ಕಳ ಚಟುವಟಿಕೆ ನಡೆಯುತ್ತಿತ್ತು. ಕಳೆದ ಎರಡೂ–ಮೂರು ವರ್ಷಗಳಿಂದ ಸ್ಮಾರ್ಟ್‌ಸಿಟಿ ಯೋಜನೆ ಅಡಿಯಲ್ಲಿ ನವೀಕರಣ ಕೆಲಸಗಳು ನಡೆಯುತ್ತಿರುವುದರಿಂದ ಇಲ್ಲಿನ ಪುಟಾಣಿ ರೈಲು ಕಾರ್ಯಾಚರಣೆಯನ್ನು ಸಹ ಸ್ಥಗಿತಗೊಳಿಸಲಾಗಿತ್ತು. ಪುಟಾಣಿ ರೈಲಿನಲ್ಲಿ ಸಂಚರಿಸಬೇಕೆನ್ನುವ ಮಕ್ಕಳ ಆಸೆ ಉದ್ಘಾಟನೆಯ ನಂತರವೂ ಈಡೇರಿಲ್ಲ. ಆದರೂ, 12 ವರ್ಷ ಮೇಲ್ಪಟ್ಟ ಮಕ್ಕಳಿಗೆ ಬಾಲಭವನದ ಪ್ರವೇಶಕ್ಕೆ ₹20 ಶುಲ್ಕ ಪಾವತಿಸಬೇಕಾಗಿದೆ’ ಎಂದು ಜಯನಗರದ ನಿವಾಸಿ ಆಶಿಶ್ ಮೆಹ್ತಾ ಆಕ್ರೋಶ ವ್ಯಕ್ತಪಡಿಸಿದರು.

‘ಮುಂದಿನ ವಾರ ಪುಟಾಣಿ ರೈಲು ಲಭ್ಯ’

‘ಬಾಲಭವನದ ಪುಟಾಣಿ ರೈಲು ಮತ್ತು ಬೋಟಿಂಗ್ ವ್ಯವಸ್ಥೆಯ ಪೂರ್ವ ಸಿದ್ಧತೆ ಮತ್ತು ಸುರಕ್ಷತೆಯ ದೃಷ್ಟಿಯಿಂದ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಮುಂದಿನ ವಾರದಿಂದ ಬಾಲಭವನದ ಪುಟಾಣಿ ರೈಲು ಸೇರಿ ಎಲ್ಲ ಸೌಲಭ್ಯಗಳು ಸಾರ್ವಜನಿಕರಿಗೆ ಮುಕ್ತವಾಗಲಿವೆ’ ಎಂದು ಬಾಲಭವನದ ಕಾರ್ಯದರ್ಶಿ ರಾಜಮೂರ್ತಿ ‘ಪ್ರಜಾವಾಣಿ’ಗೆ ತಿಳಿಸಿದರು.



ಬಾಲಭವನದ ಗೇಟಿಗೆ ಅಂಟಿಸಿರುವ ಫಲಕ

‘ಪುಟಾಣಿ ರೈಲು ಮತ್ತು ಬೋಟಿಂಗ್ ವ್ಯವಸ್ಥೆ ಸಾರ್ವಜನಿಕರಿಗೆ ಮುಕ್ತವಾದ ನಂತರವೇ ಅಧಿಕೃತವಾಗಿ ಉದ್ಘಾಟನೆಗೊಳಿಸಬೇಕಿತ್ತು. ಆದರೆ, ತರಾತುರಿ ಯಲ್ಲಿ ಉದ್ಘಾಟಿಸಿ ಸಾರ್ವಜನಿಕರಿಗೆ ತಪ್ಪು ಮಾಹಿತಿ ನೀಡುತ್ತಿರುವುದು ಖಂಡನೀಯ. ಮಕ್ಕಳೊಂದಿಗೆ ಬಾಲ ಭವನಕ್ಕೆ ಬಂದು ನೋಡಿದರೇ ರೈಲು ಮತ್ತು ಬೋಟಿಂಗ್ ಸೇವೆಯೇ ಲಭ್ಯವಿಲ್ಲ ಎಂಬ ಫಲಕವನ್ನು ಗೇಟಿಗೆ ಅಂಟಿಸಿಲಾಗಿದೆ’ ಎಂದು ಜಾಲಹಳ್ಳಿಯ ನಿವಾಸಿ ರಮೇಶ ಬೇಸರ ವ್ಯಕ್ತಪಡಿಸಿದರು.



ಉದ್ಘಾಟನೆಯ ಮರುದಿನವೇ ಬಾಲಭವನದ ಪುಟಾಣಿ ರೈಲು ಸಂಚಾರ ಮತ್ತು ಬೋಟಿಂಗ್ ಸ್ಥಗಿತಗೊಂಡಿದ್ದು, ನಿರಾಸೆಗೊಂಡ ಮಕ್ಕಳು ಮತ್ತು ಪಾಲಕರು ಹೊರನಡೆದರು –ಪ್ರಜಾವಾಣಿ ಚಿತ್ರ

ಶಾ ಸಂಚಾರ, ಕ್ರಿಕೆಟ್: ದಟ್ಟಣೆ ಬಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಗೃಹ ಸಚಿವ ಅಮಿತ್ ಶಾ ಸಂಚಾರ ಹಾಗೂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಟಿ–20 ಅಭ್ಯಾಸ ಪಂದ್ಯದಿಂದಾಗಿ ನಗರದ ಪ್ರಮುಖ ರಸ್ತೆಗಳಲ್ಲಿ ಭಾನುವಾರ ದಟ್ಟಣೆ ಉಂಟಾಯಿತು.

ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ ನಡೆದ ಗುಜರಾತಿ ಸಮಾಜದ ಕಾರ್ಯಕ್ರಮ ಹಾಗೂ ವಿಧಾನಸೌಧ ಪೂರ್ವದ್ವಾರದಲ್ಲಿ ಆಯೋಜಿಸಿದ್ದ ಬೆಂಗಳೂರು ಹಬ್ಬದಲ್ಲಿ ಅಮಿತ್ ಶಾ ಪಾಲ್ಗೊಂಡಿದ್ದರು.

ಕಾರ್ಯಕ್ರಮ ಸ್ಥಳಕ್ಕೆ ಶಾ ಅವರು ವಾಹನದಲ್ಲಿ ತೆರಳುತ್ತಿದ್ದ ವೇಳೆ ಹಲವು ರಸ್ತೆಗಳಲ್ಲಿ ಸಾರ್ವಜನಿಕರ ಸಂಚಾರ ನಿರ್ಬಂಧಿಸಲಾಗಿತ್ತು. ಪ್ರಮುಖ ರಸ್ತೆ, ಒಳರಸ್ತೆಗಳಲ್ಲಿ ಸಾರ್ವಜನಿಕರ ವಾಹನಗಳನ್ನು ಪೊಲೀಸರು ತಡೆದು ನಿಲ್ಲಿಸಿದ್ದರು. ಸಚಿವರ ವಾಹನ ದಾಟಿ ಹೋಗುವವರೆಗೂ ವಾಹನಗಳು ಸಾಲುಗಟ್ಟಿ ನಿಂತು ವಿಪರೀತ ದಟ್ಟಣೆ ಉಂಟಾಯಿತು. ಬಳ್ಳಾರಿ ರಸ್ತೆ, ರಾಜಭವನ ರಸ್ತೆ, ಇನ್ಫೆಂಟ್ರಿ ರಸ್ತೆ, ಕಬ್ಬನ್ ರಸ್ತೆ, ನೃಪತುಂಗ ರಸ್ತೆ, ಕ್ವೀನ್ಸ್ ರಸ್ತೆ, ಕೆ.ಆರ್. ವೃತ್ತ, ಹಡ್ಸನ್ ವೃತ್ತ, ಪುರಭವನ ಎದುರು, ಹಳೇ ಏರ್‌ಪೋರ್ಟ್ ರಸ್ತೆ, ಎಎಸ್‌ಸಿ ಕೇಂದ್ರ ಹಾಗೂ ಇಸ್ರೊ ಜಂಕ್ಷನ್ ರಸ್ತೆಯಲ್ಲಿ ದಟ್ಟಣೆ ಉಂಟಾಗುವ ಸಾಧ್ಯತೆ ಇರುವುದಾಗಿ ಸಂಚಾರಿ ಪೊಲೀಸರು ತಿಳಿಸಿದ್ದರು. ಪರ್ಯಾಯ ಮಾರ್ಗ ಬಳಸುವಂತೆ ಕೋರಿದ್ದರು.



ಶಿವಾನಂದ ವೃತ್ತದ ಮೇಲ್ಸೇತುವೆ ಬಳಿ ಉಂಟಾಗಿದ್ದ ದಟ್ಟಣೆಯಲ್ಲಿ ಸಿಲುಕಿದ್ದ ಜನ

ಬೆಂಗಳೂರು ಹಬ್ಬ ವೀಕ್ಷಣೆಗೂ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬಂದಿದ್ದರು. ಇದರಿಂದಾಗಿ ವಿಧಾನಸೌಧ ಎದುರಿನ ರಸ್ತೆ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ದಟ್ಟಣೆ ಕಂಡುಬಂತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಟಿ–20 ಕ್ರಿಕೆಟ್ ಅಭ್ಯಾಸ ಪಂದ್ಯ ವೀಕ್ಷಿಸಲು ಹೆಚ್ಚಿನ ಸಂಖ್ಯೆಯಲ್ಲಿ ಜನರು ಬಂದಿದ್ದರು. ಕಬ್ಬನ್ ರಸ್ತೆ, ಎಂ.ಜಿ.ರಸ್ತೆ, ಕಸ್ತೂರ್ ಬಾ ರಸ್ತೆ, ರಾಜಭವನ ರಸ್ತೆ, ಇನ್ಫೆಂಟ್ರಿ ರಸ್ತೆ , ಶಿವಾನಂದ ವೃತ್ತದಲ್ಲಿ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ದಟ್ಟಣೆ ಉಂಟಾಯಿತು. ಈ ವೃತ್ತದಲ್ಲಿ ಇತ್ತೀಚೆಗೆ ಮೇಲ್ಸೇತುವೆ ನಿರ್ಮಿಸಿ, ಸಂಚಾರಕ್ಕೆ ಮುಕ್ತಗೊಳಿಸಲಾಗಿತ್ತು. ಆದರೆ, ಇದೇ ಸ್ಥಳದಲ್ಲಿ ವಾಹನ ಸಂಚಾರಕ್ಕೆ ತೊಂದರೆ ಉಂಟಾಗಿ ದಟ್ಟಣೆ ಕಂಡುಬರುತ್ತಿದೆ.

‘ಅವಸರದಲ್ಲಿ ಮೇಲ್ಸೇತುವೆ ನಿರ್ಮಿಸಿ ಉದ್ಘಾಟಿಸಲಾಗಿದೆ. ರೇಸ್‌ಕೋರ್ಸ್ ರಸ್ತೆಯಿಂದ ಮೇಲ್ಸೇತುವೆಗೆ ಸಂಪರ್ಕ ಕಲ್ಪಿಸುವ ಮಾರ್ಗವೇ ಅವೈಜ್ಞಾನಿಕವಾಗಿತ್ತು. ಅದನ್ನು ಈಗ ಸರಿಪಡಿಸಲಾಗುತ್ತಿದೆ. ಜೊತೆಗೆ, ಮೇಲ್ಸೇತುವೆ ಕೆಳಭಾಗದಲ್ಲೂ ರಸ್ತೆ ಅಗೆಯಲಾಗಿದೆ. ಇದುವೇ ದಟ್ಟಣೆಗೆ ಕಾರಣವಾಗುತ್ತಿದೆ’ ಎಂದು ಸ್ಥಳೀಯರು ಹೇಳಿದರು.

ಹೆಲಿಕಾಪ್ಟರ್ ಸಾಲು: ‘ಏರ್– ಟ್ರಾಫಿಕ್ ಜಾಮ್’

ಬೆಂಗಳೂರಿನಲ್ಲಿ ಶನಿವಾರ ಆಗಸದಲ್ಲಿ ಐದು ಹೆಲಿಕಾಪ್ಟರ್‌ಗಳು ಸಾಲಾಗಿ ಹಾರಾಡಿದವು. ಅದರ ಫೋಟೊವನ್ನು ಕ್ಲಿಕ್ಕಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿರುವ ಜನ, ‘ಬೆಂಗಳೂರಿನಲ್ಲಿ ಏರ್ – ಟ್ರಾಫಿಕ್ ಜಾಮ್’ ಎಂಬುದಾಗಿ ಪ್ರತಿಕ್ರಿಯಿಸಿದ್ದಾರೆ.

‘ವಿಮಾನ ನಿಲ್ದಾಣದ ಸಮೀಪದ ರಸ್ತೆಯಿಂದ ಫೋಟೊ ತೆಗೆಯಲಾಗಿದೆ. ಲ್ಯಾಂಡಿಂಗ್ ಸಮಯಕ್ಕಾಗಿ ಕಾಯುತ್ತ ಐದು ಹೆಲಿಕಾಪ್ಟರ್‌ಗಳು ಸಾಲಿನಲ್ಲಿ ನಿಂತಿದ್ದವು. ಮೂರು ಹೆಲಿಕಾಪ್ಟರ್‌ಗಳು ಮಾತ್ರ ಫೋಟೊದಲ್ಲಿ ಸೆರೆ ಸಿಕ್ಕಿವೆ. ಚುನಾವಣೆ ಹಾಗೂ ನಾನಾ ಕಾರ್ಯಕ್ರಮ ನಿಮಿತ್ತ ನಗರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಗಣ್ಯರು ಬರುತ್ತಿದ್ದಾರೆ. ಬಹುತೇಕರು ಹೆಲಿಕಾಪ್ಟರ್ ಬಳಸುತ್ತಿದ್ದಾರೆ’ ಎಂದು ಜನ ಅಭಿಪ್ರಾಯಪಟ್ಟಿದ್ದಾರೆ.

ಕಂಟೆಂಟ್ ಚಿತ್ರಕ್ಕೆ ಹಣ ಎಲ್ಲಿಂದ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿನಿಮಾವನ್ನು ಸಬ್ಸಿಡಿ ಆಸೆಗಷ್ಟೇ ಮಾಡುತ್ತಿದ್ದಾರೆ... ಹೌದೇ? ವಿಷಯ(ಕಂಟೆಂಟ್) ಆಧರಿತ ಚಿತ್ರಕ್ಕೆ ಬಜೆಟ್ ಹೊಂದಿಸುವುದು ಹೇಗೆ? ಮಾರುಕಟ್ಟೆಯ ಪರ್ಯಾಯಗಳೇನು?

– ಇಂಥ ಹಲವಾರು ಚರ್ಚೆಗಳಿಗೆ ಪ್ರತಿಕ್ರಿಯೆ ನೀಡಲು ಸಜ್ಜಾಗಿದ್ದೇ 14ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಭಾನುವಾರ ನಡೆದ ನಿರ್ದೇಶಕರ ಪತ್ರಿಕಾಗೋಷ್ಠಿ ಹಾಗೂ ಸಂವಾದ. ಅದು ಪತ್ರಿಕಾಗೋಷ್ಠಿ ಅನ್ನುವುದಕ್ಕಿಂತ ಒಂದು ಸಂವಾದವಾಗಿಯೇ ಬದಲಾಯಿತು.

‘ಸಿನಿಮಾ ಬಂಡಿ’ (ತೆಲುಗು) ಚಿತ್ರದ ನಿರ್ದೇಶಕ ಪ್ರವೀಣ್ ಸಿನಿ ಉದ್ಯಮದ ಒಳಹೊಳಹುಗಳನ್ನು ತೆರೆದಿಟ್ಟರು. ತೆಲುಗು ನೆಲದಲ್ಲಿ ನಿರ್ಮಾಪಕರೇ ನಿರ್ದೇಶಕರಿಗಿಂತ ಹೆಚ್ಚು ಪ್ರಾಬಲ್ಯ ಹೊಂದಿದ್ದಾರೆ. ನಮ್ಮಲ್ಲಿ ಒಳ್ಳೆಯ ಚಿತ್ರಗಳಿಗೆ ಹೂಡಿಕೆ ಮಾಡಲು ಹೂಡಿಕೆದಾರರ ಸಭೆಗಳು ಪ್ರಮುಖ ವೇದಿಕೆ. ಫಿಲ್ಮ್ ಬಜಾರ್ ಎಂಬ ವೇದಿಕೆಯಲ್ಲಿ ನಾವು ಸದಸ್ಯರಾದರೆ ಸಾಕು. ಆಗಾಗ ನಡೆಯುವ ಸಭೆಗಳಲ್ಲಿ ನಮ್ಮ ಸಿನಿಮಾ ಪರಿಕಲ್ಪನೆಯನ್ನು ಎರಡು ನಿಮಿಷಗಳಲ್ಲಿ ಪ್ರಸ್ತುತಪಡಿಸಬೇಕು. ನಿರ್ಮಾಪಕರಿಗೆ ಇಷ್ಟವಾದರೆ ಬಂಡವಾಳ ಹೂಡಲು ಮುಂದಾಗುತ್ತಾರೆ. ಕಂಟೆಂಟ್ ಏನನ್ನು ಬಯಸುತ್ತದೋ ಅಷ್ಟು ಮಾತ್ರ ವೆಚ್ಚ ಮಾಡಬೇಕು. ಸೌಲಭ್ಯಗಳು ಇವೆ ಎಂದ ಮಾತ್ರಕ್ಕೆ ಎಲ್ಲವನ್ನೂ ಬಳಸಲೇಬೇಕೆಂದೇನಿಲ್ಲ’ ಎಂದರು.

ನಿರ್ದೇಶಕ ಶಿವಧ್ವಜ್ ಶೆಟ್ಟಿ ಮಾತನಾಡಿ, ‘ನಾವು ಕಂಟೆಂಟ್ ಏನನ್ನು ಬಯಸುತ್ತದೋ ಅದರ ಇತಿಮಿತಿಯೊಳಗೆ ಪರಿಕರಗಳನ್ನು ಬಳಸುತ್ತೇವೆ. ಉದಾಹರಣೆಗೆ ಹೆಚ್ಚು ಸಂಖ್ಯೆಯ ಲೈಟಿಂಗ್ ಬಳಸಲೇಬೇಕೆಂದಿಲ್ಲ. ನಾನು ಹಗಲು ಬೆಳಕಿನಲ್ಲಿ ಚಿತ್ರೀಕರಿಸಿದ್ದೂ ಇದೆ. ಮನೆಯ ಹೆಂಚು ತೆಗೆದು ಬೆಳಕು ಮೂಡಿಸಿದ್ದೂ ಇದೆ. ಹಣ ಕಡಿಮೆ ಇದ್ದಾಗ ಮನಸ್ಸು ಪ್ರಯೋಗಶೀಲವಾಗುತ್ತದೆ. ಸ್ಥಳೀಯ ಕಲಾವಿದರನ್ನು ಬಳಸುವುದರಿಂದ ಪ್ರಯಾಣ, ವಸತಿ ವೆಚ್ಚವನ್ನು ಉಳಿಸಬಹುದು’ ಎಂದರು.

‘ಸಬ್ಸಿಡಿ ಆಸೆಗೆ ಸಿನಿಮಾ ಮಾಡುವುದನ್ನು ಸಮರ್ಥಿಸುವುದಿಲ್ಲ. ಆ ನಿರೀಕ್ಷೆಯೂ ನಮಗಿರುವುದಿಲ್ಲ. ಆದರೆ, ನಮಗಾದ ವೆಚ್ಚದ ಸ್ವಲ್ಪ ಭಾಗವಾದರೂ ಸಬ್ಸಿಡಿ ಮೂಲಕ ಬರುತ್ತದಲ್ಲವೇ ಎಂಬ ಸಣ್ಣ ಸಮಾಧಾನ ಇರುತ್ತದೆ. ಸಬ್ಸಿಡಿ ಒಂದು ಪ್ರೋತ್ಸಾಹ ಇದ್ದಂತೆ’ ಎಂದರು ನಿರ್ಮಾಪಕ ಅವಿನಾಶ್ ಮತ್ತು ನಿರ್ದೇಶಕ ಉಮೇಶ್ ಬಡಿಗೇರ್. ಶಿವಧ್ವಜ್ ಶೆಟ್ಟಿ ಅವರು ಕೂಡಾ ಈ ಮಾತಿಗೆ ದನಿಗೂಡಿಸಿದರು.

ಕೋವಿಡ್ ಅವಧಿಯಲ್ಲಿ ಬಳ್ಳಾರಿಯಲ್ಲಿ ಗಂಗಮ್ಮ ಎಂಬ ತುಂಬು ಗರ್ಭಿಣಿ ಬಹು ಅಂಗಾಂಗ ವೈಫಲ್ಯದಿಂದ ಸಾವಿಗೀಡಾದ ಘಟನೆ ಕಾಡಿದ ಪರಿಣಾಮ ‘ಫೋಟೊ’ ಚಿತ್ರ ಮಾಡಲು ಕಾರಣವಾಯಿತು ಎಂದರು ನಿರ್ದೇಶಕ ಉತ್ಸವ್ ಗೋನಾವರ.

ನಿರ್ದೇಶಕ ಸಂದೀಪ್, ನಟ ರವಿ ಪ್ರಸಾದ್ ಸಂವಾದದಲ್ಲಿ ಭಾಗವಹಿಸಿದ್ದರು. ನಿರ್ದೇಶಕ ಪಿ. ಶೇಷಾದ್ರಿ ಸಂವಾದ ನಡೆಸಿಕೊಟ್ಟರು.

ಕಥೆಯ ಹಿಂದಿನ ಧ್ವನಿಗಳು

ಸಿನಿಮಾದಲ್ಲಿ ಕಥೆಯನ್ನು ಧ್ವನಿಸುವುದು ಶಬ್ದ ಹಾಗೂ ಶಬ್ದ ಪರಿಣಾಮ. ಈ ಬಗ್ಗೆ ಸಾಕಷ್ಟು ತಾಂತ್ರಿಕ ಪ್ರಾತ್ಯಕ್ಷಿಕೆ ಸಹಿತ ಗೋಷ್ಠಿ ನಡೆಯಿತು. ಶಬ್ದ ವಿನ್ಯಾಸದ ಕುರಿತು ಖ್ಯಾತ ಶಬ್ದ ವಿನ್ಯಾಸಕ ರಂಗನಾಥ್ ರವಿ (ಜಲ್ಲಿ ಕಟ್ಟು ಶಬ್ದ ವಿನ್ಯಾಸಕ), ಕಣ್ಣನ್ ಗಣಪತ್ ವಿವರಣೆ ನೀಡಿದರು.

‘ದೃಶ್ಯವನ್ನು ಅದರ ಸುತ್ತಮುತ್ತಲಿನ ಪರಿಣಾಮಗಳ ಸಹಿತ ಕಟ್ಟಿಕೊಡಬೇಕು. ಚಿತ್ರೀಕರಣ ಸ್ಥಳದಲ್ಲೇ ಧ್ವನಿಮುದ್ರಿಸಿಕೊಳ್ಳುವುದು (ಸಿಂಕ್ ಸೌಂಡ್) ಒಂದು ವಿಧಾನವಾದರೆ, ಸ್ಟುಡಿಯೋದಲ್ಲಿ ಡಬ್ಬಿಂಗ್ ವಿಧಾನ ಇನ್ನೊಂದು. ಮಾತು, ಸಂಗೀತ ಮತ್ತು ಆಯಾ ಪ್ರದೇಶದ ಶಬ್ದ ಪರಿಣಾಮಗಳನ್ನು ಒಟ್ಟುಗೂಡಿಸಿ ಪರಿಣಾಮಕಾರಿಯಾಗಿ ಕಟ್ಟಿಕೊಡುವುದು ಶಬ್ದ ವಿನ್ಯಾಸಕನ ಜವಾಬ್ದಾರಿ. ಹೀಗಾಗಿ ನಾವು ಸಾವಿರಾರು ಧ್ವನಿ ಮಾದರಿಗಳನ್ನು ಸಂಗ್ರಹಿಸಿಟ್ಟುಕೊಂಡಿರುತ್ತೇವೆ’ ಎಂದು ಉಭಯ ಶಬ್ದ ವಿನ್ಯಾಸಕರು ಹೇಳಿದರು.

‘ಕೆಲವೊಮ್ಮೆ ಸಣ್ಣ ಸಣ್ಣ ಶಬ್ದಗಳನ್ನು ಬೇರೆ ಬೇರೆ ಸಮಯ, ಸನ್ನಿವೇಶದಲ್ಲಿ ಧ್ವನಿ ಮುದ್ರಿಸಬೇಕಾಗುತ್ತದೆ. ಯಾವುದೋ ಶಬ್ದ ಸಹಜವಾಗಿ ಸಿಗುವುದಿಲ್ಲವೆಂದಾದಾಗ ಅದೇ ಪರಿಣಾಮ ನೀಡುವ ಪರಿಕರಗಳನ್ನು ಬಳಸಿ ಶಬ್ದ ಸೃಷ್ಟಿಸಬೇಕು. ಖಾಲಿ ಬಾಟಲಿ, ಮರದ ತುಂಡು, ಪ್ಲಾಸ್ಟಿಕ್, ಕಾಗದ, ಸೈಕಲ್ ಪಂಪ್, ಇತ್ಯಾದಿ ಬಳಸಿ ಧ್ವನಿ ಮುದ್ರಿಸಿ, ಅದನ್ನು ಸಂಕಲಿಸಿ ಬೇಕಾದ ಕಡೆ ಅಳವಡಿಸುತ್ತೇವೆ’ ಎಂದರು.

‘ಒಂದು ಚಿತ್ರದಲ್ಲಿ ಬಳಸಿದ್ದನ್ನು ಅಂಥದ್ದೇ ಸನ್ನಿವೇಶ ಇನ್ನೊಂದು ಚಿತ್ರದಲ್ಲಿ ಬಂದಾಗ ಬಳಸುವುದಿದೆ. ಆದರೆ, ಪರಿಣಾಮವೇ ಬೇರೆ ಇರುವಂತೆ ನೋಡಿಕೊಳ್ಳಬೇಕು. ಒಟಿಟಿ ವೇದಿಕೆಗೆ ಸಿನಿಮಾ ಕೊಡುವಾಗ ಧ್ವನಿ ಪ್ರಮಾಣವನ್ನು ತಗ್ಗಿಸಿ ಕೊಡಬೇಕಾಗುತ್ತದೆ. ಏಕೆಂದರೆ ವೀಕ್ಷಕನ ಉಪಕರಣ (ಮೊಬೈಲ್/ ಟಿವಿ/ ಕಂಪ್ಯೂಟರ್) ಇಷ್ಟೊಂದು ಗಾಢವಾದ ಧ್ವನಿ ಪ್ರಮಾಣವನ್ನು ತಡೆದುಕೊಳ್ಳುವ ಅಥವಾ ಹೊರ ಹೊಮ್ಮಿಸುವ ಸಾಮರ್ಥ್ಯ ಹೊಂದಿರುವುದಿಲ್ಲ. ಹಾಗಾಗಿ ಶಬ್ದದ ಪರಿಣಾಮಕ್ಕೆ ಚ್ಯುತಿ ಬಾರದಂತೆ ರೂಪಿಸಬೇಕಾಗುತ್ತದೆ’ ಎಂದು ಉಭಯ ಶಬ್ದ ವಿನ್ಯಾಸಕರು ಹೇಳಿದರು.

ನಿರ್ದೇಶಕ ಅಭಯಸಿಂಹ ಸಂವಾದ ನಡೆಸಿಕೊಟ್ಟರು.



ಧ್ವನಿ ವಿನ್ಯಾಸ ಸಂಬಂಧಿಸಿದ ಮಾಸ್ಟರ್ ಕ್ಲಾಸ್‌ನಲ್ಲಿ ಕಣ್ಣನ್ ಗಣಪತ್, ರಘುನಾಥ್ ರವಿ, ಅಭಯಸಿಂಹ ಭಾಗವಹಿಸಿದ್ದರು

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (**9606038256**) ಸಹ ಮಾಡಬಹುದು.



ತೇಜಸ್ವಿನಿನಗರದ ನೊಬೆಲ್ ರೆಸಿಡೆನ್ಸಿ ರಸ್ತೆಯ ಮೇಲೆ ಹರಿಯುತ್ತಿರುವ ತ್ಯಾಜ್ಯ ನೀರು.

‘ರಸ್ತೆ ಮೇಲೆ ತ್ಯಾಜ್ಯ ನೀರು’

ತೇಜಸ್ವಿನಿ ನಗರದ ನೊಬೆಲ್ ರೆಸಿಡೆನ್ಸಿ ರಸ್ತೆಯ ಪಕ್ಕದಲ್ಲಿರುವ ಚರಂಡಿಗೆ ಕಲ್ಲು–ಮಣ್ಣು ಹಾಕಿದ್ದರಿಂದ ಚರಂಡಿ ಕಟ್ಟಿಕೊಂಡಿದೆ. ಇದರಿಂದ ತ್ಯಾಜ್ಯ ನೀರೆಲ್ಲಾ ರಸ್ತೆಯ ಮೇಲೆ ಹರಿಯುತ್ತಿದ್ದು, ಶಾಲಾ–ಕಾಲೇಜಿಗೆ ಹೋಗುವ ಮಕ್ಕಳು, ಮಹಿಳೆಯರು, ವೃದ್ಧರು ಸೇರಿ ಸಾರ್ವಜನಿಕರ ಸಂಚಾರಕ್ಕೆ ಅನನುಕೂಲವಾಗಿದೆ. ಬಿಡಬ್ಲ್ಯುಎಸ್‌ಎಸ್‌ಬಿ ಮತ್ತು ಬಿಬಿಎಂಪಿ ಸಿಬ್ಬಂದಿಗೆ ಹಲವಾರು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ನಮ್ಮ ಬೆಂಗಳೂರು ಅಪ್ಲಿಕೇಶನ್‌ನಲ್ಲಿ ಅನೇಕ ಬಾರಿ ದೂರು ನೀಡಿದರೂ, ಯಾರು ಸ್ಪಂದಿಸುತ್ತಿಲ್ಲ.

ಬಸವರಾಜ್, ಸ್ಥಳೀಯ ನಿವಾಸಿ



ಗಿರಿನಗರದ ಆವಲಹಳ್ಳಿ ಮುಖ್ಯರಸ್ತೆಯಲ್ಲಿ ತಳ್ಳುವ ಗಾಡಿ ನಿಲ್ಲಿಸಿರುವುದು ಮತ್ತು ಕಸ ಎಸೆದಿರುವುದು

‘ತಳ್ಳುವ ಗಾಡಿ ತೆರವುಗೊಳಿಸಿ’

ಗಿರಿನಗರದ ಆವಲಹಳ್ಳಿ ಮುಖ್ಯರಸ್ತೆಯಲ್ಲಿ ಹಬ್ಬ ಹರಿದಿನಗಳಲ್ಲಿ ಮಾತ್ರ ತಳ್ಳುವ ಗಾಡಿಗಳಲ್ಲಿ ವ್ಯಾಪಾರ ವಹಿವಾಟು ಮಾಡಲಾಗುತ್ತದೆ. ನಂತರ ಅವುಗಳನ್ನು ಮುಖ್ಯರಸ್ತೆಯ ಅಂಚಿನಲ್ಲಿ ಬಿಟ್ಟು ಹೋಗುವುದರಿಂದ ಇದರಲ್ಲಿ ಇಲಿ ಹೆಗ್ಗಣಗಳು ಸೇರಿಕೊಂಡು ಅಕ್ಕಪಕ್ಕದ ನಿವಾಸಿಗಳಿಗೆ ತೊಂದರೆ ಕೊಡುತ್ತಿವೆ. ಕೆಲವು ಜನ ಇದರ ಅಕ್ಕಪಕ್ಕದಲ್ಲಿ ತ್ಯಾಜ್ಯವನ್ನು ತಂದು ಹಾಕುವುದರಿಂದ ಸೊಳ್ಳೆಗಳು ಉತ್ಪತ್ತಿಯಾಗುತ್ತಿವೆ. ಬಿಬಿಎಂಪಿ ಸಿಬ್ಬಂದಿಗೆ ತಿಳಿಸಿದರೂ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಕೂಡಲೇ ಇಲ್ಲಿರುವ ತ್ಯಾಜ್ಯ ಮತ್ತು ತಳ್ಳುವ ಗಾಡಿಗಳನ್ನು ತೆರುವುಗೊಳಿಸಬೇಕು.

ದಯಾನಂದ, ಸ್ಥಳೀಯ ನಿವಾಸಿ

‘ಕಸ ತೆರವುಗೊಳಿಸಿ’

ಕೆ.ಪಿ. ಅಗ್ರಹಾರ ಮತ್ತು ಬಿನ್ನಿ ಮಿಲ್ಸ್ ಮಧ್ಯೆ ಇರುವ ರೈಲ್ವೆ ಕ್ರಾಸಿಂಗ್ ಸಿಗ್ನಲ್ ಗೇಟ್ ಬಳಿ ಕಸ ಹಾಕಲಾಗಿದೆ. ಈ ಭಾಗವೆಲ್ಲ ಗಬ್ಬೆದ್ದು ನಾರುತ್ತಿದ್ದು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಎದುರಾಗಿದೆ. ಆದರೆ, ಕೆಲವರು ಅಲ್ಲಿಯೇ ಕಸ ಹಾಕುತ್ತಿದ್ದಾರೆ. ರಸ್ತೆಯಲ್ಲೆಲ್ಲ ತ್ಯಾಜ್ಯ ಹರಡಿ, ವಾಹನ ಸವಾರರು ಮತ್ತು ಪಾದಚಾರಿಗಳಿಗೆ ತೊಂದರೆಯಾಗುತ್ತಿದೆ. ತ್ಯಾಜ್ಯವೆಲ್ಲ ಕೊಳೆತು ದುರ್ನಾತ ಬರುವ ಮುನ್ನವೇ ಸಂಬಂಧಪಟ್ಟ ಅಧಿಕಾರಿಗಳು ವಿಲೇವಾರಿಗೆ ಕ್ರಮ ಕೈಗೊಳ್ಳಬೇಕು

ಸತೀಶ್, ಸ್ಥಳೀಯ ನಿವಾಸಿ



ನಗರದ ಬಸವನಗುಡಿಯ ರಾಮಕೃಷ್ಣ ಆಶ್ರಮದ ವೃತ್ತದ ಬಳಿ ರಸ್ತೆಯಲ್ಲಿ ಗುಂಡಿ ಬಿದ್ದಿದೆ.

ರಸ್ತೆ ಗುಂಡಿ ಮುಚ್ಚಿ

ಬಸವನಗುಡಿಯ ರಾಮಕೃಷ್ಣ ಆಶ್ರಮದ ವೃತ್ತದ ಬಳಿಯ ಮುಖ್ಯರಸ್ತೆಯಲ್ಲಿ ಗುಂಡಿ ಬಿದ್ದಿದೆ. ಇಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ಇದುವರೆಗೂ ಬಿಬಿಎಂಪಿ ಸಿಬ್ಬಂದಿಗೆ ಈ ರಸ್ತೆಯಲ್ಲಿರುವ ಗುಂಡಿ ಕಂಡಿಲ್ಲ. ಸ್ಥಳೀಯ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಆದಷ್ಟು ಬೇಗ ರಸ್ತೆ ಗುಂಡಿ ಮುಚ್ಚಿಸುವ ಕಾರ್ಯ ಕೈಗೊಳ್ಳಬೇಕು.

ಹರೀಶ್, ವಾಹನ ಸವಾರ

ವರದಿ ಫಲಶ್ರುತಿ

ಮಾಗಡಿ ಮುಖ್ಯರಸ್ತೆಯ ಅಂಜನ್ ಚಿತ್ರಮಂದಿರ ಸಮೀಪದ ಪಾದಚಾರಿ ಮಾರ್ಗವನ್ನು ಬಿಬಿಎಂಪಿ ಸಿಬ್ಬಂದಿ ದುರಸ್ತಿಗೊಳಿಸಿದರು. ‘ಪ್ರಜಾವಾಣಿ’ ಕುಂದು ಕೊರತೆ ವಿಭಾಗದಲ್ಲಿ ಮಾರ್ಚ್ 20ರಂದು ‘ಪಾದಚಾರಿ ಮಾರ್ಗ ದುರಸ್ತಿಗೊಳಿಸಿ’ ಎಂಬ ಶೀರ್ಷಿಕೆ ಅಡಿಯಲ್ಲಿ ವರದಿ ಪ್ರಕಟವಾಗಿತ್ತು.



ಮಾಗಡಿ ಮುಖ್ಯರಸ್ತೆಯ ಪಾದಚಾರಿ ಮಾರ್ಗ ದುರಸ್ತಿಗೊಳಿಸಿರುವುದು.

‘ಕೆಂಪೇಗೌಡ ರಸ್ತೆ: ನೀರು ಪೋಲು’

ಮೆಜೆಸ್ಟಿಕ್‌ನ ಕೆಂಪೇಗೌಡ ರಸ್ತೆ 1ನೇ ಅಡ್ಡರಸ್ತೆಯಲ್ಲಿ ಹತ್ತು ದಿನಗಳಿಂದ ಜೀವಜಲ ಪೋಲಾಗುತ್ತಿದೆ. ಅಮೂಲ್ಯ ಕುಡಿಯುವ ನೀರು ಪೋಲಾಗುತ್ತಿರುವ ಕುರಿತು ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಸ್ಪಂದಿಸುತ್ತಿಲ್ಲ. ನಗರದಲ್ಲಿ ಈಗಾಗಲೇ ಜಲಕ್ಷಾಮದ ಮುನ್ಸೂಚನೆ ಕೇಳಿ ಬರುತ್ತಿದೆ. ಎಷ್ಟೋ ಬಡಾವಣೆಗಳಲ್ಲಿ ಒಂದು ಬಿಂದಿಗೆ ನೀರಿಗೋಸ್ಕರ ಪರಿತಪಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಜಲ ಮಂಡಳಿಯ ಅಧಿಕಾರಿಗಳ ನಿದ್ರಾವಸ್ಥೆ ಧೋರಣೆಯಿಂದಾಗಿ ಅನಗತ್ಯವಾಗಿ ಜೀವಜಲ ಮೋರಿ ಪಾಲು ಆಗುತ್ತಿದೆ. ಅಧಿಕಾರಿಗಳು ಈ ಬಗ್ಗೆ ಗಮನ ಹರಿಸುವ ಮೂಲಕ ನೀರು ಪೋಲಾಗುತ್ತಿರುವುದನ್ನು ತಡೆಗಟ್ಟಬೇಕು.



ಕೆಂಪೇಗೌಡ ರಸ್ತೆಯಲ್ಲಿ ಪೋಲಾಗುತ್ತಿರುವ ನೀರು

ಶಿವಪ್ರಸಾದ್ ಎಸ್., ಸ್ಥಳೀಯ ನಿವಾಸಿ

ಮೂರು ದಿನವಾದರೂ ಈಡೇರದ ಬಿಬಿಎಂಪಿ ಭರವಸೆ; ಸ್ಥಳೀಯರ ಆಕ್ರೋಶ

ಹೊಸಕೆರೆಹಳ್ಳಿ ಕೆರೆಯಲ್ಲಿ ತೆರವಾಗದ ಮಣ್ಣು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸಕೆರೆಹಳ್ಳಿ ಕೆರೆಯಲ್ಲಿ ಮಣ್ಣು ಸುರಿದಿರುವುದನ್ನು ತೆರವುಗೊಳಿಸಲಾಗುತ್ತದೆ ಎಂಬ ವಿಶೇಷ ಆಯುಕ್ತ ರವೀಂದ್ರ ಅವರ ಭರವಸೆ ಮೂರು ದಿನವಾದರೂ ಈಡೇರದ್ದಕ್ಕೆ ಸ್ಥಳೀಯ ಜನರು ಹಾಗೂ ಪರಿಸರಪ್ರೇಮಿಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಕೆರೆಯಲ್ಲಿ ರಸ್ತೆ ನಿರ್ಮಿಸಲಾಗಿದೆ. ಇದನ್ನು ತೆರವುಗೊಳಿಸಬೇಕು ಎಂದು ಹೊಸಕೆರೆಹಳ್ಳಿ ಕೆರೆಗಾಗಿ ನಾಗರಿಕರು, ಝುಟ್ಕಾ, ಒಆರ್‌ಜಿ ಮತ್ತು ಇಂಡಿಯನ್ ಪ್ಲೊಗ್ಗರ್ಸ್ ಆರ್ಮ್ ಸದಸ್ಯರು ಹೋರಾಟ ನಡೆಸಿದ್ದರು. ಇದಕ್ಕೆ ಸ್ಪಂದಿಸಿದ್ದ ಬಿಬಿಎಂಪಿಯ ಯೋಜನೆ ವಿಭಾಗದ ವಿಶೇಷ ಆಯುಕ್ತ ರವೀಂದ್ರ, ಮಾರ್ಚ್ 23ರಂದು ಸ್ಥಳಕ್ಕೆ ಭೇಟಿ ನೀಡಿದ್ದರು.

‘ಕೆರೆಯಲ್ಲಿ ರಸ್ತೆ ನಿರ್ಮಿಸುತ್ತಿಲ್ಲ. ಒಳಚರಂಡಿ ನೀರು ಹರಿವಿನ ಮಾರ್ಗ ಬದಲಾಯಿಸಲಾಗುತ್ತಿದೆ. ಇದಕ್ಕಾಗಿ ಲಾರಿಗಳು, ವಾಹನಗಳ ಸಂಚಾರ ಸುಲಭವಾಗಲಿ ಎಂದು ಮಣ್ಣು ಸುರಿದಿದ್ದೇವೆ. ಇದನ್ನು ತೆರವು ಮಾಡಲಾಗುತ್ತದೆ ಎಂದು ಸ್ಥಳೀಯರಿಗೆ ಭರವಸೆ ನೀಡಿದ್ದರು. ಆದರೆ ಭಾನುವಾರ ನಾವೆಲ್ಲ ಕೆರೆ ಬಳಿ ಹೋದಾಗ ಎಂದಿನಂತೆ ಕೆರೆಯಲ್ಲಿ ಜೆಸಿಬಿಗಳಿಂದ ಕೆಲಸ ನಡೆಯುತ್ತಿತ್ತು. ಮಣ್ಣು ತೆಗೆದಿರಲಿಲ್ಲ. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳನ್ನು ಸಂಪರ್ಕಿಸಲು ಪ್ರಯತ್ನಿಸಿದರೆ ಯಾರೂ ಪ್ರತಿಕ್ರಿಯಿಸಲಿಲ್ಲ’ ಎಂದು ಸಂಸ್ಥೆಯ ಸದಸ್ಯರು ದೂರಿದರು.


ಹೊಸಕೆರೆಹಳ್ಳಿ ಕೆರೆಯೊಳಗೆ ತೆರವಾಗದ ಬಿಬಿಎಂಪಿ ನಿರ್ಮಿತ ‘ರ‍್ಯಾಂಪ್’ ರಸ್ತೆ...

ಪ್ರತಿಕ್ರಿಯಿಸದ ಎಂಜಿನಿಯರ್

‘ರಾಜರಾಜೇಶ್ವರಿ ನಗರ ವಲಯದ ಹೊಸಕೆರೆಹಳ್ಳಿ ಕೆರೆ, ಭೀಮನಕಟ್ಟೆ, ಮಲ್ಲತ್ತಹಳ್ಳಿ, ಹಲಗೆವಡೇರಹಳ್ಳಿ, ಕೆಂಚೇನಹಳ್ಳಿ ಕೆರೆಗಳಲ್ಲಿ ಪರಿಸರಕ್ಕೆ ವಿರುದ್ಧವಾಗಿ ಕೆರೆಗಳ ಅಭಿವೃದ್ಧಿ ಹಾಗೂ ಅಲ್ಲಿ ಮಣ್ಣು ತುಂಬುವ ಕೆಲಸಲಾಗುತ್ತಿವೆ. ಈ ವಲಯದ ಕೆರೆಗಳ ವಿಭಾಗದ ಎಂಜಿನಿಯರ್ ಶಿಲ್ಪಾ ಅವರು ನಾಗರಿಕರಿಗೆ ಯಾವುದೇ ಮಾಹಿತಿ ನೀಡುವುದಿಲ್ಲ’ ಎಂದು ಸ್ಥಳೀಯ ನಿವಾಸಿಗಳು, ಕೆರೆ ಸಂರಕ್ಷಣೆ ಹೋರಾಟಗಾರರು ದೂರಿದ್ದಾರೆ.


‘ಮುಖ್ಯ ಎಂಜಿನಿಯರ್ ಅವರಿಗೂ ಶಿಲ್ಪಾ ಅವರು ಮಾಹಿತಿ ನೀಡುವುದಿಲ್ಲ. ಕೆರೆಗಳ ಅಭಿವೃದ್ಧಿಯಲ್ಲಿ ಆಗುತ್ತಿರುವ ಎಲ್ಲ ಲೋಪಗಳಿಗೂ ಇವರೇ ಕಾರಣ. ಇವರ ಆಣತಿಯಂತೆಯೇ ಎಲ್ಲ ನಡೆಯುತ್ತಿದೆ’ ಎಂದು ವಿಜಯಕುಮಾರ್ ಆರೋಪಿಸಿದರು. ಈ ಬಗ್ಗೆ ಶಿಲ್ಪಾ ಅವರು ಪ್ರತಿಕ್ರಿಯಿಸಲಿಲ್ಲ.

‘ಹೊಸಕೆರೆ ಹಳ್ಳಿ ಕೆರೆಯ ಅಭಿವೃದ್ಧಿ ಕಾರ್ಯಗಳನ್ನು ₹9 ಕೋಟಿ ವೆಚ್ಚದಲ್ಲಿ ನಡೆಸಲು ಟೆಂಡರ್ ಕರೆಯಲಾಗಿದೆ. ಆದರೆ, ಈ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳದಯೇ ಕೆಲಸಗಳು ಆರಂಭವಾಗಿವೆ. ಇದೀಗ ಹೂಳು ತೆಗೆಯಲು ಹಣ ವೆಚ್ಚ ಮಾಡಲಾಗುತ್ತದೆ ಎನ್ನಲಾಗಿದೆ. ಆದರೆ, ಬಿಡಿಎ ವತಿಯಿಂದ 2017ರಲ್ಲಿ ಹೂಳು ತೆಗೆಯಲಾಗಿತ್ತು. ಈ ಬಗ್ಗೆ ಬಿಬಿಎಂಪಿ ಎಂಜಿನಿಯರ್‌ಗಳಿಗೆ ಮಾಹಿತಿಯೇ ಇಲ್ಲ. ಇದೀಗ ಮತ್ತೆ ಅದೇ ಕೆಲಸಕ್ಕೆ ಕೋಟ್ಯಂತರ ವೆಚ್ಚ ಮಾಡುತ್ತಿದ್ದಾರೆ. ಇದೆಲ್ಲ ಹಣವನ್ನು ಲೂಟಿ ಮಾಡುವ ಬಗೆ’ ಎಂದು ಸ್ಥಳೀಯರಾದ ಶ್ರೀನಿವಾಸ್ ಆರೋಪಿಸಿದರು.

‘ಹೊಸ ಟೆಂಡರ್ ಕರೆದಿರುವ ಬಗ್ಗೆ ಮಾಹಿತಿ ನೀಡಿ, ಯಾವ ಕೆಲಸ ಕೈಗೊಳ್ಳುತ್ತಿದ್ದೀರಿ ಎಂಬ ವಿಸ್ತೃತ ಯೋಜನಾ ವರದಿ (ಡಿಪಿಆರ್) ನೀಡಿ ಎಂದು ಟೆಂಡರ್ ಕರೆದಿರುವ ಕಾರ್ಯಪಾಲಕ ಎಂಜಿನಿಯರ್ ಅವರನ್ನೇ ಕೇಳಿದರೆ, ಡಿಪಿಆರ್ ಆಗಿಲ್ಲ ಎನ್ನುತ್ತಾರೆ. ಡಿಪಿಆರ್ ಇಲ್ಲದೆ ಟೆಂಡರ್ ಕರೆಯುವಂತಿಲ್ಲ. ಹೀಗಾಗಿ ಇದು ಟೆಂಡರ್ ನಿಯಮದ ಉಲ್ಲಂಘನೆ. ಇವರ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

ಸದ್ಯಕ್ಕೆ ತೆರವಿಲ್ಲ

‘ರೀಟೈನಿಂಗ್ ವಾಲ್ ಮಾಡಲು ಒಂದು ಕಡೆ ಕೆಲಸ ಮಾಡಲಾಗುತ್ತಿದೆ. ಇನ್ನೊಂದೆಡೆ, ಶುಭ್ರ ಬೆಂಗಳೂರು ಯೋಜನೆಯಡಿ ಘನತ್ಯಾಜ್ಯ ನಿರ್ವಹಣೆ ವಿಭಾಗದಿಂದ ಒಳಚರಂಡಿ ನೀರನ್ನು ಮಾರ್ಗ ಬದಲಿಸುವ ಕೆಲಸವಾಗುತ್ತಿದೆ. ಇದಕ್ಕಾಗಿ ತಾತ್ಕಾಲಿಕವಾಗಿ ಮಣ್ಣು ಸುರಿದುಕೊಂಡು, ‘ರ‍್ಯಾಂಪ್’ ಮಾಡಿಕೊಳ್ಳಲಾಗುತ್ತಿದೆ. ಇದು ₹10 ಕೋಟಿ ವೆಚ್ಚದ ಕಾಮಗಾರಿಯಾಗಿದ್ದು, ಒಂದಷ್ಟು ತಿಂಗಳು ನಡೆಯುತ್ತದೆ. ಕೆಲಸ ಮುಗಿದ ನಂತರವಷ್ಟೇ ತೆರವು ಮಾಡಲಾಗುತ್ತದೆ. ಕೆರೆಯನ್ನು ಸಂಪೂರ್ಣವಾಗಿ ರಕ್ಷಿಸಲಾಗುತ್ತದೆ’ ಎಂದು ಬಿಬಿಎಂಪಿ ಯೋಜನೆ ವಿಭಾಗದ ವಿಶೇಷ ಆಯುಕ್ತ ರವೀಂದ್ರ ತಿಳಿಸಿದರು.


ಭೀಮನಕಟ್ಟೆ ಕೆರೆಗೆ ಹರಿಯುತ್ತಿರುವ ಒಳಚರಂಡಿ ನೀರು

ಭೀಮನಕಟ್ಟೆಗೆ ಕೊಳಚೆ ನೀರು, ಮಣ್ಣು

ಹೊಸಕೆರೆಹಳ್ಳಿ ಕೆರೆಗೆ, ಮೇಲ್ಭಾಗದಲ್ಲಿರುವ ರಾಜರಾಜೇಶ್ವರಿನಗರದ ಭೀಮನಕಟ್ಟೆ ಕೆರೆಗೆ ಕೊಳಚೆ ನೀರು ಮತ್ತು ಮಣ್ಣು-ಕಲ್ಲು ಸುರಿಯಲಾಗುತ್ತಿದೆ. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳು ಹಾಗೂ ಶಾಸಕರಿಗೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ ಎಂದು ಭೀಮನಕಟ್ಟೆ ಕೆರೆ ಸಂರಕ್ಷಣಾ ಬಳಗದ ಸದಸ್ಯರು ದೂರಿದರು.

‘ಕೆರೆಯ ಹೂಳು ತೆಗೆದು, ಸಂಗ್ರಹ ಸಾಮರ್ಥ್ಯ ಹೆಚ್ಚಿಸುವಂತೆ ಕೋರಲಾಗಿತ್ತು. ಅದನ್ನೂ ಮಾಡಿಲ್ಲ. ಇದೀಗ ಮೇಲ್ಭಾಗದಿಂದ ಒಳಚರಂಡಿ ನೀರು ಕೆರೆಗೆ ಹರಿಯುತ್ತಿದೆ. ಇದನ್ನು ನಿಲ್ಲಿಸುವಂತೆ ಮನವಿ ಮಾಡಲಾಗಿದೆ. ಆದರೆ, ಬಿಬಿಎಂಪಿ, ಬಿಡಬ್ಲ್ಯುಎಸ್‌ಎಸ್‌ಬಿ ಅಧಿಕಾರಿಗಳು ಸ್ಪಂದಿಸುತ್ತಿಲ್ಲ’ ಎಂದು ಬಳಗದ ಕೆ.ಎ. ಶಿವೇಗೌಡ ಹೇಳಿದರು.

‘ಕೆರೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಬೇರೆ ಯಾವುದೇ ರೀತಿಯಲ್ಲಿ ಅಭಿವೃದ್ಧಿಯಾದರೆ ಭೀಮನಕಟ್ಟೆ ಕೆರೆಗೆ ನೀರಿನ ಹರಿವಿಗೆ ತಡೆಯಾಗುತ್ತದೆ. ಆದ್ದರಿಂದ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದರು.

ಸುದ್ದಿ 2 ನಿಮಿಷ

ಲೋಕಾಯುಕ್ತ ಪೊಲೀಸರಿಂದ ನಾಳೆ ಅಹವಾಲು ಸ್ವೀಕಾರ

ಬೆಂಗಳೂರು: ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ವಿಭಾಗದ ಅಧಿಕಾರಿಗಳು ಬಿಬಿಎಂಪಿ ರಾಜರಾಜೇಶ್ವರಿ ನಗರ ವಲಯದ ಜಂಟಿ ಆಯುಕ್ತರ ಕಚೇರಿಯಲ್ಲಿ ಮಂಗಳವಾರ ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲಿದ್ದಾರೆ.

ನಗರ ಘಟಕದ ಎಸ್‌ಪಿ, ಡಿವೈಎಸ್‌ಪಿಗಳು ಮತ್ತು ಇನ್‌ಸ್ಪೆಕ್ಟರ್‌ಗಳು ಈ ಸಭೆಯಲ್ಲಿ ಭಾಗವಹಿಸುವರು. ಸಾರ್ವಜನಿಕರು ತಮ್ಮ ಕುಂದುಕೊರತೆಗಳ ಕುರಿತು ನೇರವಾಗಿ ಅಹವಾಲು, ದೂರು ಸಲ್ಲಿಸಲು ಅವಕಾಶ ಇರುತ್ತದೆ ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ.

ಸರ್ಕಾರಿ ಕಚೇರಿಯಲ್ಲಿ ಕೆಲಸ ಮಾಡಿಕೊಡಲು ವಿಳಂಬ ಮಾಡುತ್ತಿರುವುದು, ನಿರ್ಲಕ್ಷ್ಯ, ಲಂಚಕ್ಕೆ ಬೇಡಿಕೆ ಇಟ್ಟಿರುವುದು, ಅಧಿಕಾರ ದುರುಪಯೋಗ ಅಥವಾ ದುರಾಡಳಿತಕ್ಕೆ ಸಂಬಂಧಿಸಿದ ದೂರುಗಳನ್ನು ಸ್ವೀಕರಿಸಲಾಗುತ್ತದೆ. ಅಂತಹ ದೂರುಗಳಿದ್ದರೆ ಲಿಖಿತ ರೂಪದಲ್ಲಿ ಎರಡು ಪ್ರತಿಗಳಲ್ಲಿ ಸಲ್ಲಿಸಬೇಕು ಎಂದು ಲೋಕಾಯುಕ್ತದ ಅಧಿಕಾರಿಗಳು ಮನವಿ ಮಾಡಿದ್ದಾರೆ.

ಐದು ‘ಅಪ್ಪು ಎಕ್ಸ್‌ಪ್ರೆಸ್’ ಆಂಬುಲೆನ್ಸ್ ಹಸ್ತಾಂತರ



ಬೆಂಗಳೂರು: ಪ್ರಕಾಶ್‌ರಾಜ್ ಫೌಂಡೇಷನ್ ಹಾಗೂ ಸಿನಿಮಾ ಪ್ರಮುಖರ ಸಂಸ್ಥೆಗಳ ಸಹಯೋಗದಲ್ಲಿ ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರ ಹೆಸರಿನಲ್ಲಿ ‘ಅಪ್ಪು ಎಕ್ಸ್‌ಪ್ರೆಸ್’ ಹೆಸರಿನ ಐದು ಆಂಬುಲೆನ್ಸ್‌ಗಳನ್ನು ಹಸ್ತಾಂತರಿಸಲಾಯಿತು.

ನಟ ಪ್ರಕಾಶ್‌ರಾಜ್ ಅವರು ವಿವಿಧ ಆಸ್ಪತ್ರೆಗಳ ಮುಖ್ಯಸ್ಥರಿಗೆ ಈ ಅಂಬುಲೆನ್ಸ್‌ಗಳನ್ನು ಹಸ್ತಾಂತರಿಸಿದರು.

‘ಅಪ್ಪು ಅವರು ಮಾಡುತ್ತಿದ್ದ ಒಳ್ಳೆಯ ಕೆಲಸಗಳನ್ನು ಮುಂದುವರಿಸಿದರೆ ಮಾತ್ರ ಅವರು ನಮ್ಮ ಜತೆಗಿದ್ದಂತೆ ಆಗುತ್ತದೆ. ಈ ಆಶಯದಿಂದ ಕರ್ನಾಟಕದ ಪ್ರತಿ ಜಿಲ್ಲೆಯಲ್ಲಿ ಅಪ್ಪು ಹೆಸರಿನ ಆಂಬುಲೆನ್ಸ್ ಇರಬೇಕು ಎಂದು ಉದ್ದೇಶಿಸಿದ್ದೇವೆ. ಮೊದಲ ಆಂಬುಲೆನ್ಸ್‌ನ್ನು ಮೈಸೂರಿಗೆ ನೀಡಿದ್ದೆವು. ಆ ಕಾರ್ಯದ ಮುಂದುವರಿದ ಭಾಗವಾಗಿ ಇನ್ನೂ ಐದು ಅಂಬುಲೆನ್ಸ್‌ಗಳನ್ನು ನೀಡಿದ್ದೇವೆ’ ಎಂದು ಪ್ರಕಾಶ್‌ರಾಜ್ ವಿಡಿಯೋ ಸಂದೇಶದಲ್ಲಿ ಹೇಳಿದ್ದಾರೆ.

‘ಈ ಬಾರಿ ಬೀದರಿನ ಗುರು ನಾನಕ್ ಆಸ್ಪತ್ರೆ, ಕಲಬುರಗಿ ಜಿಲ್ಲೆ ಚಿತ್ತಾಪುರದ ಡಾ.ಓಂ ಇಂಡೋ ಜರ್ಮನ್ ಆಸ್ಪತ್ರೆ, ಉಡುಪಿಯ ಲೊಂಬಾರ್ಡ್ ಮೆಮೋರಿಯಲ್ ಆಸ್ಪತ್ರೆ, ಕೊಳ್ಳೇಗಾಲದ ‘ಹೋಲಿ ಕ್ರಾಸ್ ಕಾನ್ವೆಂಟ್ ಆಸ್ಪತ್ರೆ’ ಮತ್ತು ಕೊಪ್ಪಳದ ಗವಿಸಿದ್ಧೇಶ್ವರ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆಗೆ ಅಂಬುಲೆನ್ಸ್ ಹಸ್ತಾಂತರಿಸಿದ್ದೇವೆ’ ಎಂದಿದ್ದಾರೆ.



‘ಅವ್ವ’ ಪ್ರಶಸ್ತಿ ಪ್ರದಾನ

ಬೆಂಗಳೂರಿನಲ್ಲಿ ಭಾನುವಾರ ‘ಅವ್ವ ಸೇವಾ ಟ್ರಸ್ಟ್’ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಉದಯಭಾನು ಕಲಾಸಂಘದ ಸಂಸ್ಥಾಪಕ ಕಾರ್ಯದರ್ಶಿ ಎಂ. ನರಸಿಂಹ, ಶಾಂಭವಿ ಅನಾಥಾಶ್ರಮದ ಪ್ರೇಮ ಸೋಮಸುಂದರ್, ಕ್ರೀಡಾಪಟು ಅರ್ಜುನ್ ದೇವಯ್ಯ, ಗಾಯಕಿ ಬಿ.ಕೆ. ಸುಮಿತ್ರಾ, ಸುಮಂಗಲಿ ಸೇವಾಶ್ರಮದ ಎಸ್.ಜಿ. ಸುಶೀಲಮ್ಮ, ಇಸ್ರೊ ಮಾಜಿ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್, ಸಾಹಿತಿ ಎಚ್.ಎಸ್. ಶಿವಪ್ರಕಾಶ್, ರಂಗಭೂಮಿ ಕಲಾವಿದೆ ಪ್ರತಿಭಾ ನಾರಾಯಣ್, ಜಾನಪದ ಕಲಾವಿದ ತಂಬೂರಿ ಜೋರಯ್ಯ ಅವರಿಗೆ ‘ಅವ್ವ’ ಪ್ರಶಸ್ತಿ ನೀಡಿ ಗೌರವಿಸಲಾಯಿತು. (ನಿಂತವರು ಎಡದಿಂದ) ಅವ್ವ ಸೇವಾ ಟ್ರಸ್ಟ್‌ನ ಕಾರ್ಯದರ್ಶಿ ಶಶಿ ಸಾಲಿ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ, ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ರಾಜ್ಯಪಾಲ ಥಾವರಚಂದ್ ಗೆಹಲೋತ್, ವಿಧಾನ ಪರಿಷತ್ ಸಭಾಪತಿ ಮತ್ತು ಅವ್ವ ಟ್ರಸ್ಟ್ ಅಧ್ಯಕ್ಷ ಬಸವರಾಜ ಹೊರಟ್ಟಿ, ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್, ಕೆ.ವಿ. ನಾಗರಾಜ ಮೂರ್ತಿ ಇದ್ದಾರೆ. –ಪ್ರಜಾವಾಣಿ ಚಿತ್ರ

ವ್ಹೀಲಿ: ವಿಡಿಯೊ ಆಧರಿಸಿ ಸವಾರ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ವ್ಹೀಲಿ ಮಾಡಿದ್ದ ಆರೋಪದಡಿ ಜಗನ್ನಾಥ್ ರಾವ್ (27) ಎಂಬುವವರನ್ನು ಚಿಕ್ಕಜಾಲ ಸಂಚಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಬಾಣಸವಾಡಿಯ ಜೈ ಭಾರತ ನಗರ ನಿವಾಸಿ ಜಗನ್ನಾಥ್, ಮಾರ್ಚ್ 24ರಂದು ರಾತ್ರಿ ವಾಹನಗಳ ದಟ್ಟಣೆ ನಡುವೆಯೇ ದ್ವಿಚಕ್ರ ವಾಹನದಲ್ಲಿ ವ್ಹೀಲಿ ಮಾಡಿದ್ದ. ಇತರೆ ವಾಹನಗಳ ಸಂಚಾರಕ್ಕೆ ಅಡ್ಡಿಪಡಿಸಿದ್ದ. ಸವಾರನ ವರ್ತನೆಯಿಂದ ಸಾರ್ವಜನಿಕರು ಗಾಬರಿಗೊಂಡಿದ್ದರು’ ಎಂದು ಪೊಲೀಸರು ತಿಳಿಸಿದರು.

‘ವ್ಹೀಲಿ ದೃಶ್ಯವನ್ನು ಸಾರ್ವಜನಿಕರೊಬ್ಬರು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿದ್ದರು. ಟ್ವೀಟ್ ಮೂಲಕ ದೂರು ನೀಡಿದ್ದರು. ವಾಹನ ನೋಂದಣಿ ಸಂಖ್ಯೆ ಆಧರಿಸಿ ತನಿಖೆ ಕೈಗೊಂಡು ಆರೋಪಿಯನ್ನು ಬಂಧಿಸಲಾಗಿದೆ. ಈತನ ಇನ್‌ಸ್ಟಾಗ್ರಾಂ ಖಾತೆಯಲ್ಲಿ ವ್ಹೀಲಿ ವಿಡಿಯೊಗಳು ಪತ್ತೆಯಾಗಿವೆ’ ಎಂದರು.

ಜೀವಕ್ಕೆ ಕುತ್ತು: ‘ಎಲೆಕ್ಟ್ರಾನಿಕ್ ಸಿಟಿ ಬಳಿಯ ಮುಖ್ಯರಸ್ತೆಯಲ್ಲಿ ಯುವಕರಿಬ್ಬರು ದ್ವಿಚಕ್ರ ವಾಹನದಲ್ಲಿ ವ್ಹೀಲಿ ಮಾಡುತ್ತಿದ್ದರು. ಸ್ಥಳೀಯ ಸಾರ್ವಜನಿಕರ ಜೀವಕ್ಕೆ ಕುತ್ತು ತರಲು ರೀತಿಯಲ್ಲಿ ವರ್ತಿಸುತ್ತಿದ್ದರು. ವ್ಹೀಲಿ ದೃಶ್ಯವನ್ನು ಮೊಬೈಲ್ ಕ್ಯಾಮೆರಾದಲ್ಲಿ ಚಿತ್ರೀಕರಿಸಿದ್ದ ಸ್ಥಳೀಯರೊಬ್ಬರು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ವ್ಹೀಲಿಮಾಡಿದ್ದಯುವಕರುಯಾರು ಎಂಬುದು ಗೊತ್ತಾಗಿಲ್ಲ. ಅವರನ್ನು ಪತ್ತೆ ಮಾಡಲಾಗುತ್ತಿದೆ’ ಎಂದರು.


ಬ್ಯಾಟರಾಯನಪುರ ಕ್ಷೇತ್ರವ್ಯಾಪ್ತಿಯ ರಜಾಜ್ ಪಾಳ್ಯ, ಚಿಕ್ಕಜಾಲ ಹಾಗೂ ಶೆಟ್ಟಿಗೆರೆ ಗ್ರಾಮಗಳಲ್ಲಿ ₹3 ಕೋಟಿ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿಗೊಳಿಸುವ ಹಾಗೂ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆ ಸೇರಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೃಷ್ಣಬೈರೇಗೌಡ ಚಾಲನೆ ನೀಡಿದರು. ಜಾಲಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎನ್.ಕೆ.ಮಹೇಶ್ ಕುಮಾರ್, ಚಿಕ್ಕಜಾಲ ಗ್ರಾ.ಪಂ ಅಧ್ಯಕ್ಷೆ ಮಂಜುಳಾ, ಕಾಂಗ್ರೆಸ್ ಮುಖಂಡರಾದ ಉದಯಶಂಕರ್, ಲಕ್ಷ್ಮೀಪತಿ, ರವಿಕುಮಾರ್, ಎಸ್.ಕೆ.ಆಂಜಿನಪ್ಪ, ಶೆಟ್ಟಿಗೆರೆ ಎಂ.ರಾಜಣ್ಣ ಇದ್ದರು

‘ಅಧಿಕೃತ ಪತ್ರ ಕೈಸೇರುವ ತನಕ ಧರಣಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿ ವಿಷಯಕ್ಕೆ ಸಂಬಂಧಿಸಿದಂತೆ ‘ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಜಾರಿ ಹೋರಾಟ ಸಮಿತಿ’ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಭಾನುವಾರ ನಡೆದ ಸಭೆಯಲ್ಲಿ ಹಲವು ನಿರ್ಣಯ ಕೈಗೊಂಡಿತು.

ರಾಜ್ಯ ಸರ್ಕಾರವು ಒಳಮೀಸಲಾತಿ ವಿಷಯದಲ್ಲಿ ಕೇಂದ್ರಕ್ಕೆ ಮಾಡಿದೆ ಎನ್ನಲಾದ ಶಿಫಾರಸ್ಸಿನ ಅಧಿಕೃತ ಪತ್ರವು ಕೈಸೇರುವವರೆಗೆ ಅನಿರ್ದಿಷ್ಟಾವಧಿ ಧರಣಿ ಮುಂದುವರಿಸಲಾಗುವುದು. ಮೀಸಲಾತಿ ಹೆಚ್ಚಳವನ್ನು ರಾಜ್ಯದಲ್ಲಿ ಜಾರಿ ಮಾಡಿದ ರೀತಿಯಲ್ಲಿ ಒಳಮೀಸಲಾತಿಯನ್ನು ಸುಗ್ರೀವಾಜ್ಞೆ ಮೂಲಕ ಜಾರಿ ಮಾಡಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಎಸ್‌ಸಿಪಿ, ಟಿಎಸ್‌ಪಿ ಅನುದಾನವನ್ನು ಮೀಸಲಾತಿ ಹಂಚಿಕೆಗೆ ಅನುಗುಣವಾಗಿ ರಾಜ್ಯದಲ್ಲಿ ಹಂಚಿಕೆ ಮಾಡಲು ಸೂಕ್ತ ಕಾನೂನು ರಚಿಸಬೇಕು. ರಾಜ್ಯ ಸರ್ಕಾರವು ತಮ್ಮದೇ ಸರ್ಕಾರ ಕೇಂದ್ರದಲ್ಲಿ ಇರುವುದರಿಂದ ಸಂವಿಧಾನದ 341(3)ನೇ ವಿಧಿಗೆ ತಿದ್ದುಪಡಿಗಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು. ತ್ರಿಮತಸ್ಥ ಸಮಾಜಕ್ಕೆ ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು. ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಜಾರಿ ಹೋರಾಟ ಸಮಿತಿ ಪಕ್ಷಾತೀತವಾಗಿದ್ದು, ಸಮಾಜದ ಸಾಮೂಹಿಕ ರಾಜಕೀಯ ಭಾವನೆ ಗೌರವಿಸಬೇಕು ಎಂದು ಹೇಳಿದರು.

ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಭಾಗವಹಿಸುವ ಕೇಂದ್ರ ಸರ್ಕಾರದ ಜನಪ್ರತಿನಿಧಿಗಳಿಗೆ ಈ ಕೂಡಲೇ ಸಂವಿಧಾನದ 341(3)ನೇ ವಿಧಿಗೆ ತಿದ್ದುಪಡಿ ತರುವಂತೆ ಒತ್ತಾಯಿಸುವ ಹೋರಾಟ ರೂಪಿಸಲಾಗುವುದು. ಹೋರಾಟದಲ್ಲಿ ಮಾದಿಗ, ಚಲವಾದಿ ಸಮುದಾಯಗಳ ಸಂಘಟಕರು ತ್ರಿಮತಸ್ಥರು, ಅಲೆಮಾರಿಗಳು, ದಕ್ಕಲಿಗರು ಇನ್ನುಳಿದ ಜಾತಿಗಳನ್ನು ಒಂದುಗೂಡಿಸುವ ಹೋರಾಟ ಮುಂದುವರಿಸಲಾಗುವುದು ಎಂಬ ನಿರ್ಣಯವನ್ನು ಹೋರಾಟಗಾರರು ಕೈಗೊಂಡರು.

ಎಸ್‌ಸಿಪಿ/ ಟಿಎಸ್‌ಪಿಯ 7ಡಿ ಕಲಂ ರದ್ದುಪಡಿಸಬೇಕು. ರಾಜ್ಯ ಅಲೆಮಾರಿಗಳ ಜನಸಂಖ್ಯೆಗೆ ಅನುಗುಣವಾಗಿ ಪ್ರತ್ಯೇಕ ‘ಅಲೆಮಾರಿಗಳ ಆಯೋಗ’ ರಚಿಸಬೇಕು. ರಾಜ್ಯದಲ್ಲಿ ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ಮಾಡಬೇಕು ಎಂದು ಸಮಿತಿ ಪ್ರಧಾನ ಸಂಚಾಲಕ ಎಸ್.ಮಾರೆಪ್ಪ, ಹಾಗೂ ಸಹ ಸಂಚಾಲಕ ಎಂ. ಗುರುಮೂರ್ತಿ ಆಗ್ರಹಿಸಿದ್ದಾರೆ.



ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಭಾನುವಾರ ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಜಾರಿ ಹೋರಾಟ ಸಮಿತಿಯ ಸಭೆ ನಡೆಯಿತು

ಚಿನ್ನದ ಸರ ಕಿತ್ತೊಯ್ಯಲು ಕೈಗೆ ಚಾಕು ಇರಿತ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯೊಬ್ಬರ ಚಿನ್ನದ ಸರ ಕಿತ್ತೊಯ್ಯುವುದಕ್ಕಾಗಿ ಅವರ ಕೈಗೆ ಚಾಕುವಿನಿಂದ ಇರಿದು ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ಪುಟ್ಟೇನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಮನೋಜ್‌ಕುಮಾರ್ ಹಾಗೂ ಫ್ರಾಂಕ್ಲಿನ್ ಬಂಧಿತರು. ಇವರಿಬ್ಬರು, ಅಪರಾಧ ಹಿನ್ನೆಲೆಯುಳ್ಳವರು. ಕೃತ್ಯ ಎಸಗಿ ತಲೆಮರೆಸಿಕೊಂಡಿದ್ದ ಇವರನ್ನು ಇತ್ತೀಚೆಗೆ ಬಂಧಿಸಲಾಗಿದೆ. ಸದ್ಯ ಇಬ್ಬರೂ ನ್ಯಾಯಾಂಗ ಬಂಧನದಲ್ಲಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸ್ಥಳೀಯ ನಿವಾಸಿ ಮಹಿಳೆಯೊಬ್ಬರು ಪುಟ್ಟೇನಹಳ್ಳಿ ಕೆರೆ ಬಳಿಯ ರಸ್ತೆಯಲ್ಲಿ ಮಾರ್ಚ್ 6ರಂದು ನಡೆದುಕೊಂಡು ದೇವಸ್ಥಾನಕ್ಕೆ ಹೊರಟಿದ್ದರು. ಆರೋಪಿಗಳು ಬೈಕ್‌ನಲ್ಲಿ ಹಿಂಬಾಲಿಸಿದ್ದರು.’

‘ಮಹಿಳೆ ಸಮೀಪದಲ್ಲಿ ಹೋಗಿದ್ದ ಆರೋಪಿಯೊಬ್ಬ, ಚಿನ್ನದ ಸರ ಕಿತ್ತುಕೊಳ್ಳಲು ಕೊರಳಿಗೆ ಕೈ ಹಾಕಿದ್ದ. ಪ್ರತಿರೋಧವೊಡ್ಡಿದ್ದ ಮಹಿಳೆ, ಸರವನ್ನು ಬಿಗಿಯಾಗಿ ಹಿಡಿದಿದ್ದರು. ಮಹಿಳೆ ಮೇಲೆ ಹಲ್ಲೆ ಮಾಡಿದ್ದ ಆರೋಪಿಗಳು, ಕೈಗೆ ಚಾಕುವಿನಿಂದ ಇರಿದು ಸರ ಕಿತ್ತುಕೊಳ್ಳಲು ಪುನಃ ಪ್ರಯತ್ನಿಸಿದ್ದರು. ಆದರೆ, ಮಹಿಳೆ ಸರ ಬಿಟ್ಟಿರಲಿಲ್ಲ’ ಎಂದು ತಿಳಿಸಿವೆ. ‘ಕೈಯಿಂದ ರಕ್ತ ಸೋರುತ್ತಿದ್ದ ಸ್ಥಿತಿಯಲ್ಲಿದ್ದ ಮಹಿಳೆ, ಸಹಾಯಕ್ಕಾಗಿ ಚೀರಾಡಿದ್ದರು. ಸ್ಥಳೀಯರು ಸ್ಥಳಕ್ಕೆ ಬರುವುದನ್ನು ನೋಡಿ ಆರೋಪಿಗಳು ಪರಾರಿಯಾಗಿದ್ದರು. ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದ ಮಹಿಳೆ, ಠಾಣೆಗೆ ಬಂದು ದೂರು ನೀಡಿದ್ದರು. ಪ್ರಕರಣ ದಾಖಲಾದ ಕೆಲವೇ ಗಂಟೆಗಳಲ್ಲಿ ಸುಳಿವು ಪತ್ತೆ ಮಾಡಿ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬಂಧಿತ ಮನೋಜ್‌ಕುಮಾರ್, ಕೊಲೆ ಪ್ರಕರಣವೊಂದರಲ್ಲಿ ಜೈಲಿಗೆ ಹೋಗಿ ಬಂದಿದ್ದ. ಸಹಚರರ ಜೊತೆ ಸೇರಿ ಅಪರಾಧ ಕೃತ್ಯ ಎಸಗುತ್ತಿದ್ದ. ಚಿನ್ನದ ಸರಗಳವು ಕೃತ್ಯದ ವೇಳೆ ಯಾರಾದರೂ ತಡೆಯಲು ಬಂದರೆ, ಅಂಥವರ ಮೇಲೂ ಆರೋಪಿಗಳು ಹಲ್ಲೆ ಮಾಡುತ್ತಿದ್ದರು’ ಎಂದು ಮೂಲಗಳು ತಿಳಿಸಿವೆ.

ಮಲಯಾಳ ನಟ, ಮಾಜಿ ಸಂಸದ ಇನ್ನಸೆಂಟ್ ನಿಧನ

ಕೊಚ್ಚಿ (ಪಿಟಿಐ): ಲೋಕಸಭೆಯ ಮಾಜಿ ಸದಸ್ಯ ಮತ್ತು ಖ್ಯಾತ ಮಲಯಾಳ ನಟ ಇನ್ನಸೆಂಟ್ (75) ಅವರು ಭಾನುವಾರ ತಡರಾತ್ರಿ ಮೃತಪಟ್ಟಿದ್ದಾರೆ.

ಕೋವಿಡ್‌ನಿಂದ ಬಳಲುತ್ತಿದ್ದ ಅವರಿಗೆ ಉಸಿರಾಟದ ತೊಂದರೆಯೂ ಕಾಣಿಸಿಕೊಂಡಿತ್ತು. ಅವರನ್ನು ಸ್ಥಳೀಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಬಹು ಅಂಗಾಂಗ ವೈಫಲ್ಯದ ಪರಿಣಾಮ ಅವರು ಹೃದಯಾಘಾತಕ್ಕೂ ಒಳಗಾಗಿದ್ದರು. ಅವರಿಗೆ ಕೃತಕ ಉಸಿರಾಟ ವ್ಯವಸ್ಥೆ ಅಳವಡಿಸಿ ಚಿಕಿತ್ಸೆ ನೀಡಲಾಗುತ್ತಿತ್ತು.

ಇನ್ನಸೆಂಟ್ ಅವರು 500ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದರು. ಅವರು ಹಾಸ್ಯ ಪಾತ್ರಗಳಿಗೆ ಹೆಸರುವಾಸಿಯಾಗಿದ್ದರು. 1972ರಲ್ಲಿ ‘ನೃತ್ಯಶಾಲಾ’ ಚಿತ್ರದ ಮೂಲಕ ಅವರು ಸಿನಿ ಪಯಣ ಆರಂಭಿಸಿದ್ದರು. ಮಲಯಾಳ ಚಿತ್ರ ಕಲಾವಿದರ ಸಂಘದ (ಅಮ್ಮ) ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.


ಇನ್ನಸೆಂಟ್ ಅವರು 2014ರಲ್ಲಿ ಚಾಲಕ್ಕುಡಿ ಲೋಕಸಭಾ ಕ್ಷೇತ್ರದಿಂದ ಪಕ್ಷೇತರರಾಗಿ ಸ್ಪರ್ಧಿಸಿ ಜಯಿಸಿದ್ದರು. ಅವರಿಗೆ ಎಲ್‌ಡಿಎಫ್ ಬೆಂಬಲ ಸೂಚಿಸಿತ್ತು.

ಸುಂಟರಗಾಳಿಗೆ ಅಮೆರಿಕ ತತ್ತರ

ವಾಷಿಂಗ್ಟನ್ (ಎಪಿ): ಮಿಸಿಸಿಪ್ಪಿ ಮತ್ತು ಅಲಬಾಮದಲ್ಲಿ ಬೀಸಿದ ಭೀಕರ ಸುಂಟರಗಾಳಿಯ ಪರಿಣಾಮ ಅಪಾರ ಹಾನಿಯುಂಟಾಗಿದ್ದು, ಅಧ್ಯಕ್ಷ ಜೋ ಬೈಡನ್ ಭಾನುವಾರ ತುರ್ತು ಪರಿಸ್ಥಿತಿ ಘೋಷಣೆ ಮಾಡಿದ್ದಾರೆ.

ನಿಧನ ವಾರ್ತೆ

ಭ್ರಮರಾಂಬ



ಮೈಸೂರು: ಇಲ್ಲಿನ ರಾಘವೇಂದ್ರ ನಗರದ ನಿವಾಸಿ ಭ್ರಮರಾಂಬ(92) ಭಾನುವಾರ ನಿಧನರಾದರು.

ಅವರಿಗೆ ಪತ್ರಕರ್ತೆ ಸಿ.ಜಿ. ಮಂಜುಳಾ, ‘ಪ್ರಜಾವಾಣಿ’ ಮುಖ್ಯ ಉಪಸಂಪಾದಕಿ ಮಂದಾಕಿನಿ ಸೇರಿ ಮೂವರು ಪುತ್ರಿಯರು ಹಾಗೂ ಇಬ್ಬರು ಪುತ್ರರು ಇದ್ದಾರೆ.

ಅಂತ್ಯಸಂಸ್ಕಾರ ಸಂಜೆ ನೆರವೇರಿತು.

ಅಕ್ರಮ ಗಣಿಗಾರಿಕೆ: ₹ 1.10 ಕೋಟಿ ಮೌಲ್ಯದ ಆಸ್ತಿ ಮುಟ್ಟುಗೋಲು

ಬೆಂಗಳೂರು: ವಿಜಯನಗರ ಜಿಲ್ಲೆಯ ಹೊಸಪೇಟೆಯಿಂದ 1.32 ಲಕ್ಷ ಟನ್‌ಗೂ ಹೆಚ್ಚಿನ ಕಬ್ಬಿಣದ ಅದಿರನ್ನು ಅಕ್ರಮವಾಗಿ ತೆಗೆದು, ಸಾಗಿಸಿದ ಆರೋಪ ಎದುರಿಸುತ್ತಿರುವ ರಾಜಮಹಲ್ ಸಿಲ್ಕ್ಸ್ ಕಂಪನಿಯ ಪಾಲುದಾರ ಅಸ್ಲಾಂ ಪಾಷಾ ಎಂಬುವವರಿಗೆ ಸೇರಿದ ₹ 1.10 ಕೋಟಿ ಮೌಲ್ಯದ ಆಸ್ತಿಯನ್ನು ಜಾರಿ ನಿರ್ದೇಶನಾಲಯ (ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ.

ಬೇಲೆಕೇರಿ ಬಂದರಿನಲ್ಲಿ ಲೋಕಾಯುಕ್ತ ತನಿಖಾ ತಂಡ ವಶಪಡಿಸಿಕೊಂಡಿದ್ದ ಕಬ್ಬಿಣದ ಅದಿರನ್ನು ಕಳ್ಳಸಾಗಣೆ ಮಾಡಿದ್ದ ಪ್ರಕರಣದ ಕುರಿತು ಸಿಬಿಐ ತನಿಖೆ ನಡೆಸಿತ್ತು. 2009–10ರ ಅವಧಿಯಲ್ಲಿ ರಾಜಮಹಲ್ ಸಿಲ್ಕ್ಸ್ ಕಂಪನಿಯು ಅಕ್ರಮ ಗಣಿಗಾರಿಕೆ ಮೂಲಕ ತೆಗೆದ ಅದಿರನ್ನು ಕಳ್ಳಸಾಗಣೆ ಮಾಡಿ, ರಫ್ತು ಮಾಡಿರುವುದು ತನಿಖೆಯಲ್ಲಿ ಪತ್ತೆಯಾಗಿತ್ತು. ಈ ಕುರಿತು ಸಿಬಿಐ ಅಧಿಕಾರಿಗಳು ಅಂಕೋಲಾ ಜೆಎಂಎಫ್ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದರು.

ಸಿಬಿಐ ತನಿಖಾ ವರದಿ ಆಧರಿಸಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಿಸಿ, ತನಿಖೆ ಆರಂಭಿಸಿದ್ದರು. ರಾಜಧನ ಪಾವತಿಸದೇ ರಾಜ್ಯ ಸರ್ಕಾರಕ್ಕೆ ವಂಚಿಸಿರುವುದು ತನಿಖೆಯಲ್ಲಿ ಪತ್ತೆಯಾಗಿದೆ. ಈ ಕಾರಣಕ್ಕಾಗಿ ಅಸ್ಲಾಂ ಪಾಶ ಅವರಿಗೆ ಸೇರಿದ ₹ 1.10 ಕೋಟಿ ಮೌಲ್ಯದ ಸ್ಥಿರಾಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಇ.ಡಿ ಅಧಿಕಾರಿಗಳು ತಿಳಿಸಿದ್ದಾರೆ.


ನಗರದಲ್ಲಿ ಇಂದು

ಬ್ರಹ್ಮರಥೋತ್ಸವ: ದಾಸವಾಣಿ: ಮೈಸೂರು ರಾಮಚಂದ್ರಾಚಾರ್, ಆಯೋಜನೆ: ಕಾಕೋಳು ವೇಣುಗೋಪಾಲಸ್ವಾಮಿ ದೇವಸ್ಥಾನ ಟ್ರಸ್ಟ್, ಸ್ಥಳ: ರಾಜಾನುಕುಂಟೆ ಸಮೀಪದ ಕಾಕೋಳು, ಯಲಹಂಕ, ಬೆಳಿಗ್ಗೆ 10ರಿಂದ

ಡಾ. ಜಿ. ರಾಮಕೃಷ್ಣ ಅವರ ‘ಹಿಂದುತ್ವದ ಹಿಂದೆ-ಮುಂದೆ’ ಪುಸ್ತಕ ಬಿಡುಗಡೆ: ಡಿ. ಉಮಾಪತಿ, ಕೃತಿ ಪರಿಚಯ: ಎಸ್. ಸತ್ಯಾ, ಎನ್. ಇಂದಿರಮ್ಮ, ಉಪಸ್ಥಿತಿ: ಜಿ. ರಾಮಕೃಷ್ಣ, ಆಯೋಜನೆ: ನವಕರ್ನಾಟಕ ಪ್ರಕಾಶನ, ಸ್ಥಳ: ಕಸ್ತೂರಬಾ ಸಭಾಂಗಣ, ಗಾಂಧಿ ಭವನ, ಕುಮಾರಕೃಪಾ ರಸ್ತೆ, ಸಂಜೆ 4.30

ವಿಶ್ವ ರಂಗಭೂಮಿ ದಿನಾಚರಣೆ, ಪರಂಪರಾ ಪುರಸ್ಕಾರ ಪ್ರದಾನ: ಚಾಲನೆ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಎಂ. ಮುನಿರಾಜು, ಪರಂಪರಾ ಪುರಸ್ಕಾರ ಪುರಸ್ಕೃತರು: ಎಚ್. ಪರಮೇಶ್ವರ, ಟಿ.ಎನ್. ಸಾಯಿಕುಮಾರ್, ಅತಿಥಿಗಳು: ಕೆ.ಎನ್. ಭಗವಾನ್, ಸೋ. ಫಾಲನೇತ್ರ, ಟಿ. ಪ್ರಕಾಶ್, ಪ್ರಾಸ್ತಾವಿಕ ನುಡಿ: ಜಿ.ಪಿ. ರಾಮಣ್ಣ, ಆಯೋಜನೆ: ಪರಂಪರಾ, ಸ್ಥಳ: ನಯನ ಸಭಾಂಗಣ, ರವೀಂದ್ರ ಕಲಾಕ್ಷೇತ್ರ, ಸಂಜೆ 4

ರಾಮಾಯಣ ಸಪ್ತಾಹ: ಪ್ರವಚನ: ಅಮೀ ದೇಶಪಾಂಡೆ, ಆಯೋಜನೆ: ಶ್ರೀಸತ್ಯಸಾಯಿ ಆರ್ಗನೈಸೇಷನ್ ಕರ್ನಾಟಕ ಸೌತ್, ಸ್ಥಳ: ಸತ್ಯಸಾಯಿ ಆಶ್ರಮ, ಕಾಡುಗೋಡಿ, ಸಂಜೆ 5


ಎಂ.ಆರ್. ದೊರೆಸ್ವಾಮಿ

ಮೊದಲ ಬಾರಿ ಮತದಾನ ಮಾಡುವವರೊಂದಿಗೆ ‘ಯುವ ಸಂವಾದ’: ಸ್ಮೃತಿ ಇರಾನಿ, ಉಪಸ್ಥಿತಿ: ಎಂ.ಆರ್. ದೊರೆಸ್ವಾಮಿ, ತೇಜಸ್ವಿಸೂರ್ಯ, ಡಿ. ಜವಾಹರ್, ಆಯೋಜನೆ ಮತ್ತು ಸ್ಥಳ: ಪಿಇಎಸ್ ಯೂನಿವರ್ಸಿಟಿ, ಬನಶಂಕರಿ 3ನೇ ಹಂತ, ಬೆಳಿಗ್ಗೆ 11ರಿಂದ

‘ಕಣಕಟ್ಟೆ ಕೃಷ್ಣಮೂರ್ತಿರಾವ್ ದತ್ತಿ’ ಕಾರ್ಯಕ್ರಮ: ಸಂಗೀತ ಕಾರ್ಯಕ್ರಮ: ಗಾಯನ: ಸುಮಲತಾ ಮಂಜುನಾಥ್, ಉಪಸ್ಥಿತಿ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

35ನೇ ಸಂವತ್ಸವರದ ವಾರ್ಷಿಕೋತ್ಸವ ಹಾಗೂ ಗುರುವಂದನಾ ಸಮಾರಂಭ: ಸಾನ್ನಿಧ್ಯ: ಸತ್ಯಾತ್ಮತೀರ್ಥ ಶ್ರೀಗಳು, ಉಪಸ್ಥಿತಿ: ಅಶೋಕ್ ಹಾರನಹಳ್ಳಿ, ಪಾವಗಡ ಪ್ರಕಾಶ್ ರಾವ್, ಪ್ರಕಾಶ್ ಅಯ್ಯಂಗಾರ್, ಆಯೋಜನೆ: ಮಲ್ಲೇಶ್ವರ ಬ್ರಾಹ್ಮಣ ಸಭಾ ಟ್ರಸ್ಟ್, ಸ್ಥಳ: ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದ ಪ್ರವಚನ ಮಂದಿರ, ಮಲ್ಲೇಶ್ವರ, ಸಂಜೆ 5.30


ಸತ್ಯಾತ್ಮತೀರ್ಥ ಸ್ವಾಮೀಜಿ

ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ಆಶಾ ರಘು ಅವರ ‘ಪೂತನಿ’ ಏಕಮಹಿಳಾ ರಂಗಪ್ರಸ್ತುತಿ ಓದು: ಓದುವವರು: ನಿರ್ಮಲಾ ನಾದನ್, ಸಂದೇಶದ ಓದು: ರಜಿನಿಕಾಂತ್ ಡಿ.ಎಸ್., ರಂಗಪ್ರಸ್ತುತಿ ಕುರಿತು ಮಾತು: ಸಿ.ಕೆ. ಗುಂಡಣ್ಣ, ರುದ್ರೇಶ್ ಅದರಂಗಿ, ನಾಟಕಕಾರ್ತಿಯ ಮಾತು: ಆಶಾ ರಘು, ನಿರೂಪಣೆ: ಜಲಜಾ ಕುಂದಾಪುರ, ಆಯೋಜನೆ: ರಂಗಮಂಡಲ–ಸಿವಗಂಗ ಟ್ರಸ್ಟ್, ಸ್ಥಳ: ಸಿವಗಂಗ ರಂಗಮಂದಿರ, ಸರ್ ಎಂ.ವಿ. ಬಡಾವಣೆ, ಕೆಂಗೇರಿ ಉಪನಗರ, ಸಂಜೆ 6

ವಿಶ್ವ ರಂಗಭೂಮಿ ದಿನಾಚರಣೆ: ಅತಿಥಿ: ಹಿದಾಯತ್ ಅಹಮದ್, ಉಪನ್ಯಾಸ: ಪವಿತ್ರಾ, ಅಧ್ಯಕ್ಷತೆ: ಅಶ್ವತ್ಥನಾರಾಯಣ ಕೆ.ಪಿ., ರಂಗ ಸಂದೇಶ ವಾಚನ: ನಂಜಪ್ಪ ಎಸ್. ದೊಡ್ಡಮಧುರೆ, ಆಯೋಜನೆ: ಎಂ.ಇ.ಎಸ್. ರಂಗಶಾಲೆ, ಸ್ಥಳ: ಕಿರು ಸಭಾಂಗಣ, ಎಂಇಎಸ್ ಕಿಶೋರ ಕೇಂದ್ರ, ಮಲ್ಲೇಶ್ವರ, ಸಂಜೆ 6

ವಿಶ್ವ ರಂಗಭೂಮಿ ದಿನಾಚರಣೆ: ಅತಿಥಿಗಳು: ಆರ್.ಪಿ. ಮೋಹನ್, ಜಯತೀರ್ಥ, ಅಧ್ಯಕ್ಷತೆ: ನರಸಿಂಹ ನಾಯ್ಕ, ರಂಗ ಗೌರವ: ಬೇಲೂರು ರಘುನಂದನ್, ಆಯೋಜನೆ: ಭಾರತ್ ಎಲೆಕ್ಟ್ರಾನಿಕ್ಸ್ ಲಲಿತಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಸ್ಥಳ: ಬಿಇಎಲ್, ಜಾಲಹಳ್ಳಿ, ಸಂಜೆ 6ರಿಂದ

‘ಶ್ರೀರಾಮೋತ್ಸವ’ ಸಂಗೀತ ಕಾರ್ಯಕ್ರಮ: ಪ್ರವಚನ: ಮಧ್ವಾತ್ಮರಾಜತೀರ್ಥ ಶ್ರೀಪಾದ ಸ್ವಾಮೀಜಿ, ಗಾಯನ: ಶೃತಿ ಮುರಳಿ ಮತ್ತು ತಂಡ, ಆಯೋಜನೆ: ಶ್ರೀರಾಮ ಭಕ್ತ ಸಭಾ, ಸ್ಥಳ: ಶ್ರೀಕಂಠೇಶ್ವರ ಭವನ, ಮಲ್ಲೇಶ್ವರ, ಸಂಜೆ 6ರಿಂದ

ಶ್ರೀರಾಮ ನವಮಿ ಉತ್ಸವ: ಗಾಯನ: ಅಂಜಲಿ, ಪಿಟೀಲು: ವಿಶ್ವಜಿತ್ ಎಂ.ವಿ., ಮೃದಂಗ: ರಂಜನಿ ಸಿದ್ಧಾಂತಿ ವೆಂಕಟೇಶ್, ಖಂಜೀರಾ:ಆರ್. ಕಾರ್ತಿಕ್, ಆಯೋಜನೆ: ವೈಯಾಲಿ ಕಾವಲ್ ಎಕ್ಸ್‌ಟೆನ್ಷನ್ ಅಸೋಸಿಯೇಷನ್, ಸ್ಥಳ: ಶ್ರೀರಾಮ ದೇವಸ್ಥಾನ, ವೈಯಾಲಿ ಕಾವಲ್, ಸಂಜೆ 6.30

ರಾಮನವಮಿ ಕಾರ್ಯಕ್ರಮ: ವೀಣಾ ವಾದನ: ಗೀತಾ ಆರ್. ಭಟ್, ಮೃದಂಗ: ಬಿ.ಎಸ್. ಆನಂದ್, ಘಟ: ಸಚಿನ್ ದೇವಿಪ್ರಸಾದ್, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

ಶ್ರೀರಾಮ ನವಮಿ ಸಂಗೀತೋತ್ಸವ: ಗಾಯನ: ಅಂಬಿಕಾ ಶಾಸ್ತ್ರಿ ಎನ್.ಎ., ಪಿಟೀಲು: ಅರ್ಜುನ್ ದಿನಕರನ್, ಮೃದಂಗ: ಎಚ್.ಎಸ್. ಕೃಷ್ಣಮೂರ್ತಿ, ಘಟ: ಎನ್.ಎಸ್. ಕೃಷ್ಣಪ್ರಸಾದ್, ಸ್ಥಳ: ಶ್ರೀ ರಾಘವೇಂದ್ರ ಮತ್ತು ಆಂಜನೇಯ ಸ್ವಾಮಿಗಳ ದೇವಾಲಯದ ಆವರಣ, 8ನೇ ಕ್ರಾಸ್, ಮಲ್ಲೇಶ್ವರ, 6.30

ಪ್ರವಚನ ವಾಹಿನಿ: ‘ಆಳ್ವಾರ್–ಆಚಾರ್ಯರು ಒಂದು ಅವಲೋಕನ’ ಕುರಿತು ಪ್ರವಚನ: ಎನ್.ಕೆ. ರಾಮಶೇಷನ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್‌ನ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ: ಸವಿತಾ ಶ್ರೀನಿವಾಸ ಅವರ ‘ರ‍್ಯಾಂಬೋ ಸೀಕರ್ಸ್’ ಪುಸ್ತಕದ ಕುರಿತು ಚರ್ಚೆ: ಎಲಿಜಬೆತ್ ಚೆರಿಯನ್, ಕವಿತಾ ಪರಮೇಶ್, ಪುಸ್ತಕ ಪರಿಚಯ: ಸವಿತಾ ಶ್ರೀನಿವಾಸ, ಆಯೋಜನೆ ಮತ್ತು ಸ್ಥಳ: ರೋಟರಿ ಬೆಂಗಳೂರು ಇಂದಿರಾನಗರ, 16ಇ ಮುಖ್ಯರಸ್ತೆ, ಎಚ್‌ಎಎಲ್ 2ನೇ ಸ್ಟೇಜ್, ಇಂದಿರಾನಗರ, ಸಂಜೆ 7


‘ನಮ್ಮ ನಿಮ್ಮೊಳಗೊಬ್ಬ’ ನಾಟಕ ಪ್ರದರ್ಶನ: ನಿರ್ದೇಶನ: ಅಶೋಕ್ ಕೊಡಗು (ನೀನಾಸಂ), ಆಯೋಜನೆ: ಸ್ಟೇಜ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.30

ಶಿಕ್ಷಣ



ಪೋಷಕರ ನಂಬಿಕೆಯೇ ಮಕ್ಕಳ ಆತ್ಮವಿಶ್ವಾಸ

ನಮ್ಮ ಮಕ್ಕಳನ್ನು ಪ್ರೀತಿಸುವುದು, ಬದುಕಿನ ಕುರಿತು ಪ್ರೀತಿ, ಕಾಳಜಿ ಮೂಡಿಸುವುದು ಮತ್ತು ಅವರೊಳಗಿನ ಸೃಜನಶೀಲತೆ, ಜೀವನಪ್ರೀತಿ ಎಂದೂ ಕಮರದ ಹಾಗೆ ಕಾಪಿಡುವುದು ನಮ್ಮ ಬದ್ಧತೆ. ನಮ್ಮ ಮಕ್ಕಳನ್ನು ಎಲ್ಲರಿಗಿಂತ ಹೆಚ್ಚು ನಂಬಬೇಕಾದುದು ಮತ್ತು ಆ ನಂಬಿಕೆಯನ್ನು ಭದ್ರವಾಗಿಸುವಂತೆ ಅವರನ್ನು ಬೆಳೆಸುವುದು ಪೋಷಕರಾಗಿ ನಮಗೆ ಕರ್ತವ್ಯ.



ಆರತಿ ಪಟ್ರಮೆ


ಕೆಲವು ದಿನಗಳ ಹಿಂದೆ ಎಜುಕೇಷನ್ ಆ್ಯಪ್ ಒಂದರಿಂದ ಕರೆ ಬಂತು. 'ಇತ್ತೀಚೆಗೆ ನಡೆಸಿದ ಪರೀಕ್ಷೆಯಲ್ಲಿ ನಿಮ್ಮ ಮಗಳು ಉತ್ತಮ ನಿರ್ವಹಣೆ ತೋರಿದ್ದಾಳೆ. ನಮ್ಮಲ್ಲಿಂದ ಒದಗುವ ತರಗತಿಗಳಿಗೆ ಹಾಜರಾಗುವುದಕ್ಕೆ ಶೇ 80ರಷ್ಟು ರಿಯಾಯಿತಿ ಇದೆ ನಿಮಗೆ. ಇದಕ್ಕೆ ಸಂಬಂಧಿಸಿದಂತೆ ಪೂರ್ಣ ವಿವರ ಕೊಡುತ್ತೇವೆ, ನೀವೊಂದು ಕೌನ್ಸೆಲಿಂಗ್ ಸೆಷನ್‌ನಲ್ಲಿ ಭಾಗವಹಿಸಬೇಕು' ಇತ್ಯಾದಿ ಮಾತನಾಡಿದರು. ಮಗಳಿಗೂ ಕುತೂಹಲ ಇದ್ದುದರಿಂದ ಸಂಜೆಯ ಹೊತ್ತಿಗೆ ಅವರು ಕಳುಹಿಸಿದ ಲಿಂಕ್ ಒತ್ತಿ ಮೀಟಿಂಗ್‌ನಲ್ಲಿ ಭಾಗವಹಿಸಿದ್ದಾಯಿತು. ಪಠ್ಯಕ್ಕೆ ಸಂಬಂಧಿಸಿದಂತೆ ತನಗೆ ಸ್ವಲ್ಪಮಟ್ಟಿಗೆ ಗಣಿತ ಮತ್ತು ರಸಾಯನ ಶಾಸ್ತ್ರ ಕಠಿಣ ಎಂದಳು. 'ಸರಿ, ನಿನಗೊಂದು ಸಣ್ಣ ಪರೀಕ್ಷೆ ಕೊಡುತ್ತೇವೆ, ಹತ್ತು ಪ್ರಶ್ನೆಗಳಿಗೆ ಉತ್ತರಿಸಿದರೆ ಆಯ್ತು' ಎಂದರು ಇವಳಲ್ಲಿ ಮಾತನಾಡುತ್ತಿದ್ದವರು.

ಗಣಿತ ಪರೀಕ್ಷೆ! ಮೊದಲ ಪ್ರಶ್ನೆಯೇ ಇವಳ ಪಠ್ಯಕ್ರಮಕ್ಕೆ ಮೀರಿದ್ದಾಗಿತ್ತು. ತಾನು ಓದುತ್ತಿರುವುದು ಸ್ಟೇಟ್ ಸಿಲೆಬಸ್ ಎಂದರೆ ಅವರು 'ಇದು ಸ್ಟೇಟ್ ಸಿಲೆಬಸ್‌ನ ಮೇಲೆ ಇರುವ ಪ್ರಶ್ನೆಗಳೇ' ಎಂದು ಸಮರ್ಥಿಸಿಕೊಂಡರು. ಹತ್ತು ಪ್ರಶ್ನೆಗಳಲ್ಲಿ ನನ್ನ ಮಗಳು ನಾಲ್ಕು ಪ್ರಶ್ನೆಗಳಿಗೆ ಮಾತ್ರ ಉತ್ತರಿಸಿದಳು. ಅವಳ ಮುಖದಲ್ಲಿ ಗೊಂದಲ, ದುಃಖ, ಆತಂಕ ಎದ್ದು ಕಾಣುವುದಕ್ಕೆ ತೊಡಗಿತು. ಮೀಟಿಂಗ್‌ನಿಂದ ಹೊರಬಂದು ಬಿಡು, ಎಂದರೆ ಅವಳು ಕೇಳಲೊಲ್ಲಳು. 'ಅವರೇನಾದರೂ ಅಂದುಕೊಂಡರೆ' ಎಂಬ ಚಿಂತೆ ಅವಳದು. ಹೀಗೇ ಮುಂದುವರಿಯಿತು. ಇಷ್ಟಾದ ಮೇಲೆ 'ನಿಮ್ಮಮ್ಮನನ್ನು ಕರಿ, ಮಾತಾಡಬೇಕು' ಅಂದವರು 'ನೋಡಿದ್ರಾ ಮೇಡಂ, ಮಗಳು ಓದ್ತಿದ್ದಾಳೆ ಅಂತ ನೀವಂದುಕೊಂಡಿದ್ದೀರಿ. ಒಳ್ಳೆಯ ಶಾಲೆ ಅಂದುಕೊಂಡಿದ್ದೀರಿ. ಅವಳಿಗೆ ಏನೂ ಬರಲ್ಲ, ಬೇಸಿಕ್ಸೇ ಗೊತ್ತಿಲ್ಲ, ನೋಡಿ ಅವಳ ನಿರ್ವಹಣೆ 'ಬಿಲೋ ಆವರೇಜ್' ಇದೆ. ಅವಳಿಗೆ ನಿಜಕ್ಕೂ ಟ್ಯೂಷನ್ ಬೇಕು, ನಮ್ಮ ಪ್ಲಾನ್ಸ್ ಬಗ್ಗೆ ಹೇಳ್ತೀವಿ' ಎಂದು ಮೊದಲುಗೊಂಡರು. ನಮಗೆ ಆಸಕ್ತಿಯಿಲ್ಲ ಎಂದು ಮೀಟಿಂಗ್ ಕೊನೆಗೊಳಿಸಿದೆ.

ಇಂಥ ಸಂದರ್ಭಗಳು ಎದುರಾದಾಗ ಪೋಷಕರಿಗೆ ತಮ್ಮ ಮಕ್ಕಳ ಪರೀಕ್ಷಾ ಸಿದ್ಧತೆಯ ಬಗ್ಗೆ ಅನುಮಾನ ಮೂಡುವುದು ಸಹಜ. ಮಕ್ಕಳ ಮೇಲೆ ಎಗರಾಡಿ, ಕೂಗಾಡಿ ಹೊಡೆದು ಬಡಿದು ಮಾಡುವವರೂ ಇಲ್ಲದಿಲ್ಲ. ಒಂದೆಡೆ ಓಡುತ್ತಿರುವ ತಂತ್ರಜ್ಞಾನದ ಪ್ರಗತಿ, ಅದರೊಂದಿಗೆ ಓಡಲೇಬೇಕಾದ ನಮ್ಮ ಅನಿವಾರ್ಯತೆ ಬದುಕನ್ನು ಹಿಂಡಿಹಿಪ್ಪೆ ಮಾಡುವ ಪ್ರಯತ್ನದಲ್ಲಿದೆ. ಇನ್ನೂ ನಾಲ್ಕು ವರ್ಷ ಕಳೆದ ಮೇಲೆ ಸಿಗಬೇಕಾದುದನ್ನು ಇಂದೇ ಪಡೆಯಬೇಕೆಂಬ ಹಠ ಹೆತ್ತವರಿಗೂ; ಅದೇ ಒತ್ತಡ ಮಕ್ಕಳಿಗೂ. ಇತ್ತ ಬಾಲ್ಯದ ಸಂಭ್ರಮವೇ ಇಲ್ಲದಂತೆ, ಬದುಕನ್ನು ಅರಳಿಸಿಕೊಳ್ಳುವುದಕ್ಕೆ ಬೇಕಾದ ಸಮಯವನ್ನೇ ಕೊಡದಂತೆ ಬಾಳುವ ಹಂತಕ್ಕೆ ಬಂದುನಿಂತಿದ್ದೇವೆ. ಪ್ರೆಶರ್‌ಕುಕ್ಕರ್ ನಮ್ಮ ಬದುಕಿನ ಬಿಂಬವಾಗಿದೆ. ತೆರೆದ ಪಾತ್ರೆಯಲ್ಲಿ ಅನ್ನ ಬೇಯಿಸುವ ಕಾಲಕ್ಕೆ ಮನುಷ್ಯರಿಗೂ ತಾಳ್ಮೆಯಿತ್ತು, ಈಗ ಸಮಯವನ್ನು ಬಂಧಿಸುವ ಯತ್ನ ಮಾಡುತ್ತಲೇ ಮಕ್ಕಳನ್ನೂ ಅರೆಬೆಂದ ಕಾಳುಗಳನ್ನಾಗಿ ಮಾಡುವ ವ್ಯವಸ್ಥೆಯೊಳಗೆ ಹೆಣಗಾಡುತ್ತಿದ್ದೇವೆ.

ಪೋಷಕರಾಗಿ ನಾವು ಏನು ಮಾಡಬಹುದು?

- ತಾಳ್ಮೆಯಿಂದ ವರ್ತಿಸುವುದು ಅತ್ಯಗತ್ಯ. ನಮ್ಮ ಸಿಟ್ಟು ಮಕ್ಕಳನ್ನು ಮತ್ತಷ್ಟು ಕುಗ್ಗಿಸೀತು ಎಂಬ ಎಚ್ಚರವಿರಲಿ.
- ನಮ್ಮ ಮಕ್ಕಳ ಓದಿನ ಸಾಮರ್ಥ್ಯ ನಮಗೆ ತಿಳಿದಿರಲಿ. ಅವರೊಂದಿಗೆ ಕುಳಿತು ಆಗೀಗ ಅವರ ಕಲಿಕೆಯನ್ನು ಗಮನಿಸುತ್ತಿರಿ.
- ಮಕ್ಕಳಿಗೆ ಟ್ಯೂಷನ್ ಬೇಕೆ ಬೇಡವೇ ಎಂಬ ತೀರ್ಮಾನದಲ್ಲಿ ಪೋಷಕರ ಜತೆಗೆ ಮಗುವಿನ ಅಗತ್ಯಗಳನ್ನೂ ಪರಿಗಣಿಸಿ.
- ಇಂತಹ ಕರೆಗಳಿಂದ ಪರೀಕ್ಷಾ ಸಮಯದಲ್ಲಿ ಮಕ್ಕಳ ಆತ್ಮವಿಶ್ವಾಸ ಕುಸಿಯದಂತೆ ನೋಡಿಕೊಳ್ಳಿ.
- ಚಾಕ್‌ಪೀಸ್ ಹಿಡಿದು, ಬೋರ್ಡ್ ಮೇಲೆ ಬರೆದು ಬೋಧಿಸುವ, ತನ್ನ ಜ್ಞಾನ ಮತ್ತು ಬೋಧನಾ ಕೌಶಲಗಳಿಂದಲೇ ಮಕ್ಕಳ ಕಲ್ಪನೆಗಳನ್ನು ಅರಳಿಸಿ ಕಲಿಸುವ ಶಿಕ್ಷಕರ ಬಗ್ಗೆ ಮಕ್ಕಳ ಗೌರವ ಮಾಸದಂತೆ ಎಚ್ಚರವಹಿಸಿ.
- ಮಕ್ಕಳು ಓದುತ್ತಿರುವ ಶಾಲೆಯ ಬಗೆಗೆ, ಕಲಿಸುವ ಗುರುಗಳ ಬಗೆಗೆ ಪೋಷಕರಿಗೂ ಗೌರವ ಇದೆಯೆಂಬುದನ್ನು ಮಕ್ಕಳ ಮುಂದೆ ಅಭಿವ್ಯಕ್ತಗೊಳಿಸಿ.



ಸೃಜನಶೀಲತೆಯನ್ನು ಸಲಹಿ

ನಮ್ಮ ಮಕ್ಕಳನ್ನು ಪ್ರೀತಿಸುವುದು, ಬದುಕಿನ ಕುರಿತು ಪ್ರೀತಿ, ಕಾಳಜಿ ಮೂಡಿಸುವುದು ಮತ್ತು ಅವರೊಳಗಿನ ಸೃಜನಶೀಲತೆ, ಜೀವನಪ್ರೀತಿ ಎಂದೂ ಕಮರದ ಹಾಗೆ ಕಾಪಿಡುವುದು ನಮ್ಮ ಬದ್ಧತೆ. ನಮ್ಮ ಮಕ್ಕಳನ್ನು ಎಲ್ಲರಿಗಿಂತ ಹೆಚ್ಚು ನಂಬಬೇಕಾದುದು ಮತ್ತು ಆ ನಂಬಿಕೆಯನ್ನು ಭದ್ರವಾಗಿಸುವಂತೆ ಅವರನ್ನು ಬೆಳೆಸುವುದು ಪೋಷಕರಾಗಿ ನಮಗೆ ಕರ್ತವ್ಯ. ಹೆಜ್ಜೆಹೆಜ್ಜೆಗೂ ನಮ್ಮ ಮಕ್ಕಳನ್ನು ನಾವೇ ನಂಬದೇ ಹೋದರೆ, ಅವರ ಪ್ರತಿಯೊಂದು ನಡೆಯನ್ನೂ ಅನುಮಾನಿಸಿದರೆ ಮುಂದೆ ಸಮಾಜ ಅವರನ್ನು ನಂಬುವಂತೆ ಅವರು ಬದುಕಲಾಗದು.


ಹೆತ್ತವರ ಪ್ರೀತಿ ವಿಶ್ವಾಸ ಬೇಕು

ಜಾಹೀರಾತಿನ ಯುಗದಲ್ಲಿ, ಶಿಕ್ಷಣವೂ ಅಪ್ಪಟ ವ್ಯವಹಾರವಾಗಿದೆ. ಇಂಥ ವ್ಯವಸ್ಥೆಯಲ್ಲಿ ಮಕ್ಕಳು ಸೊರಗದಿರಲಿ. ಮಕ್ಕಳಿಗೆ ನಿಜಕ್ಕೂ ಬೇಕಾದುದು ಟ್ಯೂಷನ್ ಅಲ್ಲ, ಅಪ್ಪಅಮ್ಮನ ಕೊನೆಮೊದಲಿರದ ಪ್ರೀತಿ ಮತ್ತು ವಿಶ್ವಾಸ. ಮಕ್ಕಳ ಯಶಸ್ಸನ್ನು ಅವರ ಸಾಮಾಜಿಕ, ಭಾವನಾತ್ಮಕ ಹೊಂದಾಣಿಕೆಯಲ್ಲಿ ನೋಡಬೇಕೇ ಹೊರತು ಅವರನ್ನು ಎಂದೂ ನೋಡಿರದ, ಯಾವ ಸಂಬಂಧವೂ ಇಲ್ಲದ ಟ್ಯೂಷನ್ ಕಂಪೆನಿಯೊಂದರ ಮಾರ್ಕೆಟಿಂಗ್ ಮ್ಯಾನೇಜರ್‌ನ ಮಾತುಗಳಲ್ಲಿ ಅಲ್ಲ. ನಮ್ಮ ಮಕ್ಕಳು ಅವರ ಅಂಕಪಟ್ಟಿಗಳಿಂತ ಎಂದಿಗೂ ಶ್ರೇಷ್ಠವಾಗಿಯೇ ಇರುತ್ತಾರೆ ಎಂಬ ನಂಬಿಕೆಯೊಂದಿದ್ದರೆ ಸಾಕು, ಮಕ್ಕಳು ಯಶಸ್ಸಿನ ಏಣಿಯನ್ನು ಅರ್ಧ ಏರಿ ಆಗಿರುತ್ತದೆ.

ಕವಿ ಖಲೀಲ ಗಿಬ್ರಾನ್ ಹೇಳುವಂತೆ ಮಕ್ಕಳಿಗೆ ಕೊನೆಯಿರದ ಪ್ರೀತಿಯನ್ನು ಕೊಟ್ಟರೆ ಅವರು ದಿಗಂತದೆಡೆಗೆ ನೆಟ್ಟಿರುವ ತಮ್ಮ ಗುರಿಯನ್ನು ಸಾಧಿಸಲು ಸಫಲರಾಗುತ್ತಾರೆ. ಪೋಷಕರೆಂದರೆ ಮಕ್ಕಳೆಂಬ ಜೀವಂತ ಬಾಣಗಳನ್ನು ಗುರಿತಲುಪಿಸಲು ಬೇಕಾದ ಬಿಲ್ಲುಗಳು. ಇವೆರಡನ್ನೂ ಬಳಸುವ ಭಗವಂತನೆಂಬ ಬಿಲ್ಗಾರ ಗುರಿ ತಲುಪುವ ಬಾಣವನ್ನೂ ಅದಕ್ಕೆ ಪೂರಕವಾಗಿ ಒದಗಿದ ಬಿಲ್ಲನ್ನೂ ಏಕಪ್ರಕಾರವಾಗಿ ಪ್ರೀತಿಸುತ್ತಾನೆ.

ಪಿಎಚ್‌.ಡಿ ತಯಾರಿ ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

1. ನಾನು ಅಂತಿಮ ವರ್ಷದ ಎಂಎ (ಸಮಾಜಶಾಸ್ತ್ರ) ವಿದ್ಯಾರ್ಥಿ. ಮುಂದೆ ಪಿ ಎಚ್.ಡಿ ಮಾಡಬಯಸಿದ್ದೇನೆ. ಮುಂದಿನ ತಯಾರಿಯ ಬಗ್ಗೆ ತಿಳಿಸಿ.

ಶಿವು, ಸಿರಾವರ, ರಾಯಚೂರು ಜಿಲ್ಲೆ.

ಸಾಮಾನ್ಯವಾಗಿ, ಪಿಎಚ್.ಡಿ ಮಾಡಲು ಈ ಕೆಳಕಂಡ ಪ್ರಕ್ರಿಯೆಗಳಿರುತ್ತವೆ.

- ಪಿಎಚ್.ಡಿ ಕೋರ್ಸ್‌ಗೆ ಅಗತ್ಯವಾದ ಸಂಶೋಧನೆಯ ವಿಷಯವನ್ನು ನಿರ್ಧರಿಸುವುದು ಸುಲಭವಲ್ಲ. ವಿಷಯದ ಪ್ರಸ್ತುತತೆ, ವಿಷಯದ ಕುರಿತು ಸ್ವಾಭಾವಿಕವಾದ ಒಲವು ಮತ್ತು ಪ್ರೇರಣೆಯ ಜೊತೆಗೆ ಮಾರ್ಗದರ್ಶಕರ ಸಕಾರಾತ್ಮಕ ಅಭಿಪ್ರಾಯ ಮತ್ತು ಬೆಂಬಲವಿರಬೇಕು. ಹಾಗಾಗಿ, ವಿಷಯದ ಕುರಿತು ಪ್ರಾಥಮಿಕ ಸಂಶೋಧನೆ ಅಗತ್ಯ.
- ಸಂಬಂಧಪಟ್ಟ ವಿಷಯದಲ್ಲಿ ಸ್ನಾತಕೋತ್ತರ ಪದವಿಯ ನಂತರ (ಅಥವಾ ನಾಲ್ಕು ವರ್ಷದ ಸಂಶೋಧನಾತ್ಮಕ ಪದವಿಯ ನಂತರ) ಪಿಎಚ್.ಡಿ ಕೋರ್ಸ್ ಮಾಡಲು ಅರ್ಹತೆ ಸಿಗುತ್ತದೆ. ಪಿಎಚ್.ಡಿ ಕೋರ್ಸಿನಲ್ಲಿ ನೀವು ಮಾಡುವ ಸಂಶೋಧನೆ ಕುರಿತ ಸುದೀರ್ಘವಾದ ಪ್ರಸ್ತಾವನೆಯನ್ನು ತಯಾರಿಸಬೇಕು. ಇದರ ಆಧಾರದ ಮೇಲೆ ವಿಶ್ವವಿದ್ಯಾಲಯದ ಅನುಮತಿ ಸಿಗುತ್ತದೆ.
- ವಿಶ್ವವಿದ್ಯಾಲಯಗಳು ಪ್ರತಿ ವರ್ಷದ ಪಿಎಚ್‌ಡಿ ಕಾರ್ಯಕ್ರಮಗಳಲ್ಲಿ ನಿರ್ದಿಷ್ಟ ಸಂಖ್ಯೆಯ ಅವಕಾಶಗಳನ್ನು ಹೊಂದಿರುತ್ತವೆ. ಉತ್ತಮ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಪ್ರವೇಶ ಪರೀಕ್ಷೆಗಳು, ಸಂದರ್ಶನಗಳು ಮತ್ತು ಸಂಶೋಧನಾ ಪ್ರಸ್ತಾವನೆಯ ಮೌಲ್ಯಮಾಪನ ಇತ್ಯಾದಿ ಪ್ರಕ್ರಿಯೆಗಳಿರುತ್ತದೆ.
- ಪಿಎಚ್.ಡಿ ಕೋರ್ಸಿಗೆ ಆಯ್ಕೆಯಾದ ನಂತರ ಸಂಶೋಧನೆಯನ್ನು ಪೂರ್ಣಗೊಳಿಸಿ ಮಹಾಪ್ರಬಂಧವನ್ನು (ಥೀಸಿಸ್) ಬರೆದು ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು. ಇದಲ್ಲದೆ, ವಿಶ್ವವಿದ್ಯಾಲಯದ ನಿಯಮಾವಳಿಗಳಂತೆ ಪ್ರತಿಷ್ಠಿತ ಜರ್ನಲ್‌ಗಳಲ್ಲಿ ಸಂಶೋಧನಾತ್ಮಕ ಲೇಖನಗಳನ್ನು ಪ್ರಕಟಿಸಬೇಕು.
- ನೀವು ಸಲ್ಲಿಸಿದ ಮಹಾಪ್ರಬಂಧ ವಿಷಯ ತಜ್ಞರಿಂದ ಮೌಲ್ಯಮಾಪನ ಮಾಡಲಾಗುತ್ತದೆ.
- ಮಹಾಪ್ರಬಂಧವನ್ನು ವಿಶ್ವವಿದ್ಯಾಲಯ ಸ್ವೀಕಾರ ಮಾಡಿದ ನಂತರ ಪಿಎಚ್‌ಡಿ ಪದವಿಯನ್ನು ನೀಡಲಾಗುತ್ತದೆ. ಈ ಇಡೀ ಪ್ರಕ್ರಿಯೆಗೆ 3-5 ವರ್ಷ ಬೇಕಾಗಬಹುದು. ಪ್ರತಿ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ ನಿಯಮಾವಳಿಗಳು, ಶುಲ್ಕಗಳು, ವಿದ್ಯಾರ್ಥಿ ವೇತನ, ಅನುದಾನ ಇತ್ಯಾದಿಗಳು ವಿಭಿನ್ನವಾಗಿರುತ್ತದೆ.

ಮತ್ತಷ್ಟು ಪ್ರಶ್ನೋತ್ತರಗಳಿಗಾಗಿ www.prajavani.net/education-careers ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಗ್ಲೋಬಲ್ ಸ್ಕಾಲರ್‌ಷಿಪ್ ಪ್ರೋಗ್ರಾಂ

ಪದವಿ ಮತ್ತು ಸ್ನಾತಕೋತ್ತರ ಪದವಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡುವುದಕ್ಕಾಗಿ ಎಐಎಸ್ ಟೆಕ್ನೋಲ್ಯಾಬ್ಸ್ ಪ್ರೈ. ಲಿ. (ಐಟಿ ಸಲಹಾ ಕಂಪನಿ) ಕಂಪನಿ 'ಗ್ಲೋಬಲ್ ಸ್ಕಾಲರ್‌ಷಿಪ್ ಪ್ರೋಗ್ರಾಂ- ಎಐಎಸ್ 2023' ಯೋಜನೆ ರೂಪಿಸಿದೆ. ವಿಶ್ವದಾದ್ಯಂತ ಯಾವುದೇ ಕ್ಷೇತ್ರದಲ್ಲಿ ಯಾವುದೇ ವಿಷಯದಲ್ಲಿ ಉನ್ನತ ಸಾಧನೆ ಮಾಡಲು ಬಯಸುವ ಪ್ರತಿಭಾನ್ವಿತರು ಇದಕ್ಕೆ ಅರ್ಜಿ ಸಲ್ಲಿಸಬಹುದು.

- **ಅರ್ಹತೆ:** ಪಿಯುಸಿ ಮುಗಿಸಿ, ಪದವಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಅರ್ಜಿಸಲ್ಲಿಸಬಹುದು. ಅರ್ಜಿದಾರರು ಆಯಾ ಕೋರ್ಸ್‌ನಲ್ಲಿ ಕನಿಷ್ಠ ಒಂದು ಅವಧಿಯನ್ನು ಪೂರ್ಣಗೊಳಿಸಿರಬೇಕು ಮತ್ತು ಕಾಲೇಜು ಬಿಟ್ಟವರಾಗಿರಬಾರದು
- **ಆರ್ಥಿಕ ನೆರವು:** 2 ವರ್ಷಗಳವರೆಗೆ ವಾರ್ಷಿಕ ವಿದ್ಯಾರ್ಥಿವೇತನ ಪ್ರಶಸ್ತಿ
- **ಅರ್ಜಿ ಸಲ್ಲಿಕೆಗೆ ಕೊನೆ ದಿನ:** ಮೇ 15,2023
- **ಅರ್ಜಿ ಸಲ್ಲಿಕೆ ವಿಧಾನ :** ಆನ್‌ಲೈನ್
- **ಹೆಚ್ಚಿನ ಮಾಹಿತಿಗೆ:** www.b4s.in/praja/GSPA5

ದಿ ಗಾಂಧಿ ಫೆಲೊಷಿಪ್ 2023

ದಿ ಗಾಂಧಿ ಫೆಲೊಷಿಪ್, ಪದವೀಧರ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡುವುದಕ್ಕಾಗಿ ಪಿರಾಮಲ್ ಫೌಂಡೇಷನ್(ಎನ್‌ಜಿಒ) ರೂಪಿಸಿರುವ ಯೋಜನೆ.

ಅರ್ಹತೆ: 18 ರಿಂದ 26 ವರ್ಷದೊಳಗಿನ ಶೈಕ್ಷಣಿಕ ಮತ್ತು ಪಠ್ಯೇತರ ಚಟುವಟಿಕೆಗಳ (ಕ್ರೀಡೆ, ಎನ್‌ಸಿಸಿ, ಎನ್‌ಎಸ್‌ಎಸ್, ಮುಂದಾಳತ್ವದ ಕೆಲಸ, ಪ್ರದರ್ಶನ ಕಲೆಗಳು, ಚರ್ಚೆ, ಸಾಹಿತ್ಯ ಇತ್ಯಾದಿ) ಸಾಧಕರಿಗೆ ಈ ಸ್ಕಾಲರ್‌ಷಿಪ್ ಮುಕ್ತವಾಗಿದೆ.

ಅರ್ಜಿದಾರರು ರಾಷ್ಟ್ರದ ತುರ್ತು ಸಮಸ್ಯೆಗಳ ಬಗ್ಗೆ ಸಂವೇದನಾಶೀಲರಾಗಿರಬೇಕು ಮತ್ತು ಎಂಜಿನಿಯರಿಂಗ್/ ಅಪ್ಲೈಡ್ ಅಂಡ್ ಪ್ಯೂರ್ ಸೈನ್ಸ್/ ಕಾಮರ್ಸ್/ ಮ್ಯಾನೇಜ್‌ಮೆಂಟ್/ ಹ್ಯುಮಾನಿಟೀಸ್ ಅಂಡ್ ಲಿಬರಲ್ ಆರ್ಟ್ಸ್/ ಸೋಶಿಯಲ್ ವರ್ಕ್/ ಸೈಕಾಲಜಿ ಅಂಡ್ ಬಿಹೇವಿಯರಲ್ ಸೈನ್ಸ್/ ಮ್ಯಾಥಮ್ಯಾಟಿಕ್ಸ್/ ಜರ್ನಲಿಸಂ ಅಂಡ್ ಮಾಸ್ ಕಮ್ಯೂನಿಕೇಷನ್/ ಎಜುಕೇಷನ್/ಲಾ ಪದವಿ ಮತ್ತು ಸ್ನಾತಕೋತ್ತರ ಪದವಿ ಹೊಂದಿರುವವರಾಗಿರಬೇಕು.

- **ಆರ್ಥಿಕ ನೆರವು:** ಪ್ರಾದೇಶಿಕತೆಗೆ ಅನುಸಾರವಾಗಿ ಎಲ್ಲಾ ವೆಚ್ಚಗಳನ್ನು ಒಳಗೊಂಡಂತೆ ಮಾಸಿಕ ₹ 25 ಸಾವಿರ ದಿಂದ ₹28 ಸಾವಿರ ಮಾಸಿಕ
- **ಅರ್ಜಿ ಸಲ್ಲಿಕೆಗೆ ಕೊನೆ ದಿನ :** ಮಾ.31, 2023
- **ಅರ್ಜಿ ಸಲ್ಲಿಕೆ:** ಆನ್‌ಲೈನ್
- **ಹೆಚ್ಚಿನ ಮಾಹಿತಿಗೆ:** www.b4s.in/praja/TGIF4 ಕೃಪೆ: www.buddy4study.com

ಪಿಯುಸಿ-ಸಿಇಟಿ ಪರೀಕ್ಷೆ ದಿಕ್ಸೂಚಿ

MATHEMATICS

MULTIPLE CHOICE QUESTIONS

1) If $y = 2x^{n+1} + \frac{3}{x^n}$ then $x^2 \frac{d^2y}{dx^2}$ is ....

a) y b) 6n(n + 1)y

c) n(n +1)y d) $x\frac{dy}{dx} + y$

Ans: (c)

$y = (2x)^{(n+1)} + (3x)^{(-n)}$

$\Rightarrow dy/dx = 2(n+1)x^n - (3nx)^{(-n-1)}$

$\Rightarrow (d^2 y)/(dx^2) = 2n(n+1)x^{(n-1)} + 3n(n+1)x^{(-n-2)}$

$\Rightarrow x^2 (d^2 y)/(dx^2) = n(n+1)[(2x)^{(n+1)} + 3/x^n]$

$\Rightarrow x^2 (d^2 y)/(dx^2) = n(n+1)y$

2) If $y = |\cos x| + |\sin x|$, then $\frac{dy}{dx}$ at $x = \frac{2\pi}{3}$ is

(A) $\frac{1-\sqrt{3}}{2}$ (B) 0

(C) $\frac{1}{2}(\sqrt{3}-1)$ (D) None of these

Ans : (C) $\frac{1}{2}(\sqrt{3}-1)$

$\frac{dy}{dx} = \sin x + \cos x \quad \therefore \left(\frac{dy}{dx}\right)_{x=\frac{2\pi}{3}} = \sin 120^0 + \cos 120^0$

$= \frac{\sqrt{3}}{2} - \frac{1}{2} = \frac{\sqrt{3}-1}{2}.$

3) If $\sqrt[3]{y}\sqrt{x} = \sqrt[6]{(x+y)^5}$ then dy/dx equal to..............

a) x/y b) x+y

c) x-y d) y/x

Ans:(d)

$\sqrt[3]{y}\sqrt{x} = \sqrt[6]{(x+y)^5}$

Apply log on both sides

$\log (y^{1/3}x^{1/2}) = \log(x+y)^{5/6}$

$(1/3) \log y + (1/2) \log x = (5/6) \log(x+y)$

$(1/3y)(dy/dx) + (1/2x) = (5/6(x+y))(1+dy/dx)$

$(1/3y)(dy/dx) - (5/6(x+y))dy/dx = (5/6(x+y)) - (1/2x)$

$(dy/dx)[(1/3y)-(5/6(x+y))] = 5x-3(x+y)/6x(x+y)$

$(dy/dx) = [(2x-3y)/6x(x+y)][6y(x+y)/(2x-3y)]$

$dy/dx = y/x$

4) $\int e^x \left(\frac{1+\sin x}{1+\cos x}\right) dx$ is

(A) $\tan\left(\frac{x}{2}\right) + C$ (B) $e^x \sin x + C$

(C) $e^x \tan\left(\frac{x}{2}\right) + C$ (D) $e^x + C$

Ans : (C) $e^x \tan\left(\frac{x}{2}\right) + C$

$$\frac{1+\sin x}{1+\cos x} = \frac{1+2\sin\frac{x}{2}\cos\frac{x}{2}}{2\cos^2\frac{x}{2}} = \frac{1}{2}\sec^2\frac{x}{2} + \tan\frac{x}{2}$$

Let $f(x) = \tan\frac{x}{2}$. Then $f'(x) = \frac{1}{2}\sec^2\frac{x}{2}$.

$\therefore \int e^x \left(\frac{1+\sin x}{1+\cos x}\right) dx = \int e^x[f(x) + f'(x)]$ form.

$= e^x f(x) = e^x . \tan\frac{x}{2} + C.$

5) If a, b, c are in A.P. then the value of the determinant

$$\begin{vmatrix} x+2 & x+3 & x+2a \\ x+3 & x+4 & x+2b \\ x+4 & x+5 & x+2c \end{vmatrix} \text{ is}$$

(A) 0 **(B) 1**

(C) x **(D) 2x**

Ans: (A) 0

Expln:-The transformations $R_2 - R_1, R_3 - R_2$ give

$$\Delta = \begin{vmatrix} x+2 & x+3 & x+2a \\ 1 & 1 & 2b-2a \\ 1 & 1 & 2c-2b \end{vmatrix} \sim R_3 - R_2 \begin{vmatrix} x+2 & x+3 & x+2a \\ 1 & 1 & 2b-2a \\ 0 & 0 & 2c-4b+2a \end{vmatrix}$$

$$= 2\begin{vmatrix} x+2 & x+3 & x+2a \\ 1 & 1 & 2b-2a \\ 0 & 0 & c-2b+a \end{vmatrix} \text{ As a, b, c are in A.P., } a+c=2b$$

$$\therefore \Delta = 2\begin{vmatrix} x+2 & x+3 & x+2a \\ 1 & 1 & 2b-2a \\ 0 & 0 & 0 \end{vmatrix} = 0.$$

6) If $A = \begin{bmatrix} a & 0 & 0 \\ 0 & a & 0 \\ 0 & 0 & a \end{bmatrix}$, then det (adj A) is

(A) a^{27} (B) a^9 (C) a^6 (D) a^2

Ans : (C) a^6

Note : If A is a square matrix of order 3 then $|adj\ A| = |A|^2$ and if A is a square matrix of order 2 then $|adj\ A| = |A|$.

Here A is of order 3. $\therefore |adj\ A| = |A|^2$

$|A| = a^3. \quad \therefore |A|^2 = a^6.$

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

CHEMISTRY

1) Incorrectly matched pair is:...............

a) XeF_6 – distorted octahedral

b) $XeOF_4$ – square pyramidal

c) XeO_3 – pyramidal

d). XeF_4 – tetrahedral

Ans: (d)

Expln:- In XeF_6 there are 6 bond pairs and one lone pair. Thus the shape of XeF_6 is distorted octahedral.

In $XeOF_4$, Xe is sp^3d hybridized and the shape is square pyramidal.

In XeO_3, Xe is sp^3 hybridized and the shape is trigonal pyramidal.

In XeF_4, Xe is $sp^3 d^2$ hybridized. It has 4 bond pairs and two lone pairs. Thus, the shape issquare planar.

2. Which of the following is a network solid?

a) SO_2 (solid) b) I_2

c) Diamond d) H_2O (Ice)

Ans:-C

3. Which of the following solids is not an electrical conductor?

i) Mg (s) ii) TiO (s)

iii) I_2 (s) iv) H_2O (s)

a) (i) only b) (ii) only

c) (iii) and (iv) only d) (ii), (iii) and (iv)

Ans:-c

4) Bond angle in PH_4^+ is more than that of PH_3. This is because:

a) PH_3 has a planar trigonal structure

b) Hybridisation of P changes when PH_3 is converted to PH_4^+

c) Lone pair-bond pair repulsion exists in PH_3


d) PH_4^+ has a square planar structure

Ans: (c)


Expln:- The hydrides of group 15, 16 below the 3rd period, follows Drago's rule. The rule states that due to a large energy difference between the atomic orbitals, these compounds do not exhibit hybridization. Thus, PH_3 will not exhibit hybridization and here the bond formation takes place due to the overlap of pure

p-orbitals and s-orbitals. PH_3 has a lone pair on the central P atom, which is absent in PH_4^+. Thus in PH_3, there will be bond pair – lone pair repulsion and this is the reason why the bond angle in PH_3 is less than that of PH_4^+.

5)



Soln: (a)



6)

$A_{(g)} \xrightarrow{\Delta} P_{(g)} + Q_{(g)} + R_{(g)}$, Follows first order kinetics with **a half-life of 69.3s at 500^0C. Starting from the gas 'A' enclosed in a container at 500^0C and at a pressure of 0.4 atm, the total pressure of the system after 230 s will be**

(a) 1.15 atm (b) 1.32 atm

(c) 1.22 atm (d) 1.12 atm

Soln: d:

$t_{1/2} = 69.3s, \quad t = 230\ s, \quad a = 0.4$ atm

For first order reaction,

$k = \frac{0.693}{t_{1/2}} = \frac{0.693}{69.3} = 0.01s^{-1}$

$k = \frac{2.303}{t}\log\frac{a}{a-x} = \frac{2.303}{230}\log\frac{0.4}{0.4-x}$

$0.01 = \frac{2.303}{230}\log\frac{.4}{0.4-x} = 0.01\log\frac{0.4}{0.4-x}$

$\frac{0.01}{0.01} = \log\frac{0.4}{0.4-x} \Rightarrow 1 = \text{loog}\frac{.4}{0.4-x}$

$\text{Antilog of } 1 = \frac{0.4}{0.4-x} \Rightarrow 10 = \frac{0.4}{0.4-x}$

$x = 0.36$

for the given reaction,

	$A_{(g)}$ $\xrightarrow{\Delta}$	$P_{(g)}$ +	$Q_{(g)}$ +	$R_{(g)}$
Initial	0.4	0	0	0
Final	0.4−0.36	0.36	0.36	0.36

Total pressure

$= (0.4 - 0.36) + (3 \times 0.36) = 1.12$ atm

7) Graphite is a good conductor of electricity due to the presence of ....

a) long pair of electrons b) cations

c) free valence electrons d) anions

Ans:-b

8) Which of the following oxides behave as conductor or insulator depending upon temperature?

a) TiO b) SiO_2

c) TiO_3 d) MgO

Ans:- C

9) Which of the following oxides show electrical properties like metals?

a) SiO_2 b) MgO

c) SO_2 (s) d) CrO_2

Ans:-d

'ರಂಗ್ ದ ಬರ್ಸ' ಕಾರ್ಯಕ್ರಮಕ್ಕೆ ಬಜರಂಗದಳ ಅಡ್ಡಿ

ಒಂದನೇ ಪುಟದಿಂದ...

'ಕಾರ್ಯಕ್ರಮ ನಡೆಯುತ್ತಿದ್ದ ಸ್ಥಳಕ್ಕೆ ತೆರಳಿದ್ದ ಕೆಲವರು, ಯುವಕ-ಯುವತಿಯರು ಧರಿಸಿದ್ದ ಉಡುಪಿನ ಬಗ್ಗೆ ಹಾಗೂ ಧ್ವನಿ ವರ್ಧಕ ಬಳಸಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದರು. ಆಯೋಜಕರ ಜೊತೆ ಮಾತಿನ ಚಕಮಕಿ ನಡೆಸಿದ್ದರು. ಗಲಾಟೆ ನಡೆಯುತ್ತಿರುವ ಬಗ್ಗೆ ಮಾಹಿತಿ ಬಂದ ತಕ್ಷಣವೇ ಸ್ಥಳಕ್ಕೆ ಧಾವಿಸಿದ್ದೆವು. ದಾಂದಲೆ ನಡೆಸಿದ ಆರು ಮಂದಿಯನ್ನು ವಶಕ್ಕೆ ಪಡೆದಿದ್ದೇವೆ. ಈ ಘಟನೆಯಿಂದ ಬೇಸತ್ತು ಆಯೋಜಕರು ಕಾರ್ಯಕ್ರಮವನ್ನು ರದ್ದುಪಡಿಸಿದ್ದಾರೆ' ಎಂದು ಕಂಕನಾಡಿ ಠಾಣೆಯ ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಘಟನೆಗೆ ಸಂಬಂಧಿಸಿದಂತೆ ಗಣೇಶ್ ಅತ್ತಾವರ, ಜೈಪ್ರಶಾಂತ್, ಬಾಲಚಂದ್ರ, ಅಕ್ಷಯ್, ಚಿರಾಗ್ ಹಾಗೂ ಮಿಥುನ್ ಅವರನ್ನು ವಶಕ್ಕೆ ಪಡೆಯಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಕುಲದೀಪ್ ಕುಮಾರ್ ಆರ್. ಜೈನ್ ತಿಳಿಸಿದರು.

ನಿರ್ಮಲಾ ಸದಸ್ಯತ್ವ ಅಮಾನತು: ಸಾಹಿತ್ಯ ಪರಿಷತ್ ಅಂಗೀಕಾರ

ಪ್ರಜಾವಾಣಿ ವಾರ್ತೆ

ವಿಜಯಪುರ: 'ಕನ್ನಡ ಸಾಹಿತ್ಯ ಪರಿಷತ್ತಿನ ವಿರುದ್ಧ ಬೆಂಗಳೂರು ದೂರದರ್ಶನ ಕೇಂದ್ರದಲ್ಲಿ ಒಂದು ನಿಮಿಷ ಮೌನ ಆಚರಿಸಿ ಅವಮಾನ ಮಾಡಿದ್ದ ಸಹಾಯಕ ನಿರ್ದೇಶಕಿ, ಸಾಹಿತಿ ನಿರ್ಮಲಾ ಯಲಿಗಾರ ಅವರ ಸದಸ್ಯತ್ವ ಅಮಾನತು ಮಾಡಿರುವ ಕ್ರಮವನ್ನು ಕಸಾಪ ಕೇಂದ್ರ ಕಾರ್ಯಕಾರಿ ಸಮಿತಿ ಬಹುಮತದಿಂದ ಅಂಗೀಕರಿಸಿದೆ' ಎಂದು ಕಸಾಪ ರಾಜ್ಯ ಘಟಕದ ಅಧ್ಯಕ್ಷ ಡಾ.ಮಹೇಶ ಜೋಶಿ ತಿಳಿಸಿದರು.

'ಸದಸ್ಯತ್ವ ಅಮಾನತು ಮಾಡುವ ಮುನ್ನಾ ಅವರಿಗೆ ಲೀಗಲ್ ನೋಟಿಸ್ ನೀಡಲಾಗಿತ್ತು. ಆದರೆ, ಅವರಿಂದ ಉತ್ತರ ಬಾರದ ಕಾರಣ ಅಮಾನತು ಮಾಡಲಾಗಿದೆ' ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ವಿಜಯಪುರದಲ್ಲಿ ಭಾನುವಾರ ನಡೆದ ಕಸಾಪ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಹಾಜರಿದ್ದ 47 ಸದಸ್ಯರಲ್ಲಿ 40 ಸದಸ್ಯರು (ಶೇ 88.36 ಮತಗಳು) ಮತ ಚಲಾಯಿಸುವ ಮೂಲಕ ನಿರ್ಮಲಾ ಅವರ ಅಮಾನತು ಆದೇಶವನ್ನು ಬೆಂಬಲಿಸಿದ್ದಾರೆ' ಎಂದು ಹೇಳಿದರು.

'ನಿರ್ಮಲಾ ಅವರು ಸರ್ಕಾರಿ ಸ್ವಾಮ್ಯದ ದೂರದರ್ಶನ ಕೇಂದ್ರದಲ್ಲಿ ಕಸಾಪ ವಿರುದ್ಧ ಮೌನಾಚರಣೆ ಮಾಡುವ ಮೂಲಕ ಸರ್ಕಾರಿ ಕಚೇರಿ ದುರುಪಯೋಗ ಮಾಡಿಕೊಂಡಿದ್ದಾರೆ. ಅಲ್ಲದೇ, ಪತ್ರಿಕಾಗೋಷ್ಠಿ ನಡೆಸಿ ಕಸಾಪ ವಿರುದ್ಧ ಅಪಪ್ರಚಾರ ನಡೆಸಿದ್ದಾರೆ. ಈ ಹಿನ್ನೆಲೆಯಲ್ಲಿ ಅವರು ವಿರುದ್ಧ ಶಿಸ್ತು ಕ್ರಮಕೈಗೊಳ್ಳುವಂತೆ ಕೇಂದ್ರ ವಾರ್ತಾ ಮತ್ತು ಪ್ರಚಾರ ಇಲಾಖೆ ಸಚಿವರಿಗೂ ಪತ್ರ ಬರೆಯಲಾಗಿದೆ' ಎಂದರು.

ಒಳನೋಟ ಪ್ರತಿಕ್ರಿಯೆಗಳಿಗಾಗಿ ಈ ಲಿಂಕ್‌ಗೆ ಭೇಟಿ ನೀಡಿ https://bit.ly/3TNbEPt

'ಅಮೃತ ಸರೋವರ': 11 ಸಾವಿರ ಎಕರೆಗೂ ಹೆಚ್ಚು ಪ್ರದೇಶದಲ್ಲಿ ನವ ಸಂಗ್ರಹ ತಾಣ

ರಾಜ್ಯದಲ್ಲಿ 644 ಹೊಸ ಕೆರೆ ನಿರ್ಮಾಣ

• ಆರ್. ಮಂಜುನಾಥ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಕೇಂದ್ರ ಸರ್ಕಾರದ 'ಅಮೃತ ಸರೋವರ' ಯೋಜನೆಯಲ್ಲಿ ರಾಜ್ಯ 644 ಹೊಸ ಕೆರೆಗಳನ್ನು ನಿರ್ಮಿಸಿದೆ. 11 ಸಾವಿರ ಎಕರೆಗೂ ಹೆಚ್ಚು ಪ್ರದೇಶದಲ್ಲಿ ನಾಲ್ಕು ಕೋಟಿಗೂ ಹೆಚ್ಚು ಕ್ಯೂಬಿಕ್ ಮೀಟರ್ ನೀರನ್ನು ಸಂಗ್ರಹಿಸಲಾಗಿದೆ.

ಕೆರೆಗಳ ಸಮಗ್ರ ಅಭಿವೃದ್ಧಿಯ 'ಅಮೃತ ಸರೋವರ' ಯೋಜನೆಯಲ್ಲಿ ಹೊಸ ಕೆರೆಗಳನ್ನೂ ನಿರ್ಮಿಸುವ ಕಾರ್ಯ ಕೈಗೊಳ್ಳಲಾಗಿದೆ. ಇದರಲ್ಲಿ ಬೆಳಗಾವಿ ಜಿಲ್ಲೆ ಪ್ರಥಮ ಸ್ಥಾನ ಪಡೆದಿದ್ದು, 493 ಎಕರೆ ಪ್ರದೇಶದಲ್ಲಿ 75 ಕೆರೆಗಳನ್ನು ಸೃಷ್ಟಿಸಿದೆ. ನಂತರ ಸ್ಥಾನ ಹಾಸನದ್ದಾಗಿದೆ. 6,714 ಎಕರೆ ಪ್ರದೇಶದಲ್ಲಿ 60 ಕೆರೆಗಳು ನಿರ್ಮಾಣಗೊಂಡಿವೆ.

ನಶಿಸಿಹೋಗಿದೆ ಎಂದು ಕಂದಾಯ ದಾಖಲೆಗಳಲ್ಲಿ ಉಲ್ಲೇಖವಾಗಿದ್ದ ಕೆರೆ ಪ್ರದೇಶಗಳನ್ನು ಮತ್ತೆ ಗುರುತಿಸಿ, ಹೊಸ ಕೆರೆಗಳನ್ನಾಗಿ ಪುನಶ್ಚೇತನಗೊಳಿಸಲಾಗಿದೆ. ನೀರಿನ ಸಂಗ್ರಹದ ಸಾಧ್ಯತೆ ಇರುವ ಕಡೆಗಳಲ್ಲಿ ಹೊಸ ನಿರ್ಮಾಣ ಕಾರ್ಯ ಕೈಗೊಳ್ಳಲಾಗಿದೆ. ಗ್ರಾಮಗಳು, ಹಳ್ಳಿಗಳ ಹಂಚಿನಲ್ಲಿ ಕುಡಿಯುವ ನೀರು, ಪ್ರಾಣಿಗಳಿಗೆ ನೀರು ಸೇರಿದಂತೆ ಬೆಟ್ಟಗಳಿಂದ ಬರುವ ನೀರನ್ನು ಸಂಗ್ರಹಿಸಿ, ಜೀವವೈವಿಧ್ಯಕ್ಕೆ ನೆರವಾಗುವ ಉದ್ದೇಶದಿಂದ ಹೊಸ ಕೆರೆಗಳನ್ನು ಕಟ್ಟಲಾಗಿದೆ.

1,963 ಕೆರೆಗಳ ಪುನರುಜ್ಜೀವನ: ಅಮೃತ ಸರೋವರ ಯೋಜನೆಯಲ್ಲಿ ಪ್ರತಿ ಜಿಲ್ಲೆಯಲ್ಲಿ ಕನಿಷ್ಠ 75 ಕೆರೆಗಳನ್ನು ಪುನರುಜ್ಜೀವನಗೊಳಿಸಬೇಕಿತ್ತು. ಆದರೆ, ಇದನ್ನು ರಾಜ್ಯ ಸರಾಸರಿ 204 ಕೆರೆಗಳಿಗೆ ಗುರಿ ನಿರ್ಧರಿಸಿಕೊಂಡಿದೆ.



ಬಾಗಲಕೋಟೆಯ ತುಳಸಿಗೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅಭಿವೃದ್ಧಿಯಾಗಿರುವ ಕೆರೆ

'ಬಳಕೆದಾರರಿಗೆ ಕೆರೆಗಳ ಹೊಣೆ'

'ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆಯ ವ್ಯಾಪ್ತಿಯಲ್ಲಿ 33 ಸಾವಿರಕ್ಕೂ ಹೆಚ್ಚು ಕೆರೆಗಳಿವೆ. ಅಮೃತ ಸರೋವರ ಯೋಜನೆಯಲ್ಲಿ ಕೆರೆಗಳ ಸಮಗ್ರ ಅಭಿವೃದ್ಧಿಯನ್ನು ಮಾಡಲಾಗುತ್ತಿದೆ. ನಂತರ ಇವುಗಳ ನಿರ್ವಹಣೆಗೆ ಪ್ರತಿ ಕೆರೆಗೂ ನೀರು ಬಳಕೆದಾರರ ಸಂಘವನ್ನು ರಚಿಸಲಾಗಿದೆ. ಇಷ್ಟೊಂದು ಹಣ ವೆಚ್ಚವಾದ ಮೇಲೆ ಅದನ್ನು ರಕ್ಷಿಸಿಕೊಳ್ಳುವುದು ಎಲ್ಲರ ಜವಾಬ್ದಾರಿ' ಎಂದು 'ಮಿಷನ್ ಅಮೃತ ಸರೋವರ' ಯೋಜನೆಯ ರಾಜ್ಯ ನೋಡಲ್ ಅಧಿಕಾರಿಯಾಗಿರುವ ಗ್ರಾಮೀಣಾಭಿವೃದ್ಧಿ ಆಯುಕ್ತೆ ಶಿಲ್ಪಾ ನಾಗ್ ಹೇಳಿದರು.

ಹೀಗಾಗಿ 6,324 ಕೆರೆಗಳನ್ನು ಗುರುತಿಸಲಾಗಿದ್ದು, ಇದರಲ್ಲಿ 4,738 ಕೆರೆಗಳಲ್ಲಿ ಕಾಮಗಾರಿ ಆರಂಭವಾಗಿದ್ದು, 1963 ಕೆರೆಗಳು ಪುನಶ್ಚೇತನಗೊಂಡಿವೆ. ಇದರಿಂದ ಒಂದು ಕೋಟಿಗೂ ಹೆಚ್ಚು ಕ್ಯೂಬಿಕ್ ಮೀಟರ್ (1,14,69,183 ಕ್ಯೂಬಿಕ್ ಮೀಟರ್) ನೀರಿನ ಸಂಗ್ರಹ ಅಧಿಕವಾಗಿದೆ. ಈ ಸಾಧನೆಯಿಂದ ರಾಜ್ಯ ಇದೀಗ ದೇಶದ ರ‍್ಯಾಂಕಿಂಗ್ ಪಟ್ಟಿಯಲ್ಲಿ 4ನೇ ಸ್ಥಾನದಲ್ಲಿದೆ.

ಒಂದು ಎಕರೆ ಕೆರೆ ವಿಸ್ತೀರ್ಣವಿದ್ದರೆ ಅದರ ನೀರಿನ ಸಂಗ್ರಹ ಸಾಮರ್ಥ್ಯವನ್ನು 10 ಸಾವಿರ ಕ್ಯೂಬಿಕ್ ಮೀಟರ್‌ಗೆ ಹೆಚ್ಚಿಸಬೇಕು. 'ಅಮೃತ ಸರೋವರ' ಯೋಜನೆಯ ಆಶಯದಂತೆ ಸ್ವಾತಂತ್ರ್ಯ ಹೋರಾಟಗಾರರು, ಅವರ ಕುಟುಂಬದವರು, ಪದ್ಮ ಪ್ರಶಸ್ತಿ ಪುರಸ್ಕೃತರು ಸೇರಿದಂತೆ ಸ್ಥಳೀಯ ಜನರು ಕೆರೆಗಳ ಪುನಶ್ಚೇತನ ಕಾಮಗಾರಿಗಳಲ್ಲಿ ತೊಡಗಿದ್ದಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಸಣ್ಣ ನೀರಾವರಿ ಇಲಾಖೆ, ಜಲಾನಯನ ಅಭಿವೃದ್ಧಿ ಇಲಾಖೆ, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ರೈಲ್ವೆ ಇಲಾಖೆಗಳು ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿವೆ. ಮಹಾತ್ಮಗಾಂಧಿ ನರೇಗಾ, 15ನೇ ಹಣಕಾಸು ಆಯೋಗ, ಜಲಾನಯನ ಅಭಿವೃದ್ಧಿ ಸೇರಿದಂತೆ ಹಲವು ಯೋಜನೆಗಳ ಅನುದಾನವಿದೆ. ಇದಲ್ಲದೆ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್ ಫಂಡ್) ಬಳಸಿಕೊಳ್ಳಲಾಗಿದೆ.

₹679.25 ಕೋಟಿ ವೆಚ್ಚ: ಕೆರೆಗಳ ಸಮಗ್ರ ಅಭಿವೃದ್ಧಿಯಲ್ಲಿ ಈವರೆಗೆ ರಾಜ್ಯ ಸರ್ಕಾರ ₹679.25 ಕೋಟಿ ವೆಚ್ಚ ಮಾಡಿದೆ. 2023ರ ಆಗಸ್ಟ್ 15ರೊಳಗೆ ಎಲ್ಲ ಯೋಜನೆ ಪೂರ್ಣಗೊಳ್ಳಬೇಕಿದೆ. ಆ.15ರಂದು ಪುನಶ್ಚೇತನಗೊಂಡಿರುವ ಹಾಗೂ ಹೊಸದಾಗಿ ನಿರ್ಮಾಣಗೊಂಡಿರುವ ಎಲ್ಲ ಕೆರೆಗಳಲ್ಲಿ ರಾಷ್ಟ್ರಧ್ವಜಾರೋಹಣ ಮಾಡಲಾಗುವುದು ಎಂದು ಶಿಲ್ಪಾ ನಾಗ್ ತಿಳಿಸಿದರು.

ಅಮೃತ ಸರೋವರ ರಾಷ್ಟ್ರೀಯ ರ‍್ಯಾಂಕಿಂಗ್

ಕ್ರಮ ಸಂಖ್ಯೆ	ರಾಜ್ಯ	ಅಭಿವೃದ್ಧಿಗೆ ಗುರುತಿಸಿರುವ ಕೆರೆಗಳು	ಕೆಲಸ ಆರಂಭ	ಕಾಮಗಾರಿ ಪೂರ್ಣ
1	ಉತ್ತರಪ್ರದೇಶ	17,500	11,597	9,468
2	ಮಧ್ಯಪ್ರದೇಶ	7,347	5,936	2,900
3	ಜಮ್ಮು ಮತ್ತು ಕಾಶ್ಮೀರ	4,060	2,677	2,427
4	ಕರ್ನಾಟಕ	6,324	4,738	1,963
5	ಅಸ್ಸಾಂ	3,498	2,679	1,782

ಅಮೃತ ಸರೋವರ ಜಿಲ್ಲಾ ರ‍್ಯಾಂಕಿಂಗ್

ಕ್ರಮ ಸಂಖ್ಯೆ	ಜಿಲ್ಲೆ	ಅಭಿವೃದ್ಧಿಗೆ ಗುರುತಿಸಿರುವ ಕೆರೆಗಳು	ಕೆಲಸ ಆರಂಭ	ಕಾಮಗಾರಿ ಪೂರ್ಣ
1	ಕೋಲಾರ	274	212	138
2	ಮೈಸೂರು	225	194	103
3	ಚಿಕ್ಕಬಳ್ಳಾಪುರ	257	172	91
4	ಬೆಂಗಳೂರು ಗ್ರಾಮಾಂತರ	172	158	90
5	ಚಿತ್ರದುರ್ಗ	256	147	89

ಹೊಸ ಕೆರೆಗಳು

ಜಿಲ್ಲೆ	ಹೊಸ ಕೆರೆಗಳು
ಬೆಳಗಾವಿ	75
ಹಾಸನ	60
ಶಿವಮೊಗ್ಗ	42
ಕೋಲಾರ	41
ಮೈಸೂರು	37
ಯಾದಗಿರಿ	35
ವಿಜಯಪುರ	32
ತುಮಕೂರು	27
ಚಿಕ್ಕಬಳ್ಳಾಪುರ	26
ಚಿತ್ರದುರ್ಗ	25

ತುಮಕೂರಿನಲ್ಲಿ ಅತಿಹೆಚ್ಚು

ಅಮೃತ ಸರೋವರ ಯೋಜನೆಯಲ್ಲಿ ರಾಜ್ಯದ ತುಮಕೂರು ಜಿಲ್ಲೆಯಲ್ಲಿ ಅತಿಹೆಚ್ಚು ಅಂದರೆ **443** ಕೆರೆಗಳನ್ನು ಸಮಗ್ರ ಅಭಿವೃದ್ಧಿಗೆ ಗುರುತಿಸಲಾಗಿದೆ. ಕಾಮಗಾರಿ ಆರಂಭವಾಗಿರುವ ಕೆರೆಗಳ ಸಂಖ್ಯೆ **202**. ಅಭಿವೃದ್ಧಿಯಾಗಿರುವ ಕೆರೆಗಳು **85**. ಎರಡನೇ ಸ್ಥಾನದಲ್ಲಿರುವ ಹಾಸನದಲ್ಲಿ **343** ಕೆರೆಗಳ ಪೈಕಿ **84** ಅಭಿವೃದ್ಧಿಗೊಂಡಿವೆ. ಕಲಬುರಗಿಯಲ್ಲಿ **298**ರಲ್ಲಿ **48**, ಬೆಳಗಾವಿಯಲ್ಲಿ 284ಕ್ಕೆ 88, ರಾಮನಗರದಲ್ಲಿ **274**ಕ್ಕೆ **75** ಕೆರೆಗಳು ಅಭಿವೃದ್ಧಿಯಾಗಿವೆ. ಚಾಮರಾಜನಗರ, ಉಡುಪಿ, ಬೆಂಗಳೂರು, ಉತ್ತರ ಕನ್ನಡ, ಕೊಡಗು ಜಿಲ್ಲೆಗಳು ಕೊನೆಯ ಐದು ಸ್ಥಾನದಲ್ಲಿವೆ.

ಬಿಜೆಪಿ ಗುಲಾಮನಾಗಿ ಮೀಸಲಾತಿ ತೆಗೆಯುತ್ತೀಯಲ್ಲಪ್ಪಾ?: ಇಬ್ರಾಹಿಂ

ಪ್ರಜಾವಾಣಿ ವಾರ್ತೆ

ಮೈಸೂರು: '1995ರಲ್ಲಿ ಎಚ್.ಡಿ.ದೇವೇಗೌಡ ಅವರು ಮುಖ್ಯಮಂತ್ರಿಯಾಗಿದ್ದಾಗ ಮುಸ್ಲಿಮರಿಗೆ ಶೇ 4ರಷ್ಟು ಮೀಸಲಾತಿ ನೀಡಿದ್ದರು. ಬೊಮ್ಮಣ್ಣ, ಆಗ ನಿಮ್ಮ ಅಪ್ಪನೊಂದಿಗೆ ನಾವೆಲ್ಲ ಇದ್ದೆವಪ್ಪ. ಇದೀಗ ನೀನು ಬಿಜೆಪಿಯ ಗುಲಾಮನಾಗಿ ಮೀಸಲಾತಿ ತೆಗೆಯುತ್ತೀಯಲ್ಲಪ್ಪ' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿರುದ್ಧ ಹರಿಹಾಯ್ದರು.

ಜೆಡಿಎಸ್ ಪಂಚರತ್ನ ಯಾತ್ರೆ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, 'ಯಾಕೆ ಜಾತಿ–ಜಾತಿ ನಡುವೆ ಜಗಳ ಹಚ್ಚುವ ಕೆಲಸ ಮಾಡುತ್ತಿದ್ದೀಯಾ ಬೊಮ್ಮಣ್ಣ? ನೀತಿ ಸಂಹಿತೆ ಹೊಸ್ತಿಲಲ್ಲಿ ಮೀಸಲಾತಿ ರದ್ದು ಮಾಡಿ ಆದೇಶ ಹೊರಡಿಸಿದ್ದೀಯಾ. ನ್ಯಾಯಾಲಯದಲ್ಲಿ ಇದು ನಿಲ್ಲುವುದೇ' ಎಂದು ಪ್ರಶ್ನಿಸಿದರು.

'ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ಶಿವಾಜಿನಗರದಲ್ಲಿ ಆದಿಚುಂಚನಗಿರಿ ಸ್ವಾಮೀಜಿ ಅವರನ್ನು ಸನ್ಮಾನಿಸಿದ್ದರು. ಸ್ವಾಮೀಜಿ ಬಳಿಯೇ ಅಲ್ಪಸಂಖ್ಯಾತರು ಮೀಸಲಾತಿ ಕೋರಿದ್ದರು. ಸ್ವಾಮೀಜಿ ದೇವೇಗೌಡರು ಕೊಡುತ್ತಾರೆ ಎಂದು ಆಶೀರ್ವಾದ ಮಾಡಿದ್ದರು. ದೇವೇಗೌಡರ ಶ್ರಮವನ್ನು ಇಂದು ಮುಸ್ಲಿಂ ಸಮಾಜ ಜ್ಞಾಪಿಸಿಕೊಳ್ಳಲಿದೆ' ಎಂದರು.

'ಮೀಸಲಾತಿ ರದ್ದತಿ ವಿರುದ್ಧ ಮಾರ್ಚ್ 27ರಂದು ಬೆಂಗಳೂರಿನಲ್ಲಿ ಸಾಂಕೇತಿಕ ಪ್ರತಿಭಟನೆ ಹಮ್ಮಿಕೊಳ್ಳುತ್ತೇವೆ' ಎಂದರು.



ಪ್ರತಿಮೆಗಳ ಅನಾವರಣ

ಬೆಂಗಳೂರಿನ ವಿಧಾನಸೌಧದ ಮುಂದೆ ಭಾನುವಾರ ನಾಡಪ್ರಭು ಕೆಂಪೇಗೌಡರ ಪ್ರತಿಮೆ ಮತ್ತು ಶ್ರೀ ಜಗಜ್ಯೋತಿ ಬಸವೇಶ್ವರ ಪ್ರತಿಮೆಯನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅನಾವರಣ ಮಾಡಿದರು. ಶಾಸಕ ಎಂ.ಕೃಷ್ಣಪ್ಪ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಶ್ರೀ ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ, ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ, ಶಿರಾ ತಾಲ್ಲೂಕಿನ ಪಟ್ಟನಾಯಕನಹಳ್ಳಿ ಸ್ಫಟಿಕಪುರಿ ಸಂಸ್ಥಾನ ಮಠದ ನಂಜಾವಧೂತ ಸ್ವಾಮೀಜಿ, ಕಂದಾಯ ಸಚಿವ ಆರ್. ಅಶೋಕ ಮತ್ತು ಚಿತ್ರದುರ್ಗ ಶಿವಶರಣ ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಇದ್ದಾರೆ –ಪ್ರಜಾವಾಣಿ ಚಿತ್ರ

ಅವೈಜ್ಞಾನಿಕ ಮೀಸಲಾತಿ ವರ್ಗೀಕರಣ ರದ್ದು: ಕಾಂಗ್ರೆಸ್ ಭರವಸೆ

ಒಂದನೇ ಪುಟದಿಂದ...

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿ, 'ಹಿಂದುಳಿದ ವರ್ಗಗಳ ಪ್ರವರ್ಗ 2-ಬಿ ಅಡಿಯಲ್ಲಿ ಮುಸ್ಲಿಮರಿಗೆ ಕಲ್ಪಿಸಲಾಗಿದ್ದ ಮೀಸಲಾತಿಯನ್ನು ಕಿತ್ತುಕೊಂಡಿರುವುದು ಅಸಾಂವಿಧಾನಿಕವಾಗಿದೆ. ಸಮುದಾಯಗಳ ನಡುವೆ ದ್ವೇಷ ಬಿತ್ತಲು ಬಿಜೆಪಿ ಸರ್ಕಾರ ಇಂತಹ ನಿರ್ಧಾರ ಕೈಗೊಂಡಿದೆ. ಶಾಂತಿಯ ತೋಟವಾಗಿರುವ ಕರ್ನಾಟಕದಲ್ಲಿ ದ್ವೇಷ ಬಿತ್ತುವ ಕಾರ್ಯ ನಡೆಯುತ್ತಿದೆ. ಮೀಸಲಾತಿ ವಿಭಜಿಸಲು ಇದು ಅವರ ಮನೆ ಆಸ್ತಿಯೇ' ಎಂದು ಪ್ರಶ್ನಿಸಿದರು.

'ಕಾಂಗ್ರೆಸ್ ಸರ್ಕಾರ ರಚನೆಯಾದ ಬಳಿಕ ಸಚಿವ ಸಂಪುಟದ ಮೊದಲನೇ ಸಭೆಯಲ್ಲೇ ಮೀಸಲಾತಿಯನ್ನು ಮೊದಲಿನಂತೆಯೇ ಯಥಾಸ್ಥಿತಿ ಉಳಿಸಿಕೊಳ್ಳುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು. ಮುಸ್ಲಿಮರಿಗೆ ಇದ್ದ ಶೇ 4 ರಷ್ಟು ಮೀಸಲಾತಿಯನ್ನು ಕಿತ್ತುಕೊಂಡು, ಅದನ್ನು ಲಿಂಗಾಯತರಿಗೆ ಹಾಗೂ ಒಕ್ಕಲಿಗರಿಗೆ ತಲಾ ಶೇ 2ರಷ್ಟು ಹಂಚುವ ನಿರ್ಣಯ ಮಾಡಿರುವುದು ಖಂಡನೀಯ. ಒಕ್ಕಲಿಗರು, ಲಿಂಗಾಯತರು ಭಿಕ್ಷುಕರಲ್ಲ. ಸಂವಿಧಾನದ ಅಡಿಯಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಪ್ರತಿಯೊಂದು ಸಮುದಾಯ ತಮ್ಮ ಹಕ್ಕು ಕೇಳುತ್ತಿದೆ. ಈ ಸರ್ಕಾರಕ್ಕೆ ದಲಿತರು, ಅಲ್ಪಸಂಖ್ಯಾತರನ್ನು ಕಂಡರೆ ತಿರಸ್ಕಾರ ಏಕೆ? ಅವರು ಮನುಷ್ಯರಲ್ಲವೇ? ಲಿಂಗಾಯತ, ಒಕ್ಕಲಿಗರಲ್ಲಿ ಯಾರಾದರೂ ಅಲ್ಪಸಂಖ್ಯಾತರ ಮೀಸಲಾತಿಯನ್ನು ಕಿತ್ತು ನಮಗೆ ಕೊಡಿ ಎಂದು ಕೇಳಿದ್ದಾರೆಯೇ' ಎಂದರು.

'ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸೇಡಿನ ರಾಜಕಾರಣ ಮಾಡುತ್ತಿವೆ. ಬಿಜೆಪಿ ಸರ್ಕಾರ ಕೇವಲ 90 ದಿನಗಳ ಅವಧಿಯಲ್ಲಿ ಮೀಸಲಾತಿ ವರ್ಗೀಕರಣವನ್ನು ಮೂರು ಬಾರಿ ಬದಲಾವಣೆ ಮಾಡಿದೆ. ಯಾವುದೇ ಆಯೋಗಗಳ ವರದಿ ಇಲ್ಲದೆ ಮುಸ್ಲಿಮರಿಗೆ ಕಲ್ಪಿಸಲಾಗಿದ್ದ ಮೀಸಲಾತಿ ರದ್ದುಪಡಿಸಲಾಗಿದೆ. ಚುನಾವಣೆ ಸಮಯದಲ್ಲಿ ಜನರ ದಾರಿತಪ್ಪಿಸಲು ಬಿಜೆಪಿ ಸರ್ಕಾರ ಜನದ್ರೋಹಿ ತೀರ್ಮಾನ ಕೈಗೊಂಡಿದೆ' ಎಂದರು.

ಪಂಚಮಸಾಲಿ ಸಮುದಾಯದ ಸಿ.ಎಂ ಇದ್ದರೂ ಮೀಸಲಾತಿ ಕಲ್ಪಿಸಲು ಸಾಧ್ಯವಾಗುತ್ತಿರಲಿಲ್ಲ. ಬೊಮ್ಮಾಯಿ ನುಡಿದಂತೆ ನಡೆದಿದ್ದಾರೆ. ಅವರ ಜೊತೆ ನಾವೆಲ್ಲರೂ ಗಟ್ಟಿಯಾಗಿ ಸದಾ ನಿಲ್ಲಬೇಕು

ವಚನಾನಂದ ಸ್ವಾಮೀಜಿ, ಹರಿಹರ ಪೀಠ

ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ಮುಸ್ಲಿಮರಿಗೆ ಶೇ 4ರಷ್ಟು ಮೀಸಲಾತಿ ನೀಡಿದ್ದನ್ನು ತೆಗೆದುಹಾಕುವ ಮೂಲಕ ಅಂಬೇಡ್ಕರ್ ಆಶಯಕ್ಕೆ ಪೂರಕವಾಗಿ ನಡೆದುಕೊಂಡಿದ್ದೇವೆ

ಪ್ರತಾಪ ಸಿಂಹ, ಸಂಸದ

'2022ರ ಡಿಸೆಂಬರ್ 26ರಂದು ಬೊಮ್ಮಾಯಿ ಸರ್ಕಾರ ಪರಿಶಿಷ್ಟ ಜಾತಿ ಮೀಸಲಾತಿಯನ್ನು ಶೇ 15 ರಿಂದ ಶೇ 17ಕ್ಕೆ ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ 3 ರಿಂದ ಶೇ7ಕ್ಕೆ ಹೆಚ್ಚಿಸಿತು. ಇದರೊಂದಿಗೆ ರಾಜ್ಯದಲ್ಲಿ ಮೀಸಲಾತಿ ಪ್ರಮಾಣ ಶೇ 56ಕ್ಕೆ ಏರಿತು. ಇದಕ್ಕೆ ಕಾನೂನಿನ ಮಾನ್ಯತೆ ಪಡೆಯಲು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಸಂವಿಧಾನದ 9ನೇ ಪರಿಚ್ಛೇದದಲ್ಲಿ ಸೇರಿಸಬೇಕು ಅಥವಾ ಸಂವಿಧಾನಕ್ಕೆ ತಿದ್ದುಪಡಿ ತಂದು ಮೀಸಲಾತಿ ಮಿತಿಯನ್ನು ವಿಸ್ತರಿಸಬೇಕು. ಆದರೆ, ಇಂತಹ ಯಾವುದೇ ಕಾರ್ಯವನ್ನು ಬಿಜೆಪಿ ಸರ್ಕಾರ ಕೈಗೊಂಡಿಲ್ಲ' ಎಂದು ದೂರಿದರು.

ಜೇನ್ಗೊಣಗಳಿಂದ ಕಚ್ಚಿಸಿಕೊಂಡೂ ಸಿಹಿ ಹಂಚಿರುವೆ: ಬೊಮ್ಮಾಯಿ

ಒಂದನೇ ಪುಟದಿಂದ...

'ಕಳೆದ ಸಲ ತಮ್ಮ ಸರ್ಕಾರವಿದ್ದಾಗಲೂ ಕೈ ಕೊಟ್ಟಿತ್ತು. ಬಿಜೆಪಿಗೆ ಏನೂ ಮಾಡಲಾಗುವುದಿಲ್ಲ ಎಂದು ಕಾಂಗ್ರೆಸ್‌ನವರು ಅಂದುಕೊಂಡಿದ್ದರು. ನಮಗೆ ಬದ್ಧತೆ ಇದೆ. ಮೀಸಲಾತಿಗೆ ಸಂಬಂಧಿಸಿದ ವರದಿ ಅಧ್ಯಯನ ಮಾಡಿ, ಸಂಪುಟ ಸಮಿತಿ ರಚಿಸಿ ಅಂತಿಮ ನಿರ್ಧಾರ ಕೈಗೊಂಡಿದ್ದೇವೆ' ಎಂದು ತಿಳಿಸಿದರು.

'ನಾವು ಮಾಡಲಾಗದ್ದನ್ನು ಬಿಜೆಪಿ ಮಾಡಿದೆ ಎಂಬ ಹತಾಶ ಭಾವನೆ ಕಾಂಗ್ರೆಸ್‌ನವರದ್ದು. ಅವರು ಯಾವಾಗಲೂ ಎಸ್‌ಸಿ, ಎಸ್‌ಟಿ ಹಾಗೂ ಒಬಿಸಿಗಳನ್ನು ಯಾಮಾರಿಸಿಕೊಂಡು ಬಂದಿದ್ದಾರೆ. ಅನುಕಂಪದ ಹೇಳಿಕೆಗಳನ್ನು ನೀಡಿ, ಈ ಸಲ ಮತ ಪಡೆಯಬಹುದು ಎಂದುಕೊಂಡಿದ್ದರು. ಆದರೆ, ಈ ವಿಷಯದಲ್ಲಿ ನಿರ್ಣಯ ಮಾಡುವ ಸರ್ಕಾರವಿದೆ ಎಂಬುದು ಅವರಿಗೆ ಗೊತ್ತಿರಲಿಲ್ಲ. ಅಭಿವೃದ್ಧಿ ಸೇರಿದಂತೆ ಎಲ್ಲಾ ವಿಷಯಗಳನ್ನು ಚರ್ಚಿಸಿ ನಾವು ತೀರ್ಮಾನ ಕೈಗೊಂಡಿದ್ದೇವೆ' ಎಂದು ಕಾಂಗ್ರೆಸ್ ಟೀಕೆಗೆ ತಿರುಗೇಟು ನೀಡಿದರು.

ಅಲ್ಪಸಂಖ್ಯಾತರ ಹಿತರಕ್ಷಣೆ: 'ಅಲ್ಪಸಂಖ್ಯಾತ ಮುಸ್ಲಿಮರ ಶೇ 4ರಷ್ಟು ಮೀಸಲಾತಿಯನ್ನು ರದ್ದುಪಡಿಸಿ, ಇಡಬ್ಲ್ಯುಎಸ್‌ನಲ್ಲಿ ಅವರಿಗೆ ಶೇ 10 ರಷ್ಟು ಮೀಸಲಾತಿ ನೀಡಲಾಗಿದೆ. ಹೀಗಿರುವಾಗ ಅವರಿಗೆ ಹೇಗೆ ಅನ್ಯಾಯವಾಗುತ್ತದೆ? ಹಿಂದಿನ ಮೀಸಲಾತಿಯಲ್ಲಿದ್ದ ಆರ್ಥಿಕ ಮಾನದಂಡ ಹಾಗೂ ಷರತ್ತುಗಳು ಈಗಲೂ ಅನ್ವಯವಾಗುತ್ತವೆ. ಅಲ್ಪ ಸಂಖ್ಯಾತರ ಹಿತರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡೇ ಸರ್ಕಾರ ನಿರ್ಧಾರ ಕೈಗೊಂಡಿದೆ. ಈ ವಿಷಯದಲ್ಲಿ ದಾರಿ ತಪ್ಪಿಸುವ ಅವಶ್ಯಕತೆ ಇಲ್ಲ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಸ್ವಾಮೀಜಿಗಳ ಮೇಲೆ ಒತ್ತಡ ತಂದಿಲ್ಲ: 'ಚುನಾವಣಾ ಲಾಭಕ್ಕಾಗಿ ನಾನು ರಾಜಕಾರಣ ಮಾಡುವುದಿಲ್ಲ. ಸಣ್ಣತನದ ರಾಜಕಾರಣ ನನ್ನ ಪದಕೋಶದಲ್ಲೇ ಇಲ್ಲ. ಪಂಚಮಸಾಲಿ ಗುರುಗಳ ಮೇಲೆ ಒತ್ತಡ ತಂದಿದ್ದೇನೆ ಎಂದು ವಿರೋಧ ಪಕ್ಷದ ನಾಯಕರೊಬ್ಬರು ದೂರಿದ್ದಾರೆ. ಪ್ರಮಾಣ ಮಾಡಿ ಹೇಳುತ್ತೇನೆ, ನಾನು ಯಾವುದೇ ಸ್ವಾಮೀಜಿಯ ಮೇಲೆ ಒತ್ತಡ ತಂದಿಲ್ಲ. ಮೀಸಲಾತಿ ಕೊಟ್ಟರೆ ಒಪ್ಪಿಕೊಳ್ಳಬೇಡಿ ಎಂದು ಸ್ವಾಮೀಜಿಯವರ ಮೇಲೆ ಕೆಲವರು ಒತ್ತಡ ಹೇರಿದ್ದರು. ಇದರಿಂದಲೇ ಮೀಸಲಾತಿ ಕಲ್ಪಿಸುವುದು ತಡವಾಯಿತು' ಎಂದ ಬೊಮ್ಮಾಯಿ ಅವರು ಡಿ.ಕೆ. ಶಿವಕುಮಾರ್ ಅವರ ಆರೋಪಕ್ಕೆ ತಿರುಗೇಟು ನೀಡಿದರು.

'ಸರ್ಕಾರವನ್ನು ವಜಾಗೊಳಿಸಿ'

'ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗಿರುವ ಬಿಜೆಪಿ, ಕೇವಲ ರಾಜಕೀಯ ಗಿಮಿಕ್‌ಗಾಗಿ ಮೀಸಲಾತಿಯನ್ನು ವಿಂಗಡಿಸಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹರಿಹಾಯ್ದರು.

'ಸಂವಿಧಾನಕ್ಕೆ ಅಗೌರವ ತೋರಿರುವ ಈ ಸರ್ಕಾರವನ್ನು ತಕ್ಷಣವೇ ವಜಾ ಮಾಡಬೇಕು. ಮೀಸಲಾತಿ ಬಗ್ಗೆ ಗೊಂದಲ ಸೃಷ್ಟಿಸಿ ಜನರನ್ನು ಧರ್ಮ, ಜಾತಿ ಆಧಾರದ ಮೇಲೆ ಬಿಜೆಪಿ ವಿಭಜಿಸುತ್ತಿದೆ. 1995ರ ಮೇ ತಿಂಗಳಲ್ಲಿ ಅಲ್ಪಸಂಖ್ಯಾತರಿಗೆ ಮೀಸಲಾತಿ ಕಲ್ಪಿಸಲಾಗಿದೆ. ಈ ಮೀಸಲಾತಿ ರದ್ದುಪಡಿಸುವಂತೆ ಯಾವ ವರದಿ ಅಥವಾ ನ್ಯಾಯಾಲಯಗಳು ತೀರ್ಪು ನೀಡಿಲ್ಲ' ಎಂದರು.

'ಸ್ವಾಮೀಜಿಗಳನ್ನು ಬೆದರಿಸಿ ಒಪ್ಪಿಸಿದ್ದಾರೆ'

'ಹೊಸ ಮೀಸಲಾತಿ ವರ್ಗೀಕರಣ ಒಪ್ಪಿಕೊಳ್ಳುವಂತೆ ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಮತ್ತು ಆದಿಚುಂಚನಗಿರಿ ಪೀಠದ ನಿರ್ಮಲಾನಂದನಾಥ ಸ್ವಾಮೀಜಿ ಅವರನ್ನು ಸರ್ಕಾರ ಹೆದರಿಸಿ ಒಪ್ಪಿಸಿದೆ' ಎಂದು ಡಿ.ಕೆ. ಶಿವಕುಮಾರ್ ಆರೋಪಿಸಿದರು.

'ಸ್ವಾಮೀಜಿಗಳಿಗೆ ಈ ವಿಷಯದ ಬಗ್ಗೆ 25ಕ್ಕೂ ಹೆಚ್ಚು ಬಾರಿ ದೂರವಾಣಿ ಕರೆ ಮಾಡಲಾಗಿದೆ. ದಯವಿಟ್ಟು ಒಪ್ಪಿಕೊಳ್ಳಿ ಎಂದು ಪದೇ ಪದೇ ಕೋರಿದ್ದಾರೆ' ಎಂದರು.

'ಬೊಮ್ಮಾಯಿ ಕರ್ನಾಟಕದ ಶಕುನಿ'

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕರ್ನಾಟಕದ ಶಕುನಿ. ಆದರೆ, ಕರ್ನಾಟಕದ ಪಾಂಡವರನ್ನು ಸೋಲಿಸಲು ಬಿಜೆಪಿ ಮತ್ತು ಬೊಮ್ಮಾಯಿ ಅವರಿಗೆ ಸಾಧ್ಯವಿಲ್ಲ. 420 ಬೊಮ್ಮಾಯಿ ಸರ್ಕಾರ ಮೀಸಲಾತಿ ವಿಷಯದಲ್ಲಿ ರಾಜ್ಯದ ಜನರನ್ನು ವಂಚಿಸಿದೆ' ಎಂದು ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಪತ್ರಿಕಾಗೋಷ್ಠಿಯಲ್ಲಿ ವಾಗ್ದಾಳಿ ನಡೆಸಿದರು.

'ಬಿಜೆಪಿಗೆ ಯಾವ ಸಮುದಾಯಕ್ಕೂ ಮೀಸಲಾತಿ ನೀಡುವ ಉದ್ದೇಶ ಇಲ್ಲ. ಕೇವಲ 420 ಕಾರ್ಯಸೂಚಿ ಜಾರಿಗೊಳಿಸುವುದು ಮತ್ತು ಸಮುದಾಯಗಳನ್ನು ವಿಭಜಿಸಿ ದ್ವೇಷ ಬಿತ್ತುವ ಕಾರ್ಯದಲ್ಲಿ ತೊಡಗುವುದು ಈ ಪಕ್ಷದ ಉದ್ದೇಶವಾಗಿದೆ' ಎಂದು ಟೀಕಿಸಿದರು.

'ಹಾಡಾಗಿ ಹರಿದಾಳೆ' ಆತ್ಮಕಥೆ ಬಿಡುಗಡೆ ಸಮಾರಂಭದಲ್ಲಿ ಕವಿ ಎಚ್‌.ಎಸ್‌ ವೆಂಕಟೇಶಮೂರ್ತಿ

'ಸುಗಮ ಸಂಗೀತ: ತಾತ್ವಿಕ ತಳಹದಿ ಕಲ್ಪಿಸಿದ ಲೀಲಾವತಿ'

ಪ್ರಜಾವಾಣಿ ವಾರ್ತೆ



ನಗರದಲ್ಲಿ ಭಾನುವಾರ ನಡೆದ ಗೌರವ ವಂದನೆ, ಆತ್ಮಕಥೆ ಹಾಗೂ ಸಾಕ್ಷ್ಯಚಿತ್ರ ಬಿಡುಗಡೆ ಕಾರ್ಯಕ್ರಮದಲ್ಲಿ ಗಾಯಕಿ ಎಚ್‌ಆರ್‌ಲೀಲಾವತಿ (ಎಡದಿಂದ ಮೂರನೆಯವರು) ಅವರನ್ನು (ಎಡದಿಂದ) ಎಂ.ಆರ್‌ಕಮಲಾ, ಸಾಹಿತಿ ದೊಡ್ಡರಂಗೇಗೌಡ, ಕವಿ ಎಚ್‌ಎಸ್‌ವೆಂಕಟೇಶಮೂರ್ತಿ, ಬಿ.ಆರ್‌ಲಕ್ಷ್ಮಣರಾವ್‌, ಜಯಂತ್ ಕಾಯ್ಕಿಣಿ ಅಭಿನಂದಿಸಿದರು —ಪ್ರಜಾವಾಣಿ ಚಿತ್ರ

ಬೆಂಗಳೂರು: 'ಕಲಾವಿದರಿಗೂ ಕಷ್ಟಗಳಿರುತ್ತವೆ. ಅದನ್ನು ಮರೆಯಾಗಿಸಿ ಪ್ರೇಕ್ಷಕರ ಮನಸ್ಸಿನಲ್ಲಿ ಸಂತಸ ತರುವುದೇ ಕಲಾವಿದನ ದೊಡ್ಡ ಗುಣ' ಎಂದು ಕವಿ ಎಚ್‌.ಎಸ್‌. ವೆಂಕಟೇಶಮೂರ್ತಿ ಹೇಳಿದರು.

ನಗರದಲ್ಲಿ ಭಾನುವಾರ ನಡೆದ ಸುಗಮ ಸಂಗೀತ ಗಾಯಕಿ ಎಚ್‌.ಆರ್‌.ಲೀಲಾವತಿ–90 ಕಾರ್ಯಕ್ರಮದಲ್ಲಿ ಅವರ 'ಹಾಡಾಗಿ ಹರಿದಾಳೆ' ಆತ್ಮಕಥೆ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಗಾಯಕಿ ಎಚ್‌.ಆರ್‌. ಲೀಲಾವತಿ ಅವರು ಮುಳ್ಳು ಬೇಲಿಯಲ್ಲಿ ಅರಳಿದ ಮಲ್ಲಿಗೆಯ ಹೂವು ಎಂಬ ಮಾತು ಸತ್ಯ. ಅವರು ನಡೆದುಬಂದ ದಾರಿ ಅವಲೋಕಿಸಿದರೆ, ನಿಷ್ಠುರವಾದ ಕೆಂಡದ ಹಾಸಿಗೆ ಎಂಬುದು ಅರಿವಿಗೆ ಬರಲಿದೆ' ಎಂದರು.

'ಯಾರು ಅವರನ್ನು ಕೈಹಿಡಿದು ನಡೆಸಬೇಕಿತ್ತೋ ಅಂತಹ ಗುರುವೇ ಅವರ ಪಾಲಿಗೆ ಮುಳುವಾಗಿದ್ದರು. ಎಲ್ಲ ಹಿಂಸೆ, ಅವಮಾನ ಸಹಿಸಿಕೊಂಡೇ ಲೀಲಾವತಿ ಸಾಧನೆ ಮಾಡಿದವರು. ಗಾಯನದ ಮಾಧುರ್ಯ ಗಮನಿಸಿದರೆ ಅವರ ಬದುಕಿನ ಹಿಂದೆ ಈ ರೀತಿಯ ಅಗ್ನಿಕುಂಡವಿದೆ ಎಂಬುದು ಯಾರಿಗೂ ತಿಳಿಯುವುದಿಲ್ಲ. ಕಣ್ಣೀರು ಹಾಕದೇ ಸಂಗೀತಲೋಕದಲ್ಲಿ ಸಾಧನೆ ತೋರಿದರು' ಎಂದು ಪ್ರಶಂಸಿದರು.

'ಲೀಲಾವತಿ ಕನ್ನಡ ಅಸ್ಮಿತೆಗಳಲ್ಲಿ ಒಬ್ಬರು. ಸುಗಮ ಸಂಗೀತದ ಆರಂಭವು ಟಿ.ಕಾಳಿಂಗರಾಯರು, ಬಾಳಪ್ಪ ಹುಕ್ಕೇರಿ ಅವರಿಂದ ಆಗಿತ್ತು. ಇದಕ್ಕೆ ತಾತ್ವಿಕ ತಳಹದಿ ಕಲ್ಪಿಸಿದವರು ಲೀಲಾವತಿ' ಎಂದು ಬಣ್ಣಿಸಿದರು.

'ಲೀಲಾವತಿ ಅವರು ಆಕಾಶವಾಣಿ ಹಾಗೂ ತಮ್ಮ ಸಂಗೀತ ಕಛೇರಿಗಳಲ್ಲಿ ಶಿಸ್ತು ತಂದಿದ್ದರು. ಅವರು ಹಾಕಿಕೊಟ್ಟ ದಾರಿಯಲ್ಲಿ ನಮ್ಮ ಗಾಯಕರೂ ಸಾಗಿದರು. ಅನಂತಸ್ವಾಮಿ, ಶಿವಮೊಗ್ಗ ಸುಬ್ಬಣ್ಣ, ಅಶ್ವತ್ಥ್ ಮೊದಲಾದವರು ತಮ್ಮ ಕಛೇರಿಗಳಲ್ಲಿ ಭಾವಗೀತೆ ಬಿಟ್ಟು ಬೇರೆ ಹಾಡಲಿಲ್ಲ. ಈ ಪರಂಪರೆಯ ಆದಿಬಿಂದು ಲೀಲಾವತಿ. ಸುಗಮ ಸಂಗೀತಕ್ಕೆ ಮೇಲ್ಪಂಕ್ತಿ ಹಾಕಿಕೊಟ್ಟಿದ್ದರು' ಎಂದು ಅವರು ಹೇಳಿದರು.

ಸಾಕ್ಷ್ಯಚಿತ್ರ ಬಿಡುಗಡೆಗೊಳಿಸಿದ ನಿರ್ದೇಶಕ ಟಿ.ಎನ್‌.ಸೀತಾರಾಂ ಮಾತನಾಡಿ, 'ಲೀಲಾವತಿ ಅವರ ಗಾಯನಕ್ಕೆ ಕುವೆಂಪು ಅವರೇ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಲೀಲಾವತಿ ಅವರ ಹಾಡುಗಳು ಬಾಳಿನ ಪುಟಗಳಿಗೆ ನೇರವಾಗಿ ನಮ್ಮನ್ನು ಕರೆದೊಯ್ಯುತ್ತವೆ' ಎಂದು ಹೇಳಿದರು.

ವಿಕಾಸ ಪ್ರಕಾಶನದ ಆರ್‌. ಪೂರ್ಣಿಮಾ, 'ಲೀಲಾವತಿ ಧೈರ್ಯದಿಂದ ತಮ್ಮ ಜೀವನದಲ್ಲಿ ಆದ ಬದುಕಿನ ಕಥನ ಹೇಳಿಕೊಂಡಿದ್ದಾರೆ. ಅವರದ್ದು ಮಾದರಿ ವ್ಯಕ್ತಿತ್ವ' ಎಂದು ಹೇಳಿದರು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರು ವಚನಸಿರಿ ಕೃತಿ ಹಾಗೂ ಶ್ರೀರಾಘವೇಂದ್ರ ಲೀಲೆ ಭಾವಗೀತೆಗಳ ಸಿ.ಡಿ ಬಿಡುಗಡೆ ಮಾಡಿದರು.

ಎಚ್‌.ಆರ್‌.ಲೀಲಾವತಿ ಸಮ್ಮುಖದಲ್ಲಿ ರಾಗಭಾವ, ವೃಂದಗಾನ, ಕವಿ ಲೀಲಾ, ಕವಿ ಕಾವ್ಯ ಗಾಯನ ಹಾಗೂ ಗುರು ವಂದನೆ ಕಾರ್ಯಕ್ರಮಗಳು ನಡೆದವು.

ಸಂಕ್ಷಿಪ್ತ ಸುದ್ದಿ

ಕೊಚ್ಚಿ: ಕರಾವಳಿ ಕಾವಲುಪಡೆ ಹೆಲಿಕಾಪ್ಟರ್ ಪತನ

ತಿರುವನಂತಪುರ/ಕೊಚ್ಚಿ: ಕರಾವಳಿ ಕಾವಲು ಪಡೆಯ ಹೆಲಿಕಾಪ್ಟರ್ ಒಂದು ಕೊಚ್ಚಿಯ ನೆಡುಂಬಸ್ಸೇರಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭಾನುವಾರ ಟೇಕ್ ಆಫ್ ಆಗುತ್ತಿದ್ದಂತೆಯೇ ಪತನಗೊಂಡಿದ್ದು, ಅದರಲ್ಲಿದ್ದ ಮೂವರು ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾಗಿದ್ದಾರೆ. ಎಚ್‌ಎಎಲ್ ನಿರ್ಮಾಣದ ಸುಧಾರಿತ ಹಗುರ ಹೆಲಿಕಾಪ್ಟರ್‌ನ (ಎಎಲ್‌ಎಚ್) ತರಬೇತಿ ಹಾರಾಟದ ವೇಳೆ ಮಧ್ಯಾಹ್ನ 12.30ರ ಸುಮಾರಿಗೆ ಈ ಘಟನೆ ನಡೆದಿದ್ದು, ಟೇಕ್ ಆಫ್ ಆಗಿ 30ರಿಂದ 40 ಅಡಿ ಎತ್ತರಕ್ಕೆ ಹಾರುತ್ತಿದ್ದಂತೆಯೇ ತಾಂತ್ರಿಕ ದೋಷ ಕಾಣಿಸಿಕೊಂಡಿತು. ಈ ಹಂತದಲ್ಲಿ ಪೈಲಟ್ ತೋರಿದ ಅತ್ಯಂತ ಜಾಣ್ಮೆ ಮತ್ತು ಸಮಯ ಪ್ರಜ್ಞೆಯಿಂದಾಗಿ ಹೆಲಿಕಾಪ್ಟರ್ ಮುಖ್ಯ ರನ್‌ವೇಗೆ ಪತನವಾಗುವುದು ತಪ್ಪಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಒಂದೇ ದಿನ 1,890 ಕೋವಿಡ್ ಪ್ರಕರಣ

ನವದೆಹಲಿ (ಪಿಟಿಐ): ದೇಶದಲ್ಲಿ ಹೊಸದಾಗಿ 1,890 ಕೋವಿಡ್ ಪ್ರಕರಣಗಳು ವರದಿಯಾಗಿದ್ದು, ಏಳು ಮಂದಿ ಮೃತಪಟ್ಟಿದ್ದಾರೆ. ಸಕ್ರಿಯ ಪ್ರಕರಣಗಳ ಸಂಖ್ಯೆ 9,433ಕ್ಕೆ ಏರಿಕೆಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಈ ಮೂಲಕ 149 ದಿನಗಳಲ್ಲೇ ಗರಿಷ್ಠ ಕೊರೊನಾ ಸೋಂಕು ಪ್ರಕರಣ ದಾಖಲಾಗಿದೆ. ಕಳೆದ ವರ್ಷ ಅಕ್ಟೋಬರ್ 28ರಂದು ದೇಶದಲ್ಲಿ 2,208 ಪ್ರಕರಣ ದಾಖಲಾಗಿತ್ತು.

ಕೋವಿಡ್‌ನಿಂದ ಕೇರಳದಲ್ಲಿ ಮೂರು ಮಂದಿ ಮೃತಪಟ್ಟಿದ್ದಾರೆ. ಇನ್ನು ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಲ್ಲಿ ತಲಾ ಇಬ್ಬರು ಸೋಂಕಿನಿಂದ ಮೃತಪಟ್ಟಿದ್ದಾರೆ. ದೇಶದಲ್ಲಿ ಇದುವರೆಗೆ 4.47 ಕೋಟಿ (4,47,04,147) ಮಂದಿಗೆ ಸೋಂಕು ತಗುಲಿದೆ.

ಸುಧಾ, ಮಯೂರ ಓದಿರಿ

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **'ಪಿವಿ ಬ್ರ್ಯಾಂಡ್ ಸ್ಪಾಟ್'**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಬಡ ಮಕ್ಕಳಿಗೆ ಉಚಿತ ವೈದ್ಯಕೀಯ ಶಿಕ್ಷಣ ನೀಡುವ ದೇಶದ ಮೊದಲ ಕಾಲೇಜು

ಸತ್ಯಸಾಯಿ ಗ್ರಾಮದಲ್ಲಿ ಉಚಿತ ವೈದ್ಯಕೀಯ ಶಿಕ್ಷಣ

ಚಿಕ್ಕಬಳ್ಳಾಪುರ: ದೇಶದ ಮೊದಲ ಉಚಿತ ವೈದ್ಯಕೀಯ ಶಿಕ್ಷಣ ಕಾಲೇಜು ತಾಲ್ಲೂಕಿನ ಮುದ್ದೇನಹಳ್ಳಿಯ ಸತ್ಯಸಾಯಿ ಗ್ರಾಮದಲ್ಲಿ ಕಾರ್ಯಾರಂಭ ಮಾಡಿದೆ.



ಸದ್ಗುರು ಮಧುಸೂದನ ಸಾಯಿ

ಪ್ರಸಕ್ತ (2023-24) ಶೈಕ್ಷಣಿಕ ಸಾಲಿನಿಂದಲೇ ವೈದ್ಯಕೀಯ ಕಾಲೇಜು ಆರಂಭಗೊಳ್ಳಲಿದ್ದು, ಅಗತ್ಯ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಕಾಲೇಜಿನಲ್ಲಿ ಶಿಕ್ಷಣ ಮತ್ತು ಆರೋಗ್ಯ ಸೇವೆ ಸಂಪೂರ್ಣವಾಗಿ ಉಚಿತ.

ಸತ್ಯಸಾಯಿ ಸರಳ ಸ್ಮಾರಕ ಆಸ್ಪತ್ರೆಯಲ್ಲಿ ಯಾವುದೇ ಚಿಕಿತ್ಸೆ ಇರಲಿ ಒಂದು ಪೈಸೆ ಶುಲ್ಕವನ್ನೂ ಪಡೆಯುವುದಿಲ್ಲ. ಇಲ್ಲಿ ಎಲ್ಲವೂ ಉಚಿತ. 'ಇಲ್ಲಿ ಎಲ್ಲ ಸೇವೆಗಳು ಉಚಿತ. ಹಾಗಾಗಿ ಬಿಲ್ ಕೌಂಟರ್ ಇಲ್ಲ' ಎಂದೇ ಫಲಕಗಳನ್ನು ಹಾಕಲಾಗಿದೆ.


ಸತ್ಯಸಾಯಿ ಗ್ರಾಮದಲ್ಲಿ ₹400 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ ಮಧುಸೂದನ ಸಾಯಿ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯನ್ನು ಪ್ರಧಾನಿ ನರೇಂದ್ರ ಮೋದಿ ಶನಿವಾರ ಲೋಕಾರ್ಪಣೆ ಮಾಡಿದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು 2022ರ ಏ. 1ರಂದು ಕಾಲೇಜು ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದರು. 3,25,000 ಚದರ ಅಡಿ ವಿಸ್ತಾರದಲ್ಲಿ ಆಸ್ಪತ್ರೆ, ಬೋಧನಾ ವಿಭಾಗ, ವಿದ್ಯಾರ್ಥಿ ನಿಲಯ, ಸಭಾಭವನ, ನೌಕರರ ವಸತಿಗೃಹಗಳು ಮತ್ತು ಕ್ರೀಡಾ ಸೌಲಭ್ಯ ಒಳಗೊಂಡಿದೆ.

ವೈದ್ಯಕೀಯ ಪದವಿ ಕೋರ್ಸ್ ಪ್ರವೇಶ ಅರ್ಹತೆ ನಿರ್ಧರಿಸುವ ಎನ್‌ಇಇಟಿ (ನೀಟ್) ಅರ್ಹತೆಗಳಿಸಿದ ವಿದ್ಯಾರ್ಥಿಗಳು ಉಟ್ಟ ಬಟ್ಟೆಯಲ್ಲಿ ಕಾಲೇಜಿಗೆ ಬಂದರೆ ಸಾಕು. ಉಳಿದೆಲ್ಲ ಅವಶ್ಯಕತೆಗಳನ್ನೂ ಕಾಲೇಜಿನ ಸ್ಥಾಪಕ ಸಂಸ್ಥೆಯಾದ ಪ್ರಶಾಂತಿ ಬಾಲಮಂದಿರ ಟ್ರಸ್ಟ್ ನೋಡಿಕೊಳ್ಳುತ್ತದೆ.

ಇದಕ್ಕೆ ತಗುಲಿದ ಎಲ್ಲ ವೆಚ್ಚವನ್ನೂ ಪ್ರಪಂಚದಾದ್ಯಂತ ಇರುವ ಸಮಾನಮನಸ್ಕರ ಬೆಂಬಲದಿಂದ ಭರಿಸಲಾಗುತ್ತದೆ. ಯಾವುದೇ ಲಾಭದ ಒತ್ತಡ ಇಲ್ಲದಿರುವುದರಿಂದ, ಇದೊಂದು ಮಾದರಿಯ ವೈದ್ಯಕೀಯ ಶಿಕ್ಷಣ ಸಂಸ್ಥೆಯಾಗಿದೆ.

ಕಾಲೇಜು ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ, 'ಸತ್ಯಸಾಯಿ ಗ್ರಾಮವು ದೇಶಕ್ಕೆ ಸೇವೆಯ ಒಂದು ಅದ್ಭುತ ಮಾದರಿಯನ್ನು ಕೊಟ್ಟಿದೆ. ಪೌಷ್ಟಿಕತೆ, ಶಿಕ್ಷಣ ಹಾಗೂ ಆರೋಗ್ಯ ಸೇವಾ ಕ್ಷೇತ್ರಗಳಲ್ಲಿ ಇಲ್ಲಿ ನಡೆಯುತ್ತಿರುವ ನಿಸ್ವಾರ್ಥ ಸೇವೆಗಳು ನಿಜಕ್ಕೂ ಪ್ರಶಂಸಾರ್ಹ' ಎಂದು ಆಶಿಸಿದರು.



ಚಿಕ್ಕಬಳ್ಳಾಪುರದ ಸತ್ಯಸಾಯಿ ಗ್ರಾಮದಲ್ಲಿ ನಿರ್ಮಾಣವಾಗಿರುವ ಮಧುಸೂದನ ಸಾಯಿ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಕಾಲೇಜು

ವೈದ್ಯಳಾಗುವ ವಿದ್ಯಾರ್ಥಿನಿಯ ಹಂಬಲವೇ ಈ ಕಾಲೇಜಿಗೆ ಮುನ್ನುಡಿ

'ಏಳು ವರ್ಷಗಳ ಹಿಂದೆ ನಮ್ಮ ವಿದ್ಯಾಸಂಸ್ಥೆಯಲ್ಲಿ ದ್ವಿತೀಯ ಪಿಯುಸಿ ಓದುತ್ತಿದ್ದ ಹುಡುಗಿಯೊಬ್ಬಳು ಹಳ್ಳಿಯ ಜನರಿಗೆ ಸೇವೆ ಮಾಡಬೇಕು. ಇದಕ್ಕಾಗಿ ವೈದ್ಯಳಾಗಬೇಕು ಎಂದು ಆಸೆ ವ್ಯಕ್ತಪಡಿಸಿದ್ದಳು. ನಾವು ಅವಳ ಪ್ರಾಮಾಣಿಕ ಉದ್ದೇಶ ಮೆಚ್ಚಿದೆವು. ಅವಳಿಗೆ ವೈದ್ಯಕೀಯ ಶಿಕ್ಷಣ ಕೊಡಿಸಿದೆವು. ಇಂದು ಅವಳು ಒಬ್ಬ ವೈದ್ಯೆಯಾಗಿ ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾಳೆ' ಎಂದು ಸತ್ಯಸಾಯಿ ಗ್ರಾಮದ ಸದ್ಗುರು ಮಧುಸೂದನ ಸಾಯಿ ಹೇಳುತ್ತಾರೆ.

ಹಾಗಾಗಿ ವೈದ್ಯಕೀಯ ಶಿಕ್ಷಣ ಮತ್ತು ಸೇವೆಯ ಆಸಕ್ತಿಯುಳ್ಳ, ಶಿಕ್ಷಣ ವೆಚ್ಚ ಭರಿಸಲು ಸಾಧ್ಯವಾಗದ ಗ್ರಾಮೀಣ ವಿದ್ಯಾರ್ಥಿಗಳಿಗೂ ಉಚಿತ ವೈದ್ಯಕೀಯ ಶಿಕ್ಷಣ ಸೌಲಭ್ಯ ವಿಸ್ತರಿಸಲು ನಿರ್ಧರಿಸಿದೆವು. ಅದರ ಫಲವಾಗಿ ಉಚಿತ ವೈದ್ಯಕೀಯ ಕಾಲೇಜು ನಿರ್ಮಾಣವಾಗಿದೆ. ಸರ್ಕಾರ, ಸಮಾಜ ಮತ್ತು ಸಂಸ್ಥೆ ಜೊತೆಯಾದರೆ ಏನನ್ನು ಬೇಕಾದರೂ ಸಾಧಿಸಬಹುದು. ಇದಕ್ಕೆ ಕಾಲೇಜು ನಿದರ್ಶನ ಎಂದು ಹೇಳಿದರು.

ರಾಜ್ಯದಲ್ಲಿ ಎರಡು ದಿನ ಗುಡುಗು ಸಹಿತ ಮಳೆ

ಬೆಂಗಳೂರು: ರಾಜ್ಯದ ಹಲವೆಡೆ ಮುಂದಿನ ಎರಡು ದಿನಗಳ ಕಾಲ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ದಕ್ಷಿಣ ಒಳನಾಡಿನ ಚಿಕ್ಕಬಳ್ಳಾಪುರ, ಬೆಂಗಳೂರು, ಕೋಲಾರ, ಮೈಸೂರು, ರಾಮನಗರ, ಚಾಮರಾಜನಗರ, ಮಂಡ್ಯ ಜಿಲ್ಲೆಗಳಲ್ಲಿ ಮಳೆಯಾಗಲಿದೆ ಎಂದು ತಿಳಿಸಿದೆ.ಕರಾವಳಿ ಹಾಗೂ ಉತ್ತರ ಒಳನಾಡಿನ ಕೆಲವೆಡೆ ಉಷ್ಣಾಂಶವು ಸಾಮಾನ್ಯಕ್ಕಿಂತ 2 ರಿಂದ 3 ಡಿಗ್ರಿ ಸೆಲ್ಸಿಯಸ್ ಕಡಿಮೆಯಾಗುವ ಸಾಧ್ಯತೆ ಇದೆ. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಸಂಜೆ ಅಥವಾ ರಾತ್ರಿ ಗುಡುಗು ಸಹಿತ ಹಗುರ ಮಳೆಯಾಗಲಿದೆ. ಕಲುಬುರಗಿಯಲ್ಲಿ ಭಾನುವಾರ ಗರಿಷ್ಠ ಉಷ್ಣಾಂಶ 38.8 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು ಎಂದು ಐಎಂಡಿ ತಿಳಿಸಿದೆ.

ಶಿರಸಿ: ಡಿಜಿಟಲೀಕರಣಗೊಂಡ 5.5 ಲಕ್ಷ ಕಂದಾಯ ದಾಖಲೆಗಳು

ಕ್ಷಣಾರ್ಧದಲ್ಲಿ ಕಂದಾಯ ದಾಖಲೆ ಲಭ್ಯ

● ರಾಜೇಂದ್ರ ಹೆಗಡೆ

ಶಿರಸಿ: ದೂಳು ತಿನ್ನುತ್ತಿದ್ದ ಲಕ್ಷಾಂತರ ಕಡತಗಳನ್ನು ಕೋಡಿಂಗ್ ಮೂಲಕ ಡಿಜಿಟಲೀಕರಣಗೊಳಿಸಿ ಜನಸಾಮಾನ್ಯರಿಗೆ ತ್ವರಿತ ಸೇವೆ ಒದಗಿಸುವ ಕಾರ್ಯ ಶಿರಸಿ ಉಪವಿಭಾಗ ಕಚೇರಿಯಲ್ಲಿ ನಡೆದಿದೆ. ದಾನಿಯೊಬ್ಬರ ಸಹಕಾರದಿಂದ ಕಂದಾಯ ಕಡತ ನಿರ್ವಹಣೆ ಅಚ್ಚುಕಟ್ಟಾಗಿ ದಾಖಲೀಕರಣ ಮಾಡುವ ಪ್ರಯತ್ನ ನಡೆದಿರುವುದು ರಾಜ್ಯದಲ್ಲೇ ಮಾದರಿಯಾಗಿದೆ.

ಶಿರಸಿ ಉಪವಿಭಾಗ ವ್ಯಾಪ್ತಿಯ ಶಿರಸಿ, ಸಿದ್ದಾಪುರ, ಯಲ್ಲಾಪುರ ಮತ್ತು ಮುಂಡಗೋಡ ತಾಲ್ಲೂಕುಗಳಿಗೆ ಸೇರಿದ ಹಳೆ ಮಂಜೂರಿ ಆದೇಶಗಳು, ಅರೆ ನ್ಯಾಯಿಕ ತೀರ್ಪುಗಳು, ಆರ್‌.ಆರ್‌.ಟಿ ಪ್ರಕರಣಗಳ ದಾಖಲೆಗಳು, ಇಲಾಖೆ ಮೂಲ ದಾಖಲೆಗಳನ್ನು ಉಪವಿಭಾಗೀಯ ಕಚೇರಿ ಮಹಡಿ ಮೇಲೆ ಬಟ್ಟೆ ಚೀಲಗಳಲ್ಲಿ ಅನೇಕ ವರ್ಷಗಳಿಂದ ಸಂಗ್ರಹಿಸಿಡಲಾಗಿತ್ತು. ವ್ಯವಸ್ಥಿತ ಜಾಗ, ಕಪಾಟುಗಳ ಕೊರತೆ ಕಾರಣ ದಾಖಲೆಗಳು ಅಸ್ತವ್ಯಸ್ತವಾಗಿದ್ದವು.

ಉಪವಿಭಾಗಾಧಿಕಾರಿ ಕಚೇರಿಯಲ್ಲಿ 5.5 ಲಕ್ಷದಷ್ಟು ದಾಖಲೆ ಡಿಜಿಟಲೀಕರಣ ಮಾಡಿದ ಬಗ್ಗೆ ಸರ್ಕಾರಕ್ಕೆ ವರದಿ ನೀಡಲಾಗಿದೆ.
ಪ್ರಭುಲಿಂಗ ಕವಳಿಕಟ್ಟ, ಜಿಲ್ಲಾಧಿಕಾರಿ ಉತ್ತರ ಕನ್ನಡ

ಉದ್ಯಮಿ ಶ್ರೀನಿವಾಸ ಹೆಬ್ಬಾರ್ ಡಿಜಿಟಲೀಕರಣ ಕಾರ್ಯಕ್ಕೆ ₹4.50 ಲಕ್ಷ ದೇಣಿಗೆ ನೀಡಿದ್ದರ ಪರಿಣಾಮ ದಾಖಲೆಗಳ ಸಂರಕ್ಷಣೆ ಮಾಡಲಾಗಿದೆ.
ದೇವರಾಜ್ ಆರ್, ಶಿರಸಿ ಉಪವಿಭಾಗಾಧಿಕಾರಿ

ಕಾರ್ಯ ನಿಮಿತ್ತ ಕಚೇರಿಗೆ ಬರುವ ಜನರಿಗೆ ಹಳೆಯ ದಾಖಲೆ ಪ್ರತಿ ಬೇಕೆಂದರೆ ತಿಂಗಳುಗಟ್ಟಲೇ ಕಾಲಾವಕಾಶ ಪಡೆದು ಪೂರೈಸಬೇಕಾಗಿತ್ತು. ಇದರಿಂದ ಸಮಯ ವ್ಯರ್ಥ ಹಾಗೂ ಕಡತಗಳ ಆಯಸ್ಸು ಕ್ಷೀಣಿಸುವ ಆತಂಕವಿತ್ತು.


ಕಾರ್ಯನಿಮಿತ್ತ ಉಪವಿಭಾಗಾಧಿಕಾರಿ ಕಚೇರಿಗೆ ತೆರಳಿದ್ದ ಉದ್ಯಮಿ ಶ್ರೀನಿವಾಸ್ ಹೆಬ್ಬಾರ್ ಅವರು, ವ್ಯವಸ್ಥೆ ಸುಧಾರಣೆ ಹಿನ್ನೆಲೆಯಲ್ಲಿ ಉಪವಿಭಾಗಾಧಿಕಾರಿ ದೇವರಾಜ್ ಆರ್‌. ಜೊತೆ ಚರ್ಚಿಸಿ ಡಿಜಿಟಲೀಕರಣಕ್ಕೆ ಅಗತ್ಯವಿರುವ ಮೊತ್ತ ನೀಡುವುದಾಗಿ ತಿಳಿಸಿದ್ದರು.

ದಾಖಲೆಗಳ ಡಿಜಿಟಲೀಕರಣ: 400 ವಿವಿಧ ಮಾದರಿಯ 5.5 ಲಕ್ಷಕ್ಕೂ ಹೆಚ್ಚಿನ ಕಂದಾಯ ದಾಖಲೆಗಳನ್ನು ಸಂಪೂರ್ಣ ಸ್ಕ್ಯಾನ್ ಮಾಡಿಸುವ ಜೊತೆ ಕೋಡಿಂಗ್ ಮಾಡಿ ಡಿಜಿಟಲೀಕರಣ ಮಾಡಿಸಲಾಗಿದೆ. ಕೋಡ್‌ಗಳುಳ್ಳ ಕಡತಗಳಿಗೆ ಟ್ಯಾಗ್ ಲಗತ್ತಿಸಿ ಯಾವುದೇ ಕಾಲದ ದಾಖಲೆ ವಿಳಂಬವಿಲ್ಲದೆ ಸಿಗುವಂತೆ ಮಾಡಲಾಗಿದೆ.

ಬೆಳಗಾವಿ ಮೂಲದ ಸ್ವಯಂ ಸೇವಾ ಸಂಸ್ಥೆಗೆ ಈ ಕಾರ್ಯ ವಹಿಸಲಾಗಿತ್ತು. ಆರು ತಿಂಗಳು ಸತತವಾಗಿ 4 ಸ್ಕ್ಯಾನರ್‌ಗಳ ಮೂಲಕ ಸಮಗ್ರ ದಾಖಲೆಗಳ ಡಿಜಿಟಲೀಕರಣ ಕಾರ್ಯ ಪೂರ್ಣಗೊಳಿಸಲಾಗಿದ್ದು, ಜನಸೇವೆಗೆ ಮುಕ್ತಗೊಂಡಿದೆ.

ಈ ಕಾರಣದಿಂದ ಪ್ರಸ್ತುತ ದಾಖಲೆಗಳ ಪರಿಶೀಲನೆ, ಸಾರ್ವಜನಿಕರಿಗೆ ಪ್ರತಿಗಳ ವಿತರಣೆ ಕ್ಷಣಾರ್ಧದಲ್ಲಿ ನಡೆಯುತ್ತಿದೆ.

ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಇಚ್ಛಾಶಕ್ತಿಯಿಂದ ನಿರ್ಮಾಣವಾದ ಕಾಲೇಜು



ಚಿಕ್ಕಬಳ್ಳಾಪುರ: ನಂದಿ ವೈದ್ಯಕೀಯ ಕಾಲೇಜಿಗೆ ಉದ್ಘಾಟನೆ ಸಂಭ್ರಮ

ಚಿಕ್ಕಬಳ್ಳಾಪುರ: ರಾಜಕೀಯ ನಾಯಕರಿಗೆ ಅಭಿವೃದ್ಧಿಯ ಇಚ್ಛಾಶಕ್ತಿ ಇದ್ದರೆ ಪಟ್ಟು ಹಿಡಿದ ಕೆಲಸವನ್ನು ಸಾಧಿಸಿಯೇ ತೀರುತ್ತಾರೆ–ಈ ಮಾತು ಅಕ್ಷರಶಃ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಅವರಿಗೆ ಅನ್ವಯವಾಗುತ್ತದೆ.

ಚಿಕ್ಕಬಳ್ಳಾಪುರ ಜಿಲ್ಲೆಗೆ ವೈದ್ಯಕೀಯ ಶಿಕ್ಷಣ ಕಾಲೇಜು ತರಬೇಕು ಎನ್ನುವ ಅವರ ಕನಸು ನನಸಾಗಿದೆ. ಆ ಮೂಲಕ ಇಡೀ ಜಿಲ್ಲೆಯ ಜನರಷ್ಟೇ ಅಲ್ಲ ನೆರೆ ಹೊರೆಯ ಜಿಲ್ಲೆಗಳ ಜನರ ಆರೋಗ್ಯ ಸುಧಾರಣೆಗೆ ಮತ್ತು ಗ್ರಾಮೀಣ ಪ್ರತಿಭಾವಂತ ವಿದ್ಯಾರ್ಥಿಗಳ ವೈದ್ಯಕೀಯ ಶಿಕ್ಷಣದ ಓದಿನ ಆಸೆಗೆ ಕಾಲೇಜು ಒತ್ತಾಸೆಯಾಗಿದೆ.

₹ 810 ಕೋಟಿ ವೆಚ್ಚದಲ್ಲಿ ಚಿಕ್ಕಬಳ್ಳಾಪುರ ತಾಲ್ಲೂಕಿನ ಪೆರೇಸಂದ್ರ ಬಳಿಯ ಅರೂರು ಗ್ರಾಮದ ಬಳಿ ಭವ್ಯವಾದ ಮತ್ತು ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಎಲ್ಲ ರೀತಿಯ ಅನುಕೂಲವನ್ನು ನೀಡಬಲ್ಲ 'ನಂದಿ ವೈದ್ಯಕೀಯ ಶಿಕ್ಷಣ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ' ತಲೆ ಎತ್ತಿದೆ. ಜಿಲ್ಲೆಯ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಕ್ಷೇತ್ರದ ಸೌಲಭ್ಯ ವಿಚಾರದಲ್ಲಿ ಈ ಕಾಲೇಜು ಮಹತ್ವದ ಮೈಲಿಗಲ್ಲು.

60 ಎಕರೆ ವಿಸ್ತೀರ್ಣದ ಪ್ರದೇಶ ಕಾಲೇಜಿನ ವ್ಯಾಪ್ತಿಗೆ ಇದೆ. 1,20,805.25 ಮೀಟರ್ ಜಾಗದಲ್ಲಿ ಭವ್ಯವಾದ ಕಾಲೇಜಿನ ಕಟ್ಟಡಗಳು, ಗ್ರಂಥಾಲಯ, ಹಾಸ್ಟೆಲ್‌ಗಳು ನಿರ್ಮಾಣವಾಗಿವೆ. ಕಾಲೇಜು ಕಟ್ಟಡ ನಾಲ್ಕು ಅಂತಸ್ತಿನಲ್ಲಿ ನಿರ್ಮಾಣವಾಗಿದೆ.

ಸೋಮವಾರ (ಮಾ.27) ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಮನ್ಸುಖ್ ಎಲ್.ಮಾಂಡವಿಯಾ ಅವರು ಕಾಲೇಜಿನ ಕಟ್ಟಡವನ್ನು ಉದ್ಘಾಟಿಸುವರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಉಪಸ್ಥಿತಿಯಲ್ಲಿ ಕಾರ್ಯಕ್ರಮ ನಡೆಯಲಿದೆ. ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಅಧ್ಯಕ್ಷತೆ ವಹಿಸಲಿದ್ದಾರೆ.

ಚಿಕ್ಕಬಳ್ಳಾಪುರದಲ್ಲಿ ವೈದ್ಯಕೀಯ ಕಾಲೇಜು ನಿರ್ಮಾಣವಾಗಬೇಕು ಎನ್ನುವುದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಅವರ ಆಸೆ. ಈ ಆಸೆ ಅವರು ಸಚಿವರಾದ ನಂತರ ಅವರಿಗೆ ಬಂದಿದ್ದಲ್ಲ. ಡಾ.ಕೆ.ಸುಧಾಕರ್ ಅವರು ವೈದ್ಯಕೀಯ ಶಿಕ್ಷಣವನ್ನು ಕಲಿಯುವ ದಿನಗಳಲ್ಲಿಯೇ ಚಿಕ್ಕಬಳ್ಳಾಪುರಕ್ಕೊಂದು ಸರ್ಕಾರಿ ವೈದ್ಯಕೀಯ ಶಿಕ್ಷಣ ಕಾಲೇಜು ಅಗತ್ಯ ಎನಿಸಿತ್ತು. ನಂತರ ಚಿಕ್ಕಬಳ್ಳಾಪುರ ತಾಲ್ಲೂಕಿನ ಜನರು ಡಾ.ಕೆ.ಸುಧಾಕರ್ ಅವರಿಗೆ ರಾಜಕೀಯ ಶಕ್ತಿಯನ್ನು ತುಂಬಿದ ನಂತರ ಅವರು ಸಚಿವರೂ ಆದರು. ತಮ್ಮ ಇಚ್ಛಾಶಕ್ತಿಯಿಂದ 'ಪ್ರಬಲ'ರ ಜತೆ ಹೋರಾಟ ನಡೆಸಿ ಚಿಕ್ಕಬಳ್ಳಾಪುರ ಜಿಲ್ಲೆಗೆ ವೈದ್ಯಕೀಯ ಶಿಕ್ಷಣ ಕಾಲೇಜು ಸಹ ಮಂಜೂರು ಮಾಡಿಸಿದರು.

2019ರ ನವೆಂಬರ್‌ನಲ್ಲಿ ಕಾಲೇಜಿಗೆ ಭೂಮಿ ಪೂಜೆ ನೆರವೇರಿದಾಗ ಕಾಲೇಜು ನಿರ್ಮಾಣಕ್ಕೆ ₹ 525 ಕೋಟಿ ಯೋಜನಾ ವೆಚ್ಚವನ್ನು ತಯಾರಿಸಲಾಗಿತ್ತು. ನಂತರ ನಿರ್ಮಾಣಕ್ಕೆ ಸಂಬಂಧಿಸಿದ ಸಲಕರಣೆಗಳು, ವಸ್ತುಗಳ ಬೆಲೆಗಳು ಹೆಚ್ಚಾದ ಕಾರಣ ₹ 810 ಕೋಟಿಗೆ ಯೋಜನಾ ವೆಚ್ಚ ತಲುಪಿತು.

ವೈದ್ಯಕೀಯ ಕಾಲೇಜು ಕಟ್ಟಡ ಕಾಮಗಾರಿ ಕೇವಲ 36 ತಿಂಗಳಲ್ಲಿ ಪೂರ್ಣವಾಗಿರುವುದು ವಿಶೇಷ. ನಿಕಟಪೂರ್ವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕಾಲೇಜು ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದರು. ಬಿಜೆಪಿ ಸರ್ಕಾರವೇ ಕಾಲೇಜನ್ನು ಉದ್ಘಾಟಿಸುತ್ತಿದೆ. ಯಾವುದೇ ಸರ್ಕಾರ ಮತ್ತು ಜನಪ್ರತಿನಿಧಿಗೆ ಅಭಿವೃದ್ಧಿಯ ಇಚ್ಛಾಶಕ್ತಿ ಇದ್ದರೆ 'ದೊಡ್ಡ' ಕೆಲಸಗಳನ್ನು ಸುಲಭವಾಗಿ ಮಾಡಬಹುದು ಎನ್ನುವುದಕ್ಕೆ ಈ ಕಾಲೇಜು ನಿರ್ಮಾಣದ ಹೆಜ್ಜೆ ಗುರುತುಗಳೇ ಸಾಕ್ಷಿ.

ವೈದ್ಯಕೀಯ ಶಿಕ್ಷಣ ಕಾಲೇಜನ್ನು ಚಿಕ್ಕಬಳ್ಳಾಪುರಕ್ಕೆ ತರಲು ಡಾ.ಕೆ.ಸುಧಾಕರ್ ಪಟ್ಟು ಬಿಡದೆ ಹೋರಾಟ ನಡೆಸಿದ್ದರು. ಎಷ್ಟೇ ಅಡೆತಡೆಗಳು ಎದುರಾದರೂ ಜಗ್ಗಲಿಲ್ಲ. ಕಾಲೇಜು ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಲು ಬಂದಿದ್ದ ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಸುಧಾಕರ್ ಅವರು ವೈದ್ಯಕೀಯ ಕಾಲೇಜು ನಿರ್ಮಾಣಕ್ಕೆ ತೋರಿದ ಬದ್ಧತೆಯನ್ನು ಮನದುಂಬಿ ಪ್ರಶಂಸಿಸಿದ್ದರು.

ಕಾಲೇಜು ನಿರ್ಮಾಣಕ್ಕೆ ಭೂಮಿಪೂಜೆಯಾದ ದಿನದಿಂದ ಡಾ.ಕೆ.ಸುಧಾಕರ್, ಇದು ತಮ್ಮ ಮನೆಯ ಕೆಲಸ ಎನ್ನುವಂತೆ ಮುತುವರ್ಜಿ ವಹಿಸಿದರು. ವಿಶೇಷವಾಗಿ ಪ್ರತಿ ತಿಂಗಳು ಸಹ ಖುದ್ದು ಕಟ್ಟಡ ನಿರ್ಮಾಣ ಸ್ಥಳಕ್ಕೆ ಡಾ.ಕೆ.ಸುಧಾಕರ್ ಅವರು ಭೇಟಿ ನೀಡಿ ಕಾಮಗಾರಿಯ ಪ್ರಗತಿ ಪರಿಶೀಲಿಸುತ್ತಿದ್ದರು. ಗುತ್ತಿಗೆದಾರರು, ಅಧಿಕಾರಿಗಳಿಗೆ ಕೆಲಸವನ್ನು ಚುರುಕುಗೊಳಿಸುವಂತೆ ನಿರ್ದೇಶನ ನೀಡುವುದು ಸೇರಿದಂತೆ ಕಟ್ಟಡ ಕಾಮಗಾರಿ ಪೂರ್ಣಗೊಳ್ಳುವವರೆಗೂ ಕಾಳಜಿ ವಹಿಸಿದ್ದರು. ಆ ಫಲವಾಗಿ ಕೇವಲ 36 ತಿಂಗಳಿಗೆ ಭವ್ಯವಾದ ಕಟ್ಟಡ ನಿರ್ಮಾಣವಾಗಿದೆ.

ಕಾಲೇಜು ನಿರ್ಮಾಣದಿಂದ ಜಿಲ್ಲೆಯ ಜನರಷ್ಟೇ ಅಲ್ಲ ನೆರೆಹೊರೆಯ ಜಿಲ್ಲೆಯ ಜನರು ಹಾಗೂ ಗಡಿಗೆ ಹೊಂದಿಕೊಂಡಿರುವ ಆಂಧ್ರಪ್ರದೇಶದ ಜನರಿಗೂ ಆರೋಗ್ಯ ಸೇವೆಗೆ ಅನುಕೂಲವಾಗಲಿದೆ. ಜನರಿಗೆ ಆರೋಗ್ಯ ಸೇವೆಯನ್ನು ದೊರಕಿಸಿಕೊಡುವ ಜತೆಗೆ ಮೆರಿಟ್ ಪಡೆದ ಮತ್ತು ಗ್ರಾಮೀಣ ಪ್ರತಿಭಾವಂತ ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣ ಕಲಿಯಬೇಕು ಎನ್ನುವ ಆಸೆಗೆ ನೀರೆರೆಯುತ್ತದೆ.

ಕಾಲೇಜಿನ ಕಟ್ಟಡವಷ್ಟೇ ಅಲ್ಲದೆ ಆವರಣದ ಹಸಿರೀಕರಣಕ್ಕೂ ಈಗಾಗಲೇ ಯೋಜನೆಗಳು ಸಿದ್ಧವಾಗಿದೆ. ವಿಶಾಲವಾದ 60 ಎಕರೆ ಪ್ರದೇಶವಿರುವ ಕಾರಣ ಇಲ್ಲಿ ದೊಡ್ಡ ಮಟ್ಟದಲ್ಲಿ ಹಸಿರೀಕರಣಕ್ಕೆ ಯೋಜನೆಗಳು ಸಹ ಸಿದ್ಧವಾಗಿವೆ. 1000ಕ್ಕೂ ಹೆಚ್ಚು ಗಿಡಲಾಗುತ್ತಿದೆ.

ತರಗತಿಗಳು ಆರಂಭ: ಚಿಕ್ಕಬಳ್ಳಾಪುರ ವೈದ್ಯಕೀಯ ಶಿಕ್ಷಣ ಕಾಲೇಜಿನ ತರಗತಿಗಳು ಸಹ ಈಗಾಗಲೇ ಆರಂಭವಾಗಿವೆ. 2020–21ನೇ ಶೈಕ್ಷಣಿಕ ಸಾಲಿನಲ್ಲಿ ರಾಷ್ಟ್ರೀಯ ವೈದ್ಯಕೀಯ ಆಯೋಗದಿಂದ 100 ಎಂಬಿಬಿಎಸ್ ಸೀಟ್‌ಗಳ ಅನುಮೋದನೆ ಸಹ ಪಡೆಯಲಾಗಿದೆ. ಈ 100 ವಿದ್ಯಾರ್ಥಿಗಳು ಮೊದಲ ವರ್ಷದ ಎಂಬಿಬಿಎಸ್ ಪರೀಕ್ಷೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ. 2022–23ನೇ ಸಾಲಿನಲ್ಲಿಯೂ 100 ವಿದ್ಯಾರ್ಥಿಗಳು ಎಂಬಿಬಿಎಸ್ ಪ್ರವೇಶ ಪಡೆದಿದ್ದು ತರಗತಿಗಳು ನಡೆಯುತ್ತಿವೆ. 2023–24ನೇ ಶೈಕ್ಷಣಿಕ ಸಾಲಿನಲ್ಲಿ ರಾಷ್ಟ್ರೀಯ ವೈದ್ಯಕೀಯ ಆಯೋಗದಿಂದ 100 ಎಂಬಿಬಿಎಸ್ ಸೀಟುಗಳಿಗೆ ಅನುಮೋದನೆ ದೊರೆತಿದೆ.

ಹೀಗೆ ಚಿಕ್ಕಬಳ್ಳಾಪುರ ಜಿಲ್ಲೆಯ ಆರೋಗ್ಯ ಕ್ಷೇತ್ರದ ಮುಕುಟಮಣಿಯಾಗಲಿರುವ ವೈದ್ಯಕೀಯ ಶಿಕ್ಷಣ ಕಾಲೇಜು ಜಿಲ್ಲೆಯ ಜನರ ಆರೋಗ್ಯ ಸುಧಾಕರಣೆಗೆ ಮಹತ್ವದ ಪಾತ್ರವನ್ನುವಹಿಸಲಿದೆ. ಗ್ರಾಮೀಣ ಬಡ ಮತ್ತು ಮಧ್ಯಮ ವರ್ಗದ ಪ್ರತಿಭಾವಂತ ವಿದ್ಯಾರ್ಥಿಗಳ ವೈದ್ಯಕೀಯ ಶಿಕ್ಷಣದ ಆಸೆಗೆ ನೀರೆರೆಯಲಿದೆ. ಇಂತಹ ಮಹತ್ವದ ಯೋಜನೆ ಜಿಲ್ಲೆಯಲ್ಲಿ ಜಾರಿಗೊಳ್ಳಲು ಕಾರಣಕರ್ತರಾದ ಸಚಿವ ಡಾ.ಕೆ.ಸುಧಾಕರ್ ಅವರ ನೇತೃತ್ವದಲ್ಲಿ ಜಿಲ್ಲೆಯ ಅಭಿವೃದ್ಧಿಯ ಚಿತ್ರಣದ ದೊಡ್ಡ ಮಟ್ಟದಲ್ಲಿ ಬದಲಾವಣೆ ಕಾಣುತ್ತಿದೆ.



'ಸುಧಾಕರ್‌ಗೆ ಅಭಿನಂದನೆ'

ಸುಧಾಕರ್ ಅವರು 100 ದಿನಗಳಲ್ಲಿ ಈ ಭಾಗಕ್ಕೆ ವೈದ್ಯಕೀಯ ಕಾಲೇಜು ಮಂಜೂರು ಮಾಡಿಸಿ, ಶಂಕುಸ್ಥಾಪನೆ ಮಾಡಿಸಿರುವುದು ದಾಖಲೆ. ಅದಕ್ಕಾಗಿ ಅವರಿಗೆ ಅಭಿನಂದನೆ ಸಲ್ಲಿಸಬೇಕು.

–ಬಿ.ಎಸ್.ಯಡಿಯೂರಪ್ಪ (ವೈದ್ಯಕೀಯ ಕಾಲೇಜು ಶಂಕುಸ್ಥಾಪನೆ ಸಮಯದಲ್ಲಿ ಹೇಳಿದ್ದ ಮಾತು)

ಕಾಲೇಜಿನಲ್ಲಿ ಕಟ್ಟಡದಲ್ಲಿ ಏನೇನಿವೆ?

- ನಂದಿ ವೈದ್ಯಕೀಯ ಶಿಕ್ಷಣ ಕಾಲೇಜು ಮತ್ತು ಸಂಶೋಧನಾ ಕೇಂದ್ರದಲ್ಲಿ 300 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಯೂ ಇರಲಿದೆ. ಯುವಕ ಮತ್ತು ಯುವತಿಯರಿಗೆ ಪ್ರತ್ಯೇಕವಾದ ಹಾಸ್ಟೆಲ್ ಸೌಲಭ್ಯ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಪ್ರತ್ಯೇಕವಾದ ವಸತಿ ಗೃಹಗಳು ಇಲ್ಲಿವೆ.
- ಕಾಲೇಜು ಒಟ್ಟು ನಾಲ್ಕು ಹಂತಸ್ತಿನಲ್ಲಿ ನಿರ್ಮಾಣವಾಗಿದೆ. ಕೆಳ ಮಹಡಿಯಲ್ಲಿ ವಾಹನ ನಿಲುಗಡೆ, ಫೈರ್ ಕಂಟ್ರೋಲ್, ಎಲೆಕ್ಟ್ರಿಕಲ್ ರೂಂ, ಕೆಫಿಟೇರಿಯಾ ಇರಲಿವೆ.
- ನೆಲ ಮಹಡಿಯಲ್ಲಿ ಉಪನ್ಯಾಸಕ ಕೊಠಡಿಗಳು, ಆಯಾ ವಿಭಾಗದ ಮುಖ್ಯಸ್ಥರು ಮತ್ತು ಪ್ರಾಂಶುಪಾಲರ ಕೊಠಡಿ, ದಾಖಲೆಗಳ ನಿರ್ವಹಣಾ ವಿಭಾಗ, ಲ್ಯಾಬೊರೇಟರಿ ಮತ್ತು ಪ್ರಾತ್ಯಕ್ಷಿಕೆಯ ಕೊಠಡಿಗಳು, ಮ್ಯೂಸಿಯಂ ಇರಲಿವೆ.
- ಮೊದಲ ಮಹಡಿಯಲ್ಲಿ ಶರೀರವಿಜ್ಞಾನ, ಬಯೊಕೆಮಿಸ್ಟ್ರಿಗೆ ಸಂಬಂಧಿದ ವಿಭಾಗಗಳು, ಮ್ಯೂಸಿಯಂ ಮತ್ತು ಪ್ರಾತ್ಯಕ್ಷಿಕೆ ಕೊಠಡಿಗಳು ಇರಲಿವೆ.
- ಎರಡನೇ ಮಹಡಿಯಲ್ಲಿ ಪರೀಕ್ಷಾ ಕೊಠಡಿಗಳು, ಕಮ್ಯುನಿಟಿ ವೈದ್ಯಕೀಯ ವಿಭಾಗ, ಪ್ರಾತ್ಯಕ್ಷಿಕೆಯ ಕೊಠಡಿಗಳು, ಮ್ಯೂಸಿಯಂ ಇರಲಿವೆ.
- ಮೂರನೇ ಮಹಡಿಯಲ್ಲಿ ಫಾರ್ಮಕಾಲಜಿ ವಿಭಾಗ ಹಾಗೂ ಪ್ರಾತ್ಯಕ್ಷಿಕೆಯ ಕೊಠಡಿಗಳು, ಮ್ಯೂಸಿಯಂ ಇರಲಿವೆ.
- ನಾಲ್ಕನೇ ಮಹಡಿಯಲ್ಲಿ ಸೂಕ್ಷ್ಮ ಜೀವವಿಜ್ಞಾನ ವಿಭಾಗ, ಗ್ರಂಥಾಲಯ, ಕೌಶಲ ತರಬೇತಿ ಲ್ಯಾಬ್, ಎರಡು ಉಪನ್ಯಾಸ ಕೊಠಡಿಗಳು ಇರಲಿವೆ.

ಇದಿಷ್ಟೇ ಅಲ್ಲದೆ ತುರ್ತುಚಿಕಿತ್ಸಾ ವಿಭಾಗ, ಹಾಸಿಗೆಗಳು, ರೋಗಿಗಳ ತಪಾಸಣಾ ಕೊಠಡಿಗಳು, ಶಸ್ತ್ರಚಿಕಿತ್ಸಾ ಕೊಠಡಿಗಳು, ವೈದ್ಯರ ವಿಶ್ರಾಂತಿ ಕೊಠಡಿಗಳು, ಅಡುಗೆ ಮತ್ತು ಲಾಂಡ್ರಿ..ಹೀಗೆ ಹತ್ತು ಹಲವು ವಿಭಾಗಗಳು ಸಹ ಇಲ್ಲಿ ಕಾರ್ಯನಿರ್ವಹಿಸಲಿವೆ.



ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ರಾಮನಗರಕ್ಕೆ ಸಿಗಲಿದೆ ಆರೋಗ್ಯ ನಗರಿ ಪಟ್ಟ: ಸಚಿವ ಸುಧಾಕರ್ ಪರಿಶ್ರಮಕ್ಕೆ ಸಂದ ಫಲ

ಆರೋಗ್ಯ ವಿ.ವಿ. ಕ್ಯಾಂಪಸ್ ಕನಸು ನನಸು

ರಾಮನಗರ ಜಿಲ್ಲೆಯ ದಶಕಗಳ ಕನಸಿನ ಯೋಜನೆಗಳಲ್ಲಿ ಒಂದಾದ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಕ್ಯಾಂಪಸ್ ನಿರ್ಮಾಣಕ್ಕೆ ಕ್ಷಣಗಣನೆ ಆರಂಭ ಆಗಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇದೇ 27ರಂದು ಈ ಮಹತ್ಕಾರ್ಯಕ್ಕೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

ರಾಜಧಾನಿ ಬೆಂಗಳೂರಿಗೆ ಸನಿಹದಲ್ಲೇ ಇರುವ ರಾಮನಗರವು ಬೆಂಗಳೂರು–ಮೈಸೂರು ದಶಪಥ ಹೆದ್ದಾರಿಯ ಮೂಲಕ ಹೊಸತೊಂದು ದಿಕ್ಕು ಪಡೆದುಕೊಂಡಿದೆ. ಅಂತೆಯೇ ಈ ಊರು ಆರೋಗ್ಯ ನಗರಿಯಾಗಿ ಬೆಳೆಯಬೇಕು. ಸ್ಥಳೀಯರಿಗೆ ತಾವು ಇರುವಲ್ಲಿಯೇ ಎಲ್ಲ ವಿಧದ ಗುಣಮಟ್ಟದ ಆರೋಗ್ಯ ಸೇವೆಗಳು ದೊರೆಯಬೇಕು ಎನ್ನುವುದು ವೃತ್ತಿಯಲ್ಲಿ ಸ್ವತಃ ವೈದ್ಯರೂ ಆಗಿರುವ ರಾಜ್ಯದ ಹೆಮ್ಮೆಯ ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಅವರ ಆಶಯ ಸಹ ಹೌದು. ಈ ನಿಟ್ಟಿನಲ್ಲಿ ಈಚೆಗಷ್ಟೇ ನಾಡಿಗೆ ಮಾದರಿ ಎನ್ನುವ ರೀತಿಯಲ್ಲಿ ₹100 ಕೋಟಿ ವೆಚ್ಚದಲ್ಲಿ ಹೊಸ ಜಿಲ್ಲಾಸ್ಪತ್ರೆಯನ್ನು ರಾಮನಗರದಲ್ಲಿ ಉದ್ಘಾಟಿಸಿದ್ದಾರೆ. ಇದೀಗ ಆರೋಗ್ಯ ವಿ.ವಿ. ಕ್ಯಾಂಪಸ್ ಸಹ ರಾಮನೂರಿನಲ್ಲಿಯೇ ತಲೆ ಎತ್ತಲಿದೆ.

ಬಿಜೆಪಿ ಕನಸಿನ ಯೋಜನೆ: 2006–07ರಲ್ಲಿ ರಾಜ್ಯದಲ್ಲಿ ಬಿಜೆಪಿ–ಜೆಡಿಎಸ್ ಸಮ್ಮಿಶ್ರ ಸರ್ಕಾರ ಇದ್ದ ಸಂದರ್ಭದಲ್ಲಿ ರಾಜ್ಯದ ಅಭಿವೃದ್ಧಿಗೆ ಪೂರಕವಾಗಿ ಹಲವು ಯೋಜನೆಗಳನ್ನು ಘೋಷಿಸಲಾಯಿತು. ಅದರಲ್ಲಿ ರಾಮನಗರದಲ್ಲಿ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕ್ಯಾಂಪಸ್ ನಿರ್ಮಾಣ ಮಾಡುವ ಯೋಜನೆ ಸಹ ಒಂದಾಗಿದೆ.

2007ರಲ್ಲಿ ಅಂದಿನ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಆರೋಗ್ಯ ವಿ.ವಿ. ಹೊಸ ಕ್ಯಾಂಪಸ್ ನಿರ್ಮಾಣ ಮಾಡುವುದಾಗಿ ಘೋಷಣೆ ಮಾಡಿದ್ದರು. ಅದಾದ ಬಳಿಕ ಭೂವ್ಯಾಜ್ಯಗಳು ನ್ಯಾಯಾಲಯದ ಮೆಟ್ಟಿಲು ಏರಿದ ಕಾರಣ ಈ ಕನಸು ಹಾಗೆಯೇ ಉಳಿದುಕೊಂಡಿತ್ತು. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಲೆಲ್ಲ ಈ ಯೋಜನೆಗೆ ಮತ್ತೆ ಮರುಜೀವ ಕೊಡುವ ಪ್ರಯತ್ನ ನಡೆಸಿದೆಯಾದರೂ ವ್ಯಾಜ್ಯಗಳು ಅದಕ್ಕೆ ಅಡ್ಡಿಯಾದವು. ನಂತರದಲ್ಲಿ ಬಂದ ಸರ್ಕಾರಗಳಲ್ಲಿನ ಇಚ್ಛಾಶಕ್ತಿಯ ಕೊರತೆಯಿಂದಾಗಿ ಈ ಯೋಜನೆ ಹಾಗೆಯೇ ಉಳಿದುಕೊಂಡಿತ್ತು.

ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಅಧೀನದಲ್ಲಿ 3 ಸಾವಿರಕ್ಕೂ ಅಧಿಕ ಕಾಲೇಜುಗಳು ಇದ್ದು, ಲಕ್ಷಾಂತರ ವಿದ್ಯಾರ್ಥಿಗಳು ಇದರ ಮೂಲಕ ಉತ್ತಮ ಬದುಕು ರೂಪಿಸಿಕೊಂಡಿದ್ದಾರೆ. ರಾಜ್ಯದ ವೈದ್ಯಕೀಯ ಕ್ಷೇತ್ರಕ್ಕೆ ಇದರ ಕೊಡುಗೆ ಅಪಾರ. ಹೀಗಿದ್ದೂ ಆರೋಗ್ಯ ವಿ.ವಿ.ಗೆ ಇಂದಿಗೂ ಸ್ವಂತ ಸೂರು ಇಲ್ಲ. ಬೆಂಗಳೂರಿನಲ್ಲಿ ಎರವಲು ಪಡೆದ ಕಟ್ಟಡಗಳಲ್ಲಿಯೇ ಇದರ ಆಡಳಿತ ನಡೆಯುತ್ತಿದೆ.

ರಾಜ್ಯದಲ್ಲಿ ಡಾ. ಕೆ. ಸುಧಾಕರ್ ಆರೋಗ್ಯ ಸಚಿವರಾಗಿ ಅಧಿಕಾರ ವಹಿಸಿಕೊಂಡ ದಿನದಿಂದಲೇ ಆರೋಗ್ಯ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡುತ್ತ ಬಂದಿದ್ದಾರೆ. ಆರೋಗ್ಯ ವಿ.ವಿ.ಗೆ ಒಂದು ಸುಸಜ್ಜಿತ ಕ್ಯಾಂಪಸ್ ಅಗತ್ಯವನ್ನು ಮನಗಂಡ ಸುಧಾಕರ್ ರಾಮನಗರ ಜಿಲ್ಲಾ ಉಸ್ತುವಾರಿ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಜೊತೆಗೂಡಿ ವಿಶ್ವವಿದ್ಯಾಲಯದ ಅಧಿಕಾರಿಗಳ ಜೊತೆ ನಿರಂತರ ಸಭೆಗಳನ್ನು ನಡೆಸಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ವಿ.ವಿ. ಕ್ಯಾಂಪಸ್ ನಿರ್ಮಾಣಕ್ಕೆ ಇದ್ದ ಅಡ್ಡಿ ಆತಂಕಗಳನ್ನು ನಿವಾರಿಸುತ್ತ ಬಂದಿದ್ದಾರೆ.

ಸುಧಾಕರ್ ಅವರ ಒತ್ತಾಸೆಯಿಂದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಮ್ಮ ಕಳೆದ ಬಜೆಟ್‌ನಲ್ಲಿ ಆರೋಗ್ಯ ವಿಶ್ವವಿದ್ಯಾಲಯ ಕ್ಯಾಂಪಸ್ ನಿರ್ಮಾಣಕ್ಕೆ ಬರೋಬ್ಬರಿ ₹600 ಕೋಟಿ ಅನುದಾನವನ್ನು ಘೋಷಿಸಿದ್ದರು. ಇದರಲ್ಲಿ ಈಗಾಗಲೇ ₹400 ಕೋಟಿ ಅನುದಾನ ಬಿಡುಗಡೆ ಆಗಿದ್ದು, ಟೆಂಡರ್ ಪ್ರಕ್ರಿಯೆ ಸಹ ಮುಗಿದಿದೆ. ಶಂಕುಸ್ಥಾಪನೆ ಬಳಿಕ ತ್ವರಿತಗತಿಯಲ್ಲಿ ಕಾಮಗಾರಿಗಳು ನಡೆಯಲಿದ್ದು, ಇನ್ನು ಕೆಲವೇ ವರ್ಷದಲ್ಲಿ ಆರೋಗ್ಯ ವಿ.ವಿ. ಭವ್ಯ ಕ್ಯಾಂಪಸ್ ರಾಮನಗರದ ಮೈಲಿಗಲ್ಲುಗಳಲ್ಲಿ ಒಂದಾಗಲಿದೆ.

ಭರಪೂರ ಲಾಭ: ಆರೋಗ್ಯ ವಿ.ವಿ. ಹೊಸ ಕ್ಯಾಂಪಸ್ ನಿರ್ಮಾಣದಿಂದ ಇಡೀ ನಾಡಿಗೆ ಹಲವು ಅನುಕೂಲಗಳು ಆಗಲಿವೆ. ಅಲೆಮಾರಿಯಂತಿರುವ ವಿ.ವಿ.ಗೆ ಒಂದು ಭವ್ಯವಾದ, ಸದೃಢವಾದ ನೆಲೆ ರಾಮನಗರದಲ್ಲಿ ಸಿಗಲಿದೆ. ಇದರಿಂದಾಗಿ ಇನ್ನಷ್ಟು ಗುಣಮಟ್ಟದ ಶಿಕ್ಷಣ, ಆಡಳಿತದ ಮೂಲಕ ವಿಶ್ವವಿದ್ಯಾಲಯವು ಮತ್ತೊಂದು ಎತ್ತರಕ್ಕೆ ಬೆಳೆಯಲಿದೆ.

ರಾಜ್ಯದ ಜನರಿಗೆ ತಾವು ಇರುವಲ್ಲಿಯೇ ಗುಣಮಟ್ಟದ ಆರೋಗ್ಯ ಸೇವೆ ದೊರೆಯಬೇಕು ಎನ್ನುವುದು ಸಚಿವ ಸುಧಾಕರ್ ಹಾಗೂ ಬಿಜೆಪಿ ಸರ್ಕಾರದ ಆಶಯವಾಗಿದೆ. ಇಲ್ಲಿ ಆಡಳಿತ ಭವನಗಳ ಜೊತೆಗೆ ವೈದ್ಯಕೀಯ, ದಂತ, ನರ್ಸಿಂಗ್ ಕಾಲೇಜುಗಳು ಸಹ ತಲೆ ಎತ್ತಲಿವೆ. 750 ಹಾಸಿಗೆ ಸಾಮರ್ಥ್ಯದ ಸುಸಜ್ಜಿತ ಆಸ್ಪತ್ರೆ, 250 ಹಾಸಿಗೆಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ವಿದ್ಯಾರ್ಥಿ ನಿಲಯಗಳು, ವಸತಿ ಗೃಹಗಳು ಸೇರಿದಂತೆ ಒಟ್ಟು 16 ಬೃಹತ್ ಕಟ್ಟಡ ಹಾಗೂ ಮೂಲ ಸೌಕರ್ಯಗಳನ್ನು ಈ ಕ್ಯಾಂಪಸ್‌ನಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ.

ಒಟ್ಟು 1 ಸಾವಿರ ಹಾಸಿಗೆ ಸಾಮರ್ಥ್ಯದ ಸುಸಜ್ಜಿತ ಆಸ್ಪತ್ರೆಗಳು ಹೊಸ ಕ್ಯಾಂಪಸ್‌ನಲ್ಲಿ ಇರಲಿದ್ದು, ಜನರಿಗೆ ಪ್ರತಿಯೊಂದು ಆರೋಗ್ಯ ಸೇವೆಯು ಇಲ್ಲಿಯೇ ಸಿಗಲಿದೆ. ಸದ್ಯ ರಾಮನಗರದ ಜನತೆ ವಿವಿಧ ಕಾಯಿಲೆಗಳ ಚಿಕಿತ್ಸೆ, ಶಸ್ತ್ರಚಿಕಿತ್ಸೆಗೆ ರಾಜಧಾನಿಯತ್ತ ಮುಖ ಮಾಡಿದ್ದಾರೆ. ರಾಮನಗರದಲ್ಲಿಯೇ ಆಸ್ಪತ್ರೆಗಳು ತಲೆ ಎತ್ತಿದಲ್ಲಿ ಈ ಅವಲಂಬನೆ ತಪ್ಪಲಿದೆ. ಮಾತ್ರವಲ್ಲ, ಹಳೇ ಮೈಸೂರು ಭಾಗದ ಬಡವರ ಆಶಾಕಿರಣವಾಗಿ ಇಲ್ಲಿ ಆಸ್ಪತ್ರೆಗಳಲ್ಲಿ ವೈದ್ಯಕೀಯ ಸೇವೆಗಳು ಲಭ್ಯ ಆಗಲಿವೆ. ರಾಮನಗರ ಆರೋಗ್ಯ ನಗರಿಯಾಗಿ ಬೆಳೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸುತ್ತಾರೆ ಡಾ. ಕೆ. ಸುಧಾಕರ್.



ರಾಮನಗರದಲ್ಲಿ ನಿರ್ಮಾಣ ಆಗಲಿರುವ ಆರೋಗ್ಯ ವಿ.ವಿ. ಭವನದ ಮಾದರಿ

ಕ್ಯಾಂಪಸ್‌ಗೆ ಕೆಂಗಲ್ ಹನುಮಂತಯ್ಯ ನಾಮಕರಣ ಪ್ರಸ್ತಾವ

ವಿಧಾನಸೌಧ ನಿರ್ಮಾತೃ ಕೆಂಗಲ್ ಹನುಮಂತಯ್ಯ ಅವರು ಮೂಲತಃ ರಾಮನಗರದವರು. ನಾಡಿನ ಹೆಮ್ಮೆಯ ಮುಖ್ಯಮಂತ್ರಿಯಾಗಿ ಇವರು ರಾಜ್ಯದ ಅಭಿವೃದ್ಧಿಗೆ ನೀಡಿದ ಕೊಡುಗೆ ಅವಿಸ್ಮರಣೀಯ. ಈ ಮಹನೀಯರ ಹೆಸರನ್ನು ಇನ್ನಷ್ಟು ಚಿರಸ್ಥಾಯಿ ಆಗಿಸುವ ದಿಸೆಯಲ್ಲಿ ರಾಮನಗರದ ಆರೋಗ್ಯ ವಿಶ್ವವಿದ್ಯಾಲಯದ ಕ್ಯಾಂಪಸ್‌ಗೆ ಕೆಂಗಲ್ ಹನುಮಂತಯ್ಯ ಅವರ ಹೆಸರಿಡುವಂತೆ ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಈಗಾಗಲೇ ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದಾರೆ. ಸರ್ಕಾರ ಸಹ ಈ ಬಗ್ಗೆ ಒಲವು ತೋರಿದೆ.

ರಾಮನಗರದಲ್ಲಿ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಕ್ಯಾಂಪಸ್ ನಿರ್ಮಾಣ ಘೋಷಣೆಯಾಗಿ ಎರಡು ದಶಕವೇ ಕಳೆಯುತ್ತಿದ್ದರೂ ಅದಕ್ಕಿನ್ನೂ ಕಾಲ ಕೂಡಿ ಬಂದಿರಲಿಲ್ಲ. ಭೂವ್ಯಾಜ್ಯ, ಇಚ್ಛಾಶಕ್ತಿ ಕೊರತೆಯಿಂದಾಗಿ ಇದಕ್ಕೆ ಹಿನ್ನಡೆ ಆಗಿತ್ತು. ಆದರೆ ಬಿಜೆಪಿ ಸರ್ಕಾರ ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೆ ಬಂದ ನಂತರ ಇದನ್ನು ಗಂಭೀರವಾಗಿ ಪರಿಗಣಿಸಿದ್ದು, ಇದ್ದ ಎಲ್ಲ ಅಡೆ–ತಡೆಗಳನ್ನೂ ನಿವಾರಿಸಿ ಇಂದು ಶಂಕುಸ್ಥಾಪನೆ ನೆರವೇರಿಸುತ್ತಿದ್ದೇವೆ.

ಹೊಸ ಕ್ಯಾಂಪಸ್ ಕೇವಲ ಆಡಳಿತ ಭವನಗಳಲ್ಲ, 1 ಸಾವಿರ ಹಾಸಿಗೆ ಸಾಮರ್ಥ್ಯದ ವೈದ್ಯಕೀಯ ಆಸ್ಪತ್ರೆ ಹಾಗೂ ಕಾಲೇಜನ್ನು ಸಹ ಒಳಗೊಳ್ಳಲಿದೆ. ಕಾಮಗಾರಿ ಪೂರ್ಣಗೊಂಡ ಬಳಿಕ ಇಲ್ಲಿ ಬಡ–ಮಧ್ಯಮ ವರ್ಗದ ಜನರಿಗೆ ಒಂದೇ ಸೂರಿನಲ್ಲಿ ಎಲ್ಲ ಬಗೆಯ ವೈದ್ಯಕೀಯ ಸೇವೆಗಳು ದೊರೆಯಲಿವೆ. ರಾಮನಗರವು ಭವಿಷ್ಯದಲ್ಲಿ ಆರೋಗ್ಯ ನಗರಿಯಾಗಿ ಹೊರಹೊಮ್ಮಲಿದೆ

ಡಾ.ಕೆ.ಸುಧಾಕರ್, ಆರೋಗ್ಯ ಸಚಿವ

ಏನೇನು ಇರಲಿದೆ ಆರೋಗ್ಯ ವಿ.ವಿ. ಕ್ಯಾಂಪಸ್‌ನಲ್ಲಿ

- ಒಟ್ಟು ಐದು ಅಂತಸ್ತುಗಳ ಆಡಳಿತಾತ್ಮಕ ಶೈಕ್ಷಣಿಕ ಭವನ
- ಸುಸಜ್ಜಿತ ಕ್ಯಾಂಟೀನ್
- ಏಳು ಅಂತಸ್ತುಗಳ ವಿದ್ಯಾರ್ಥಿನಿಯರ ನಿಲಯ
- ಏಳು ಅಂತಸ್ತುಗಳ ವಿದ್ಯಾರ್ಥಿಗಳ ನಿಲಯ
- ವೈದ್ಯಕೀಯ ಅಧೀಕ್ಷಕರು, ಡೀನ್‌ಗಾಗಿ ಪ್ರತ್ಯೇಕ ವಸತಿಗೃಹ
- ಬೋಧಕ ಸಿಬ್ಬಂದಿಯಾಗಿ 32 ಮನೆಗಳುಳ್ಳ, ಐದು ಅಂತಸ್ತಿನ ಕಟ್ಟಡ ನಿರ್ಮಾಣ
- ನರ್ಸ್‌ಗಳಿಗಾಗಿ 66 ಮನೆಗಳುಳ್ಳ ಆರು ಅಂತಸ್ತಿನ ಕಟ್ಟಡ ನಿರ್ಮಾಣ
- ಗ್ರೂಪ್ ಡಿ ನೌಕರರಿಗಾಗಿ 44 ಮನೆಗಳುಳ್ಳ ಆರು ಅಂತಸ್ತಿನ ಕಟ್ಟಡ ನಿರ್ಮಾಣ

216 ಎಕರೆ ಗುರುತು

ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯಕ್ಕಾಗಿ ರಾಮನಗರದ ಹೊರವಲಯದಲ್ಲಿರುವ ಅರ್ಚಕರಹಳ್ಳಿ ಬಳಿ ಸರ್ಕಾರವು 216 ಎಕರೆ, 24 ಗುಂಟೆ ಜಮೀನು ಮಂಜೂರು ಮಾಡಿದೆ. ಇದರಲ್ಲಿ ಬಹುತೇಕ ಜಮೀನು ಈಗ ವ್ಯಾಜ್ಯ ಮುಕ್ತವಾಗಿದ್ದು, ನಿರ್ಮಾಣ ಕಾಮಗಾರಿಗಳಿಗೆ ಬಳಕೆ ಮಾಡಿಕೊಳ್ಳಲು ಸಿದ್ಧವಾಗಿದೆ. ಇದರಲ್ಲಿ 145 ಎಕರೆ ಜಮೀನು ವೈದ್ಯಕೀಯ ಶಿಕ್ಷಣ ವಿಭಾಗಕ್ಕೆ ದೊರೆತಿದ್ದು, ಇದರಲ್ಲಿ ವಿವಿಧ ಕಾಲೇಜುಗಳು, ಆಸ್ಪತ್ರೆ ತಲೆ ಎತ್ತಲಿವೆ. ರಾಜೀವ್‌ಗಾಂಧಿ ಆರೋಗ್ಯ ವಿ.ವಿ.ಗೆ 56 ಎಕರೆ ಜಮೀನು ನೀಡಲಾಗಿದ್ದು, ಆಡಳಿತಾತ್ಮಕ ಭವನಗಳು ಹಾಗೂ ವಿವಿಧ ನಿರ್ಮಾಣ ಕಾರ್ಯಗಳಿಗೆ ಬಳಸಲು ಉದ್ದೇಶಿಸಲಾಗಿದೆ.

ಆರೋಗ್ಯ ವಿ.ವಿ.ಯ ಆಡಳಿತಾತ್ಮಕ ಭವನಗಳು 28,095 ಚ.ಮೀ. ನಷ್ಟು ವಿಸ್ತೀರ್ಣದಲ್ಲಿ ನಿರ್ಮಾಣ ಆಗಲಿದ್ದು, ಮೆಡಿಕಲ್ ಕಾಲೇಜು ಹಾಗೂ ಅದಕ್ಕೆ ಸಂಬಂಧಿಸಿದ ಬ್ಲಾಕ್‌ಗಳು 72,447 ಚ.ಮೀ. ವಿಸ್ತೀರ್ಣದಲ್ಲಿ ನಿರ್ಮಾಣ ಆಗಲಿವೆ. ಒಟ್ಟಾರೆ 1,00,642 ಚ.ಮೀ. ನಷ್ಟು ವಿಸ್ತೀರ್ಣದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.



ಬ್ರಿಟನ್‌ನ 36 ಉಪಗ್ರಹಗಳನ್ನು ಕಕ್ಷೆಗೆ ಸೇರಿಸಿದ ಇಸ್ರೊ ರಾಕೆಟ್

ಶ್ರೀಹರಿಕೋಟಾ (ಪಿಟಿಐ): ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಬೃಹತ್ ಎಲ್‌ವಿಎಂ3–ಎಂ3 ರಾಕೆಟ್ ಬ್ರಿಟನ್ ಮೂಲದ ಒನ್‌ವೆಬ್ ಗ್ರೂಪ್ ಸಂಸ್ಥೆಯ 36 ಉಪಗ್ರಹಗಳನ್ನು ಭಾನುವಾರ ಯಶಸ್ವಿಯಾಗಿ ಕಕ್ಷೆಗೆ ತಲುಪಿಸಿತು.

ಎಲ್‌ವಿಎಂ3–ಎಂ3/ಒನ್‌ವೆಬ್ ಇಂಡಿಯಾ–2 ಎಂದು ಈ ಯೋಜನೆಯನ್ನು ಕರೆಯಲಾಗಿದೆ. ಉಪಗ್ರಹಗಳನ್ನು ಹೊತ್ತ ರಾಕೆಟ್ ಇಲ್ಲಿನ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಬೆಳಿಗ್ಗೆ 9 ಗಂಟೆಗೆ ಉಡಾವಣೆಗೊಂಡಿತು. ಸಿಬ್ಬಂದಿ ಸಹಿತ 'ಗಗನಯಾನ' ಯೋಜನೆಗೆ ಬಳಸಿರುವ ತಾಂತ್ರಿಕ ಸಂಯೋಜನೆಯನ್ನೇ ಈ ರಾಕೆಟ್‌ನಲ್ಲಿಯೂ ಬಳಸಲಾಗಿದೆ. ಈ ರಾಕೆಟ್ ಅತ್ಯುತ್ತಮ ರೀತಿಯಲ್ಲಿ ಕಾರ್ಯಾಚರಣೆ ಮಾಡಿದೆ ಎಂದು ಇಸ್ರೊ ಮುಖ್ಯಸ್ಥ ಎಸ್. ಸೋಮನಾಥ್ ಅವರು ತಿಳಿಸಿದ್ದಾರೆ.

ರಾಕೆಟ್ ಉಡಾವಣೆ ಆದ 20 ನಿಮಿಷಗಳಲ್ಲಿ ಒಟ್ಟು 16 ಉಪಗ್ರಹಗಳನ್ನು ನಿಗದಿತ ಕಕ್ಷೆಗಳಿಗೆ ಸೇರಿಸಲಾಯಿತು. ಬಳಿಕ ಬಾಕಿ ಉಪಗ್ರಹಗಳನ್ನು ಕಕ್ಷೆಗಳಿಗೆ ಸೇರಿಸಲಾಯಿತು. ಒಟ್ಟು 5,805 ಕೆ.ಜಿ. ತೂಕವಿದ್ದ ಉಪಗ್ರಹಗಳನ್ನು ಸುಮಾರು 9 ನಿಮಿಷದಲ್ಲಿ 450 ಕಿ.ಮೀ. ಎತ್ತರಕ್ಕೆ ಈ ರಾಕೆಟ್ ಹೊತ್ತೊಯ್ದಿದೆ ಎಂದು ಇಸ್ರೊ ಪ್ರಕಟಣೆಯಲ್ಲಿ ತಿಳಿಸಿದೆ.

ಇಸ್ರೊದ ವಾಣಿಜ್ಯ ಉದ್ದೇಶದ ಘಟಕ ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್‌ನ (ಎನ್‌ಎಸ್‌ಐಎಲ್) ಎರಡನೇ ಯೋಜನೆ ಇದಾಗಿದೆ. ಬ್ರಿಟನ್‌ನ ಒನ್‌ವೆಬ್ ಗ್ರೂಪ್ ಕಂಪನಿಗೆ ಒಳಪಟ್ಟ ನೆಟ್‌ವರ್ಕ್ ಆ್ಯಕ್ಸೆಸ್ ಅಸೋಸಿಯೇಟ್ಸ್ ಲಿಮಿಟೆಡ್ ಜೊತೆ 72 ಉಪಗ್ರಹಗಳನ್ನು ಉಡಾವಣೆ ಮಾಡುವ ನಿಟ್ಟಿನಲ್ಲಿ ಇಸ್ರೊ ಒಪ್ಪಂದ ಮಾಡಿಕೊಂಡಿತ್ತು. ಮೊದಲ ಗುಂಪಿನ 36 ಉಪಗ್ರಹಗಳನ್ನು 2022ರ ಅಕ್ಟೋಬರ್ 23ರಂದು ಇಸ್ರೊ ಯಶಸ್ವಿಯಾಗಿ ಉಡಾವಣೆ ಮಾಡಿತ್ತು. 2ನೇ ಗುಂಪಿನ ಉಪಗ್ರಹಗಳ ಉಡಾವಣೆಯನ್ನು ಭಾನುವಾರ ಮಾಡಲಾಗಿದೆ.

ಎಲ್ಲಾ 36 ಉಪಗ್ರಹಗಳು ನಿಗದಿತ ಕಕ್ಷೆಗೆ ತಲುಪಿವೆ ಎಂದು ಒನ್‌ವೆಬ್ ಮಾಹಿತಿ ನೀಡಿದೆ ಎಂದು ಇಸ್ರೊ ತಿಳಿಸಿದೆ.

ಇದು ಎಲ್‌ವಿಎಂ3 ಆವೃತಿಯ ಆರನೇ ಯಶಸ್ವೀ ಉಡಾವಣೆ. ಇದಕ್ಕೂ ಮೊದಲು ಎಲ್‌ವಿಎಂ3ನ್ನು ಜಿಯೋಸಿಂಕ್ರೋನಸ್ ಸ್ಯಾಟಲೈಟ್ ಲಾಂಚ್ ವೆಹಿಕಲ್ ಎಂಕೆ 3 (ಜಿಎಸ್ ಎಲ್‌ವಿ 3) ಎಂದು ಕರೆಯಲಾಗುತ್ತಿತ್ತು.

ಒನ್‌ವೆಬ್ ಕಂಪನಿ ಈಗಾಗಲೇ 616 ಉಪಗ್ರಹಗಳನ್ನು ಕಕ್ಷೆಗೆ ಕಳುಹಿಸಿದ್ದು, ಈ ವರ್ಷದ ಅಂತ್ಯದ ವೇಳೆಗೆ ಜಾಗತಿಕ ಮಟ್ಟದಲ್ಲಿ ಇಂಟರ್‌ನೆಟ್ ಸೇವೆ ಒದಗಿಸಲಿದೆ. ಭಾರತದಲ್ಲಿ ಸಹ ಈ ಕಂಪನಿಯ ಇಂಟರ್‌ನೆಟ್ ಸೇವೆ ಲಭಿಸುವ ನಿರೀಕ್ಷೆ ಇದೆ.



ಬ್ರಿಟನ್ ಮೂಲದ ಒನ್‌ವೆಬ್ ಗ್ರೂಪ್ ಸಂಸ್ಥೆಯ 36 ಉಪಗ್ರಹಗಳನ್ನು ಹೊತ್ತ ಇಸ್ರೊದ ಎಲ್‌ವಿಎಂ3–ಎಂ3 ರಾಕೆಟ್ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಭಾನುವಾರ ಬೆಳಿಗ್ಗೆ ಉಡಾವಣೆಗೊಂಡಿತು –ಪಿಟಿಐ ಚಿತ್ರ

ನರೇಗಾ ದಿನಗೂಲಿ: ರಾಜ್ಯದಲ್ಲಿ ಕೇವಲ ₹ 7 ಹೆಚ್ಚಳ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ (2023–24) ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಎಂ–ನರೇಗಾ) ಅಡಿಯಲ್ಲಿನ ಕಾರ್ಮಿಕರಿಗೆ ದಿನಗೂಲಿವನ್ನು ಹೆಚ್ಚಳ ಮಾಡಿ ಕೇಂದ್ರ ಸರ್ಕಾರವು ಅಧಿಸೂಚನೆ ಹೊರಡಿಸಿದ್ದು, ಕರ್ನಾಟಕಕ್ಕೆ ಕೇವಲ ₹ 7 ಹೆಚ್ಚಳ ಮಾಡಲಾಗಿದೆ.

ರಾಜ್ಯದಲ್ಲಿ 2022–23ರಲ್ಲಿ ನರೇಗಾ ದಿನಗೂಲಿ ₹ 309 ನಿಗದಿಯಾಗಿತ್ತು. 2023–24ಕ್ಕೆ ಅದನ್ನು ₹ 316ಕ್ಕೆ ಹೆಚ್ಚಿಸಲಾಗಿದೆ. ಅಂದರೆ ಶೇಕಡ 2.27ರಷ್ಟು ಮಾತ್ರ ಹೆಚ್ಚಳ ಮಾಡಲಾಗಿದೆ. ದಿನಗೂಲಿ ಕನಿಷ್ಠ ಪ್ರಮಾಣದಲ್ಲಿ ಹೆಚ್ಚಳ ವಾದ ಪಟ್ಟಿಯಲ್ಲಿ ಗೋವಾ (ಶೇ 2.22) ಇದ್ದರೆ, ಅದರ ನಂತರದ ಸ್ಥಾನದಲ್ಲೇ ಕರ್ನಾಟಕ ಇದೆ.

ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯವು ಇದೇ 24ರಂದು ನರೇಗಾ ಯೋಜನೆಯಡಿಯಲ್ಲಿನ ಕೂಲಿಯ ದರವನ್ನು ಹೆಚ್ಚಳ ಮಾಡಿ ಅಧಿಸೂಚನೆ ಹೊರಡಿಸಿದೆ. ₹ 7ರಿಂದ ₹ 26ರ ತನಕ ವೇತನ ಹೆಚ್ಚಳವಾಗಿದೆ.

ರಾಜಸ್ಥಾನದಲ್ಲಿ ವೇತನ ಪ್ರಮಾಣ ಶೇ 10.39ರಷ್ಟು ಹೆಚ್ಚಳ ಮಾಡಲಾಗಿದೆ. ಇದು ದೇಶದಲ್ಲೇ ಗರಿಷ್ಠ. ಆದರೆ ರಾಜಸ್ಥಾನದಲ್ಲಿ ದಿನಗೂಲಿ ₹ 255 ರಷ್ಟೇ ಇದೆ. ಹರಿಯಾಣದಲ್ಲಿ ದೇಶದಲ್ಲೇ ಗರಿಷ್ಠ ಪ್ರಮಾಣದ ದಿನಗೂಲಿ ₹ 357 ಇದೆ.

ದೇಶದಲ್ಲೇ ಅತ್ಯಂತ ಕನಿಷ್ಠ ದಿನಗೂಲಿ ಇರುವ ರಾಜ್ಯಗಳ ಪಟ್ಟಿಯಲ್ಲಿ ಮಧ್ಯಪ್ರದೇಶ ಮತ್ತು ಛತ್ತೀಸ್‌ಗಢ ಇವೆ. ಈ ಎರಡೂ ರಾಜ್ಯಗಳಲ್ಲಿ ₹ 221 ಮಾತ್ರ ಇದೆ. ಛತ್ತೀಸಗಢ ಮತ್ತು ಮಧ್ಯಪ್ರದೇಶದಲ್ಲಿ ಕಳೆದ ವರ್ಷ ₹ 204 ವೇತನವಿತ್ತು. ಈ ವರ್ಷ ಶೇ 17ರಷ್ಟು ಪ್ರಮಾಣದಲ್ಲಿ ವೇತನ ಹೆಚ್ಚಳವಾಗಿದ್ದು ವೇತನದರವು ₹221 ಆಗಿದೆ.

ಬಿಹಾರ ಮತ್ತು ಜಾರ್ಖಂಡ್ ರಾಜ್ಯಗಳಲ್ಲೂ ವೇತನ ದರವು ಕಳೆದ ವರ್ಷಕ್ಕಿಂತ ಶೇ 8ರಷ್ಟು ಹೆಚ್ಚಳವಾಗಿದೆ. ಕಳೆದ ವರ್ಷ ಈ ರಾಜ್ಯಗಳಲ್ಲಿ ದಿನಕ್ಕೆ ₹ 210 ವೇತನವಿತ್ತು. ಇದೀಗ ₹ 228ಕ್ಕೆ ವೇತನ ಹೆಚ್ಚಳವಾಗಿದೆ.

ಈ ಬಾರಿಯ ಬಜೆಟ್‌ನಲ್ಲಿ ನರೇಗಾಕ್ಕೆ ತೆಗೆದಿರಿಸಿದ ಮೊತ್ತವನ್ನು ₹ 60 ಸಾವಿರ ಕೋಟಿಗೆ ಮಿತಿಗೊಳಿಸಲಾಗಿದ್ದು, ಇದು ಕಳೆದ ನಾಲ್ಕು ವರ್ಷಗಳಲ್ಲಿ ಅತ್ಯಂತ ಕನಿಷ್ಠ ಮೊತ್ತವಾಗಿದೆ.

ಅನರ್ಹತೆ: ದೇಶದಾದ್ಯಂತ ಕಾಂಗ್ರೆಸ್ ಸತ್ಯಾಗ್ರಹ

ಒಂದನೇ ಪುಟದಿಂದ...

ಗುಜರಾತ್ ಗಲಭೆಯ ಸಂತ್ರಸ್ತರನ್ನು 'ಪಪ್ಪಿ' ಎಂದು ಮೋದಿ ಕರೆದಿದ್ದರು ಎಂಬ ಆರೋಪವನ್ನು ಖರ್ಗೆ ಉಲ್ಲೇಖಿಸಿದ್ದಾರೆ. 'ಜನರನ್ನು ನಾಯಿ ಎಂದು ಕರೆದಿರುವ ವ್ಯಕ್ತಿಯು ಈಗ ಒಬಿಸಿಗಳ ಕುರಿತು ಮಾತನಾಡುತ್ತಿದ್ದಾರೆ. ದೇಶದ ಹಣವನ್ನು ತೆಗೆದುಕೊಂಡು ಪರಾರಿಯಾದವರ ಕುರಿತು ರಾಹುಲ್ ಮತ್ತು ಕಾಂಗ್ರೆಸ್ ಮಾತನಾಡಿದರೆ ಮೋದಿ ಅವರಿಗೆ ಚಿಂತೆ ಏತಕೆ' ಎಂದು ಅವರು ಪ್ರಶ್ನಿಸಿದ್ದಾರೆ.

'ಸಂವಿಧಾನ ಬಚಾವೊ, ಲೋಕತಂತ್ರ ಬಚಾವೊ ಸಂಕಲ್ಪ ಸತ್ಯಾಗ್ರಹ'ವು ರಾಜ್‌ಘಾಟ್‌ನಲ್ಲಿ ಬೆಳಿಗ್ಗೆ 10 ಗಂಟೆಗೆ ಆರಂಭವಾಯಿತು.

ಕಾನೂನು ಸುವ್ಯವಸ್ಥೆ ಮತ್ತು ಸಂಚಾರ ಸಮಸ್ಯೆಯ ಕಾರಣ ನೀಡಿ ಪೊಲೀಸರು ಆರಂಭದಲ್ಲಿ ಸತ್ಯಾಗ್ರಹ ನಡೆಸಲು ಅನುಮತಿ ನಿರಾಕರಿಸಿದ್ದರು. ಅಪರಾಧ ಪ್ರಕ್ರಿಯಾ ಸಂಹಿತೆಯ ಸೆಕ್ಷನ್ 144ರ ಅಡಿಯಲ್ಲಿ ಈ ಪ್ರದೇಶದಲ್ಲಿ ನಿರ್ಬಂಧಗಳನ್ನೂ ಹೇರಲಾಗಿತ್ತು.

ಕಾಂಗ್ರೆಸ್ ಮತ್ತು ತಮ್ಮ ಕುಟುಂಬದ ಮೇಲೆ ಆಗುತ್ತಿರುವ ದಾಳಿಯ ಕುರಿತು ಪ್ರಿಯಾಂಕಾ ಅವರು ಮಾತನಾಡಿದರು. ಅದಾನಿ ಪ್ರಕರಣ ಸೇರಿ ಇತರ ವಿಚಾರಗಳ ಕುರಿತೂ ಅವರು ಮಾತನಾಡಿದರು.

'ಪ್ರಧಾನಿಯು ಹೇಡಿ, (ಹೀಗೆ ಹೇಳಿದ್ದಕ್ಕೆ) ನನ್ನ ಮೇಲೆಯೂ ಪ್ರಕರಣ ದಾಖಲಿಸಿ ನನ್ನನ್ನು ಸೆರೆಮನೆಗೆ ಹಾಕಿ. ಆದರೆ, ಸತ್ಯ ಏನೆಂದರೆ ಪ್ರಧಾನಿ ಹೇಡಿಯಾಗಿದ್ದಾರೆ. ಅವರು ಅಧಿಕಾರದ ಹಿಂದೆ ಅವಿತಿದ್ದಾರೆ. ದುರಹಂಕಾರಿಯಾಗಿದ್ದಾರೆ' ಎಂದರು.

ಸಂಸತ್ತಿನಲ್ಲಿ ಅದಾನಿ ಪ್ರಕರಣ ಕುರಿತಂತೆ ತಮ್ಮ ಮುಂದಿನ ಭಾಷಣದ ಕುರಿತು ಪ್ರಧಾನಿ ಭೀತರಾಗಿದ್ದಾರೆ ಎಂದು ರಾಹುಲ್ ಅವರು ಶನಿವಾರ ಹೇಳಿದ್ದರು. ತಮ್ಮ ಅಣ್ಣ ರಾಹುಲ್ ಅವರನ್ನು ಪ್ರಿಯಾಂಕಾ ಅವರು ಬಲವಾಗಿ ಸಮರ್ಥಿಸಿಕೊಂಡರು.

ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಪಾದಯಾತ್ರೆ ನಡೆಸಿ ದೇಶವನ್ನು ಒಗ್ಗಟ್ಟಾಗಿಸುವ ಕುರಿತು ಮಾತನಾಡಿದ ವ್ಯಕ್ತಿಯು ದೇಶವನ್ನು ಅವಮಾನಿಸಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.

ತೀನ್‌ಮೂರ್ತಿ ಭವನದಿಂದ ರಾಜ್‌ಘಾಟ್ ಸಮೀಪ ಇರುವ ವೀರಭೂಮಿವರೆಗೆ ನಡೆದುಕೊಂಡು ಹೋಗಿ ತಮ್ಮ ತಂದೆ ರಾಜೀವ್ ಗಾಂಧಿ ಅವರ ಅಂತ್ಯಕ್ರಿಯೆಯನ್ನು ರಾಹುಲ್ ಹೇಗೆ ನಡೆಸಿದ್ದರು ಎಂಬುದನ್ನು ಪ್ರಿಯಾಂಕಾ ನೆನಪಿಸಿಕೊಂಡರು.

'ನನ್ನ ತಂದೆಯ ತ್ರಿವರ್ಣದಲ್ಲಿ ಸುತ್ತಿದ ದೇಹ ಮತ್ತು ರಾಹುಲ್ ನಡೆಸಿದ ಅಂತ್ಯಕ್ರಿಯೆ ಚಿತ್ರವು ಈಗಲೂ ನನ್ನ ಮನದಲ್ಲಿದೆ. 400 ಮೀಟರ್ ದೂರದಲ್ಲಿ ನಾನು ನಿಂತಿದ್ದೆ. ನನ್ನ ಹುತಾತ್ಮ ತಂದೆಯನ್ನು ಸಂಸತ್ತಿನಲ್ಲಿ ಅವಮಾನಿಸಲಾಗಿದೆ. ಹುತಾತ್ಮ ವ್ಯಕ್ತಿಯ ಮಗನನ್ನು ದೇಶವಿರೋಧಿ ಮೀರ್ ಜಾಫರ್ ಎಂದು ಕರೆಯಲಾಗಿದೆ. ನನ್ನ ತಾಯಿಯನ್ನು ಸಚಿವರು ಸಂಸತ್ತಿನಲ್ಲಿ ಅವಮಾನಿಸಿದ್ದಾರೆ. ರಾಹುಲ್‌ಗೆ ತಮ್ಮ ತಂದೆ ಯಾರೆಂಬುದೇ ಗೊತ್ತಿಲ್ಲ ಎಂದು ಮುಖ್ಯಮಂತ್ರಿಯೊಬ್ಬರು ಹೇಳಿದ್ದಾರೆ' ಎಂದು ಪ್ರಿಯಾಂಕಾ ಹೇಳಿದರು.

'ನಮ್ಮ ಕುಟುಂಬವು ನೆಹರೂ ಉಪನಾಮವನ್ನು ಬಳಸುತ್ತಿಲ್ಲ ಎಂದು ಪ್ರಧಾನಿ ಸಂಸತ್ತಿನಲ್ಲಿ ಹೇಳಿದ್ದಾರೆ. ನಮ್ಮ ಕುಟುಂಬವನ್ನು ಅವಮಾನಿಸಲಾಗಿದೆ. ಕಾಶ್ಮೀರಿ ಪಂಡಿತ ಸಮುದಾಯದ ವಂಶಾವಳಿಯನ್ನು ಅವಮಾನಿಸಲಾಗಿದೆ. ಆದರೆ, ನಿಮ್ಮ ಮೇಲೆ ಪ್ರಕರಣಗಳು ದಾಖಲಾಗಿಲ್ಲ. ಯಾರಿಗೂ ಜೈಲು ಶಿಕ್ಷೆಯಾಗಿಲ್ಲ, ಯಾರೂ ಅನರ್ಹಗೊಂಡಿಲ್ಲ. ನನ್ನ ಅಣ್ಣ ಮಾಡಿದ್ದಾದರೂ ಏನು? ಆತ ಪ್ರಧಾನಿಯನ್ನು ಅಪ್ಪಿಕೊಂಡಿದ್ದ. ನಮ್ಮ ಸಿದ್ಧಾಂತಗಳು ಬೇರೆ ಬೇರೆ ಆಗಿರಬಹುದು. ಆದರೆ, ನಮ್ಮದು ದ್ವೇಷದ ಸಿದ್ಧಾಂತ ಅಲ್ಲ' ಎಂದು ಅವರು ವಿವರಿಸಿದರು.

ನೆಹರೂ– ಗಾಂಧಿ ಕುಟುಂಬದ ಮೇಲೆ ಆಗುತ್ತಿರುವ ದಾಳಿಯನ್ನೂ ಅವರು ಉಲ್ಲೇಖಿಸಿದರು.

'ನಮ್ಮ ಕುಟುಂಬವು ರಕ್ತ ಹರಿಸಿ ಪ್ರಜಾಪ್ರಭುತ್ವವನ್ನು ಪೋಷಿಸಿದೆ. ಶ್ರೀರಾಮ ಯಾರು? ಅವರದ್ದೂ ವಂಶ ರಾಜಕಾರಣವೇ? ಕುಟುಂಬ ಮತ್ತು ದೇಶದ ಪರಂಪರೆಯನ್ನು ರಕ್ಷಿಸುವುದಕ್ಕಾಗಿ ಅವರು ವನವಾಸಕ್ಕೆ ಹೋದರು. ಕುಟುಂಬದ ಗೌರವ ಉಳಿಸಿಕೊಳ್ಳುವುದಕ್ಕಾಗಿ ಹೋರಾಡಿದ ಪಾಂಡವರದ್ದು ಕೂಡ ವಂಶ ರಾಜಕಾರಣವೇ? ನಮ್ಮ ಕುಟುಂಬದ ಸದಸ್ಯರು ಹುತಾತ್ಮರಾಗಿದ್ದಾರೆ ಮತ್ತು ನಮ್ಮ ತ್ರಿವರ್ಣ ಧ್ವಜದಲ್ಲಿ ನಮ್ಮ ಕುಟುಂಬದ ರಕ್ತವಿದೆ ಎಂಬುದಕ್ಕೆ ನಾವು ಅವಮಾನಪಡಬೇಕೇ' ಎಂದು ಅವರು ಪ್ರಶ್ನಿಸಿದರು.

'ರಾಹುಲ್ ಹಾರ್ವರ್ಡ್ ಮತ್ತು ಕೇಂಬ್ರಿಜ್‌ನ ಪದವೀಧರ. ಆತನನ್ನು ನೀವು ಪಪ್ಪು ಎಂದು ಕರೆದಿರಿ. ಆದರೆ, 'ಭಾರತ್ ಜೋಡೊ ಯಾತ್ರೆ'ಯಲ್ಲಿ ಜನರು ಆತನೊಂದಿಗೆ ಹೆಜ್ಜೆ ಹಾಕಿದ್ದನ್ನು ನೀವು ನೋಡಿದ್ದೀರಿ' ಎಂದರು.

'ದೇಶಕ್ಕಾಗಿ ಬಹಳಷ್ಟನ್ನು ಮಾಡಿದ್ದೇವೆ ಮತ್ತು ಇನ್ನಷ್ಟು ಮಾಡುವ ಶಕ್ತಿ ಹೊಂದಿದ್ದೇವೆ ಎಂದು ಮೋದಿ ನೇತೃತ್ವದ ಸರ್ಕಾರ ಹೇಳುತ್ತಿದೆ. ಹಾಗಿದ್ದರೆ ಅಡುಗೆ ಅನಿಲ ದರವನ್ನು ಕಡಿಮೆ ಮಾಡಿ, ಜನರಿಗೆ ಉದ್ಯೋಗ ಕೊಡಿ... ಆದರೆ ಅವರು ಸಾಮಾನ್ಯ ಜನರನ್ನು ಮೇಲೆತ್ತುವುದಿಲ್ಲ. ಅದಾನಿಯಂಥವರನ್ನು ಮಾತ್ರ ಮೇಲೆತ್ತುತ್ತಾರೆ' ಎಂದರು.

ರಾಹುಲ್ ಪದವಿ ಕುರಿತು ಪ್ರಿಯಾಂಕಾ ಹೇಳಿದ್ದು ಸುಳ್ಳು: ಮಾಳವೀಯ

ನವದೆಹಲಿ (ಪಿಟಿಐ): ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ರಾಹುಲ್ ಗಾಂಧಿ ಅವರ ಪದವಿಗಳ ಕುರಿತು ಸುಳ್ಳು ಹೇಳಿದ್ದಾರೆ ಎಂದು ಬಿಜೆಪಿ ಐ.ಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಆರೋಪಿಸಿದ್ದಾರೆ.

'ರಾಹುಲ್ ಗಾಂಧಿ ಸಲ್ಲಿಸಿದ ಯಾವುದೇ ಪ್ರಮಾಣಪತ್ರದಲ್ಲಿ ಹಾರ್ವರ್ಡ್ ಪದವಿಯ ಕುರಿತು ಉಲ್ಲೇಖ ಮಾಡಿಲ್ಲ. ಪ್ರಿಯಾಂಕಾ ಅವರು ಅವರ ಅನರ್ಹ ಅಣ್ಣನಂತೆ ಸುಳ್ಳು ಹೇಳುತ್ತಿದ್ದಾರೆ. ಈ ಕುಟುಂಬದಲ್ಲಿ ನಕಲಿ ಅಲ್ಲದ್ದು ಏನಾದರೂ ಇದೆಯೇ?' ಎಂದು ಮಾಳವೀಯ ಅವರು ಟ್ವೀಟ್ ಮಾಡಿದ್ದಾರೆ.

'ಪಪ್ಪು' ಎಂಬ ಪದವನ್ನು ಪ್ರಿಯಾಂಕಾ ಎಷ್ಟು ಬಾರಿ ಉಚ್ಚರಿಸಿದ್ದಾರೆ ಎಂಬುದು ತಮಗೆ ಲೆಕ್ಕಕ್ಕೇ ಸಿಕ್ಕಿಲ್ಲ ಎಂದೂ ಮಾಳವೀಯ ಟ್ವೀಟ್‌ನಲ್ಲಿ ಹೇಳಿದ್ದಾರೆ.

ಗಾಂಧೀಜಿಗೆ ಅವಮಾನ: ಬಿಜೆಪಿ

ಒಂದನೇ ಪುಟದಿಂದ

ಇದು ಕಾಂಗ್ರೆಸ್‌ನ ದುರಹಂಕಾರ ಮತ್ತು ಅಶಿಸ್ತಿನ ನಿರ್ಲಜ್ಜ ಪ್ರದರ್ಶನವಾಗಿದೆ. ಈ ಪ್ರತಿಭಟನೆಯಲ್ಲಿ ಸತ್ಯಕ್ಕಾಗಿ ಯಾವ ಹೋರಾಟವೂ ಇಲ್ಲ ಎಂದು ಅವರು ಆರೋಪಿಸಿದ್ದಾರೆ.

ಸೂರತ್‌ನ ನ್ಯಾಯಾಲಯವು ಕಾನೂನು ಪ್ರಕ್ರಿಯೆಯ ಮೂಲಕವೇ ರಾಹುಲ್ ತಪ್ಪಿತಸ್ಥ ಎಂದು ತೀರ್ಪು ನೀಡಿದೆ. ಅದರ ಪರಿಣಾಮವಾಗಿ, ಕಾನೂನುಬದ್ಧವಾಗಿಯೇ ಅವರ ಸಂಸತ್ ಸದಸ್ಯತ್ವ ಅನರ್ಹಗೊಂಡಿದೆ. ಹೀಗಿರುವಾಗ ಸತ್ಯಾಗ್ರಹ ಏನಕ್ಕಾಗಿ ಎಂದು ಅವರು ಪ್ರಶ್ನಿಸಿದ್ದಾರೆ.

1984ರಲ್ಲಿ ನಡೆದ ಸಿಖ್ ವಿರೋಧಿ ಗಲಭೆಯಲ್ಲಿ ಭಾಗಿಯಾದ ಆರೋಪ ಹೊತ್ತವರು 'ಸತ್ಯಾಗ್ರಹ'ದಲ್ಲಿ ಸೇರಿಕೊಂಡಿದ್ದಾರೆ. ಗಾಂಧೀಜಿ ಅವರ ಸಮಾಧಿ ಸ್ಥಳದಲ್ಲಿ ನಡೆದ ಪ್ರತಿಭಟನೆಯು ಅಹಿಂಸಾ ವಿರೋಧಿಯೂ ಆಗಿದೆಯೇ ಎಂದು ಸುಧಾಂಶು ಕೇಳಿದ್ದಾರೆ.

ಗಾಂಧಿ ಕುಟುಂಬವನ್ನು ಕಾನೂನು ಭಿನ್ನವಾಗಿ ನಡೆಸಿಕೊಳ್ಳಬೇಕು ಎಂದು ರಾಜ್ಯಸಭಾ ಸದಸ್ಯ ಪ್ರಮೋದ್ ತಿವಾರಿ ನೀಡಿದ್ದಾರೆ ಎನ್ನಲಾದ ಹೇಳಿಕೆಯನ್ನು ಬಿಜೆಪಿ ಉಲ್ಲೇಖಿಸಿದೆ. ಕಾಂಗ್ರೆಸ್ ತನ್ನನ್ನು ಕಾನೂನಿಗಿಂತ ಮೇಲೆ ಎಂದು ಭಾವಿಸಿದೆಯೇ ಎಂದೂ ಬಿಜೆಪಿ ಪ್ರಶ್ನಿಸಿದೆ.



ಸೋನಿಯಾ ಮತ್ತು ರಾಜೀವ್ ಗಾಂಧಿ ಅವರನ್ನು ಪ್ರಧಾನಿ ನರೇಂದ್ರ ಮೋದಿ ಪದೇ–ಪದೇ ಅವಮಾನಿಸಿದ್ದಾರೆ. ಮೋದಿಗೇಕೆ ಶಿಕ್ಷೆಯಾಗಿಲ್ಲ?

ನಾನಾ ಪಟೋಲೆ, ಮಹಾರಾಷ್ಟ್ರ ಕಾಂಗ್ರೆಸ್ ಅಧ್ಯಕ್ಷ



ರಾಹುಲ್ ಗಾಂಧಿಯ ಸದಸ್ಯತ್ವ ಅನರ್ಹತೆಯನ್ನು ಕಾನೂನು ಬದ್ಧವಾಗಿಯೇ ಮಾಡಲಾಗಿದೆ. ಈ ಕ್ರಮವನ್ನು ಪ್ರಶ್ನಿಸುವುದು, ಸಂವಿಧಾನವನ್ನು ಪ್ರಶ್ನಿಸಿದಂತೆ

ಜಿತೇಂದ್ರ ಸಿಂಗ್, ಕೇಂದ್ರ ಸಚಿವ

ಬಯೊದಲ್ಲಿ 'ಡಿಸ್'ಕ್ವಾಲಿಫೈಡ್ ಎಂಪಿ'

ರಾಹುಲ್ ಅವರು ಸಾಮಾಜಿಕ ಜಾಲತಾಣಗಳ ತಮ್ಮೆಲ್ಲ ಖಾತೆಗಳಲ್ಲಿನ 'ಬಯೊ'ದಲ್ಲಿ 'ಡಿಸ್'ಕ್ವಾಲಿಫೈಡ್ ಎಂಪಿ' ಎಂದು ಬರೆದುಕೊಂಡಿದ್ದಾರೆ. ಟ್ವಿಟರ್, ಫೇಸ್‌ಬುಕ್, ಇನ್‌ಸ್ಟಾಗ್ರಾಂಗಳಲ್ಲಿ ಈ ಬದಲಾವಣೆ ಮಾಡಿಕೊಳ್ಳಲಾಗಿದೆ. ಈಗ ಅವರ 'ಬಯೊ' ಹೀಗಿದೆ: ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸದಸ್ಯ. ಡಿಸ್'ಕ್ವಾಲಿಫೈಡ್ ಎಂಪಿ.

- ರಾಹುಲ್ ಗಾಂಧಿ ಅವರ ಸದಸ್ಯತ್ವ ಅನರ್ಹತೆಯನ್ನು ಖಂಡಿಸಿ ದೇಶದಾದ್ಯಂತ ಸೋಮವಾರ ಮತ್ತೆ ಪ್ರತಿಭಟನೆ ನಡೆಸಲು ಕಾಂಗ್ರೆಸ್ ಮುಂದಾಗಿದೆ
- ಪುದುಚೇರಿಯ ಪ್ರದೇಶ ಕಾಂಗ್ರೆಸ್ ಸಮಿತಿಯು ಸೋಮವಾರ ಒಂದು ದಿನದ ಉಪವಾಸ ಸತ್ಯಾಗ್ರಹಕ್ಕೆ ತೀರ್ಮಾನಿಸಿದೆ; ಹಿಮಾಚಲ ಪ್ರದೇಶದಲ್ಲಿ ರಾಜ್ಯದಾದ್ಯಂತ ಪ್ರತಿಭಟನೆಗೆ ಕರೆ ನೀಡಲಾಗಿದೆ
- ಗುವಾಹಟಿಯಲ್ಲಿ ಕಾಂಗ್ರೆಸ್ ಘಟಕ ಭಾನುವಾರ ಹಮ್ಮಿಕೊಂಡಿದ್ದ ಪ್ರತಿಭಟನೆಗೆ 10 ವಿರೋಧ ಪಕ್ಷಗಳು ಕೈಜೋಡಿಸಿದವು. ರೈಜೋರ್ ದಳ, ಎಡಪಕ್ಷಗಳು, ಅಸ್ಸಾಂ ಜಾತೀಯ ಪರಿಷದ್, ಎಎಪಿ ಮತ್ತು ಎನ್‌ಸಿಪಿ ಬೆಂಬಲ ಸೂಚಿಸಿದವು
- ಭೋಪಾಲ್‌ನಲ್ಲಿ ರೈಲುತಡೆ ನಡೆಸಿದ ಕಾರಣಕ್ಕೆ ಮಧ್ಯಪ್ರದೇಶ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ವಿಕ್ರಾಂತ್ ಭುರಿಯಾ ಅವರನ್ನು ಪೊಲೀಸರು ಭಾನುವಾರ ಬಂಧಿಸಿದರು

'ನಿತೀಶ್‌ಗೆ ವಿಪಕ್ಷ ನಾಯಕನಾಗುವ ಕನಸು'

ಪಟ್ನಾ (ಪಿಟಿಐ): 'ಜೆಡಿಯು ಮುಖ್ಯಸ್ಥ ಮತ್ತು ಬಿಹಾರ ಮುಖ್ಯಮಂತ್ರಿ ನಿತೀಶ್‌ಕುಮಾರ್, ಎಲ್ಲಾ ವಿರೋಧ ಪಕ್ಷಗಳ ನಾಯಕನಾಗುವ ಕನಸು ಕಾಣುತ್ತಿದ್ದಾರೆ. ಹೀಗಾಗಿಯೇ ಅವರು ರಾಹುಲ್ ಗಾಂಧಿಯ ಸದಸ್ಯತ್ವ ಅನರ್ಹತೆ ಬಗ್ಗೆ ಮಾತನಾಡುತ್ತಿಲ್ಲ' ಎಂದು ಕೇಂದ್ರ ಸಚಿವ ಗಿರಿರಾಜ್ ಸಿಂಗ್ ಹೇಳಿದ್ದಾರೆ.

'ಜೆಡಿಯು ಪಕ್ಷದ ಹಲವು ನಾಯಕರು ರಾಹುಲ್ ಗಾಂಧಿಯನ್ನು ಬೆಂಬಲಿಸಿ ಮಾತನಾಡಿದ್ದಾರೆ. ಆದರೆ, ನಿತೀಶ್ ಮಾತ್ರ ತುಟಿ ಬಿಚ್ಚುತ್ತಿಲ್ಲ. ಅವರ ಎದುರು, ಅವರ ಭವಿಷ್ಯ ಉಜ್ವಲವಾಗಿ ಕಾಣುತ್ತಿರಬೇಕು. ಬಿಜೆಪಿ ವಿರೋಧಿ ಪಕ್ಷಗಳ ನೇತೃತ್ವ ವಹಿಸಿಕೊಳ್ಳುವ ಮಹತ್ವಾಕಾಂಕ್ಷೆ ಈಗ ಆ ಎಲ್ಲಾ ಪಕ್ಷಗಳ ನಾಯಕರಲ್ಲಿ ಹುಟ್ಟುತ್ತಿರುವಂತಿದೆ' ಎಂದು ಅವರು ಹೇಳಿದ್ದಾರೆ.

ಕ್ಷಮೆ ಕೇಳಲು ತಾನು ಸಾವರ್ಕರ್ ಅಲ್ಲ ಎಂಬ ರಾಹುಲ್ ಗಾಂಧಿಯ ಮಾತನ್ನೂ ಗಿರಿರಾಜ್ ಟೀಕಿಸಿದ್ದಾರೆ. 'ಇನ್ನೂ ಹಲವು ಜನ್ಮ ಎತ್ತಿಬಂದರೂ, ಸಾವರ್ಕರ್ ಅವರಂತಾಗಲು ರಾಹುಲ್‌ಗೆ ಸಾಧ್ಯವಿಲ್ಲ' ಎಂದು ಅವರು ಹೇಳಿದ್ದಾರೆ.

ಬಡವರ ಕಲ್ಯಾಣಕ್ಕೆ ಆರೋಗ್ಯ ಯೋಜನೆಗಳ ಗರಿ



ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಅವರ ನೇತೃತ್ವದಲ್ಲಿ ಆರೋಗ್ಯ ಇಲಾಖೆ ಜನಪರವಾದ ಹತ್ತು ಹಲವು ಯೋಜನೆಗಳನ್ನು ಜಾರಿಗೊಳಿಸಿದೆ. ಮಹಿಳೆಯರು, ಬಡವರು, ಮಧ್ಯಮವರ್ಗದವರು, ದಲಿತರು, ಕಾರ್ಮಿಕರು, ಮಕ್ಕಳು– ಹೀಗೆ ಎಲ್ಲ ವರ್ಗದ ಜನರ ಆರೋಗ್ಯದ ಹಿತವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಮಹತ್ವದ ಯೋಜನೆಗಳನ್ನು ರಾಜ್ಯ ಸರ್ಕಾರ ಜಾರಿಗೊಳಿಸಿದೆ. ನಿಕಟಪೂರ್ವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಹಕಾರ ಮತ್ತು ಡಾ.ಕೆ.ಸುಧಾಕರ್ ಅವರ ನೇತೃತ್ವದಲ್ಲಿ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಆರೋಗ್ಯ ಸೌಲಭ್ಯಗಳು ದೊರೆಯುತ್ತಿವೆ.

ಬಡವರು, ಕೊಳೆಗೇರಿ ಜನರಿಗಾಗಿ 'ನಮ್ಮ ಕ್ಲಿನಿಕ್'

ನಗರ ಪ್ರದೇಶಗಳಲ್ಲಿ ಬಡವರು, ದುರ್ಬಲರು ಮತ್ತು ಕೊಳೆಗೇರಿಗಳಲ್ಲಿ ವಾಸಿಸುವ ಜನರ ಆರೋಗ್ಯವನ್ನು ಕಾಪಾಡುವ ಸಲುವಾಗಿ ಮತ್ತು ಅವರಿಗೆ ಸಮಗ್ರ ಪ್ರಾಥಮಿಕ ಆರೋಗ್ಯ ಸೇವೆಗಳನ್ನು ಒದಗಿಸಲು ಆರೋಗ್ಯ ಇಲಾಖೆ 'ನಮ್ಮ ಕ್ಲಿನಿಕ್' ಯೋಜನೆಯನ್ನು ಜಾರಿಗೊಳಿಸಿದೆ.

ಕರ್ನಾಟಕದಲ್ಲಿ 438 ನಮ್ಮ ಕ್ಲಿನಿಕ್ ಸ್ಥಾಪಿಸಲಾಗುತ್ತಿದೆ. 50,000 ಜನಸಂಖ್ಯೆಯುಳ್ಳ ನಗರ ಪ್ರದೇಶಗಳ ಬಡ ಜನರಿಗಾಗಿ ನಮ್ಮ ಕ್ಲಿನಿಕ್ ಸ್ಥಾಪಿಸಲಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 2022ರ ಡಿಸೆಂಬರ್‌ನಲ್ಲಿ ಧಾರವಾಡದ ಬೈರೇದೇವರಕೊಪ್ಪದಲ್ಲಿ 'ನಮ್ಮ ಕ್ಲಿನಿಕ್' ಉದ್ಘಾಟಿಸುವ ಮೂಲಕ ಯೋಜನೆಗೆ ಚಾಲನೆ ನೀಡಿದರು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸೇರಿದಂತೆ ರಾಜ್ಯದ ಎಲ್ಲೆಡೆ ಒಟ್ಟು 438 'ನಮ್ಮ ಕ್ಲಿನಿಕ್' ನಡೆಯುತ್ತಿವೆ.

'ನಮ್ಮ ಕ್ಲಿನಿಕ್'ಗಳಲ್ಲಿ ಗರ್ಭಿಣಿ ಮತ್ತು ಜನನ ಸಮಯದ ಆರೈಕೆ, ನವಜಾತ ಮತ್ತು ಶಿಶುವಿನ ಸಮಗ್ರ ಆರೋಗ್ಯ ಆರೈಕೆ, ಬಾಲ್ಯ ಮತ್ತು ಹದಿಹರೆಯದವರ ಸಮಗ್ರ ಆರೋಗ್ಯ ಸೇವೆಗಳು, ಸಾಂಕ್ರಾಮಿಕ ರೋಗಗಳ ನಿರ್ವಹಣೆ, ಸಾಮಾನ್ಯ ಮತ್ತು ಸಣ್ಣ ಪ್ರಮಾಣದ ಕಾಯಿಲೆಗಳಿಗೆ ಹೊರ ರೋಗಿ ಸೇವೆಗಳು, ಸಾಂಕ್ರಾಮಿಕ (ಟಿ.ಬಿ, ಕುಷ್ಠ ಇತ್ಯಾದಿ) ಮತ್ತು ಅಸಾಂಕ್ರಾಮಿಕ ರೋಗಗಳ (ಮಧುಮೇಹ, ರಕ್ತದೊತ್ತಡ, ದೀರ್ಘಾವಧಿ ಶ್ವಾಸಕೋಶ ಕಾಯಿಲೆ, ಕೀಲು ನೋವು ಮತ್ತು ಸಂಧಿವಾತ, ಬಾಯಿ, ಸ್ತನ ಮತ್ತು ಗರ್ಭಕಂಠ ಕ್ಯಾನ್ಸರ್ ಇತ್ಯಾದಿ), ಸುಟ್ಟ ಗಾಯಗಳು, ಅಪಘಾತ, ಮತ್ತಿತರ ಚಿಕಿತ್ಸೆಗಳನ್ನು ಉಚಿತವಾಗಿ ಒದಗಿಸಲಾಗುತ್ತಿದೆ.

ಆಯುಷ್ಮಾನ್ ಕರ್ನಾಟಕ; 22ಲಕ್ಷ ಕಾರ್ಡ್ ವಿತರಣೆ ಇಂದು

ಕೇಂದ್ರ ಮತ್ತು ರಾಜ್ಯ ಸರ್ಕಾರ ಜಾರಿಗೊಳಿಸಿರುವ 'ಆಯುಷ್ಮಾನ್ ಭಾರತ–ಆರೋಗ್ಯ ಕರ್ನಾಟಕ' ಆರೋಗ್ಯ ಇಲಾಖೆಯ ಜನಪ್ರಿಯ ಯೋಜನೆಯ ಜತೆಗೆ ಬಡವರು, ಮಧ್ಯಮ ವರ್ಗದವರಿಗೆ ಆರೋಗ್ಯ ಸಂಜೀವಿನಿ ಎನಿಸಿದೆ.

ಚಿಕ್ಕಬಳ್ಳಾಪುರದಲ್ಲಿ ಮಾ.27ರಂದು ನಡೆಯುವ ಕಾರ್ಯಕ್ರಮದಲ್ಲಿ ಕೇಂದ್ರ ಆರೋಗ್ಯ ಸಚಿವರು 22 ಲಕ್ಷ ಆಯುಷ್ಮಾನ್ ಭಾರತ–ಆರೋಗ್ಯ ಕರ್ನಾಟಕ ಯೋಜನೆಯ ಗುರುತಿನ ಚೀಟಿಗಳನ್ನು ವಿತರಿಸಲು ಚಾಲನೆ ನೀಡಲಿದ್ದಾರೆ. ಕಾರ್ಯಕ್ರಮದಲ್ಲಿ ಸಾಂಕೇತಿಕವಾಗಿ ಕೆಲವರಿಗೆ ಗುರುತಿನ ಚೀಟಿಗಳನ್ನು ನೀಡಲಾಗುತ್ತದೆ. ಉಳಿದ ಫಲಾನುಭವಿಗಳಿಗೆ ಏಪ್ರಿಲ್ ಕೊನೆಯ ವೇಳೆಗೆ ಗುರುತಿನ ಚೀಟಿಗಳನ್ನು ವಿತರಿಸುವ ಗುರಿಯನ್ನು ಆರೋಗ್ಯ ಇಲಾಖೆ ಹೊಂದಿದೆ.

ರಾಜ್ಯದಲ್ಲಿ ಪ್ರಸ್ತುತ 3,300ಕ್ಕೂ ಹೆಚ್ಚಿನ ಆರೋಗ್ಯ ಸಂಸ್ಥೆಗಳು 'ಆಯುಷ್ಮಾನ್ ಭಾರತ–ಆರೋಗ್ಯ ಕರ್ನಾಟಕ' ಸೇವೆ ನೀಡಲು ಹೆಸರು ನೋಂದಾಯಿಸಿಕೊಂಡಿವೆ. ದೇಶದ ಎಲ್ಲ ರಾಜ್ಯಗಳಿಗಿಂತ ಕರ್ನಾಟಕದಲ್ಲಿ ಹೆಚ್ಚು ಆರೋಗ್ಯ ಸಂಸ್ಥೆಗಳು ನೋಂದಣಿ ಆದ ಹೆಗ್ಗಳಿಕೆ ಇದೆ. ಯೋಜನೆಯಡಿ ಬಿಪಿಎಲ್ ಪಡಿತ ಚೀಟಿ ಹೊಂದಿರುವ ಕುಟುಂಬಗಳು ವಾರ್ಷಿಕ ₹ 5 ಲಕ್ಷದವರೆಗೆ ಸೌಲಭ್ಯ ಪಡೆಯಬಹುದು. ಎಪಿಎಲ್ ಪಡಿತರ ಚೀಟಿ ಹೊಂದಿರುವ ಕುಟುಂಬಗಳು ವಾರ್ಷಿಕ ₹ 1.5 ಲಕ್ಷ ವೆಚ್ಚದ ಚಿಕಿತ್ಸೆಗಳನ್ನು ಪಡೆಯಬಹುದು. ಇಲ್ಲಿಯವರೆಗೆ ರಾಜ್ಯದಲ್ಲಿ 1.38 ಕೋಟಿ ಗುರುತಿನ ಚೀಟಿಗಳನ್ನು ಯೋಜನೆಯಡಿ ವಿತರಿಸಲಾಗಿದೆ.

ವನಿತೆಯರಿಗೆ ಆಯುಷ್ಮತಿ ಕ್ಲಿನಿಕ್

ಮಹಿಳೆಯರು, ಹೆಣ್ಣು ಮಕ್ಕಳು ಹದಿಹರೆಯ, ಋತುಚಕ್ರ, ಮಾತೃತ್ವ ಹೀಗೆ ಹಲವು ಹಂತಗಳಲ್ಲಿ ಸಾಗುವರು. ಪ್ರತಿ ಹಂತದಲ್ಲೂ ಆಗುವ ದೈಹಿಕ ಬದಲಾವಣೆ, ಹಾರ್ಮೋನ್‌ಗಳ ಅಸಮತೋಲನ, ಇತ್ಯಾದಿಗಳಿಂದಾಗಿ ಮಾನಸಿಕವಾಗಿ ಕುಗ್ಗುವುದು, ಮುಟ್ಟಿನ ಸಮಸ್ಯೆಯ ಸಮಯದ ಶುಚಿತ್ವದ ಕೊರತೆಯಿಂದಾಗಿ ಕಾಯಿಲೆಗಳಿಗೆ ತುತ್ತಾಗುವ ಸಾಧ್ಯತೆ ಹೆಚ್ಚಿದೆ.

ಹೀಗೆ ಮಹಿಳೆಯರನ್ನು ಆರೋಗ್ಯ ಸಮಸ್ಯೆಗಳಿಂದ ಮುಕ್ತಗೊಳಿಸಲು ರಾಜ್ಯದಾದ್ಯಂತ ಸರ್ಕಾರ 'ಮಹಿಳಾ ಸ್ವಾಸ್ಥ್ಯ ಕ್ಲಿನಿಕ್‌ಗಳು-ಆಯುಷ್ಮತಿ ಕ್ಲಿನಿಕ್'ಗಳನ್ನು ಸ್ಥಾಪಿಸಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 50 ಮತ್ತು ಬೆಂಗಳೂರು ಹೊರತುಪಡಿಸಿ ಉಳಿದ ಕಡೆಗಳಲ್ಲಿ 50 ಆಯುಷ್ಮತಿ ಕ್ಲಿನಿಕ್‌ಗಳನ್ನು ಸ್ಥಾಪಿಸಲಾಗಿದೆ.

ಮಹಿಳೆಯರಿಗೆ ಆಯುಷ್ಮತಿ ಕ್ಲಿನಿಕ್ ಗಳಲ್ಲಿ ತಜ್ಞ ವೈದ್ಯರ ಸೇವೆ, ಆಪ್ತ ಸಮಾಲೋಚನ ಸೇವೆಗಳು, ಲ್ಯಾಬ್ ಪರೀಕ್ಷೆಗಳು, ಉಚಿತ ಔಷಧಿ, ಕ್ಷೇಮ ಚಟುವಟಿಕೆಗಳಾದ ಯೋಗ ಮತ್ತು ಧ್ಯಾನ ಮತ್ತು ರೆಫರಲ್ ಸೇವೆಗಳನ್ನು ಉಚಿತವಾಗಿ ಒದಗಿಸಲಾಗುತ್ತಿದೆ.

STEMI ನಿರ್ವಹಣಾ ಯೋಜನೆ

ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಮತ್ತು ಟ್ರೈಕಾಗ್ ಹೆಲ್ತ್ ಪ್ರೈವೇಟ್ ಲಿಮಿಟೆಡ್ ಸಹಭಾಗಿತ್ವದಲ್ಲಿ STEMI ನಿರ್ವಹಣಾ ಯೋಜನೆ ಆರಂಭಿಸಲಾಗಿದೆ. ತಾಲ್ಲೂಕು ಆಸ್ಪತ್ರೆಗಳಲ್ಲಿ ಹೃದಯ ಸಂಬಂಧಿ ಕಾಯಿಲೆಗಳಿಗೆ ಚಿಕಿತ್ಸೆ ನೀಡಲಾಗುತ್ತದೆ. ಇದರಿಂದ ಪ್ರಯಾಣದ ವೆಚ್ಚ, ಸಮಯ ಹಾಗೂ ಮರಣ ಪ್ರಮಾಣವು ಕಡಿಮೆ ಆಗುತ್ತದೆ.

ಬೆಂಗಳೂರು, ಮೈಸೂರು, ಕಲಬುರಗಿಯಲ್ಲಿರುವ ಜಯದೇವ ಆಸ್ಪತ್ರೆ, ಆಯ್ದ ಹತ್ತು ಜಿಲ್ಲಾ ಆಸ್ಪತ್ರೆ ಮತ್ತು 35 ತಾಲ್ಲೂಕು ಆಸ್ಪತ್ರೆಗಳಲ್ಲಿ ಈ ಸೌಲಭ್ಯ ದೊರೆಯಲಿದೆ. ಅಂತರ ಸೌಲಭ್ಯ ವರ್ಗಾವಣೆಗಾಗಿ ಆಂಬುಲೆನ್ಸ್ ಸೇವೆ ಹಾಗೂ ಡಾಟಾ ಎಂಟ್ರಿ ಸಾಮರ್ಥ್ಯದೊಂದಿಗೆ ಮಲ್ಟಿಫಂಕ್ಷನಲ್ 12 ಲೀಡ್ ಇಸಿಜಿ ಇಂಟಿಗ್ರೇಟೆಡ್ ಮಲ್ಟಿ–ಪ್ಯಾರಾ ಮೀಟರ್ ಮಾನಿಟರಿಂಗ್ ಯೂನಿಟ್ ಅನ್ನು ಆಸ್ಪತ್ರೆ ಮತ್ತು ಅವುಗಳನ್ನು ಸಂಪರ್ಕಿಸುವ ಆಂಬುಲೆನ್ಸ್‌ಗಳಲ್ಲಿ ಸ್ಥಾಪಿಸಲಾಗಿದೆ.

ಶ್ರವಣದೋಷ ನಿವಾರಣೆಗೆ ದಿಟ್ಟ ಹೆಜ್ಜೆ

ಮಕ್ಕಳಲ್ಲಿನ ಶ್ರವಣದೋಷ ಹೋಗಲಾಡಿಸಲು ರಾಜ್ಯ ಸರ್ಕಾರ ದೃಢ ಹೆಜ್ಜೆ ಇಟ್ಟಿದೆ. ಮಕ್ಕಳನ್ನು ಸದೃಢ ರಾಷ್ಟ್ರದ ಸಂಪತ್ತನ್ನಾಗಿ ಮಾಡಲು ರಾಜ್ಯ ಸರ್ಕಾರ ಯೋಜನೆಗಳನ್ನು ಜಾರಿಗೊಳಿಸಿದೆ.

- ಮಕ್ಕಳಲ್ಲಿನ ಕಿವುಡುತನಕ್ಕೆ ಸಂಬಂಧಿಸಿಂತೆ ಒಟ್ಟು 26,959 ಮಕ್ಕಳನ್ನು ತಪಾಸಣೆಗೆ ಒಳಪಡಿಸಲಾಗಿದೆ. ಈ ಪೈಕಿ 2,959 ಮಕ್ಕಳಲ್ಲಿ ತೀವ್ರತರನಾದ ಕಿವುಡುತನ ಕಂಡು ಬಂದಿದೆ.
- 2022-23ನೇ ಸಾಲಿನ ಬಜೆಟ್ ನಲ್ಲಿ 500 ಗಂಭೀರ ಶ್ರವಣದೋಷವುಳ್ಳ (ಹುಟ್ಟು ಕಿವುಡು) ಮಕ್ಕಳಿಗೆ ಕಾಕ್ಲಿಯರ್ ಇಂಪ್ಲಾಂಟ್ ಗಳನ್ನು ಅಳವಡಿಸಿ ವಾಕ್ ಶ್ರವಣ ಉತ್ತಮಪಡಿಸಲು ₹ 32 ಕೋಟಿ ಅನುದಾನ ಸಹ ನೀಡಲಾಗಿದೆ.
- ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆ, ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆ, ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆ, ಅಪೋಲೊ ಆಸ್ಪತ್ರೆ, ಹುಬ್ಬಳ್ಳಿಯ ಕಿಮ್ಸ್, ಮೈಸೂರಿನ ಕೆ.ಆರ್ ಆಸ್ಪತ್ರೆ, ಜೆಎಸ್ ಎಸ್ ಆಸ್ಪತ್ರೆ, ಚಿಕ್ಕಬಳ್ಳಾಪುರದ ಸತ್ಯ ಸಾಯಿ ಆಸ್ಪತ್ರೆ, ಬೆಳಗಾವಿಯ ಕೆಎಲ್ ಇ ಆಸ್ಪತ್ರೆಗಳನ್ನು ಶ್ರವಣದೋಷ ಮುಕ್ತ ಕರ್ನಾಟಕ ಯೋಜನೆಯಡಿ ನೋಂದಾಯಿಸಲಾಗಿದೆ. ಇತರ ತೃತೀಯ ಆರೈಕೆ ಕೇಂದ್ರಗಳನ್ನು ವಿಭಾಗಿಯ ಮಟ್ಟದಲ್ಲಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಅಡಿ ನೋಂದಾಯಿಸಲು ಕ್ರಮಕೈಗೊಳ್ಳಲಾಗಿದೆ. ಈ ಆಸ್ಪತ್ರೆ ಗಳಲ್ಲಿ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರ ಚಿಕಿತ್ಸೆಯನ್ನು ನುರಿತ ತಜ್ಞ ವೈದ್ಯರಿಂದ ನಡೆಸಲಾಗುತ್ತದೆ.
- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿ ರಾಷ್ಟ್ರೀಯ ಶ್ರವಣದೋಷ ನಿಯಂತ್ರಣ ಮತ್ತು ನಿವಾರಣಾ ಕಾರ್ಯಕ್ರಮದಿಂದ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ಅನುಷ್ಠಾನಗೊಳ್ಳುತ್ತದೆ. ಈ ಕಾರ್ಯಕ್ರಮ ಗಂಭೀರ ಶ್ರವಣದೋಷವುಳ್ಳ ಮಕ್ಕಳಿಗೆ ಉಚಿತ ಚಿಕಿತ್ಸೆ ಒದಗಿಸಲಾಗುತ್ತದೆ. ಕಾಕ್ಲಿಯರ್ ಇಂಪ್ಲಾಂಟ್ ಅಳವಡಿಕೆ, ಶಸ್ತ್ರ ಚಿಕಿತ್ಸೆ ನಂತರ ಒಂದು ವರ್ಷದ ಅವಧಿಯವರೆಗೆ ಪುನರ್ವಸತಿ ಸೌಲಭ್ಯ ಸಹ ಕಲ್ಪಿಸಲಾಗುತ್ತದೆ ಒಟ್ಟು ಪ್ಯಾಕೇಜ್ ಮೊತ್ತವು ಶಸ್ತ್ರಚಿಕಿತ್ಸೆ ಮತ್ತು ಪುನರ್ವಸತಿ ಒಳಗೊಂಡು ₹ 6.27 ಲಕ್ಷ ಆಗಿರುತ್ತದೆ.




'ಕಾಲೇಜು ಆರೋಗ್ಯಧಾಮವಾಗಲಿದೆ'

ಯಾವುದೇ ಸ್ವಾರ್ಥಕ್ಕಾಗಿ ಚಿಕ್ಕಬಳ್ಳಾಪುರದಲ್ಲಿ ವೈದ್ಯಕೀಯ ಶಿಕ್ಷಣ ಕಾಲೇಜು ಸ್ಥಾಪಿಸಿಲ್ಲ. ಸಾಮಾನ್ಯ ಜನರ ಸೇವೆಗಾಗಿ ಕಾಲೇಜು ಸ್ಥಾಪಿಸಲಾಗಿದೆ. ತವರು ಜಿಲ್ಲೆಯಲ್ಲಿ ವೈದ್ಯಕೀಯ ಶಿಕ್ಷಣ ಕಾಲೇಜು ನಿರ್ಮಾಣವಾಗಬೇಕು ಎಂದು ಚಿಕ್ಕ ವಯಸ್ಸಿನಲ್ಲಿ ಕಂಡಿದ್ದ ಕನಸು ನನಸಾಗುತ್ತಿದೆ. ಮುಂದಿನ ದಿನಗಳಲ್ಲಿ ಜಿಲ್ಲೆಯಲ್ಲಿ ಇದು ಆರೋಗ್ಯಧಾಮವಾಗಲಿದೆ. ಈ ಭಾಗದ ಬಡ ವಿದ್ಯಾರ್ಥಿಗಳಿಗೆ ಮತ್ತು ಜನರ ಆರೋಗ್ಯ ಸುಧಾಕರಣೆಗೆ ಅನುಕೂಲವಾಗಲಿದೆ.

ಡಾ.ಕೆ.ಸುಧಾಕರ್, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ





ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ನನ್ನ ನೋವು ಯಾರದೋ ನಗುವಿಗೆ ಕಾರಣವಾಗಿರಬಹುದು. ಆದರೆ ನನ್ನ ನಗು ಎಂದಿಗೂ ಯಾರ ನೋವಿಗೂ ಕಾರಣವಾಗಬಾರದು.

-ಚಾರ್ಲಿ ಚಾಪ್ಲಿನ್

ಡೆಟ್ ಫಂಡ್: ತೆರಿಗೆ ಬದಲಾವಣೆ ಸಣ್ಣ ಹೂಡಿಕೆದಾರರಿಗೆ ಹೊರೆ

ಕೇಂದ್ರ ಸರ್ಕಾರ ಮಂಡಿಸಿದ ಹಣಕಾಸು ಮಸೂದೆ- 2023ಕ್ಕೆ ಲೋಕಸಭೆಯು ಚರ್ಚೆಯಿಲ್ಲದೆ ಅನುಮೋದನೆ ನೀಡಿದೆ. ಪ್ರಮುಖ ಮಸೂದೆಗಳು ಚರ್ಚೆಯಿಲ್ಲದೆ ಶಾಸನಸಭೆಗಳ ಅನುಮೋದನೆ ಪಡೆದುಕೊಳ್ಳುವುದು ಹೊಸದೇನೂ ಅಲ್ಲ. ಆದರೆ, ಕಳೆದ ವಾರ ಲೋಕಸಭೆಯ ಅನುಮೋದನೆ ಪಡೆದ ಹಣಕಾಸು ಮಸೂದೆಯಲ್ಲಿ, ಡೆಟ್ (ಸಾಲಪತ್ರ) ಮ್ಯೂಚುವಲ್ ಫಂಡ್‌ಗಳ ತೆರಿಗೆ ವಿಚಾರವಾಗಿ ಮಹತ್ವದ ಬದಲಾವಣೆಗಳು ಅಡಕವಾಗಿವೆ. ಇದು ಚರ್ಚೆಯಿಲ್ಲದೆ ಅನುಮೋದನೆ ಪಡೆದುಕೊಂಡಿದ್ದು ಸಣ್ಣ ಹೂಡಿಕೆದಾರರ ಪಾಲಿಗೆ ಹಿತಕರವಾಗಿ ಇಲ್ಲ. ಈ ಬದಲಾವಣೆಗಳು ಏಕೆ ಅಹಿತಕರ ಎಂಬುದನ್ನು ತಿಳಿದುಕೊಳ್ಳುವ ಮೊದಲು ಮಾರ್ಚ್ 31ರವರೆಗೆ ಜಾರಿಯಲ್ಲಿ ಇರುವ ನಿಯಮಗಳು ಏನು ಹೇಳುತ್ತವೆ ಎಂಬುದನ್ನು ಗಮನಿಸಬೇಕು. ಹೂಡಿಕೆದಾರರು ತಮ್ಮ ಹಣವನ್ನು ಡೆಟ್ ಮ್ಯೂಚುವಲ್ ಫಂಡ್‌ಗಳಲ್ಲಿ ಮೂರು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ತೊಡಗಿಸಿದ್ದರೆ, ಅದರಿಂದ ಸಿಗುವ ಲಾಭಕ್ಕೆ ದೀರ್ಘಾವಧಿ ಬಂಡವಾಳ ವೃದ್ಧಿ (ಎಲ್‌ಟಿಸಿಜಿ) ತೆರಿಗೆ ವಿಧಿಸಲಾಗುತ್ತದೆ. ಇಷ್ಟೇ ಅಲ್ಲ, ತೆರಿಗೆ ಲೆಕ್ಕ ಹಾಕುವಾಗ ಹೂಡಿಕೆದಾರರಿಗೆ ಇಂಡೆಕ್ಸೇಷನ್ (ಹಣದುಬ್ಬರದ ಪ್ರಮಾಣವನ್ನು ಪರಿಗಣಿಸಿ ತೆರಿಗೆ ಲೆಕ್ಕ ಮಾಡುವುದು) ಪ್ರಯೋಜನ ಸಿಗುತ್ತದೆ. ಇಂಡೆಕ್ಸೇಷನ್ ಪ್ರಯೋಜನವನ್ನು ಬಳಸಿಕೊಂಡರೆ ಹೂಡಿಕೆದಾರರು ಡೆಟ್ ಮ್ಯೂಚುವಲ್ ಫಂಡ್‌ಗಳಿಂದ ಸಿಗುವ ಲಾಭಕ್ಕೆ ಕೊಡಬೇಕಾದ ತೆರಿಗೆ ಮೊತ್ತವು ತಗ್ಗುತ್ತದೆ. ಬ್ಯಾಂಕ್ ನಿಶ್ಚಿತ ಠೇವಣಿಗಳಿಗೆ ಸಿಗುವ ಲಾಭಕ್ಕೆ ತೆರಿಗೆ ಲೆಕ್ಕ ಹಾಕುವಾಗ ಈ ಬಗೆಯ ಸೌಲಭ್ಯ ಇಲ್ಲ. ಇಲ್ಲಿ ದೊರೆಯುವ ಬಡ್ಡಿಗೆ ಠೇವಣಿ ಇರಿಸಿದವರ ವೈಯಕ್ತಿಕ ತೆರಿಗೆ ಹಂತಕ್ಕೆ ಅನುಗುಣವಾಗಿ ತೆರಿಗೆ ಪಾವತಿ ಮಾಡಬೇಕಾಗುತ್ತದೆ. ಡೆಟ್ ಮ್ಯೂಚುವಲ್ ಫಂಡ್‌ಗಳು ಜನಪ್ರಿಯವಾಗುವುದಕ್ಕೆ ಎಲ್‌ಟಿಸಿಜಿ ಹಾಗೂ ಇಂಡೆಕ್ಸೇಷನ್ ಪ್ರಯೋಜನ ಪಡೆದುಕೊಳ್ಳುವ ಅವಕಾಶ ಕಲ್ಪಿಸಿದ್ದೂ ಒಂದು ಕಾರಣ.



ಹಣದುಬ್ಬರ ಮಿತಿ ಮೀರಿರುವ ಸಂದರ್ಭದಲ್ಲಿ, ತುಸು ಹೆಚ್ಚಿನ ಲಾಭ ಗಳಿಸಲು ಸಣ್ಣ ಹೂಡಿಕೆದಾರರಿಗೆ ಇರುವ ಅವಕಾಶವನ್ನು ಮೊಟಕುಗೊಳಿಸಬಾರದು

ಡೆಟ್ ಮ್ಯೂಚುವಲ್ ಫಂಡ್‌ಗಳಲ್ಲಿ ಮಾಡಿದ ಹೂಡಿಕೆಯನ್ನು ಮೂರು ವರ್ಷಗಳಿಗಿಂತ ಮೊದಲೇ ನಗದೀಕರಿಸಿಕೊಂಡರೆ ಹೂಡಿಕೆದಾರರು ತಮ್ಮ ವೈಯಕ್ತಿಕ ಆದಾಯ ತೆರಿಗೆ ಹಂತಕ್ಕೆ ಅನುಗುಣವಾಗಿ ತೆರಿಗೆ ಪಾವತಿಸಬೇಕು. ಆದರೆ, ಏಪ್ರಿಲ್ 1ರಿಂದ ಅನ್ವಯ ಆಗುವ ಹೊಸ ನಿಯಮಗಳ ಪ್ರಕಾರ, ಡೆಟ್ ಮ್ಯೂಚುವಲ್ ಫಂಡ್ ಹೂಡಿಕೆಗಳಿಂದ ಸಿಗುವ ಲಾಭಕ್ಕೆ ಅಲ್ಪಾವಧಿ ಬಂಡವಾಳ ವೃದ್ಧಿ ತೆರಿಗೆಯನ್ನು ವಿಧಿಸಲಾಗುತ್ತದೆ. ಅಂದರೆ, ಇಂಡೆಕ್ಸೇಷನ್ ಪ್ರಯೋಜನ ಇರುವುದಿಲ್ಲ. ಹಣದುಬ್ಬರ ಯಾವುದೇ ಮಟ್ಟದಲ್ಲಿರಲಿ, ಲಾಭಕ್ಕೆ ತೆರಿಗೆಯನ್ನು ಹೂಡಿಕೆದಾರನು ತನ್ನ ವೈಯಕ್ತಿಕ ತೆರಿಗೆ ಹಂತಕ್ಕೆ ಅನುಗುಣವಾಗಿ ಪಾವತಿ ಮಾಡಬೇಕಾಗುತ್ತದೆ. ದೇಶಿ ಕಂಪನಿಗಳ ಷೇರುಗಳಲ್ಲಿ ಶೇಕಡ 35ಕ್ಕಿಂತ ಕಡಿಮೆ ಮೊತ್ತವನ್ನು ತೊಡಗಿಸಿರುವ ಮ್ಯೂಚುವಲ್ ಫಂಡ್‌ಗಳಿಗೆ, ಚಿನ್ನದ ವಿನಿಮಯ ವಹಿವಾಟು ನಿಧಿಗಳಿಗೆ (ಇಟಿಎಫ್) ಇದು ಅನ್ವಯವಾಗುತ್ತದೆ. ಇದರಿಂದಾಗಿ, ತೆರಿಗೆ ಲೆಕ್ಕಹಾಕುವ ವಿಚಾರದಲ್ಲಿ, ಈ ಬಗೆಯ ಮ್ಯೂಚುವಲ್ ಫಂಡ್‌ಗಳು ಹಾಗೂ ಬ್ಯಾಂಕ್ ಠೇವಣಿಗಳು ಒಂದೇ ಆಗಲಿವೆ. ಕೇಂದ್ರ ಸರ್ಕಾರವು ತರಲಿರುವ ಬದಲಾವಣೆಯ ಪರಿಣಾಮವಾಗಿ, ಡೆಟ್ ಫಂಡ್‌ಗಳಿಂದ ಒಂದಿಷ್ಟು ಹಣ ಬ್ಯಾಂಕ್ ನಿಶ್ಚಿತ ಠೇವಣಿಗಳ ಕಡೆ ಹರಿಯಬಹುದು ಎಂಬ ನಿರೀಕ್ಷೆ ಇದೆ. ಡೆಟ್ ಫಂಡ್‌ಗಳಿಗೆ ಬ್ಯಾಂಕ್ ನಿಶ್ಚಿತ ಠೇವಣಿಗಳು ಕೊಡುವ ಬಡ್ಡಿಗಿಂತ ಹೆಚ್ಚಿನ ಲಾಭವನ್ನು ತಂದುಕೊಡುವ ಶಕ್ತಿ ಇದೆ ಎಂಬುದು ಇಲ್ಲಿ ಗಮನಾರ್ಹ.

ದೇಶದ ಬ್ಯಾಂಕ್‌ಗಳು ನೀಡುವ ಸಾಲದ ಪ್ರಮಾಣ ಹೆಚ್ಚುತ್ತಿದೆ. ಆದರೆ ಬ್ಯಾಂಕ್‌ಗಳಲ್ಲಿ ಜನ ಠೇವಣಿ ಇರಿಸುವ ಪ್ರಮಾಣವು ಇದಕ್ಕೆ ಹೋಲಿಸಿದರೆ ಕಡಿಮೆ ಇದೆ. ಷೇರು ಮಾರುಕಟ್ಟೆಯ 'ರಿಸ್ಕ್' ತೆಗೆದುಕೊಳ್ಳಲು ಇಷ್ಟಪಡದ ಸಣ್ಣ ಹೂಡಿಕೆದಾರರು ತಮ್ಮ ಹಣವನ್ನು ತೊಡಗಿಸುವುದು ನಿಶ್ಚಿತ ಠೇವಣಿಗಳಲ್ಲಿ ಅಥವಾ ಡೆಟ್ ಮ್ಯೂಚುವಲ್ ಫಂಡ್‌ಗಳಲ್ಲಿ. ಡೆಟ್ ಮ್ಯೂಚುವಲ್ ಫಂಡ್‌ಗಳ ಆಕರ್ಷಣೆಯನ್ನು ತಗ್ಗಿಸಿ, ಅಲ್ಲಿನ ಹಣವು ನಿಶ್ಚಿತ ಠೇವಣಿಗಳ ಕಡೆ ಹರಿಯುವಂತೆ ಮಾಡುವ ಉದ್ದೇಶ ಕೂಡ ಕೇಂದ್ರದ ನಡೆಯ ಹಿಂದೆ ಇದ್ದಿರಬಹುದು. ಆದರೆ ಈ ನಡೆಯು ದೇಶದ ಬಾಂಡ್ ಮಾರುಕಟ್ಟೆಯ ಮೇಲೆ ಕೆಟ್ಟ ಪರಿಣಾಮ ಬೀರಬಹುದು ಎಂಬ ಕಳವಳವನ್ನು ಉದ್ಯಮದ ಪ್ರತಿನಿಧಿಗಳು ವ್ಯಕ್ತಪಡಿಸಿದ್ದಾರೆ. ದೇಶದ ಕಾರ್ಪೊರೇಟ್ ವಲಯಕ್ಕೆ ಬಂಡವಾಳ ಸಂಗ್ರಹಿಸಲು ಬಾಂಡ್ ಮಾರುಕಟ್ಟೆ ಕೂಡ ಒಂದು ವೇದಿಕೆ. ಸಣ್ಣ ಹೂಡಿಕೆದಾರರಿಗೆ ಬಾಂಡ್‌ಗಳಿಂದ ಸಿಗುವ ನಿಶ್ಚಿತ ಆದಾಯವನ್ನು ಅನುಭವಿಸುವುದಕ್ಕೆ ಡೆಟ್ ಮ್ಯೂಚುವಲ್ ಫಂಡ್‌ಗಳು ಸುಲಭದ ಸಾಧನ. ದೇಶದ ಬಾಂಡ್ ಮಾರುಕಟ್ಟೆ ಇನ್ನಷ್ಟು ಶಕ್ತಿಯುತವಾಗಬೇಕು ಎಂದಾದರೆ, ಸಣ್ಣ ಹೂಡಿಕೆದಾರರು ಅಲ್ಲಿ ಹೆಚ್ಚು ಹಣ ತೊಡಗಿಸಲು ಇನ್ನಷ್ಟು ಉತ್ತೇಜನ ಕೊಡಬೇಕು. ಇರುವ ಉತ್ತೇಜಕ ಕ್ರಮಗಳನ್ನು ಕಿತ್ತುಕೊಳ್ಳಬಾರದು. ಅದರಲ್ಲೂ, ಹಣದುಬ್ಬರ ಮಿತಿ ಮೀರಿರುವ ಸಂದರ್ಭದಲ್ಲಿ, ತುಸು ಹೆಚ್ಚಿನ ಲಾಭ ಗಳಿಸಲು ಸಣ್ಣ ಹೂಡಿಕೆದಾರರಿಗೆ ಇರುವ ಅವಕಾಶವನ್ನು ಮೊಟಕುಗೊಳಿಸಬಾರದು.

ಅಧಿಕಾರಸ್ಥರು ನೈತಿಕಶಕ್ತಿ ಪ್ರದರ್ಶಿಸಬೇಕೇ ವಿನಾ ಕಾನೂನಿನ ಗುರಾಣಿಯನ್ನಲ್ಲ

ಸಾಹಿತ್ಯ ಇರುವಲ್ಲಿ ಸರ್ವಾಧಿಕಾರಕ್ಕೇನು ಕೆಲಸ?



ಪಡಸಾಲೆ

ರಘುನಾಥ ಚ.ಹ.

ರಾಹುಲ್ ಗಾಂಧಿ ಅವರನ್ನು ಲೋಕಸಭಾ ಸದಸ್ಯತ್ವದಿಂದ ಅನರ್ಹಗೊಳಿಸಿರುವ ಕ್ರಮವನ್ನು ರಾಜಕೀಯ ಪಿತೂರಿ ಮತ್ತು ಸರ್ವಾಧಿಕಾರದ ರೂಪದಲ್ಲಿ ನೋಡಲಾಗುತ್ತಿದೆ. ಈ ಸರ್ವಾಧಿಕಾರಿ ಮನೋಭಾವ ಪ್ರಾದೇಶಿಕ ರೂಪದಲ್ಲೂ ಬಲಗೊಳ್ಳುತ್ತಿರುವುದಕ್ಕೆ ಉದಾಹರಣೆಯ ರೂಪದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ವಿದ್ಯಮಾನಗಳನ್ನು ಗಮನಿಸಬಹುದು. ಅನುಚಿತ ವರ್ತನೆಯ ಆರೋಪದಲ್ಲಿ ಸದಸ್ಯರೊಬ್ಬರನ್ನು ಪರಿಷತ್ತಿನ ಸದಸ್ಯತ್ವದಿಂದ ಅಮಾನತುಗೊಳಿಸಲಾಗಿದೆ ಹಾಗೂ ಅವರಿಗೆ ಪ್ರಕಟಿಸಲಾಗಿದ್ದ ಪ್ರಶಸ್ತಿಯನ್ನು ಹಿಂಪಡೆಯಲಾಗಿದೆ. ರಾಹುಲ್ ಗಾಂಧಿ ಎದುರಿಸುತ್ತಿರುವ ಕಾನೂನು-ರಾಜಕೀಯ ಬಿಕ್ಕಟ್ಟು ಹಾಗೂ ಸಾಹಿತ್ಯ ಪರಿಷತ್ತಿನ ಸದಸ್ಯರ ಅಮಾನತಿನ ಪ್ರಕರಣದ ಸ್ವರೂಪ ಭಿನ್ನವಾಗಿದ್ದರೂ, ಎರಡೂ ಘಟನೆಗಳ ಹಿಂದಿರುವ ಮನೋಭಾವ ಒಂದೇ ಆಗಿದೆ. ಅಧಿಕಾರದಲ್ಲಿ ಇರುವವರಿಗೆ ಅಂತಃಕರಣ ಮತ್ತು ಆತ್ಮಸಾಕ್ಷಿ ಇರಬೇಕೆನ್ನುವುದನ್ನು ಎರಡೂ ಪ್ರಕರಣಗಳು ಬೆಟ್ಟುಮಾಡಿ ಹೇಳುವಂತಿವೆ.

ಸಾಹಿತ್ಯ ಪರಿಷತ್ತಿನ ಇತ್ತೀಚಿನ ವಿದ್ಯಮಾನಗಳನ್ನು ಗಮನಿಸಿ. ಹಾವೇರಿ ಸಮ್ಮೇಳನದಲ್ಲಿನ ಅವ್ಯವಸ್ಥೆಯನ್ನು ಪ್ರಶ್ನಿಸಿರುವುದು ಹಾಗೂ ಸಾಹಿತ್ಯ ಪರಿಷತ್ತಿನ ವಿರುದ್ಧ ಒಂದು ನಿಮಿಷದ ಮೌನ ಆಚರಿಸಿರುವುದು ಸದಸ್ಯತ್ವದಿಂದ ಅಮಾನತುಗೊಂಡಿರುವ ಸದಸ್ಯರ ಮೇಲಿರುವ ಆರೋಪಗಳು. ಇಂಥ ಪ್ರತಿಭಟನೆಗಳು ಎದುರಾದಾಗ ಅಥವಾ ಸಾಹಿತ್ಯ ಪರಿಷತ್ತಿನ ಸದಸ್ಯರು ಒರಟಾಗಿಯೋ ಅನುಚಿತವಾಗಿಯೋ ನಡೆದುಕೊಂಡಾಗ, ಅಧ್ಯಕ್ಷರು ಮಾಡಬೇಕಾದುದು ತಿಳಿಹೇಳುವ ಕೆಲಸವನ್ನೇ ವಿನಾ ಕಾನೂನು ಕ್ರಮ ಜರುಗಿಸುವ ಮೂಲಕ ತಮಗಿರುವ ಅಧಿಕಾರವನ್ನು ಸಾಬೀತುಪಡಿಸುವುದಲ್ಲ. ನಿಯಮಗಳ ಮೂಲಕವೇ ಪ್ರತಿಯೊಂದನ್ನೂ ನಡೆಸುವುದಾದರೆ, ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೂ ಗುಮಾಸ್ತ ಸ್ಥಾನಕ್ಕೂ ವ್ಯತ್ಯಾಸವಿಲ್ಲದಂತಾಗುತ್ತದೆ.

ಸಾಹಿತ್ಯದ ಪ್ರಮುಖ ಉದ್ದೇಶ ಮನಸ್ಸನ್ನು ತಿಳಿಗೊಳಿಸುವುದು ಹಾಗೂ ವ್ಯಕ್ತಿ-ಸಮಷ್ಟಿ ನೆಲೆಗಟ್ಟಿನಲ್ಲಿ ಸೌಹಾರ್ದ ಮತ್ತು ಸೌಂದರ್ಯ ಹೆಚ್ಚಿಸುವುದು, ಸಂವಾದಗಳ ಮೂಲಕ ತಿಳಿವು ಅರಳಿಸುವುದು. ಸೌಹಾರ್ದ-ಸೌಂದರ್ಯದ ಆಡುಂಬೊಲವಾಗಬೇಕಿದ್ದ ಸಾಹಿತ್ಯ ಪರಿಷತ್ತು ಸಂಘರ್ಷದ ವೇದಿಕೆಯಾಗಲು ಪರಿಷತ್ತಿನ ಚುಕ್ಕಾಣಿ ಹಿಡಿದವರೇ ಅವಕಾಶ ಕಲ್ಪಿಸುತ್ತಿದ್ದಾರೆ. ಮಾತೃತ್ವದ ಮೂರ್ತರೂಪ ಆಗಿರಬೇಕಿದ್ದ ಅಧ್ಯಕ್ಷರು, ಭಿನ್ನಾಭಿಪ್ರಾಯಗಳನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿದ್ದಾರೆ. ಸಂವಾದ ಮತ್ತು ಸಂಘರ್ಷ ಸೃಜನಶೀಲವಾಗಿದ್ದಾಗ ಸಾಹಿತ್ಯದ ವಾತಾವರಣ ರೂಪುಗೊಳ್ಳುತ್ತದೆ. ಸೃಜನಶೀಲತೆಯ ಜಾಗದಲ್ಲಿ ವೈಯಕ್ತಿಕ ಪ್ರತಿಷ್ಠೆ ಕಾಣಿಸಿಕೊಂಡರೆ ಸಾಹಿತ್ಯದ ಮಾತುಗಳ ಬದಲು ಕಾನೂನಿನ ನುಡಿಗಟ್ಟುಗಳು ಕಾಣಿಸಿಕೊಳ್ಳುತ್ತವೆ ಹಾಗೂ ಸಾಹಿತ್ಯದ ಪಡಸಾಲೆಗಳು ಕೋರ್ಟು ಕಚೇರಿಗಳ ರೂಪ ಪಡೆದುಕೊಳ್ಳುತ್ತವೆ. ಕಾನೂನಿನ ಅಗತ್ಯವಿರುವುದು ಅಧಿಕಾರದಲ್ಲಿ ಇಲ್ಲದಿರುವವರಿಗೆ ಹಾಗೂ ಜನಸಾಮಾನ್ಯರಿಗೆ. ಅಧಿಕಾರ ಸ್ಥಾನದಲ್ಲಿರುವವರು ನೈತಿಕತೆಯನ್ನು ತಮ್ಮ ಶಕ್ತಿಯನ್ನಾಗಿ ಪ್ರದರ್ಶಿಸಬೇಕೇ ವಿನಾ ಕಾನೂನಿನ ಗುರಾಣಿಯನ್ನಲ್ಲ.

ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸದಸ್ಯರು ಏರುಧ್ವನಿಯಲ್ಲಿ ಮಾತನಾಡಬಾರದು ಹಾಗೂ ಸಭೆಯ ನಿರ್ಣಯಗಳ ಬಗ್ಗೆ ಮಾಧ್ಯಮ ಹೇಳಿಕೆಗಳನ್ನು ನೀಡಬಾರದು ಎನ್ನುವ ಪರಿಷತ್ತಿನ ಹೊಸ ನಿರ್ಬಂಧಗಳೂ ಸರ್ವಾಧಿಕಾರ ಸಂಸ್ಕೃತಿಗೆ ಅನುಗುಣವಾಗಿವೆಯೇ ಹೊರತು, 'ಸಂವಾದ ಸಂಸ್ಕೃತಿ'ಗೆ ಪೂರಕವಾಗಿಲ್ಲ. ಏರುದನಿಯಲ್ಲಿ ಮಾತನಾಡಬಾರದು ಎನ್ನುವ ಅಪೇಕ್ಷೆಯಲ್ಲಿ ಪ್ರಶ್ನೆಗಳನ್ನು ಹತ್ತಿಕ್ಕುವ ಧೋರಣೆಯಿದೆ. ಮಾತಿನ ಸ್ವರೂಪ ಮತ್ತು ಧ್ವನಿಗೆ ಕಡಿವಾಣ ಹಾಕಲು ಬಯಸುವುದು ಪರಿಷತ್ತು ಸಾಹಿತ್ಯದಿಂದ ಅಂತರ ಕಾಪಾಡಿಕೊಂಡು ಸರ್ಕಾರಿ ಕಚೇರಿಯ ಸ್ವರೂಪ ಪಡೆಯುತ್ತಿರುವ ಸೂಚನೆಯಂತಿದೆ.

ಒಂದೆಡೆ ಕೇಂದ್ರ ಸಾಹಿತ್ಯ ಪರಿಷತ್ತು ಸಾಹಿತ್ಯದ ಸಂವೇದನೆಗೂ ತನಗೂ ಸಂಬಂಧವಿಲ್ಲ ಎನ್ನುವಂತೆ ನಡೆದುಕೊಳ್ಳುತ್ತಿದ್ದರೆ, ಇನ್ನೊಂದೆಡೆ ಸಾಹಿತ್ಯ ಪರಿಷತ್ತಿನ ಒಳಗಿನಿಂದಲೇ ಪ್ರತಿಭಟನೆಯ ದನಿಗಳು ಸಣ್ಣ ಪ್ರಮಾಣದಲ್ಲಾದರೂ ಕೇಳಿಸುತ್ತಿರುವುದು ಕುತೂಹಲಕರ. ಪರಿಷತ್ತಿನ ಅಸ್ತಿತ್ವ ಉಳಿದುಕೊಂಡಿರುವುದು ಅದು ನಡೆಸುವ ವಾರ್ಷಿಕ ಸಾಹಿತ್ಯ ಸಮ್ಮೇಳನಗಳಲ್ಲಷ್ಟೆ. ಇತ್ತೀಚಿನ ವರ್ಷಗಳಲ್ಲಿ ಪ್ರತೀ ಸಮ್ಮೇಳನದ ಸಮಯದಲ್ಲೂ ಅವುಗಳ ಪ್ರಸ್ತುತತೆಯ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಆ ಚರ್ಚೆ ಹಾವೇರಿ ಸಮ್ಮೇಳನದಲ್ಲಿ ಮತ್ತಷ್ಟು ತೀವ್ರಗೊಂಡು, ಪ್ರಜಾಸತ್ತಾತ್ಮಕ ಸ್ವರೂಪವೂ ಸಮ್ಮೇಳನಕ್ಕಿಲ್ಲ ಎನ್ನುವ ಆರೋಪವೂ ಕೇಳಿಬಂತು. ರಾಜಕಾರಣದಲ್ಲಿ ಧರ್ಮವನ್ನು ಬೆರೆಸಲಾಗುತ್ತಿರುವ ಸೋಂಕು ಸಾಹಿತ್ಯ ಸಮ್ಮೇಳನಕ್ಕೂ ತಗುಲಿರುವ ಬಗ್ಗೆ ಆತಂಕ ವ್ಯಕ್ತವಾಯಿತು. ನಿರ್ದಿಷ್ಟ ಸಮುದಾಯವನ್ನು ಹೊರಗಿಟ್ಟುದನ್ನು ವಿರೋಧಿಸಿ ಬೆಂಗಳೂರಿನಲ್ಲಿ 'ಜನ ಸಾಹಿತ್ಯ ಸಮ್ಮೇಳನ' ಎನ್ನುವ ಸಮಾವೇಶವೂ ನಡೆಯಿತು. ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಕಣ್ಣಿಗೆ 'ಜನ ಸಾಹಿತ್ಯ ಸಮ್ಮೇಳನ' ಅತೃಪ್ತರ ಚಟುವಟಿಕೆಯಂತೆ ಕಂಡಿದೆ. ಆದರೆ, ಇಂಥ ಅಲ್ಪಸಂಖ್ಯಾತ ಅತೃಪ್ತರಿಂದಲೇ ಪ್ರಜಾಪ್ರಭುತ್ವದ ಮೌಲ್ಯಗಳು ಇಂದಿಗೂ ಜೀವಂತವಾಗಿರುವುದು.

ಸಾಹಿತ್ಯ ಪರಿಷತ್ತಿನಾಚೆಗೆ ಪರ್ಯಾಯಗಳ ಹುಡುಕಾಟ ನಡೆಯುತ್ತಿರುವುದು ಒಂದೆಡೆಯಾದರೆ, ಪರಿಷತ್ತಿನ ಚೌಕಟ್ಟಿನೊಳಗೇ ಪ್ರತಿಭಟನೆಯ ಧ್ವನಿ ಹಾಗೂ ಪರ್ಯಾಯಗಳ ಹುಡುಕಾಟದ ಅಪೇಕ್ಷೆ ವ್ಯಕ್ತವಾಗುತ್ತಿರುವುದು ಗಮನಾರ್ಹ. ಆಂತರಿಕ ಪ್ರತಿಭಟನೆ ಮತ್ತು ವಿಮರ್ಶೆಗೆ ಉದಾಹರಣೆಗಳಾಗಿ ಜಿಲ್ಲಾ ಮಟ್ಟದ ಹಾಗೂ ತಾಲ್ಲೂಕು ಮಟ್ಟದ ಕೆಲವು ಸಾಹಿತ್ಯ ಸಮ್ಮೇಳನಗಳನ್ನು ಗಮನಿಸಬಹುದು. ಹಿಂದಿನ ಮೂರು ತಿಂಗಳ ಅವಧಿಯಲ್ಲಿ ನಡೆದ ಚಿಕ್ಕನಾಯಕನಹಳ್ಳಿ ತಾಲ್ಲೂಕು ಸಾಹಿತ್ಯ ಸಮ್ಮೇಳನ ಹಾಗೂ ಕೋಲಾರ, ಚಿಕ್ಕಬಳ್ಳಾಪುರ, ಬಳ್ಳಾರಿ, ಬೆಂಗಳೂರು ನಗರ ಜಿಲ್ಲೆಗಳ ಸಾಹಿತ್ಯ ಸಮ್ಮೇಳನಗಳು ಗುಣಮಟ್ಟದ ದೃಷ್ಟಿಯಿಂದ ಕೇಂದ್ರ ಕಸಾಪದ ಸಮ್ಮೇಳನದ ಗೋಷ್ಠಿಗಳನ್ನು ಮೀರಿಸುವಂತಿದ್ದವು. ಬರಗೂರಿನಲ್ಲಿ ನಡೆದ ಹೋಬಳಿ ಮಟ್ಟದ ಸಮ್ಮೇಳನದ ಗೋಷ್ಠಿಗಳೂ ಮೌಲಿಕವಾಗಿದ್ದವು. ಸ್ವರೂಪದಲ್ಲಿ ಪುಟ್ಟದಾದ ಸಮ್ಮೇಳನವೊಂದು ನಾಡಿನ ವಿವಿಧ ಭಾಗಗಳ ವಿಷಯತಜ್ಞರನ್ನು ಒಳಗೊಳ್ಳುವ ಪ್ರಯತ್ನ ನಡೆಸಿದ್ದು ಕುತೂಹಲಕರವಾಗಿತ್ತು.



ಕೇಂದ್ರ ಸಾಹಿತ್ಯ ಪರಿಷತ್ತು ಪ್ರಜಾಪ್ರಭುತ್ವ ಮೌಲ್ಯಗಳಿಂದ ದೂರ ಸರಿಯುತ್ತಿರುವುದರ ಬಗ್ಗೆ ಈ ಸಮ್ಮೇಳನಗಳಲ್ಲಿ ಟೀಕೆ ಟಿಪ್ಪಣಿಗಳಿದ್ದವು. ಬೆಂಗಳೂರು ನಗರ ಜಿಲ್ಲೆಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಎಚ್.ಎಸ್. ಶ್ರೀಮತಿ ಅವರು, 'ಸದಸ್ಯತ್ವ ಅಮಾನತುಗೊಳಿಸಿ ಪ್ರಶಸ್ತಿ ವಾಪಸ್ ಪಡೆದಿರುವುದು ಪಿತೃಪ್ರಧಾನ ವ್ಯವಸ್ಥೆಯ ಮನಃಸ್ಥಿತಿ' ಎಂದು ಸಮ್ಮೇಳನದ ವೇದಿಕೆಯಲ್ಲಿಯೇ ಹೇಳಿರುವುದು ಗಮನಾರ್ಹ. ಪರಿಷತ್ತಿನ ವೇದಿಕೆಗಳಿಂದಲೇ ಹುಟ್ಟುತ್ತಿರುವ ಇಂಥ ವಿಮರ್ಶೆ, ಪ್ರತಿಭಟನೆಯ ದನಿಗಳಿಗೆ ವಿಶೇಷ ಮಹತ್ವವಿದೆ.

ಕಸಾಪ ವಿರುದ್ಧ ಪ್ರತಿಭಟನೆಯ ರೂಪದಲ್ಲಿ ಸದಸ್ಯರೊಬ್ಬರು ಮೌನಾಚರಣೆ ನಡೆಸಿದ್ದು ಸರಿಯಲ್ಲ ಎಂದು ಪರಿಷತ್ತಿನ ಅಧ್ಯಕ್ಷರು ಬೇಸರ ವ್ಯಕ್ತಪಡಿಸಿದ್ದಾರೆ. ಅವರ ಬೇಸರ ಸರಿಯಾಗಿಯೇ ಇದೆ. ಆದರೆ, ಪರಿಷತ್ತಿನ ಇತ್ತೀಚಿನ ಬೆಳವಣಿಗೆಗಳನ್ನು ಗಮನಿಸಿದರೆ, ಸಾಹಿತ್ಯದ ಅಂತಃಕರಣದ ಬಗ್ಗೆ ಮತ್ತು ಸಾಹಿತ್ಯ ಪರಿಷತ್ತಿನ ಘನ ಪರಂಪರೆಯ ಬಗ್ಗೆ ನಂಬಿಕೆಯುಳ್ಳವರ ಕಣ್ಣಿಗೆ ಪರಿಷತ್ತಿನ ಚುಕ್ಕಾಣಿ ಹಿಡಿದವರೇ ಮೌನಾಚರಣೆಯ ಮತ್ತೊಂದು ತುದಿಯಲ್ಲಿ ನಿಂತಿರುವಂತೆ ಕಾಣಿಸುತ್ತಿದೆ.

ಸರ್ವಾಧಿಕಾರಿ ಮನೋಭಾವ ಹಾಗೂ ಸಾಹಿತ್ಯ ಜೊತೆಜೊತೆಯಾಗಿ ನಡೆಯುವುದು ಸಾಧ್ಯವಿಲ್ಲ. ಕನ್ನಡ ಸಾಹಿತ್ಯ ಪರಂಪರೆಯಂತೂ ಸರ್ವಾಧಿಕಾರಿ ಧೋರಣೆಯನ್ನು ಸತತವಾಗಿ ವಿರೋಧಿಸಿಕೊಂಡೇ ಬಂದಿದೆ. ಸಾಹಿತ್ಯದ ಪೋಷಾಕಿನಲ್ಲಿ ನಡೆಯುತ್ತಿರುವ ಅಸಾಹಿತ್ಯಕ ಚಟುವಟಿಕೆಗಳನ್ನು ಹೊರತುಪಡಿಸಿದರೆ, ಸಮಕಾಲೀನ ಕನ್ನಡ ಸಾಹಿತ್ಯವೂ ನಿರಂಕುಶತೆಯ ವಿರೋಧಿಯಾಗಿಯೇ ಉಳಿದಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ವಿದ್ಯಮಾನಗಳಲ್ಲಿ ಕಾಣಿಸುತ್ತಿರುವ ಸರ್ವಾಧಿಕಾರಿ ಧೋರಣೆಯನ್ನು ಸಮಕಾಲೀನ ರಾಜಕೀಯ ವಿದ್ಯಮಾನಗಳ ಚೌಕಟ್ಟಿನಲ್ಲಿ ನೋಡಬೇಕು. ದೇಶವನ್ನು ಮುನ್ನಡೆಸುವ ಅಧಿಕಾರ ಸೂತ್ರಗಳನ್ನು ಹಿಡಿದವರೇ ಭಿನ್ನಾಭಿಪ್ರಾಯಗಳ ಬಗ್ಗೆ ಅಸಹನೆ ಮತ್ತು ಅಳುಕಿನಿಂದ ನಡೆದುಕೊಳ್ಳುತ್ತಿದ್ದಾರೆ. ಧರ್ಮವನ್ನು ರಾಜಕಾರಣದ ಭಾಗವಾಗಿಸಿಕೊಂಡವರು ಧರ್ಮಸೂಕ್ಷ್ಮವನ್ನು ಕಾಲಡಿಗೆ ಹಾಕಿಕೊಂಡಿದ್ದಾರೆ. ಅಧಿಕಾರಸ್ಥರ ಈ ಕಿಸುರುಗಣ್ಣಿನ ಹುಣ್ಣಿನ ಸೋಂಕು ಪ್ರಾದೇಶಿಕವಾಗಿ ಕಾಣಿಸದಿದ್ದೀತೆ?

ಸಾಹಿತ್ಯ ಪರಿಷತ್ತಿಗೆ ಸಂಬಂಧಿಸಿದಂತೆ ಟೀಕೆ ಟಿಪ್ಪಣಿಗಳು ಅದರೊಳಗಿನಿಂದಲೇ ಕೇಳಿಬರುತ್ತಿವೆ. ಅಷ್ಟರಮಟ್ಟಿಗೆ ಸಾಹಿತ್ಯ ಪರಿಷತ್ತಿನ ಆರೋಗ್ಯ ಇನ್ನೂ ಪೂರ್ಣ ಹದಗೆಟ್ಟಿಲ್ಲ ಎಂದು ಸಹೃದಯರು ಸಮಾಧಾನ ಹೊಂದಬಹುದು. ಆದರೆ, ಇಂಥ ಸಮಾಧಾನವನ್ನು ರಾಷ್ಟ್ರೀಯ ವಿದ್ಯಮಾನಗಳ ಬಗ್ಗೆ ಹೇಳುವುದು ಸಾಧ್ಯವೆ?

ಚುರುಮುರಿ



ಹಾಲಿನ ಕಳ್ಳರು

• ಸುಮಂಗಲಾ

ಹಿಂದಿನ ಬೀದಿಯಲ್ಲಿ ಗೇಟಿಗೆ ನೇತುಹಾಕಿದ್ದ ಚೀಲದಲ್ಲಿದ್ದ ಹಾಲಿನ ಪ್ಯಾಕೆಟ್ಟುಗಳನ್ನು ಯಾರೋ ತೂತು ಮಾಡಿ, ಹಾಲು ಕದಿಯುತ್ತಿದ್ದಾರೆ ಎಂದು ವಾಟ್ಸ್ಆ್ಯಪ್ ಮೆಸೇಜಿನಲ್ಲಿ ಬಂದಿತ್ತು.

ಮೆಸೇಜು ಓದಿದ ನಾನು ಸಹಜವಾಗಿ 'ಹಾಲಿನ ಪ್ಯಾಕೆಟ್ಟು ತೂತು ಮಾಡೋ ಕಳ್ಳರು ಅಂದ್ರೆ ಆ ಬೀದಿಬೆಕ್ಕುಗಳೇ' ಎಂದೆ.

ಬಹಳೇ ಘನಗಂಭೀರವಾಗಿ ನನ್ನ ಮಾತು ಕೇಳಿಸಿಕೊಂಡ ಬೆಕ್ಕಣ್ಣ ಥಟ್ಟನೆ, ಆ ಬೀದಿಯಲ್ಲಿರುವ ತನ್ನ ಗೆಳೆಯ ಬೀದಿಬೆಕ್ಕುಗಳ ಮುಖಂಡನಿಗೆ ಫೋನಾಯಿಸಿತು. ಏನಾಗುತ್ತಿದೆ ಎಂದು ಅರಿವಾಗುವಷ್ಟರಲ್ಲಿ ಬೆಕ್ಕುಗಳ ಮುಖಂಡ ನನ್ನ ಮೇಲೆ ಮಾನನಷ್ಟ ಮೊಕದ್ದಮೆ ಹೂಡಲು ಸಿದ್ಧವಾಗಿತ್ತು!

'ಅಲ್ಲಲೇ... ನಾ ಹೇಳಿದ್ದು ಹಾಲಿನ ಪ್ಯಾಕೆಟ್ಟು ತೂತು ಮಾಡೋ ಕಳ್ಳರು ಅಂದ್ರೆ ಬೆಕ್ಕುಗಳು ಅಂತ. ಎಲ್ಲ ಬೆಕ್ಕುಗಳೂ ಹಾಲಿನ ಪ್ಯಾಕೆಟ್ಟು ತೂತು ಮಾಡೋ ಕಳ್ಳರು ಅಂತ ನಾ ಹೇಳಿಲ್ಲ...' ನಾನು ತ್ತೆತ್ತೆಬ್ಬೆಬ್ಬೆ ಗುಡುತ್ತ ಸಮಜಾಯಿಷಿ ನೀಡಲು ಪ್ರಯತ್ನಿಸಿದೆ.

'ಅದೆಲ್ಲ ಏನೂ ಹೇಳಬ್ಯಾಡ... ಹಾಲಿನ ಪ್ಯಾಕೆಟ್ಟು ಅಲ್ಲದಾವು ಅಂದರ ನಮಗ ತಗಳೂ ಹಕ್ಕು ಇರತೈತಿ. ಅಷ್ಟಕ್ಕೇ ನೀನು ಹಾಲಿನ ಪ್ಯಾಕೆಟ್ಟು ತೂತು ಮಾಡೋ ಕಳ್ಳರೆಲ್ಲ ಬೆಕ್ಕುಗಳು ಅನ್ನೂ ಹಂಗಿಲ್ಲ. ನೀ ಬೆಕ್ಕುಗಳಿಗೆ ಅಪಮಾನ ಮಾಡೀ, ನಾವು ಮೊಕದ್ದಮೆ ಹೂಡೋರೇ. ರಾಹುಲಣ್ಣಂಗೆ ಮಾಡಿದಂಗೆ ನಿನಗೂ ಮಾಡತೀವಿ. ಎರಡು ವರ್ಷ ಜೈಲಿಗೆ ಹಾಕತೀವಿ' ಎಂದು ಬೆಕ್ಕಣ್ಣ ಗುರ್ರೆನ್ನುತ್ತ ವಾದ ಮಂಡಿಸಿತು.

'ತಪ್ಪಾತೇಳು. ಆದರೆ ನಾ ಮಾತು ವಾಪಸು ತಗಂಡರೂ ಹಾಲಿನ ಪ್ಯಾಕೆಟ್ಟು ತೂತು ಮಾಡಿದ ಕಳ್ಳರು ಬೆಕ್ಕುಗಳೇ ಅನ್ನೋ ಸತ್ಯ ಬದಲಾಗಂಗಿಲ್ಲ ಹೌದಿಲ್ಲೋ?' ನಾನು ಪ್ರತಿವಾದಿಸಿದೆ.

'ಮತ್ತೆ ಅದೇ ಹೇಳತೀಯಲ್ಲ... ಅದು ಕಳ್ಳತನ ಅಲ್ಲ, ಹಾಲು ತಗಳೋ ಹಕ್ಕು ನಮಗೈತಿ' ಬೆಕ್ಕಣ್ಣ ಮೀಸೆ ತಿರುವಿತು.

'ಹಿಂಗೇ ಮೀಸೆ ತಿರುವಿಕೋತ ಹೋಗಿ ವಿದೇಶದಲ್ಲಿ ಇರೋ ನೀರವ್ ಮೋದಿ, ಲಲಿತ್ ಮೋದಿನ ಎತ್ತಾಕೊಂಡು ಬಾರಲೇ' ಎಂದು ನಾನು ಕಿಚಾಯಿಸಿದರೆ, ಬೆಕ್ಕಣ್ಣ ಜಾಣಕಿವುಡು ನಟಿಸಿತು!

ದಿನದ ಟ್ವೀಟ್


ಹೀಗಿದೆ ವಾಸ್ತವ...



ಶ್ರೀಮಂತ ರಾಜಕೀಯ ಸ್ನೇಹಿತರನ್ನು ಹೊಂದಿದ್ದರೆ 'ನ್ಯಾಯ' ಸಾಮಾನ್ಯವಾಗಿ ತಮ್ಮ ಪರವಾಗಿಯೇ ಇರುತ್ತದೆ ಎಂಬುದು ಪ್ರತಿಯೊಬ್ಬ ಕೊಲೆಗಾರ ಮತ್ತು ಅತ್ಯಾಚಾರಿಗೆ ತಿಳಿದಿರುತ್ತದೆ.

ದೇವದತ್ತ ಪಟ್ಟನಾಯಕ್, ಲೇಖಕ

ಕಿಡಿನುಡಿ



ಸಂಸತ್ತಿನ ಒಳಗೆ ಈಗ ಚರ್ಚೆ ಸಾಧ್ಯವಾಗುತ್ತಿಲ್ಲ ಎಂಬ ಬಗ್ಗೆ ಜನ ಬಹಳಷ್ಟು ದೂರುತ್ತಾರೆ. ಆದರೆ ಈ ದಿನಗಳಲ್ಲಿ ಸಂಸತ್ತಿನ ಹೊರಗಾದರೂ ಯಾವ ಬಗೆಯ ಚರ್ಚೆ ನಡೆಯಲು ಸಾಧ್ಯವಿದೆ ತಮ್ಮಾ ಎಂದು ನಾನು ಕೇಳುತ್ತೇನೆ.

ಶಂಕರ್ ಶರ್ಮಾ, ಮಾರುಕಟ್ಟೆ ವಿಶ್ಲೇಷಕ

25 ವರ್ಷಗಳ ಹಿಂದೆ

ಶುಕ್ರವಾರ, 27-3-1998

• **ಸಾಹಿತಿ ಶಾಂತಿನಾಥ ದೇಸಾಯಿ ಇನ್ನಿಲ್ಲ**

ಬೆಂಗಳೂರು, ಮಾರ್ಚ್ 26- ಆಧುನಿಕ ಕನ್ನಡ ಸಾಹಿತ್ಯದ ಪ್ರಖ್ಯಾತ ಲೇಖಕ ಹಾಗೂ ಕುವೆಂಪು ವಿಶ್ವವಿದ್ಯಾಲಯದ ಮಾಜಿ ಕುಲಪತಿ ಡಾ.ಶಾಂತಿನಾಥ ದೇಸಾಯಿ (70) ಅವರು ಇಂದು ಕೊಲ್ಲಾಪುರದಲ್ಲಿ ನಿಧನರಾದರು.

ಕೊಲ್ಲಾಪುರದ ಶಿವಾಜಿ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ನಿವೃತ್ತಿ ಹೊಂದಿದ್ದ ಅವರು ಕೆಲವು ತಿಂಗಳಿನಿಂದ ಅಸ್ವಸ್ಥರಾಗಿ ಚಿಕಿತ್ಸೆ ಪಡೆಯುತ್ತಿದ್ದರು.

• **ಬಿಎಸ್‌ಪಿ ಸದಸ್ಯರಿಗೆ ಆಮಿಷ ಆರೋಪ: ಕೋಲಾಹಲ**

ನವದೆಹಲಿ, ಮಾರ್ಚ್ 26 (ಪಿಟಿಐ)- ಸಂಸತ್ತಿನಲ್ಲಿ ಬಹುಮತ ಗಳಿಸಲು ಬಿಜೆಪಿ ನೇತೃತ್ವದ ಸರ್ಕಾರ ತಮ್ಮ ಪಕ್ಷದ ಸದಸ್ಯರಿಗೆ ಆಮಿಷ ತೋರಿಸುತ್ತಿದೆ ಎಂದು ಆರೋಪಿಸಿ ಪ್ರಧಾನಿ ವಿರುದ್ಧ ಹಕ್ಕುಚ್ಯುತಿ ನಿರ್ಣಯ ಮಂಡಿಸಲು ಬಿಎಸ್‌ಪಿ ಸದಸ್ಯರೊಬ್ಬರು ಯತ್ನಿಸಿದ್ದರಿಂದ ಲೋಕಸಭೆಯಲ್ಲಿ ಇಂದು ಭಾರಿ ಕೋಲಾಹಲ ಉಂಟಾಗಿ ಕಲಾಪವನ್ನು ಎರಡು ಬಾರಿ ಮುಂದೂಡಬೇಕಾಯಿತು.

ಬೆಳಿಗ್ಗೆ ಸದನ ಆರಂಭವಾಗುತ್ತಿದ್ದಂತೆಯೇ ಬಿಎಸ್‌ಪಿ ಸದಸ್ಯ ಆರೀಫ್ ಮಹಮ್ಮದ್ ಖಾನ್ ಅವರು ಸರ್ಕಾರದ ವಿರುದ್ಧ ಆರೋಪ ಮಾಡಿದಾಗ ಸದನದಲ್ಲಿ ಗಲಾಟೆ ಆರಂಭವಾಯಿತು. ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರು ಪರಸ್ಪರ ಆರೋಪ, ಪ್ರತ್ಯಾರೋಪ ಮಾಡಿಕೊಂಡರು. ಬಿಎಸ್‌ಪಿ, ಕಾಂಗ್ರೆಸ್ ಮತ್ತು ಎಡಪಕ್ಷಗಳ ಸದಸ್ಯರು ಸಭಾಧ್ಯಕ್ಷ ಪೀಠದ ಬಳಿಗೆ ತೆರಳಿ ಈ ವಿಷಯದ ಬಗ್ಗೆ ಚರ್ಚೆಗೆ ಇನ್ನಷ್ಟು ಕಾಲಾವಕಾಶ ನೀಡುವಂತೆ ಒತ್ತಾಯಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 27-3-1973

• **ಮಣಿಪುರ ಸಂಪುಟದ ರಾಜೀನಾಮೆ ವಿಧಾನಸಭೆ ಅಧಿವೇಶನ ಮುಂದಕ್ಕೆ**

ಇಂಫಾಲ್, ಮಾರ್ಚ್ 26- ಮಣಿಪುರದ ಮುಖ್ಯಮಂತ್ರಿ ಶ್ರೀ ಮಹಮದ್ ಅಲಿಮುದ್ದೀನ್ ಅವರು ಇಂದು ತಮ್ಮ ಸಚಿವ ಸಂಪುಟದ ರಾಜೀನಾಮೆಯನ್ನು ರಾಜ್ಯಪಾಲ ಶ್ರೀ ಬಿ.ಕೆ. ನೆಹರೂ ಅವರಿಗೆ ಸಲ್ಲಿಸಿದರು.

ರಾಜ್ಯಪಾಲರು ರಾಜೀನಾಮೆಯನ್ನು ಅಂಗೀಕರಿಸಿದರು. ಬೇರೆ ವ್ಯವಸ್ಥೆ ಮಾಡುವ ತನಕ ಅಧಿಕಾರದಲ್ಲಿ ಮುಂದುವರೆಯುವಂತೆಯೂ ಶ್ರೀ ಮಹಮದ್ ಅಲಿಮುದ್ದೀನ್ ಅವರಿಗೆ ರಾಜ್ಯಪಾಲರು ಹೇಳಿದರು.

ವಿಧಾನಸಭಾಧ್ಯಕ್ಷ ಡಾ. ಎಲ್. ಚಂದ್ರಮಣಿ ಸಿಂಗ್ ಅವರು ಮುಖ್ಯಮಂತ್ರಿಗಳು ರಾಜೀನಾಮೆ ನೀಡಿದ ಸಂಗತಿಯನ್ನು ವಿಧಾನಸಭೆಗೆ ಮಧ್ಯಾಹ್ನ ತಿಳಿಸಿದರು. ಅಲ್ಲದೆ ವಿಧಾನಸಭೆಯ ಅಧಿವೇಶನವನ್ನು ಅನಿರ್ದಿಷ್ಟ ಕಾಲ ಮುಂದಕ್ಕೆ ಹಾಕಿದರು.

• **ಈ ವರ್ಷದಲ್ಲಿ ವಾರಾಹಿ ಯೋಜನೆಯ ಆರಂಭ**

ಬೆಂಗಳೂರು, ಮಾರ್ಚ್ 26- ವಾರಾಹಿ ಜಲವಿದ್ಯುತ್ ಯೋಜನೆಯನ್ನು ಈ ವರ್ಷದಲ್ಲಿ ಕೈಗೊಂಡು 1979ರ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ ಎಂದು ಲೋಕೋಪಯೋಗಿ ಸಚಿವ ಶ್ರೀ ಎಚ್.ಎಂ. ಚನ್ನಬಸಪ್ಪ ವಿಧಾನಸಭೆಯಲ್ಲಿ ತಿಳಿಸಿದರು.

ಶ್ರೀ ಯು.ಟಿ.ಫರೀದ್ ಅವರು ಕೇಳಿದ ಪ್ರಶ್ನೆಗೆ ಉತ್ತರ ನೀಡಿದ ಅವರು, ಅದರಿಂದ ಉತ್ಪಾದನೆಯಾಗಬಹುದಾದ ವಿದ್ಯುತ್ ಪ್ರಮಾಣ ವರ್ಷವೊಂದಕ್ಕೆ 1,180 ದಶಲಕ್ಷ ಕಿಲೊವಾಟ್, ಆದಾಯ ಐದು ಕೋಟಿ ರೂಪಾಯಿ ಎಂದರು.

ಸಂಗತ

ಕೃತಕತೆಯ ಗೂಡಲ್ಲಿ ವಾಸ್ತವದ ಹುಡುಕಾಟ

ಹಳ್ಳಿಗಳೆಂದರೆ ಮಾರುದೂರ ಸರಿಯುವವರು ಕೃತಕವಾಗಿ ನಿರ್ಮಿಸಿದ ಹಳ್ಳಿಮನೆಗಳಲ್ಲಿ ವಾರಾಂತ್ಯದ ರಜೆಯ ಮೋಜು ಅನುಭವಿಸುತ್ತಾರೆ!

• ರಾಜಕುಮಾರ ಕುಲಕರ್ಣಿ

ಪಕ್ಕದ ಮನೆಯ ಹುಡುಗ ತನ್ನ ಸ್ನೇಹಿತನೆದುರು ತಾನು ನೋಡಿದ ಸ್ಥಳಗಳನ್ನು ಬಣ್ಣಿಸುತ್ತಿದ್ದ. ಅವನ ಮಾತಿನಲ್ಲಿ ಜಲಪಾತಗಳು, ಹೊಳೆ, ಬೆಟ್ಟ, ಕಾಡು, ಹಳ್ಳಿಮನೆಗಳೆಲ್ಲ ಸುಳಿದುಹೋದವು. 'ಏನೋ... ಅಜ್ಜನ ಊರಿಗೆ ಯಾವಾಗ ಹೋಗಿದ್ದೆ' ಎಂದು ಕೇಳಿದೆ. 'ನೋ ಅಂಕಲ್, ಪಿಕ್‌ನಿಕ್ ಹೋಗಿದ್ವಿ. ರೆಡಿಮೇಡ್ ವಿಲೇಜ್ ಅಂತ ಪಿಕ್‌ನಿಕ್ ಸ್ಪಾಟ್ ಇತ್ತು. ಅಲ್ಲೇ ಇವನ್ನೆಲ್ಲಾ ನೋಡಿದ್ದು' ಎಂದು ಉತ್ತರಿಸಿದ. ನಾನು ಊಹಿಸಿದ ಆ ಎಲ್ಲ ವಾಸ್ತವಗಳನ್ನು ಅವನು, ಕೃತಕವಾಗಿ ನಿರ್ಮಿಸಿರುವ ಪ್ರೇಕ್ಷಣೀಯ ತಾಣದಲ್ಲಿ ವೀಕ್ಷಿಸಿದ್ದೆಂದು ಅರಿವಾಗಲು ಕೆಲವು ಕ್ಷಣಗಳೇ ಬೇಕಾದವು. ಇತ್ತೀಚಿನ ದಿನಗಳಲ್ಲಿ ಭೌತಿಕ ಮತ್ತು ಭಾವನಾತ್ಮಕ ಸಂಗತಿಗಳೆರಡನ್ನೂ ಕೃತಕ ವಾತಾವರಣದಲ್ಲಿ ಅರಸುವ ಪ್ರವೃತ್ತಿ ಜನರಲ್ಲಿ ಹೆಚ್ಚುತ್ತಿದೆ.

ಮನುಷ್ಯ ತನ್ನ ದಿನನಿತ್ಯದ ಧಾವಂತದ ಬದುಕಿನಲ್ಲಿ ಸಹಜ ಬದುಕಿಗೆ ವಿಮುಖನಾಗಿ ಬಾಳುತ್ತಿದ್ದಾನೆ. ವಿಶೇಷವಾಗಿ ನಗರಪ್ರದೇಶಗಳಲ್ಲಿ ಉದ್ಯೋಗವೇ ಕೇಂದ್ರಿತವಾದ ಬದುಕಿನಲ್ಲಿ ಬಿಡುವು ಪಡೆಯಲು ಒಂದಿಷ್ಟೂ ಪುರಸತ್ತಿಲ್ಲದಂತಾಗಿದೆ. ಉದ್ಯೋಗದ ಅಭದ್ರತೆ, ಸ್ಪರ್ಧೆಯ ವಾತಾವರಣ, ಮಕ್ಕಳ ಪಾಲನೆ, ಉಳಿತಾಯದ ಯೋಜನೆಗಳು, ಭವಿಷ್ಯದ ಚಿಂತೆಯಿಂದ ಕಂಗಾಲಾಗಿರುವ ಮನುಷ್ಯ ದಣಿವರಿಯದ ದುಡಿಮೆಗೆ ತನ್ನನ್ನು ಒಳಗಾಗಿಸಿಕೊಂಡಿದ್ದಾನೆ. ಈ ಆಧುನಿಕ ಬದುಕಿನ ಒತ್ತಡಗಳು ಅವನನ್ನು ಯಂತ್ರವಾಗಿ ಪರಿವರ್ತಿಸಿವೆ. ಭಾವನೆಗಳು ಮತ್ತು ಮನುಷ್ಯ ಸಂಬಂಧಗಳು ಅರ್ಥ ಕಳೆದುಕೊಂಡು ಸವಕಲಾಗಿವೆ.

ಇನ್ನೊಂದೆಡೆ, ಮನುಷ್ಯನ ದುರಾಸೆಗೆ ಒಳಗಾಗಿ ಪ್ರಕೃತಿ ಬರಡಾಗುತ್ತಿದೆ. ಒಂದರ್ಥದಲ್ಲಿ ಮನುಷ್ಯನ ಯಾಂತ್ರಿಕ ಬದುಕಿನ ಚೇತರಿಕೆಗೆ ಪ್ರಕೃತಿಯೇ ಮುಲಾಮು. ಆದರೆ ಪ್ರಕೃತಿಯ ಮೇಲೆ ಮನುಷ್ಯ ಅಟ್ಟಹಾಸಗೈಯುತ್ತ ನಿಸರ್ಗವನ್ನು ಅವಸಾನದ ಅಂಚಿಗೆ ತಂದು ನಿಲ್ಲಿಸಿದ್ದಾನೆ. ತಾನು ಕಳೆದುಕೊಂಡ ಪ್ರಕೃತಿಯ ಚೆಲುವು ಮತ್ತು ಮನದ ಭಾವನೆಗಳನ್ನು ಕೃತಕ ನಿಸರ್ಗ ತಾಣಗಳಲ್ಲಿ, ಸಿನಿಮಾಗಳಲ್ಲಿ, ರಿಯಾಲಿಟಿ ಷೋಗಳಲ್ಲಿ ಹುಡುಕುತ್ತಿದ್ದಾನೆ. ಇಂದಿನ ನ್ಯೂಕ್ಲಿಯರ್ ಕುಟುಂಬಗಳಿಗೆ ಸಿನಿಮಾಗಳೇ ಕುಟುಂಬ ಸಂಬಂಧಗಳ ಪಾಠವನ್ನು ಬೋಧಿಸುವ ಶಾಲೆಗಳಾಗಿವೆ. ಅವಿಭಕ್ತ ಕುಟುಂಬ, ಮನೆಗೊಬ್ಬ ಹಿರಿಯ ಯಜಮಾನ, ಕಡಿದುಹೋದ ಸಂಬಂಧಗಳ ಬೆಸೆಯುವಿಕೆ, ಮದುವೆಕಾರ್ಯದ ವೈಭವೋಪೇತ ದೃಶ್ಯಗಳು, ಒಂದಿಷ್ಟು ನಗು, ಅಳು, ಖುಷಿ ಈ ರೀತಿಯ ಸಿನಿಮಾಗಳು ಸಂಬಂಧಗಳ ಕುರಿತಾದ ಮನುಷ್ಯನ ಭಾವನಾತ್ಮಕ ಹಸಿವನ್ನು ತಣಿಸುತ್ತಿವೆ. ಅವಿಭಕ್ತ ಕುಟುಂಬಗಳು ಒಡೆದು ಸಣ್ಣ ಘಟಕಗಳಾಗಿ ರೂಪಾಂತರ ಹೊಂದುತ್ತಿರುವ ಈ ಸಂದರ್ಭವು ಸಿನಿಮಾದ ಮೂಲಕ ನಮ್ಮ ಯುವಪೀಳಿಗೆಗೆ ಕುಟುಂಬದ ಸಂಬಂಧಗಳನ್ನು ಪರಿಚಯಿಸುವ ಸನ್ನಿವೇಶ ಎದುರಾಗಿದೆ.

ಇತ್ತೀಚಿನ ದಿನಗಳಲ್ಲಿ ಪ್ರಕೃತಿಯ ಸುಂದರ ಮತ್ತು ರಮಣೀಯ ತಾಣಗಳನ್ನು ಕೃತಕವಾಗಿ ನಿರ್ಮಿಸಿ ಸಾರ್ವಜನಿಕರನ್ನು ಆಕರ್ಷಿಸಲಾಗುತ್ತಿದೆ. ನಾಲ್ಕೈದು ಎಕರೆಯಷ್ಟು ವಿಶಾಲವಾದ ಜಾಗದಲ್ಲಿ ನಿರ್ಮಾಣಗೊಳ್ಳುವ ಕೃತಕ ನಿಸರ್ಗ ತಾಣಗಳು ಜನರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿವೆ. ಸಾರ್ವಜನಿಕರು ಸಾವಿರಾರು ರೂಪಾಯಿ ಖರ್ಚು ಮಾಡಿ ಇಂಥ ಕೃತಕ ತಾಣಗಳಿಗೆ ಭೇಟಿ ನೀಡಿ, ನಿಜವಾದ ಪರಿಸರದಲ್ಲೇ ತಾವು ನಿಂತಿರುವೆವೇನೋ ಎಂದು ಪುಳಕಗೊಳ್ಳುತ್ತಾರೆ. ಈ ಕೃತಕ ತಾಣಗಳಲ್ಲಿ ಜಲಪಾತಗಳು ಸೃಷ್ಟಿಯಾಗುತ್ತವೆ, ನೀರು ನದಿಯಂತೆ ಹರಿಯುತ್ತದೆ, ಗಿಡ ಮರಗಳು ತೊನೆದಾಡುತ್ತವೆ, ಮಳೆ ಸುರಿಯುತ್ತದೆ, ಪಕ್ಷಿಗಳ ಕಲರವ ಕಿವಿಗಳನ್ನು ಇಂಪಾಗಿಸುತ್ತದೆ. ಹಳ್ಳಿಯ ಪರಿಸರದಲ್ಲೇ ಓಡಾಡುತ್ತಿರುವ ಭಾವ ಹುಟ್ಟಿಸುವ ಹಳ್ಳಿಮನೆಗಳು ನಿರ್ಮಾಣಗೊಳ್ಳುತ್ತವೆ. ಗೌಡರ ಮನೆ, ಜಗಲಿ, ಅಂಗಳ, ದನದ ಕೊಟ್ಟಿಗೆ, ಪಂಚಾಯಿತಿ ಕಟ್ಟೆ, ಹರಟೆಕಟ್ಟೆ, ನೀರು ಸೇದುವ ಬಾವಿ ಇರುವ ಹಳ್ಳಿಯ ಮರುಸೃಷ್ಟಿಯಾಗುತ್ತದೆ. ಹಳ್ಳಿಗಳೆಂದರೆ ಮಾರುದೂರ ಸರಿಯುವವರು ಸಾವಿರಾರು ರೂಪಾಯಿಗಳನ್ನು ಪಾವತಿಸಿ ಕೃತಕವಾಗಿ ನಿರ್ಮಿಸಲಾದ ಹಳ್ಳಿಮನೆಗಳಲ್ಲಿ ವಾರಾಂತ್ಯದ ರಜೆಯ ಮೋಜು ಅನುಭವಿಸುತ್ತಾರೆ!



ಸಿಟ್ಟು, ದ್ವೇಷ, ಪ್ರೀತಿ, ನಗು, ಅಳು, ಖುಷಿ ಇಂಥ ಮನುಷ್ಯ ಸಹಜವಾದ ಭಾವನೆಗಳನ್ನು ಕೂಡ ರಿಯಾಲಿಟಿ ಷೋ ಎನ್ನುವ ಹೆಸರಿನಲ್ಲಿ ಕೃತಕವಾಗಿ ಸೃಷ್ಟಿಸಿ ಪ್ರೇಕ್ಷಕರನ್ನು ಭಾವಾವೇಶಕ್ಕೆ ಒಳಗಾಗಿಸಲಾಗುತ್ತಿದೆ. ತನ್ನ ದೈನಂದಿನ ವಾಸ್ತವದ ಬದುಕಿನಲ್ಲಿ ಹುಡುಕಬೇಕಾದ ಈ ಎಲ್ಲ ಸಂಗತಿಗಳನ್ನು ಹೀಗೆ ಕೃತಕ ವಾತಾವರಣದಲ್ಲಿ ಕಂಡುಕೊಳ್ಳುತ್ತಿದ್ದಾನೆ. ಆ ಕೃತಕತೆಯನ್ನೇ ನಿಜವಾದ ಬದುಕು ಎಂದು ಭಾವಿಸಿ ತನ್ನ ವಾಸ್ತವದ ಬದುಕನ್ನು ಒಂದು ಯಂತ್ರದಂತೆ ಬಾಳುತ್ತಿದ್ದಾನೆ.

ಮನುಷ್ಯನ ಯಾಂತ್ರೀಕೃತ ಬದುಕಿಗೆ ಕಾರಣವಾದ ಸಂಗತಿಯನ್ನು ತತ್ವಜ್ಞಾನಿ ಕಾರ್ಲ್‌ಮಾರ್ಕ್ಸ್ ಅವರು ಗುರುತಿಸಿದ್ದು ಹೀಗೆ- 'ಮನುಷ್ಯನ ದುಡಿಮೆ ಹಾಗೂ ಬಿಡುವು ಎರಡೂ ಒಂದಕ್ಕೊಂದು ತೆಕ್ಕೆ ಹಾಕಿಕೊಂಡಿರುವಂಥ, ಒಂದನ್ನೊಂದು ಪ್ರಭಾವಿಸುವಂಥ ಕ್ಷೇತ್ರಗಳಾಗಿವೆ. ಮಾನವನ ಅಂತಃಕರಣಕ್ಕೆ ಮತ್ತು ಮನಸ್ಸಿಗೆ ಸಂತೋಷ ಕೊಡುವಂಥ, ಅವನ ಸೃಜನಶೀಲತೆಗೆ ಎಡೆಕೊಡಬಲ್ಲ 'ಕೆಲಸ'ವನ್ನೇ ಅಸಾಧ್ಯಮಾಡಿರುವಂಥ ದುಡಿಮೆಯ ಕ್ಷೇತ್ರ ಕ್ರಮೇಣ ಮನುಷ್ಯನ ಆತ್ಮ, ಮನಸ್ಸುಗಳನ್ನು ಕೊಲ್ಲುವ ಬೇನೆಯ ತಾಣವಾಗುತ್ತಿದೆ'. ಮಾರ್ಕ್ಸ್ ವ್ಯಕ್ತಪಡಿಸಿದ ಈ ಅಭಿಪ್ರಾಯವನ್ನು ಆಧರಿಸಿ ಯಶವಂತ ಚಿತ್ತಾಲರು ಹೇಳುವುದು ಹೀಗೆ, 'ದುಡಿಮೆಯ ಕ್ಷೇತ್ರದಿಂದ ಪ್ರಭಾವಿತಗೊಂಡ ಮನಸ್ಸನ್ನು ಅಲ್ಲೇ ಬಿಟ್ಟು ಬರುವುದು ಸಾಧ್ಯವಿದ್ದಿದ್ದರೆ- ಬಿಟ್ಟುಬರುವುದುಳಿಯಲಿ, ನಮ್ಮೊಳಗಿನ ಅತ್ಯಂತ ಮಹತ್ವದ್ದೇನೋ ಅಲ್ಲಿ ನಾಶವಾಗುತ್ತಿದೆ ಎಂಬ ಅರಿವೂ ನಮಗೆ ಇಲ್ಲದಿರುವುದು ಇಂದಿನ ನಮ್ಮ ಬದುಕಿನ ದುರದೃಷ್ಟವಾಗಿದೆ'.

ಒಟ್ಟಾರೆ ಬದುಕು ಹೆಚ್ಚು ಹೆಚ್ಚು ಯಾಂತ್ರಿಕವಾಗುತ್ತಾ ಹೋದಂತೆ ಕೃತಕತೆಯೇ ವಾಸ್ತವವೆನಿಸುವ ಅಪಾಯದ ದಿನಗಳು ದೂರವಿಲ್ಲ.

ವಾಚಕರ ವಾಣಿ

ಪರೀಕ್ಷೆ ಅವಧಿ ಪರಿಶೀಲಿಸಿ

ಶಿಕ್ಷಣ ಇಲಾಖೆಯು ಹತ್ತನೇ ತರಗತಿಯಂತೆ ಪಿಯುಸಿಯಲ್ಲೂ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಸಾಗಿ ಶೇಕಡಾವಾರು ಫಲಿತಾಂಶ ಹೆಚ್ಚಳವಾಗಲೆಂದು 20 ಅಂಕದ ಎಂಸಿಕ್ಯು ಮಾದರಿಯ ಪ್ರಶ್ನೆಗಳನ್ನು ಪ್ರಸ್ತುತ ವರ್ಷದಿಂದ ಅಳವಡಿಸಿದೆ. ಆದರೆ ವಿಜ್ಞಾನ ವಿಭಾಗದಲ್ಲಿ ಭೌತಶಾಸ್ತ್ರ, ರಸಾಯನ ಶಾಸ್ತ್ರ, ಜೀವಶಾಸ್ತ್ರ ವಿಷಯಗಳು 70 ಅಂಕಗಳಿಗೆ ಇರುತ್ತವೆ. 20 ಅಂಕಗಳಿಗೆ ಎಂಸಿಕ್ಯು ಇರುವುದರಿಂದ ಅದನ್ನು ಬರೆಯಲು 20ರಿಂದ 25 ನಿಮಿಷ ಸಾಕು, ಇನ್ನುಳಿದ 50 ಅಂಕಗಳಿಗೆ 2.30 ಗಂಟೆ ಹೆಚ್ಚು. ಹೀಗಾಗಿ, ಒಟ್ಟು ಈಗಿರುವ 3.15 ಗಂಟೆ ಅನಗತ್ಯ ಅನಿಸುತ್ತದೆ.

ಸಾಮಾನ್ಯ ಜ್ಞಾನದ ವಿದ್ಯಾರ್ಥಿಗಳು ಕೂಡ ಬೇಗನೆ ಮುಗಿಸಿ, ಕಾಲಹರಣ ಮಾಡುತ್ತಿರುತ್ತಾರೆ. 100 ಅಂಕದ ಪ್ರಶ್ನೆಪತ್ರಿಕೆಗಳಿಗೂ 3.15 ಗಂಟೆ, 70 ಅಂಕದ ಪ್ರಶ್ನೆಪತ್ರಿಕೆ ವಿಷಯಗಳಿಗೂ ಅಷ್ಟೇ ಸಮಯ. ಐಸಿಎಸ್‌ಇ ಸಿಲೆಬಸ್‌ನ ಪರೀಕ್ಷಾ ಅವಧಿಗಳನ್ನು ಒಮ್ಮೆ ಗಮನಿಸಿದರೆ, ಅವರು ಅಂಕಗಳ ಆಧಾರದ ಮೇಲೆ ಅವಧಿ ನಿಗದಿಪಡಿಸಿರುವುದು ತಿಳಿಯುತ್ತದೆ. ಶಿಕ್ಷಣ ಇಲಾಖೆ ಈ ಬಗ್ಗೆ ಪರಿಶೀಲಿಸಿ, ಮುಂದಿನ ಶೈಕ್ಷಣಿಕ ಪರೀಕ್ಷೆಗಳಲ್ಲಿ ಇಂತಹ ಬದಲಾವಣೆ ಮಾಡಬಹುದೇ ಎಂಬುದನ್ನು ಪರಿಶೀಲಿಸಬೇಕು.

ಮಂಜುನಾಥ್ ಜಿ., ಹಗರಿಬೊಮ್ಮನಹಳ್ಳಿ

ಅಪಚಾರ

ರಾಜಕೀಯ ನಾಯಕರು
ಶೂರರೋ ಧೀರರೋ
ಅವರಿಗೆ ಬಿಟ್ಟ ವಿಚಾರ,
ಮತಬೇಟೆ ಎನ್ನುವುದು
ಮತದಾರರಿಗೆ ಮಾಡುವ
ಅಪ್ಪಟ ಅಪಚಾರ,
ಕಾರಣ, ಮತದಾರರು
ಬೇಟೆಗಿರುವ ಪ್ರಾಣಿಗಳಲ್ಲ
ಪಕ್ಷಿಗಳಂತೂ ಅಲ್ಲವೇ ಅಲ್ಲ.

ಮಲ್ಲಿಕಾರ್ಜುನ, ಸುರಧೇನುಪುರ

ಮೊಬೈಲ್ ಪತ್ತೆ: ತಂತ್ರಜ್ಞಾನ ವಿಸ್ತರಣೆಯಾಗಲಿ

ಕಳೆದುಹೋದ ಮೊಬೈಲ್‌ಗಳು ಮರಳಿ ಸಿಕ್ಕಂಥ ಪ್ರಕರಣಗಳು ಈವರೆಗೆ ತುಂಬಾ ವಿರಳ. ಆದರೆ ಇತ್ತೀಚೆಗೆ ದೂರಸಂಪರ್ಕ ಇಲಾಖೆಯ ಸಿ.ಇ.ಐ.ಆರ್ ಪೋರ್ಟಲ್ ಮೂಲಕ ದಿನೇದಿನೇ ಮೊಬೈಲ್‌ಗಳು ಮರಳಿ ಸಿಗುತ್ತಿವೆ. ಅವನ್ನು ಮತ್ತೆ ಮಾಲೀಕರ ಕೈ ಸೇರಿಸುತ್ತಿರುವ ಪೊಲೀಸರ ಕಾರ್ಯ ಶ್ಲಾಘನೀಯ. ಆದರೆ ಮೊಬೈಲ್ ಕಳೆದುಕೊಂಡ ಪ್ರಕರಣಗಳು ರಾಜ್ಯದ ಎಲ್ಲ ಠಾಣೆಗಳಲ್ಲಿ ಇದ್ದರೂ ರಾಜ್ಯದ ದಕ್ಷಿಣ ಭಾಗದಲ್ಲಿ, ಅಂದರೆ ಬೆಂಗಳೂರು, ದಕ್ಷಿಣ ಕನ್ನಡ, ಉಡುಪಿ, ದಾವಣಗೆರೆಯಂತಹ ಜಿಲ್ಲೆಗಳಲ್ಲಿ ಮಾತ್ರ ಹೆಚ್ಚಿನ ಮೊಬೈಲ್‌ಗಳನ್ನು ಹುಡುಕಿಕೊಡಲಾಗಿದೆ. ಉಳಿದ ಠಾಣೆಗಳಲ್ಲಿ ನಿಗದಿತ ಅರ್ಜಿ ತುಂಬಿಸಿಕೊಂಡು, ಸಿಕ್ಕ ಮೇಲೆ ತಿಳಿಸುತ್ತೇವೆ ಎಂದು ಹೇಳಿ ಕಳುಹಿಸಲಾಗುತ್ತಿದೆ. ಕೆಲವು ದಿನಗಳ ನಂತರ ಮತ್ತೆ ವಿಚಾರಿಸಿದರೂ ಅದೇ ರಾಗ.

ಈಗಲಾದರೂ ಈ ಹೊಸ ತಂತ್ರಜ್ಞಾನವನ್ನು ಎಲ್ಲ ಠಾಣೆಗಳಲ್ಲೂ ಸರಿಯಾಗಿ ಬಳಸಿ, ಅದಕ್ಕೆಂದೇ ಹೆಚ್ಚಿನ ಸಿಬ್ಬಂದಿಯನ್ನು ನೇಮಿಸಿದರೆ, ಮೊಬೈಲ್ ಕಳೆದುಕೊಂಡು ನಷ್ಟಕ್ಕೊಳಗಾದ ಜನರಿಗೆ ಸಹಾಯವಾಗುತ್ತದೆ. ಮೊಬೈಲ್‌ಗಳ ಕಳ್ಳತನವೂ ಕಡಿಮೆಯಾಗಿ ಪೊಲೀಸರ ಮೇಲಿನ ಜನರ ಭರವಸೆ ಹೆಚ್ಚುತ್ತದೆ.

ಪ್ರಶಾಂತ ಕೋಳಿ, ಧಾರವಾಡ

ಸಾಹಿತ್ಯೇತರ ಚಟುವಟಿಕೆಗಳಿಗೇ ಆದ್ಯತೆ?

ಆದಿಕವಿ ಪಂಪನ 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ನುಡಿಮುತ್ತೊಂದೇ ಸಾಕಾಗುತ್ತದೆ ಕನ್ನಡ ಸಾಹಿತ್ಯ ಪರಿಷತ್ತಿನ ನಡೆಯನ್ನು ಅಳೆಯಲು. ಪರಿಷತ್ತಿನ ಅಧ್ಯಕ್ಷರಾದ ಮಹೇಶ್ ಜೋಶಿಯವರು ಚುನಾವಣಾಪೂರ್ವ ಪ್ರತಿಸ್ಪರ್ಧಿಗಳನ್ನು ಜರಿಯುತ್ತಾ, ಪರಿಷತ್ತಿನ ಕಾರ್ಯಚಟುವಟಿಕೆಗಳನ್ನು ಸಹಿಸಲಾಗದ ಒಂದು ಗುಂಪು, ತನ್ನ ಅಸ್ತಿತ್ವಕ್ಕಾಗಿ ಪರಿಷತ್ತಿನ ವಿರುದ್ಧ ಪಿತೂರಿ ಮಾಡುತ್ತಿದೆ ಎಂದು ಆರೋಪಿಸುವ ಮೂಲಕ ಪ್ರಮುಖ ಸಾಹಿತಿಗಳ ಹೆಸರನ್ನೂ ಪ್ರಸ್ತಾಪಿಸಿದ್ದಾರೆ (ಪ್ರ.ವಾ., ಮಾರ್ಚ್ 24). ಹಾಲಿ ಅಧ್ಯಕ್ಷರು ಹಿಂದಿನ ಹದಿನಾರು ತಿಂಗಳುಗಳಲ್ಲಿ ಸಾಹಿತ್ಯ ಚಟುವಟಿಕೆಗಳಿಗಿಂತ ಸಾಹಿತ್ಯೇತರ ಕಾರ್ಯ ಚಟುವಟಿಕೆಗಳಲ್ಲೇ ಹೆಚ್ಚು ನಿರತರಾಗಿದ್ದಾರೆ ಎಂದು ನೋವಿನಿಂದಲೇ ಹೇಳಬೇಕಾಗಿದೆ.

ಶ್ರೀ ಕೃಷ್ಣರಾಜ ಪರಿಷನ್ಮಂದಿರದ ಹೆಸರು ಬದಲಾವಣೆ ಹಾಗೂ ಬಡ ಸಾಹಿತಿಗಳಿಗೆ ವರದಾನವಾಗಿದ್ದ ಸಭಾಭವನದ ಬಾಡಿಗೆ ಹೆಚ್ಚಿಸಿದ್ದು, ಕುವೆಂಪು ಸಭಾಂಗಣವನ್ನು ಮುಚ್ಚಿದ್ದು, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರತಿಮೆ ತೆಗೆಸಿದ್ದು, ಪಂಪ ಮಹಾಕವಿ ರಸ್ತೆಯ ಹೆಸರು ಬದಲಾಯಿಸಲು ಹೊರಟಿದ್ದು, ಸ್ವಾಗತ ಕಮಾನಿನ ಮೇಲಿದ್ದ 'ಮನುಷ್ಯ ಜಾತಿ ತಾನೊಂದೆ ವಲಂ' ನುಡಿಮುತ್ತನ್ನು ಅಳಿಸಿದ್ದು... ಹೀಗೆ ಹೇಳುತ್ತಾ ಹೋದರೆ ಹತ್ತು ಹಲವು ಉದಾಹರಣೆಗಳನ್ನು ನೀಡಬಹುದಾಗಿದೆ. ಜೊತೆಗೆ ಚುನಾಯಿತ ಪ್ರತಿನಿಧಿಗಳಿಗೆ ಸಭೆಯಲ್ಲಿ ಹೀಗೆಯೇ ಮಾತನಾಡಬೇಕು ಎಂಬ ತಾಕೀತು ಸೇರಿದಂತೆ, ಪರಿಷತ್ತಿನ ಕಚೇರಿ ಆವರಣದಲ್ಲಿರುವ ನಗರ ಜಿಲ್ಲಾ ಕಚೇರಿಯನ್ನು ಖಾಲಿ ಮಾಡಲು ನೋಟಿಸ್ ನೀಡಿರುವುದು, ಸದಸ್ಯತ್ವ ರದ್ದತಿ ಇವೆಲ್ಲವೂ ಯಾವ ರೀತಿಯ ಸಾಹಿತ್ಯ ಪರಿಚಾರಿಕೆಯಾಗುತ್ತವೆ? ಜೋಶಿಯವರು ಇನ್ನು ಮುಂದಾದರೂ ಎಲ್ಲರನ್ನೂ ಜೊತೆಯಲ್ಲಿ ತೆಗೆದುಕೊಂಡು ಹೋಗುವ ಮೂಲಕ ಕನ್ನಡಮ್ಮನ ಸೇವೆ ಮಾಡಲಿ ಎಂದು ಆಶಿಸೋಣ.

ಟಿ. ಉಮಾ ಶಂಕರ್ ಲಕ್ಷ್ಮೀಪುರ, ಬೆಂಗಳೂರು

ವೈವಾಹಿಕ ಮಾಹಿತಿ: ವೆಬ್‌ಸೈಟ್ ಪೂರಕ

ವಿವಾಹ ಮಾಹಿತಿಯುಳ್ಳ ಸಮಗ್ರ ಜಾಲತಾಣದ ಅಗತ್ಯ ಕುರಿತ ಮಲ್ಲಿಕಾರ್ಜುನ ಅವರ ಆಗ್ರಹ (ವಾ.ವಾ., ಮಾರ್ಚ್ 25) ಸೂಕ್ತವಾಗಿದೆ. ಇಂದು ಘಟಿಸುತ್ತಿರುವ ಹಲವಾರು ಮುರಿದ ಮದುವೆಯ ಸಂಬಂಧಗಳಿಗೆ ಮಾಹಿತಿ ಕೊರತೆಯೇ ಕಾರಣ. ವಧು-ವರರ ಕುರಿತಾದ ಮಾಹಿತಿಯು ತಂದೆತಾಯಿಗೆ ಸಂತೃಪ್ತಿ ತರುವಂತೆ ಇರಬೇಕು. ಇಲ್ಲದಿದ್ದಲ್ಲಿ ಇಂದಿನ ದುಷ್ಪರಿಣಾಮಗಳು, ಅಸಹಜ ಹೊಂದಾಣಿಕೆ, ತನ್ಮೂಲಕ ಮಾನಸಿಕ ಅಶಾಂತಿ, ಹೊಸ ಸಂಬಂಧ ಎಬ್ಬಿಸುವ ಬಿರುಗಾಳಿ ಸಮಾಜದಲ್ಲಿ ಹೆಚ್ಚು ಹೆಚ್ಚು ಕಂಡುಬರುತ್ತವಲ್ಲದೆ, ಸುಂದರ ಸಂಸಾರಗಳು ವೃಥಾ ವೇದನೆಗೆ ಒಳಪಡುತ್ತವೆ. ಹಣದ ತೀವ್ರತೆ ಹೆಚ್ಚು ಪರಿಣಾಮ ಬೀರುತ್ತಿರುವ ಈ ಕಾಲಘಟ್ಟದಲ್ಲಿ, ಗುಣ ಗೌಣವಾಗಿ ತಲೆತಗ್ಗಿಸುವ ಪರಿಸ್ಥಿತಿಯೇ ಜಾಸ್ತಿ.

ಎಷ್ಟೋ ಮನೆಗಳಲ್ಲಿ ಹೊಸ ಸಂಬಂಧ ವೈರತ್ವದಷ್ಟೇ ಭೀಕರವೆನಿಸಿ, ಹಿಂಡಿಬಿಡುತ್ತದೆ. ಯಾವುದನ್ನೂ ಗಣನೆಗೆ ತೆಗೆದುಕೊಳ್ಳದೆ ಹಣಕ್ಕಾಗಿ ಮನುಷ್ಯತ್ವ ತೊರೆಯುವ ಪ್ರಕ್ರಿಯೆ ವೈಯಕ್ತಿಕ ಬದುಕಿಗೆ ಮುಳುವಾಗುತ್ತದೆ. ಯುವಜನಾಂಗ ಇಂದು ಸ್ವನಿರ್ಧಾರದಲ್ಲಿ ಬಲಯುತವಾಗಿರುವುದು, ಸರಿಯಾದ ಆಯ್ಕೆಯನ್ನು ಎದುರು ನೋಡುವುದು ಆರೋಗ್ಯಕರ ಸಮಾಜದ ದ್ಯೋತಕ. ಅವರಿಗೆ ಹೆಚ್ಚಿನ ಆಯ್ಕೆಯನ್ನು ಕಲ್ಪಿಸಿಕೊಡುವುದು ಹಿರಿಯರ ಆದ್ಯ ಕರ್ತವ್ಯ.

ಮಾಲತಿ ಎ.ಬಿ., ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪ್ರಜಾವಾಣಿ ವಾರ್ತೆ



ಪಿಂಚಣಿ ಸುಧಾರಣೆಯನ್ನು ವಿರೋಧಿಸಿ ಇದೇ 23ರಂದು ನಡೆದ ಪ್ರತಿಭಟನೆಯಲ್ಲಿ 10 ಲಕ್ಷಕ್ಕೂ ಹೆಚ್ಚು ಜನರು ಭಾಗಿಯಾಗಿದ್ದರು ಎಎಫ್‌ಪಿ ಚಿತ್ರ

ಫ್ರಾನ್ಸ್: ಪಿಂಚಣಿ ವ್ಯವಸ್ಥೆ ಬದಲಾವಣೆಗೆ ಜನಾಕ್ರೋಶ

ನೂತನ ಪಿಂಚಣಿ ಯೋಜನೆಯ ಕಾರಣಕ್ಕೆ ಫ್ರಾನ್ಸ್‌ನ ಅಧ್ಯಕ್ಷ ಇಮ್ಯಾನುಯಲ್ ಮ್ಯಾಕ್ರನ್ ಅವರ ಸರ್ಕಾರವು ಪತನದ ಅಂಚಿನ ವರೆಗೆ ಬಂದಿತ್ತು. ಮ್ಯಾಕ್ರನ್ ವಿಶ್ವಾಸಮತ ಸಾಬೀತು ಮಾಡಿ ಸರ್ಕಾರವನ್ನು ಉಳಿಸಿಕೊಂಡರು. ಆದರೆ, ಈ ಯೋಜನೆ ವಿರುದ್ಧ ಬೀದಿಗೆ ಇಳಿದಿರುವ ದೇಶದ ಕಾರ್ಮಿಕ ವರ್ಗದ ಸಿಟ್ಟು ಇನ್ನೂ ತಣ್ಣಗಾಗಿಲ್ಲ. ಪ್ರತಿಭಟನೆಯ ತೀವ್ರತೆ ದಿನಕಳೆದಂತೆ ಹೆಚ್ಚುತ್ತಿದೆ

ಫ್ರಾನ್ಸ್‌ನ ನೂತನ ಪಿಂಚಣಿ ಯೋಜನೆಗೆ ವ್ಯಾಪಕ ವಿರೋಧ ವ್ಯಕ್ತವಾಗುತ್ತಿದೆ. ಅಧ್ಯಕ್ಷ ಇಮ್ಯಾನುಯಲ್ ಮ್ಯಾಕ್ರನ್ ಅವರ ಈ ಯೋಜನೆಯನ್ನು ವಿರೋಧಿಸಿ ದೇಶದ 1.9 ಕೋಟಿಗೂ ಹೆಚ್ಚು ಕಾರ್ಮಿಕರು ವಾರದಿಂದ ಪ್ರತಿಭಟನೆ ನಡೆಸುತ್ತಿದ್ದಾರೆ. ಕೆಲವೆಡೆ ಪ್ರತಿಭಟನೆ ಶಾಂತಿಯುತವಾಗಿ ನಡೆಯುತ್ತಿದ್ದರೆ, ಕೆಲವೆಡೆ ಹಿಂಸಾರೂಪ ಪಡೆದಿದೆ. ವಿಶ್ವದಲ್ಲಿ ಹೆಚ್ಚು ಬಲಿಷ್ಠವಾದ ಮತ್ತು ಜನಪರವಾದ ಸಾಮಾಜಿಕ ಭದ್ರತಾ ವ್ಯವಸ್ಥೆ ಇರುವ ದೇಶಗಳಲ್ಲಿ ಫ್ರಾನ್ಸ್ ಸಹ ಒಂದು. ಸರ್ಕಾರವು ಈಗ ಜಾರಿಗೆ ತಂದಿರುವ ನೂತನ ಪಿಂಚಣಿ ಯೋಜನೆಯು ಕಾರ್ಮಿಕ ವಿರೋಧಿಯಾಗಿದೆ ಮತ್ತು ಸಾಮಾಜಿಕ ಭದ್ರತಾ ವ್ಯವಸ್ಥೆಯನ್ನು ಹಾಳುಗೆಡವುತ್ತದೆ ಎಂಬುದು ಪ್ರತಿಭಟನಕಾರರ ದೊಡ್ಡ ಆಕ್ಷೇಪ.

ಫ್ರಾನ್ಸ್‌ನಲ್ಲಿ ಈಚಿನವರೆಗೂ ಜಾರಿಯಲ್ಲಿದ್ದ ಪಿಂಚಣಿ ವ್ಯವಸ್ಥೆಯು ಏಕರೂಪವಾಗಿರಲಿಲ್ಲ. ಪಿಂಚಣಿ ಯೋಜನೆಗಳಲ್ಲಿ 42 ವಿವಿಧ ಸ್ವರೂಪದ ಉಪಯೋಜನೆಗಳು ಇದ್ದವು. ಆ ಎಲ್ಲಾ ಉಪಯೋಜನೆಗಳ ನಿಯಮಗಳು ಭಿನ್ನ-ಭಿನ್ನವಾಗಿದ್ದವು. ಹಳೆಯ ಯೋಜನೆಯ ಪ್ರಕಾರ 62 ವರ್ಷವು ನಿವೃತ್ತಿಯ ವಯಸ್ಸು ಮತ್ತು ಪಿಂಚಣಿಗೆ ಅರ್ಹವಾದ ವಯಸ್ಸು. ಆದರೆ, ಇದು ಎಲ್ಲಾ ನೌಕರರಿಗೆ/ಕಾರ್ಮಿಕರಿಗೆ ಏಕರೀತಿಯಲ್ಲಿ ಅನ್ವಯವಾಗುತ್ತಿರಲಿಲ್ಲ. ಕಚೇರಿಯಲ್ಲಿ ಕೆಲಸ ಮಾಡುವ ಸರ್ಕಾರಿ ನೌಕರರ ನಿವೃತ್ತಿ ಮತ್ತು ಪಿಂಚಣಿಗೆ ಅರ್ಹ ವಯಸ್ಸು 62 ಆಗಿತ್ತು. ಸರ್ಕಾರಿ ಹುದ್ದೆಯೇ ಆಗಿದ್ದರೂ ಗಣಿಗಳಲ್ಲಿ, ಸುರಂಗ ಮೆಟ್ರೊ ರೈಲುಗಳಲ್ಲಿ, ತೆರೆದ ಪರಿಸರದಲ್ಲಿ ಕೆಲಸ ಮಾಡುವ ನೌಕರರ ನಿವೃತ್ತಿಯ ಮತ್ತು ಪಿಂಚಣಿಗೆ ಅರ್ಹತೆ ಪಡೆಯುವ ವಯಸ್ಸು 62ಕ್ಕಿಂತ ಕಡಿಮೆ ಇತ್ತು. ಕೆಲವು ಸ್ವರೂಪದ ಉದ್ಯೋಗಗಳಲ್ಲಿ ನಿವೃತ್ತಿಯ ವಯಸ್ಸು 60ಕ್ಕಿಂತ ಕಡಿಮೆ ಇದ್ದು, ಪಿಂಚಣಿಗೆ ಅರ್ಹತೆ ಪಡೆಯುವ ವಯಸ್ಸೂ ಅದೇ ಆಗಿತ್ತು. ಖಾಸಗಿ ವಲಯದಲ್ಲೂ ಇದೇ ಸ್ವರೂಪದ ವರ್ಗೀಕರಣ ಇತ್ತು.

ಈ 42 ಸ್ವರೂಪದ ಉಪಯೋಜನೆಗಳನ್ನು ರದ್ದುಪಡಿಸಿ, ಸರ್ಕಾರವು ಈಗ ಒಂದೇ ಸಾರ್ವತ್ರಿಕ ಯೋಜನೆಯನ್ನು ಜಾರಿಗೆ ತಂದಿದೆ. ನಿವೃತ್ತಿಯ ವಯಸ್ಸನ್ನು 64ಕ್ಕೆ ಏರಿಕೆ ಮಾಡಿದೆ. ಇದರಿಂದಾಗಿ ಎಲ್ಲಾ ಸ್ವರೂಪದ ಹುದ್ದೆ ಮತ್ತು ಕ್ಷೇತ್ರಗಳಲ್ಲಿ ಕೆಲಸ ಮಾಡುವ ನೌಕರರು 64 ವಯಸ್ಸಿನ ನಂತರ ಪಿಂಚಣಿಗೆ ಅರ್ಹತೆ ಪಡೆಯುತ್ತಾರೆ. ಫ್ರಾನ್ಸ್ ಸುರಂಗ ರೈಲು ಸಿಬ್ಬಂದಿಯ ನಿವೃತ್ತಿಯ ವಯಸ್ಸು ಕಡಿಮೆ ಇತ್ತು. ಸದಾ ಕಾಲ ಸುರಂಗದಲ್ಲಿ ಕೃತಕ ಬೆಳಕಿನಲ್ಲೇ ಕೆಲಸ ಮಾಡುವ ಕಾರಣ, ಈ ಸಿಬ್ಬಂದಿಗೆ ಅತ್ಯಂತ ಕಡಿಮೆ ಅವಧಿಯ ಸೇವಾವಧಿ ನಿಗದಿ ಮಾಡಲಾಗಿದೆ. ಕೃತಕ ಬೆಳಕಿನಲ್ಲೇ ಕೆಲಸ ಮಾಡುವುದರಿಂದ ಆರೋಗ್ಯದ ಮೇಲೆ ಕೆಟ್ಟ ಪರಿಣಾಮಗಳಾಗುತ್ತವೆ. ಅದಕ್ಕೆ ಪರಿಹಾರವಾಗಿ ಸೇವಾವಧಿಯನ್ನು ಕಡಿಮೆ ನಿಗದಿ ಮಾಡಲಾಗಿತ್ತು. ನೂತನ ಯೋಜನೆ ಅಡಿಯಲ್ಲಿ ಉತ್ತಮ ಮಟ್ಟದ ಪಿಂಚಣಿ ಪಡೆಯಬೇಕೆಂದರೆ ಈ ಸಿಬ್ಬಂದಿ 64 ವರ್ಷದವರೆಗೂ ಕೆಲಸ ಮಾಡಬೇಕಾಗುತ್ತದೆ. ಜತೆಗೆ ಹೆಚ್ಚುವರಿ ಅವಧಿಯವರೆಗೆ ದೇಣಿಗೆ ನೀಡಬೇಕಾಗುತ್ತದೆ. ಎಲ್ಲಾ ಕ್ಷೇತ್ರಗಳ ಹುದ್ದೆ/ನೌಕರಿಯೂ ಇದೇ ಸ್ವರೂಪದ ಪರಿಣಾಮಕ್ಕೆ ಗುರಿಯಾಗಬೇಕಿದೆ. ಹೀಗಾಗಿಯೇ ಫ್ರಾನ್ಸ್‌ನ ಕಾರ್ಮಿಕ ವರ್ಗವು ದೊಡ್ಡಸಂಖ್ಯೆಯಲ್ಲಿ, ನೂತನ ಯೋಜನೆಯ ವಿರುದ್ಧ ಬೀದಿಗಿಳಿದಿದೆ.

ಪಿಂಚಣಿ ಮೊತ್ತ ಲೆಕ್ಕಹಾಕುವ ನಿಯಮಗಳಿಗೂ ಸರ್ಕಾರ ತಿದ್ದುಪಡಿ ತಂದಿದೆ. ಈ ಹಿಂದೆ ಜಾರಿಯಲ್ಲಿದ್ದ ನಿಯಮಗಳ ಪ್ರಕಾರ, ಸರ್ಕಾರಿ ನೌಕರನ ಪಿಂಚಣಿ ಲೆಕ್ಕಹಾಕಲು ಆತನ ಸೇವಾವಧಿಯ ಕೊನೆಯ ಆರು ತಿಂಗಳ ಸರಾಸರಿ ವೇತನವನ್ನು ಪರಿಗಣಿಸಲಾಗುತ್ತಿತ್ತು. ಖಾಸಗಿ ನೌಕರರ 25 ವರ್ಷಗಳ ಸರಾಸರಿ ವೇತನವನ್ನು ಪರಿಗಣಿಸಿ ಪಿಂಚಣಿ ನಿಗದಿ ಮಾಡಲಾಗುತ್ತಿತ್ತು. ನೂತನ ಯೋಜನೆಯಲ್ಲಿ ಈ ಎರಡೂ ಪದ್ಧತಿಗಳನ್ನು ಕೈಬಿಡಲಾಗಿದೆ. ಬದಲಿಗೆ ಯಾವುದೇ ನೌಕರ ತನ್ನ ಸೇವಾವಧಿಯಲ್ಲಿ ಎಷ್ಟು ದಿನ ಕೆಲಸ ಮಾಡಿದ್ದಾನೆ ಎಂಬುದನ್ನು ಪರಿಗಣಿಸಿ ಪಿಂಚಣಿ ನಿಗದಿ ಮಾಡಲಾಗುತ್ತದೆ. ಇದರಿಂದ ಕಡಿಮೆ ಸೇವಾವಧಿಯ ಹುದ್ದೆಯಲ್ಲಿ ಇರುವವರಿಗೆ, ಕಡಿಮೆ ಮೊತ್ತದ ಪಿಂಚಣಿ ನಿಗದಿಯಾಗುತ್ತದೆ. ಇದು ಸಹ ಕಾರ್ಮಿಕರ ಸಿಟ್ಟಿಗೆ ಕಾರಣವಾಗಿದೆ.

ಈ ಬದಲಾವಣೆಯಿಂದ ಸರ್ಕಾರದ ಹೊಣೆ ಕಡಿಮೆಯಾಗುತ್ತದೆ, ಕಾರ್ಮಿಕರಿಗೆ ಅನ್ಯಾಯವಾಗುತ್ತದೆ ಎಂಬುದು ಕಾರ್ಮಿಕ ಸಂಘಟನೆಗಳ ಆರೋಪ. ಮ್ಯಾಕ್ರನ್ ಅವರ ಕೆಲವು ಮಾತುಗಳೂ ಇದನ್ನೇ ಪುಷ್ಟೀಕರಿಸುತ್ತವೆ. ನೂತನ ಪಿಂಚಣಿ ಯೋಜನೆಯನ್ನು ಸಮರ್ಥಿಸಿಕೊಂಡು ಮ್ಯಾಕ್ರನ್ ಈಚೆಗೆ ಮಾತನಾಡಿದ್ದರು. ‘ನಾನು ದುಡಿಮೆ ಆರಂಭಿಸಿದಾಗ, ದೇಶದಲ್ಲಿ ಪಿಂಚಣಿ ಪಡೆಯುವವರ ಸಂಖ್ಯೆ 1 ಕೋಟಿ ಇತ್ತು. ಈಗ ಆ ಸಂಖ್ಯೆ 1.7 ಕೋಟಿಗೆ ಏರಿಕೆಯಾಗಿದೆ’ ಎಂದು ಹೇಳಿದ್ದರು. ಫ್ರಾನ್ಸ್‌ನ ಒಟ್ಟು ಜನಸಂಖ್ಯೆಯೇ 6.7 ಕೋಟಿ. ಫ್ರಾನ್ಸ್ ತನ್ನ ಜಿಡಿಪಿಯ ಶೇ 14ರಷ್ಟು ಮೊತ್ತವನ್ನು ಪಿಂಚಣಿಗೆ ವ್ಯಯಿಸುತ್ತದೆ. ಇದರಲ್ಲಿ ಜನರ ದೇಣಿಗೆ ಮತ್ತು ಸರ್ಕಾರದ ದೇಣಿಗೆಯೂ ಸೇರಿದೆ. ನೂತನ ಯೋಜನೆಯಿಂದ ಈ ಪ್ರಮಾಣ ಕಡಿಮೆಯಾಗಲಿದೆ. ಆದರೆ ಇದರಿಂದ ಕಾರ್ಮಿಕರ ಹಿತಾಸಕ್ತಿಗೆ ಧಕ್ಕೆಯಾಗಲಿದೆ ಎಂಬುದು ಕಾರ್ಮಿಕ ಸಂಘಟನೆಗಳ ಆರೋಪ.

‘ದೇಶದ ಪಿಂಚಣಿ ಯೋಜನೆಯನ್ನು ಸುಧಾರಿಸುವ ಅವಶ್ಯಕತೆ ಇತ್ತು. ಆದರೆ ಆ ಸುಧಾರಣೆ ಈ ಸ್ವರೂಪದ್ದು ಆಗಿರಬೇಕಿರಲಿಲ್ಲ. 2010ರಲ್ಲಿ ನಿವೃತ್ತಿ ಮತ್ತು ಪಿಂಚಣಿ ಅರ್ಹತೆಯ ವಯಸ್ಸನ್ನು 60 ವರ್ಷಗಳಿಂದ 62 ವರ್ಷಗಳಿಗೆ ಏರಿಕೆ ಮಾಡಲಾಗಿತ್ತು. ಈಗ ಆ ನಿವೃತ್ತಿಯ ವಯಸ್ಸನ್ನು 60 ವರ್ಷಕ್ಕೆ ಇಳಿಸಬೇಕು ಎಂಬುದು ಕಾರ್ಮಿಕ ವರ್ಗದ ಬೇಡಿಕೆಯಾಗಿತ್ತು. ಆದರೆ ಸರ್ಕಾರವು ನಿವೃತ್ತಿ ವಯಸ್ಸನ್ನು 64ಕ್ಕೆ ಏರಿಕೆ ಮಾಡಿದೆ. ಇದು ಕಾರ್ಮಿಕ ವರ್ಗವನ್ನು ಸಿಟ್ಟಿಗೇಳಿಸಿದೆ. ಈ ಬಗ್ಗೆ ಸರ್ಕಾರವು ಮಾತುಕತೆಗೆ ಬರುವುದಾದರೆ, ನಾವು ಸಿದ್ಧರಿದ್ದೇವೆ. ಆದರೆ, ಮಾತುಕತೆಗೆ ಸರ್ಕಾರವೇ ಮೊದಲ ಹೆಜ್ಜೆ ಇಡಬೇಕು’ ಎಂಬುದು ಕಾರ್ಮಿಕ ಸಂಘಟನೆಗಳ ಒತ್ತಾಯ. ಸರ್ಕಾರವೂ ತನ್ನ ಪಟ್ಟು ಬಿಡುತ್ತಿಲ್ಲ. ಹೀಗಾಗಿಯೇ ನೂತನ ಪಿಂಚಣಿ ಯೋಜನೆಯ ವಿರುದ್ಧದ ಹೋರಾಟ ಮುಂದುವರಿದಿದೆ.



ಇಮ್ಯಾನುಯಲ್ ಮ್ಯಾಕ್ರನ್

ಆಧಾರ: ಬಿಬಿಸಿ, ರಾಯಿಟರ್ಸ್, ಒಇಸಿಡಿ

ಸಾಮಾಜಿಕ ಭದ್ರತೆ ಯೋಜನೆ: ಫ್ರಾನ್ಸ್ ಮಾದರಿ

ಜಗತ್ತಿನ ಇತರೆ ದೇಶಗಳಿಗೆ ಹೋಲಿಸಿದರೆ ಸಾಮಾಜಿಕ ಭದ್ರತೆ ಯೋಜನೆಗಳ ಜಾರಿಯಲ್ಲಿ ಫ್ರಾನ್ಸ್ ಮುಂಚೂಣಿಯಲ್ಲಿದೆ. ಬಜೆಟ್‌ನಲ್ಲಿ ಸರಿಸುಮಾರು ಶೇ 31ರಷ್ಟು ಪಾಲನ್ನು ಸಾಮಾಜಿಕ ಭದ್ರತೆ ಯೋಜನೆಗಳಿಗೆ ಫ್ರಾನ್ಸ್ ವಿನಿಯೋಗಿಸುತ್ತಿದೆ. ಈ ವಿಚಾರದಲ್ಲಿ ಅಮೆರಿಕ ನಂತರದ ಸ್ಥಾನದಲ್ಲಿದೆ ಎಂದು ಆರ್ಗನೈಸೇಷನ್ ಫಾರ್ ಎಕನಾಮಿಕ್ ಕೋಆಪರೇಷನ್ ಅಂಡ್ ಡೆವಲಪ್‌ಮೆಂಟ್ (ಒಇಸಿಡಿ) ವರದಿ ಹೇಳುತ್ತದೆ.

ದೇಶದ ಜನರ ಸಾಮಾಜಿಕ ಜೀವನದ ಭದ್ರತೆಗೆ ಅಗತ್ಯವಿರುವ ಕ್ರಮಗಳನ್ನು ಫ್ರಾನ್ಸ್‌ನಲ್ಲಿ ಬಹು ಹಿಂದಿನಿಂದಲೂ ತೆಗೆದುಕೊಳ್ಳಲಾಗಿದೆ. ಆರೋಗ್ಯ, ನಿವೃತ್ತಿ, ಪಿಂಚಣಿ, ವೃದ್ಧಾಪ್ಯ ಸೇರಿದಂತೆ ಹಲವು ವಲಯಗಳಲ್ಲಿ ಜನರಿಗೆ ಹಣಕಾಸಿನ ಭದ್ರತೆಯನ್ನು ಖಚಿತಪಡಿಸಲಾಗಿದೆ.

ದೇಶದ ದುಡಿಯುವ ವರ್ಗದ ಎಲ್ಲರನ್ನು ಜನರಲ್ ಸ್ಕೀಮ್‌ಗೆ ಒಳಪಡಿಸುವ ನೀತಿಯನ್ನು ಅನುಸರಿಸಲಾಗುತ್ತಿದೆ. ಇದು ಕಡ್ಡಾಯ ಯೋಜನೆ. ಖಾಸಗಿ ವಲಯದ ಉದ್ದಿಮೆಗಳು, ವ್ಯಾಪಾರ ಹಾಗೂ ಸೇವಾ ವಲಯದ ವೇತನದಾರರು ಈ ಯೋಜನೆಯ ವ್ಯಾಪ್ತಿಯಲ್ಲಿದ್ದಾರೆ. ಅಸಂಘಟಿತ ವಲಯದಲ್ಲಿ ಕೆಲಸ ಮಾಡುವ ಕಾರ್ಮಿಕರಿಗೂ 2018ರ ಬಳಿಕ ಯೋಜನೆಯನ್ನು ವಿಸ್ತರಿಸುವ ಮಹತ್ವದ ತೀರ್ಮಾನವನ್ನು ಫ್ರಾನ್ಸ್ ಪ್ರಕಟಿಸಿತ್ತು.

ಉದ್ಯೋಗಿಗಳು ಹಾಗೂ ಉದ್ಯೋಗದಾತ ಸಂಸ್ಥೆಗಳು ಜನರಲ್ ಸ್ಕೀಮ್‌ಗೆ ತಮ್ಮ ಪಾಲು ನೀಡಬೇಕಿದೆ. ಉದ್ಯೋಗಿಯೊಬ್ಬರು ನೌಕರಿಗೆ ಸೇರಿಕೊಳ್ಳುವ ಮುನ್ನ ಸಾಮಾಜಿಕ ಭದ್ರತಾ ಯೋಜನೆಗೆ ನೋಂದಣಿ ಮಾಡಿಕೊಳ್ಳಲೇಬೇಕು ಎಂಬ ನಿಯಮ ತರಲಾಗಿದೆ. ಇದರಿಂದ ಉದ್ಯೋಗಿಯ ಹಣಕಾಸಿನ ಭದ್ರತೆಯನ್ನು ಸರ್ಕಾರ ಖಚಿತಪಡಿಸಿದೆ. ಒಂದು ವೇಳೆ, ವೇತನದಾರರು ತಮ್ಮ ಪಾಲಿನ ಹಣವನ್ನು ಪಾವತಿಸದೇ ಹಿಡಿದಿಟ್ಟುಕೊಳ್ಳುವುದು ಅಥವಾ ವಿಳಂಬ ಮಾಡುವುದನ್ನು ಅಪರಾಧ ಎಂದು ಪರಿಗಣಿಸಲಾಗಿದೆ. ಇಂತಹ ನೌಕರಸ್ನೇಹಿ ಕ್ರಮಗಳಿಂದಾಗಿ ಫ್ರಾನ್ಸ್ ಪ್ರಶಂಸೆ ಗಳಿಸಿದೆ.

ಸಾಮಾಜಿಕ ಭದ್ರತೆ ಯೋಜನೆಯಡಿ ಸಂಗ್ರಹಿಸಲಾದ ಹಣವನ್ನು ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಿಗೆ ಹಂಚಿಕೆ ಮಾಡಲಾಗುತ್ತದೆ. ವೈದ್ಯಕೀಯ ವೆಚ್ಚ ಮರುಪಾವತಿ, ಹೆರಿಗೆ ರಜೆ, ಕೈಗಾರಿಕಾ ಸ್ಥಳಗಳಲ್ಲಿ ಸಂಭವಿಸುವ ಅಪಘಾತ ವೆಚ್ಚ ಪರಿಹಾರ, ಮೂಲ ಪಿಂಚಣಿ ಪಾವತಿ, ಕೌಟುಂಬಿಕ ಪರಿಹಾರ ವೆಚ್ಚಗಳಿಗೆ ವಿನಿಯೋಗಿಸಲಾಗುತ್ತದೆ.

- ಸಾರ್ವತ್ರಿಕ ಆರೋಗ್ಯ ಯೋಜನೆಯಡಿ (ಪಿಯುಎಂಎ) ಫ್ರಾನ್ಸ್ ತನ್ನ ಎಲ್ಲ ನಾಗರಿಕರಿಗೆ ಆರೋಗ್ಯ ಸೇವೆ ನೀಡುತ್ತದೆ. ಜನರು ತಮ್ಮ ವೇತನದ ಶೇ 6.5ರಷ್ಟು ಪಾವತಿ ಮಾಡಿದರೆ ಆರೋಗ್ಯ ಸೇವೆ ನೀಡಲಾಗುತ್ತದೆ. ಕೆಲವು ವಲಯದವರಿಗೆ ಪಾವತಿಯಲ್ಲಿ ವಿನಾಯಿತಿ ಇದೆ. ವೈದ್ಯಕೀಯ ಸೇವೆ, ವೈದ್ಯಕೀಯ ರಜೆ ಹಾಗೂ ನಗದು ಪಾವತಿಯಂತಹ ಸವಲತ್ತುಗಳು ಈ ಯೋಜನೆಯಡಿ ಸಿಗುತ್ತವೆ. ಮೃತ ವ್ಯಕ್ತಿಯ ಕುಟುಂಬಕ್ಕೆ ಸ್ಥಳೀಯ ಆರೋಗ್ಯ ವಿಮೆ ನಿಧಿಯಡಿ ಪರಿಹಾರ ನೀಡಲಾಗುತ್ತದೆ.
- ಕೈಗಾರಿಕೆಗಳಲ್ಲಿ ಕೆಲಸ ಮಾಡುವ ನೌಕರರು, ಕೆಲಸದ ಸ್ಥಳದಲ್ಲಿ ಸಂಭವಿಸುವ ಆಕಸ್ಮಿಕ ಅವಘಡಗಳಿಗೆ ತುತ್ತಾದರೆ ಪರಿಹಾರ ನೀಡುವ ಯೋಜನೆಯಿದೆ. ವೈದ್ಯಕೀಯ ವೆಚ್ಚ ಭರಿಸುವುದರ ಜತೆಗೆ ವೇತನಸಹಿತ ರಜೆಯನ್ನು ನೀಡಲಾಗುತ್ತದೆ. ಉದ್ಯೋಗಿಯು ದೈಹಿಕ ಅಸಾಮರ್ಥ್ಯಕ್ಕೆ ಒಳಗಾದರೆ, ಬದುಕಿರುವವರೆಗೂ ವೇತನದಷ್ಟೇ ಪಿಂಚಣಿ ನೀಡುವ ಯೋಜನೆಯನ್ನು ಅಳವಡಿಸಿಕೊಳ್ಳಲಾಗಿದೆ.
- ದೇಶದ ಎಲ್ಲ ಜನರು ಹಾಗೂ ಎಲ್ಲ ವರ್ಗದ ಉದ್ಯೋಗಿಗಳಿಗೂ ಅನ್ವಯವಾಗುವ ‘ಕೌಟುಂಬಿಕ ಸೌಲಭ್ಯ ನಿಧಿ’ ಯೋಜನೆ ಫ್ರಾನ್ಸ್‌ನಲ್ಲಿ ಸಾಮಾಜಿಕ ಭದ್ರತೆಯನ್ನು ಖಾತರಿಪಡಿಸಿದೆ. ಮಕ್ಕಳೂ ವ್ಯಾಪ್ತಿಗೆ ಬರುತ್ತಾರೆ.
- ‘ನಿರುದ್ಯೋಗ ವಿಮೆ ಯೋಜನೆ’ ಪರಿಚಯಿಸಲಾಗಿದ್ದು, ಸಾಮಾನ್ಯ ಯೋಜನೆಗೆ ಹಾಗೂ ಕೃಷಿ ಯೋಜನೆಗೆ ಒಳಪಡುವ ಎಲ್ಲ ಸದಸ್ಯರು ಈ ಯೋಜನೆಗೂ ಒಳಪಡುತ್ತಾರೆ. ಹೆಚ್ಚುವರಿ ಪಿಂಚಣಿ ಯೋಜನೆಯೂ ಜಾರಿಯಲ್ಲಿದ್ದು, ಇದನ್ನು ಹೆಚ್ಚುವರಿಯಾಗಿ ಖರೀದಿಸಬೇಕಿದೆ.



‘ಸಪ್ತ ಸಾಗರ’ ದಾಟಿದ ‘ಮನು’

ಹೇಮಂತ್ ಎಂ.ರಾವ್ ನಿರ್ದೇಶನದ, ನಟ ರಕ್ಷಿತ್ ಶೆಟ್ಟಿ ನಟನೆಯ ‘ಸಪ್ತ ಸಾಗರದಾಚೆ ಎಲ್ಲೋ’ ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದೆ. 137 ದಿನಗಳ ಸುದೀರ್ಘ ಶೂಟಿಂಗ್ ಬಳಿಕ ಚಿತ್ರತಂಡ ಕುಂಬಳಕಾಯಿ ಒಡೆದಿದೆ.

‘137 ಸೊಗಸಾದ ದಿನಗಳ ಚಿತ್ರೀಕರಣಕ್ಕೆ ಪೂರ್ಣವಿರಾಮ. ಚಿತ್ರಮಂದಿರಗಳ ದಡಕ್ಕೆ ‘ಸಪ್ತ ಸಾಗರದಾಚೆ ಎಲ್ಲೋ’ ಎಂಬ ಅಲೆಗಳು ಅಪ್ಪಳಿಸುವಾಗ, ಪ್ರೀತಿಪಾತ್ರರೊಂದಿಗೆ ಅದನ್ನು ವೀಕ್ಷಿಸಲು ನೀವು ಅಲ್ಲಿರುತ್ತೀರಿ ಎಂದು ಭಾವಿಸುತ್ತೇನೆ’ ಎಂದು ರಕ್ಷಿತ್ ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

‘777 ಚಾರ್ಲಿ’ ಸಿನಿಮಾ ಬಳಿಕ ಈ ಚಿತ್ರದಲ್ಲೇ ರಕ್ಷಿತ್ ಮಗ್ನರಾಗಿದ್ದರು. ‘ಮನು’ ಎಂಬ ಪಾತ್ರದಲ್ಲಿ ಎರಡು ಶೇಡ್‌ಗಳಲ್ಲಿ ಕಾಣಿಸಿಕೊಳ್ಳಬೇಕಿದ್ದ ಕಾರಣ ರಕ್ಷಿತ್ ದೈಹಿಕವಾಗಿ ಬದಲಾಗಿದ್ದರು. ಸಿನಿಮಾದ ಮೊದಲರ್ಧಕ್ಕಾಗಿ ತೂಕ ಇಳಿಸಿಕೊಂಡಿದ್ದ ರಕ್ಷಿತ್, ದ್ವಿತೀಯಾರ್ಧದ ಕಥೆಗಾಗಿ 10-15 ಕೆ.ಜಿ. ತೂಕ ಹೆಚ್ಚಿಸಿಕೊಂಡಿದ್ದರು. ‘ಗೋಧಿ ಬಣ್ಣ ಸಾಧಾರಣ ಮೈಕಟ್ಟು’ ಚಿತ್ರದ ಬಳಿಕ ಹೇಮಂತ್-ರಕ್ಷಿತ್ ಕಾಂಬಿನೇಷನ್‌ನಲ್ಲಿ ಮೂಡಿಬರುತ್ತಿರುವ ಎರಡನೇ ಸಿನಿಮಾ ಇದಾಗಿದೆ. ಈ ಪ್ರೇಮಕಥೆಯಲ್ಲಿ ಲವರ್‌ಬಾಯ್ ಲುಕ್ ಹಾಗೂ ರಗಡ್ ಲುಕ್‌ನಲ್ಲಿ ರಕ್ಷಿತ್ ಕಾಣಿಸಿಕೊಂಡಿದ್ದಾರೆ. ‘2010ರಲ್ಲಿ ನಡೆಯುವ ಕಥೆ ಇದು. ದಶಕದ ಹಿಂದೆ ಪ್ರಪಂಚವೇ ಬೇರೆ ರೀತಿಯಾಗಿತ್ತು. ತಂತ್ರಜ್ಞಾನ, ಇಂಟರ್‌ನೆಟ್ ಎಲ್ಲವೂ ಹೊಸದಾಗಿತ್ತು. ಆಗಿನ ಸನ್ನಿವೇಶಗಳ ಜತೆ ಕಥೆ ಹೆಣೆಯಲಾಗಿದೆ. ಚಿತ್ರದಲ್ಲಿ ಎಲ್ಲ ಪಾತ್ರಗಳಿಗೂ ಎರಡು ನೋಟ ಇದ್ದು, 10 ವರ್ಷಗಳ ಹಿಂದೆ ಹಾಗೂ ಪ್ರಸ್ತುತ ಇರುವ ಪಾತ್ರ. ಬದಲಾವಣೆ ಹೇಗಾಗುತ್ತದೆ, ಅವರ ದೃಷ್ಟಿಕೋನ ಹೇಗಿರುತ್ತದೆ ಎನ್ನುವುದೇ ಕಥಾಹಂದರ’ ಎಂದಿದ್ದರು ಹೇಮಂತ್. ರಕ್ಷಿತ್ ಅವರಿಗೆ ಜೋಡಿಯಾಗಿ ನಟಿ ರುಕ್ಮಿಣಿ ವಸಂತ್ ‘ಪ್ರಿಯಾ’ ಎಂಬ ಪಾತ್ರಕ್ಕೆ ಬಣ್ಣಹಚ್ಚಿದ್ದು, ಮತ್ತೋರ್ವ ನಾಯಕಿಯಾಗಿ ‘ಸುರಭಿ’ ಎಂಬ ಪಾತ್ರಕ್ಕೆ ನಟಿ ಚೈತ್ರಾ ಆಚಾರ್ ಬಣ್ಣ ಹಚ್ಚಿದ್ದಾರೆ.

‘ಆರ’ನ ಹೋರಾಟದ ಕಥೆ

ದೈವ ಹಾಗೂ ದುಷ್ಟಶಕ್ತಿಯ ಸಂಘರ್ಷದ ಕಥಾಹಂದರ ಒಳಗೊಂಡ ಅಧ್ಯಾತ್ಮ ಡ್ರಾಮಾ ಮತ್ತು ಥ್ರಿಲ್ಲರ್ ಪ್ರಕಾರದ ಸಿನಿಮಾ ‘ಆರ’. ಯುವ ಸಿನಿಮೋತ್ಸಾಹಿಗಳ ತಂಡವೊಂದು ಸೇರಿ ಈ ಚಿತ್ರ ನಿರ್ಮಿಸಿದೆ. ಟೀಸರ್ ಮೂಲಕ ಈ ಚಿತ್ರ ಸದ್ದು ಮಾಡಿದೆ. ಅಶ್ವಿನ್ ವಿಜಯಮೂರ್ತಿ ಮತ್ತು ತಂಡದ ನಿರ್ದೇಶನದಲ್ಲಿ ಈ ಚಿತ್ರ ಮೂಡಿ ಬಂದಿದೆ.

ಅಶ್ವಿನ್ ವಿಜಯಮೂರ್ತಿ ನಿರ್ದೇಶನದ ಚಿತ್ರವಿದು. ಸಂಪೂರ್ಣ ಹೊಸ ಮುಖಗಳೇ ಈ ಚಿತ್ರದಲ್ಲಿವೆ.



ರೋಹಿತ್ ಹಾಗೂ ದೀಪಿಕಾ ಆರಾಧ್ಯ ಚಿತ್ರದ ಮುಖ್ಯ ಭೂಮಿಕೆಯಲ್ಲಿ ನಟಿಸಿದ್ದಾರೆ. ಚಿತ್ರದ ಕಥೆ, ಚಿತ್ರಕಥೆ, ಸಂಭಾಷಣೆಯನ್ನು ಚಿತ್ರದ ನಾಯಕ ನಟ ರೋಹಿತ್ ಬರೆದಿದ್ದಾರೆ. ಆನಂದ್ ನೀನಾಸಂ ಸತ್ಯ, ರಾಜ್, ನಿಖಿಲ್, ಶ್ರೀಪಾದ್, ಪ್ರತೀಕ್, ಲೋಕೇಶ್ ಚಿತ್ರದ ಪ್ರಮುಖ ಪಾತ್ರಗಳಿಗೆ ಬಣ್ಣ ಹಚ್ಚಿದ್ದಾರೆ.

‘ಆರ’ ಎಂಬ ಹುಡುಗನ ಪ್ರಯಾಣದ ಸುತ್ತ ಹೆಣೆದ ಕಥೆಯಿದು. ವಿಧಿಯ ಜೊತೆ ಸೇರಿ ಬದುಕಿನ ರಕ್ಷಣೆಗಾಗಿ ಹೋರಾಡುವ ಹುಡುಗನ ಕಥೆ ಈ ಚಿತ್ರದಲ್ಲಿದೆ. ಕಥೆ ಅಲ್ಲಲ್ಲಿ ವಿಶಿಷ್ಟ ತಿರುವು ಪಡೆದಿದೆ.

ಚಿತ್ರದ ಬಹುತೇಕ ಚಿತ್ರೀಕರಣ ಉಡುಪಿಯಲ್ಲಿ ನಡೆದಿದೆ. ಚಿತ್ರವು ಉಡುಪಿ ಭಾಗದ ಶೈಲಿಯ ಕನ್ನಡ ಹೊಂದಿದೆ.

‘ಎ.ಆರ್.’ ಫಿಲಂಸ್ ಬ್ಯಾನರ್ ಅಡಿ ಸುಜಾತ ಚಡಗ, ಚಂದ್ರಶೇಖರ್ ಸಿ. ಜಂಬಿಗಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಯುವ ಪ್ರತಿಭೆ ಶ್ರೀಹರಿ ಛಾಯಾಗ್ರಹಣ, ಗಿರೀಶ್ ಹೊತ್ತೂರ್ ಸಂಗೀತ ನಿರ್ದೇಶನ, ಮಾದೇಶ್ ಸಂಕಲನ, ದೇವಿ ಪ್ರಕಾಶ್ ಕಲಾ ನಿರ್ದೇಶನ ‘ಆರ’ ಚಿತ್ರಕ್ಕಿದೆ. ಜೂನ್‌ನಲ್ಲಿ ಸಿನಿಮಾ ತೆರೆಗೆ ತರಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ಪಶ್ಚಿಮ ಬಂಗಾಳದಲ್ಲಿ ಲಷ್ಕರ್ ಉಗ್ರನನ್ನು ಬಂಧಿಸಿ ಕರೆದೊಯ್ಯುತ್ತಿದ್ದ ಸೇನಾ ವಾಹನಗಳಿಗೆ ಅಲ್ಲಿನ ಮುಸ್ಲಿಮರು ತಡೆಒಡ್ಡಿದ್ದಾರೆ. ಅವರ ಸಂಖ್ಯೆ ಕಡಿಮೆ ಇದ್ದೇ, ಹೀಗೆ ಮಾಡುತ್ತಿದ್ದಾರೆ. ಇನ್ನು ಸಂಖ್ಯೆ ಹೆಚ್ಚಾದರೆ ಪರಿಸ್ಥಿತಿ ಏನು’ ಎಂದು ಹೇಳಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಆದರೆ ಇದು ತಿರುಚಲಾದ ಮಾಹಿತಿ.



‘ಪ್ರಧಾನಿ ನರೇಂದ್ರ ಮೋದಿ ಅವರು ಬಾಂಗ್ಲಾದೇಶಕ್ಕೆ 2021ರ ಮಾರ್ಚ್‌ನಲ್ಲಿ ಭೇಟಿ ನೀಡಿದ್ದರು. ಅವರ ಭೇಟಿಯನ್ನು ಖಂಡಿಸಿ, ಅಲ್ಲಿನ ಕೆಲವು ಸಂಘಟನೆಗಳು ಪ್ರತಿಭಟನೆ ನಡೆಸಿದ್ದವು. 2021ರ ಮಾರ್ಚ್ 26ರಂದು ಚಿತ್ತಗಾಂಗ್‌ನಲ್ಲಿ ಭದ್ರತಾ ಪರಿಶೀಲನೆಗೆ ಎಂದು ಅಲ್ಲಿನ ಸೇನಾಧಿಕಾರಿಗಳು ಭೇಟಿ ನೀಡಿದ್ದರು. ಮೋದಿ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ಮುಸ್ಲಿಮರು ಆ ಸೇನಾಧಿಕಾರಿಗಳ ವಾಹನಗಳನ್ನು ತಡೆದಿದ್ದರು. ಪ್ರತಿಭಟನೆಯ ವಿಡಿಯೊವನ್ನು ತಪ್ಪು ಮಾಹಿತಿಯೊಂದಿಗೆ ಹಂಚಿಕೊಳ್ಳಲಾಗುತ್ತಿದೆ’ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ನೆಮ್ಮದಿಯದಾರಿ

ಒಮ್ಮನಸಿನಿಂದ ನೀನೀ ತತ್ತ್ವವಂ ಗ್ರಹಿಸು |
ಬ್ರಹ್ಮಲೀಲೆಗೆ ಗೊತ್ತುಗುರಿ ಲೆಕ್ಕವಿಲ್ಲ ||
ಸುಮ್ಮನಿರು ನಿನ್ನ ಪಾಡನು ಪಡುತ ತುಟಿ ಬಿಗಿದು |
ನೆಮ್ಮದಿಗೆ ದಾರಿಯದು – ಮಂಕುತಿಮ್ಮ || **849** ||

ಪದ-ಅರ್ಥ: ಒಮ್ಮನಸಿನಿಂದ = ಏಕಮನಸ್ಸಿನಿಂದ, ನೀನೀ = ನೀನು + ಈ, ಗ್ರಹಿಸು = ತಿಳಿದುಕೊ.

ವಾಚ್ಯಾರ್ಥ: ಒಂದೇ ಮನಸ್ಸಿನಿಂದ ಈ ತತ್ವವನ್ನು ತಿಳಿದುಕೊ. ಬ್ರಹ್ಮಲೀಲೆಗೆ ಯಾವುದೇ ಗೊತ್ತು ಗುರಿ ಇಲ್ಲ. ಅದು ತನ್ನ ಆನಂದಕ್ಕೆ ಆಡುವ ಲೀಲೆ. ಆದ್ದರಿಂದ, ಅದು ಯಾಕೆ ಹೀಗೆ ಎಂದು ಕೇಳದೆ ಬಂದ ಪಾಡನ್ನು ಆನಂದಿಸು. ಹೆಚ್ಚು ಮಾತನಾಡದೆ ತುಟಿ ಬಿಗಿದು ಅನುಭವಿಸು. ಅದೇ ನೆಮ್ಮದಿಯ ದಾರಿ.

ವಿವರಣೆ: ಇದೊಂದು ತುಂಬ ಎಚ್ಚರದಿಂದ ತಿಳಿದು ಮನನಮಾಡಬೇಕಾದ ವಿಷಯ ಎಂದು ಕಗ್ಗ ಮೊದಲೇ ಎಚ್ಚರಿಸುತ್ತದೆ. ಬ್ರಹ್ಮ ಎಂಬುದು ಅಕ್ಷರ. ಕ್ಷರವೆಂದರೆ ನಾಶವಾಗತಕ್ಕದ್ದು. ಅಕ್ಷರವೆಂದರೆ ನಾಶವಿಲ್ಲದ್ದು. ನಾಶವಾಗುವ ಕ್ಷರದೇಹದಲ್ಲಿ ಅಕ್ಷರವಾದ ಬ್ರಹ್ಮಸತ್ವ ನೆಲೆಸಿದೆ. ಅದೇಕೆ ಹೀಗೆ ಅನೇಕ ಜೀವಿಗಳನ್ನು ಸೃಷ್ಟಿಸಿತು? ಬ್ರಹದಾರಣ್ಯಕ ಉಪನಿಷತ್ತು ಹೇಳುತ್ತದೆ. “ಬ್ರಹ್ಮವಸ್ತು ಮೊದಲು ಒಂದೇ ಇತ್ತು. ಒಬ್ಬಂಟಿಯಾದರೆ ಸಂತೋಷವಿಲ್ಲವೆಂದುಕೊಂಡು, ತಾನೇ ಬಹುಪ್ರಕಾರವಾಗಿ ಹರಡಿಕೊಂಡು ಜಗತ್ತಾಗಿಸಿತು”. ಆ ಬ್ರಹ್ಮ ಯಾಕೆ ಸುಮ್ಮನಿರದೆ ಹೀಗೆ ಪ್ರಾಣಿಗಳನ್ನು ಸೃಷ್ಟಿಸಿ, ವಸ್ತುಗಳನ್ನು ಮಾಡಿ ನಾಟಕವನ್ನು ಮಾಡುತ್ತದೆ? ಇದಕ್ಕೆ ಬ್ರಹ್ಮಸೂತ್ರ ಹೇಳುತ್ತದೆ. “ಲೋಕವತ್ ತು ಲೀಲಾಕೈವಲ್ಯಮ್”. ಲೋಕದ ಜನರು ಲೀಲಾ ವಿನೋದಕ್ಕೆ ಚಟುವಟಿಕೆಗಳನ್ನು ಮಾಡುವಂತೆ ಬ್ರಹ್ಮವಸ್ತು ತನ್ನ ಲೀಲೆಗಾಗಿ ಈ ಎಲ್ಲ ಸೃಷ್ಟಿಗಳನ್ನು ಮಾಡಿ ವಿನೋದಿಸುತ್ತದೆ. ತೊಟ್ಟಿಲಲ್ಲಿ ಮಲಗಿರುವ ಮಗು ಅತ್ತಿತ್ತ ನೋಡುತ್ತ, ಕೈಕಾಲುಗಳನ್ನು ಆಡಿಸುತ್ತ, ನಗುತ್ತ ಸಂತೋಷಪಡುವುದು ಲೀಲೆ. ಅದು ಕೇವಲ ತನ್ನ ಆತ್ಮಸಂತೋಷಕ್ಕಾಗಿ ಮಾಡುವ ಕ್ರಿಯೆ. ಸುಂದರಿಯೊಬ್ಬಳು ಕನ್ನಡಿಯಲ್ಲಿ ತನ್ನನ್ನು ತಾನೇ ನೋಡಿಕೊಳ್ಳುತ್ತ, ಮುಂಗುರುಳು ತೀಡಿಕೊಳ್ಳುತ್ತ, ತನ್ನ ದೇಹವನ್ನು ನೂರಾರು ದಿಶೆಗಳಿಂದ ನೋಡಿ ಸಂತೋಷ ಪಡುವುದೂ ಆಕೆಯ ಲೀಲೆ. ಹಾಗೆಯೇ ಬ್ರಹ್ಮವಸ್ತು ನಡೆಸುವ ಪ್ರತಿಯೊಂದು ಕ್ರಿಯೆ, ಲೀಲೆ. ಅದನ್ನು ಮೊದಲೇ ತಿಳಿದುಕೊಳ್ಳುವುದು, ಅನುಸರಿಸುವುದು ಅಸಾಧ್ಯ. ಯಾಕೆಂದರೆ ಅದು ಬುದ್ಧಿಗೆ ನಿಲುಕಲಾರದ್ದು. ಹಾಗಾದರೆ ನಾವು ಮಾಡಬೇಕಾದುದು ಏನು? ಅದನ್ನೇ ಕಗ್ಗ ಹೇಳುತ್ತದೆ. ನೀನು ತುಟಿ ಬಿಗಿದು ಸುಮ್ಮನಿರು, ವಿಪರೀತ ಗೊಣಗಬೇಡ. ನಿನಗೆ ಯಾವ ಪಾಡು ಬಂದಿದೆಯೋ ಅದು ನಿನ್ನ ಕರ್ಮದ ಫಲ. ಅದನ್ನು ಅನುಭವಿಸು. ತೊಂದರೆಯಾದೀತೆಂದು ಕರ್ಮವನ್ನು ಬಿಡಬೇಡ. ಸತತವಾಗಿ ದುಡಿ. ಪರಮೋತ್ತಮ ಸ್ಥಾನದಲ್ಲಿ ಬ್ರಹ್ಮವಸ್ತುವಿದೆ ಎಂಬುದನ್ನು ನೆನಪಿಟ್ಟುಕೊಂಡು, ಸತತ ಪ್ರಯತ್ನದಿಂದ, ಜಗತ್ತನ್ನು ಮೀರಬೇಕು. ಯಾವ ಮೂಲದಿಂದ ಜಗತ್ತು ಬಂದಿದೆಯೋ ಆ ಮೂಲವನ್ನು ಸೇರಲು ಪ್ರಯತ್ನಿಸಬೇಕು. ಇದೇ ನಮಗಿರುವ ನೆಮ್ಮದಿಯ ದಾರಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಮಾರ್ಚ್ 27, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ಚೈತ್ರ ಶುದ್ಧ ಷಷ್ಠಿ ಗಂ. 17-28 ನಕ್ಷತ್ರ: ರೋಹಿಣಿ ಗಂ. 15-27 ಯೋಗ: ಆಯುಷ್ಮಾನ್ ಗಂ. 23-19, ಕರಣ: ತೈತಿಲ ಗಂ. 17-28, ಮೀನ ಮಾಸದ 12ನೇ ದಿನ. ರಾಹುಕಾಲ : ಬೆಳಿಗ್ಗೆ 07-30 –09-00
ಸೂರ್ಯೋದಯ : 06-34 ಸೂರ್ಯಾಸ್ತ : 06-38 , ಮುಸ್ಲಿಂ ದಿನಾಂಕ : 04 ರಂಜಾನ್
ದಿನ ವಿಶೇಷ : ಸ್ಕಂದ ಷಷ್ಠಿ, ಶೃಂಗೇರಿ ಶ್ರೀಮತ್ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳ ವರ್ಧಂತಿ.
ಅದೃಷ್ಟ ಸಂಖ್ಯೆ : 3, 12

ಮೇಷ: ಪುರಾತತ್ವ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವವರು ಕಾರ್ಯ ನಿಮಿತ್ತ ದೂರದ ಊರಿಗೆ ಪ್ರಯಾಣ ಬೆಳೆಸಬೇಕಾಗುವುದು. ಅಜೀರ್ಣ ಹಾಗೂ ಪಿತ್ತದ ಸಮಸ್ಯೆಗಳು ಕಾಡುವ ಸಾಧ್ಯತೆ ಇದೆ.

ವೃಷಭ: ಧರ್ಮದ ವಿರುದ್ಧವಾಗಿ ಇರುವ ನಿಮ್ಮ ಆಚರಣೆಗಳನ್ನು ನಿಮ್ಮ ಮುಂದಿನ ಸಂತತಿಯವರೆ ವಿರೋಧಿಸುತ್ತಾರೆ. ಆತ್ಮೀಯರ ದುರ್ಮರಣದ ವಾರ್ತೆ ಕಂಗಾಲು ಪಟ್ಟುಕೊಳ್ಳುವಂತೆ ಮಾಡುತ್ತದೆ.

ಮಿಥುನ: ಆದರ್ಶಗಳನ್ನೆ ದರ್ಪಣದಂತೆ ಅನುಸರಿಸುತ್ತಿರುವ ನಿಮ್ಮ ಸಂತತಿಯನ್ನು ಕಂಡು ಹೆಮ್ಮೆ ಎಂದೆನಿಸುತ್ತದೆ. ಹೊಸ ಉದ್ಯೋಗ ಹುಡುಕುತ್ತಿರುವವರಿಗೆ ಹೆಚ್ಚಿನ ಪ್ರಯತ್ನದ ಅವಶ್ಯಕತೆಯ ಮನವರಿಕೆ ಆಗುತ್ತದೆ.

ಕರ್ಕಾಟಕ: ಕುಟುಂಬದ ಹಿರಿಯರ ದರ್ಶನ ಹಾಗೂ ಅವರಿಂದ ಪಡೆದ ಆಶೀರ್ವಾದದಿಂದ ಮನಸ್ಸು ಪ್ರಫುಲ್ಲವಾಗುತ್ತದೆ. ತಾಂತ್ರಿಕ ಅಭಿಯಂತರರಿಗೆ ಹಿರಿಯ ಅನುಭವಿ ವ್ಯಕ್ತಿಗಳಿಂದ ಮಾರ್ಗದರ್ಶನ ದೊರೆಯುತ್ತದೆ.

ಸಿಂಹ: ದಿನಗಳು ಕಳೆದಂತೆ ಜೀವನದಲ್ಲಾದ ಕಹಿ ಘಟನೆಗಳನ್ನು ಮರೆತು ಬದುಕನ್ನು ಸರಾಗವಾಗಿ ನಡೆಸುವಿರಿ. ತಾಯಿಯ ಆತ್ಮೀಯತೆಯ ಕೆಲವು ಬುದ್ಧಿಯ ಮಾತುಗಳನ್ನು ತಪ್ಪಾಗಿ ತೆಗೆದುಕೊಳ್ಳುವುದು ಸರಿಯಲ್ಲ.

ಕನ್ಯಾ: ಸಮಾರಂಭಗಳಿಗೆ ತೆರಳುವಾಗ ನಿಮ್ಮ ಉಡುಗೆ ತೊಡುಗೆ ಮೇಲೆ ವಿಶೇಷ ಗಮನ ನೀಡಿ. ಹರಿತವಾದ ಮಾತುಗಳು ನಿಮ್ಮನ್ನು ಇಂದು ಗಾಸಿಗೊಳಿಸಬಹುದು. ಅನಿರೀಕ್ಷಿತ ಉಡುಗೊರೆ ದೊರೆಯಲಿದೆ.

ತುಲಾ: ನಿಮ್ಮ ಸಂತೋಷವನ್ನು ಹೆಚ್ಚಿಸಲು ಸೋದರ ಸಂಬಂಧಿಗಳು ವಿಶೇಷ ಪ್ರಯತ್ನ ಮಾಡುವರು. ತಂದೆ ತಾಯಿಯರ ತೀರ್ಥಯಾತ್ರೆಯ ಕಾಮನೆಗಳನ್ನು ಪೂರೈಸಲು ಶ್ರಮಿಸುವುದು ಅಗತ್ಯವಾಗಿದೆ.

ವೃಶ್ಚಿಕ: ಕೆಲವು ವಸ್ತುಗಳ ಸಂಪಾದನೆಗಾಗಿ ನೀವು ಶ್ರಮಿಸಿದ ರೀತಿಯನ್ನು ನೋಡಿ ಹಲವರು ಗೇಲಿ ಮಾಡಬಹುದು. ಚರ್ಮ ಸಂಬಂಧಿ ಕಾಯಿಲೆಗಳಿದ್ದಲ್ಲಿ ಆಯುರ್ವೇದ ಅಥವಾ ನಾಟಿ ಚಿಕಿತ್ಸೆ ಪರಿಣಾಮಕಾರಿ.

ಧನು: ಕಾರಣವಿಲ್ಲದೆ ಮಾಡುವ ನಿಸ್ವಾರ್ಥ ಸೇವೆಗೆ ಜನರಿಂದ ಉತ್ತಮ ಸ್ಪಂದನೆ ದೊರೆಯುತ್ತದೆ. ಯುವಕ ಯುವತಿಯರಿಗೆ ಕಾಲೇಜಿನ ಶಿಸ್ತುಬದ್ಧವಾದ ಜೀವನವು ಉಸಿರುಗಟ್ಟಿಸುವಂತಹ ಅನುಭವ ತರಿಸಬಹುದು.

ಮಕರ: ಶ್ರದ್ಧೆಯಿಂದ ಮಾಡುತ್ತಿರುವ ಕೆಲಸಗಳಿಗೆ ಸಹಚರರು ಕೈಜೋಡಿಸದೆ ಇರುವುದು ಕಷ್ಟಕ್ಕೆ ಕಾರಣವಾಗಬಹುದು. ದೇವಸ್ಥಾನದ ಭೇಟಿ ಹಾಗೂ ದೇವರ ದರ್ಶನದಿಂದ ಮನಸ್ಸಿಗೆ ಸಂತಸವಾಗುವುದು.

ಕುಂಭ: ಉದಯೋನ್ಮುಖ ಚಿತ್ರಕಲಾಕಾರರು ಹಾಗೂ ಸಂಗೀತಗಾರರಿಗೆ ಉತ್ತಮ ಹೆಸರನ್ನು ತರಿಸುವಂತಹ ಕಾರ್ಯಕ್ರಮದಲ್ಲಿ ಭಾಗವಹಿಸುವ ಅವಕಾಶ. ಮನೆಯ ಜನರೊಂದಿಗೆ ಕಳೆದ ಸಮಯ ಅವಿಸ್ಮರಣೀಯ.

ಮೀನ: ಕುಶಲತೆಯ ಕಾರ್ಯಗಳನ್ನು ಕಂಡಂತವರು ನಿಮ್ಮಲ್ಲಿಯ ಕಲೆಗೆ ಬೆರಗಾಗುವರು. ಸಣ್ಣ ಮಗುವಿನಂತಹ ಮನಸ್ಸು ಇತರರ ಕಷ್ಟ ನೋಡಲಾಗದೆ ಉದಾರ ಮನಸ್ಸಿನಿಂದ ಸಹಾಯ ಮಾಡುವಂತೆ ಮಾಡುವುದು.

ಪದಬಂಧ 5270

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಉಸಿರನ್ನು ಹೊರಗೆ ಬಿಡುವಿಕೆ (3)
3.ದೂರವನ್ನು ಅಳೆಯುವ ಒಂದು ಪ್ರಮಾಣ (3)
5.ಅಭಿಪ್ರಾಯ ಭೇದವಿದು (5)
7.ಶೀರಾ ನಿಕೃಷ್ಟವಾದುದು (3)
8.ಉದ್ದವಾಗಿ ಬಾಗಿರುವ ತುತ್ತೂರಿ (3)
9.ಸಮವಯಸ್ಕರನ್ನು ಹೀಗೆನ್ನಿ (3)
11.ಗರ ಬಡಿದಂತಿರುವ ಪತಿವ್ರತೆ (3)
13.ಮನಸ್ಸಿನ ಉಮ್ಮಳ (3)
15.ಕಪ್ಪೆ ಚಿಪ್ಪು ಇಲ್ಲಿದೆ (3)
16.ಲೋಹದ ಹಕ್ಕಿಯಲ್ಲಿನ ಪಯಣ (5)
17.ಲಾಂದ್ರವನ್ನು ಹೀಗೂ ಹೇಳುವರು (3)
18.ಕದಿಯಲು ಬೇಕಾದ ಧಾನ್ಯದ ತೆನೆ! (3)

ಮೇಲಿಂದ ಕೆಳಕ್ಕೆ

2.ಸಭೆಯಲ್ಲಿ ಕುಳಿತಿರುವವನು (3)
3.ನಾಯಕನ ಜೊತೆ ಹಾಡುಗಾರನಿದ್ದಾನೆ (3)
6.ಭಿಕ್ಷೆ ಬೇಡುವವ ಇಲ್ಲಿದ್ದಾನೆ (3)
9.ವಾಚಕನನ್ನು ಆಡುಮಾತಲ್ಲಿ ಕರೆಯಿರಿ (3)
10.ಗೆಳೆಯನ ಜೊತೆ ಕಾಣಿಸಿದ ಸ್ನೇಹಿತೆ (3)
12.ದ್ರವ ಒಸರುತ್ತಿರುವ ಜಿಹ್ವೆ (3)
14.ನಲಿಯುತ್ತಿರುವ ರಾಷ್ಟ್ರ ಪಕ್ಷಿ (3)
15.ನಾಯಿ ಇಲ್ಲಿಗೆ ಬಂದಿದೆಯಲ್ಲಾ? (3)

1		2	■	■	■	3		4
■	■	5		6			■	■
7			■		■	8		
■	■	■	9		10	■	■	■
■	■	■		■		■	■	■
■	■	■	11	12		■	■	■
13		14	■		■	15		
■	■	16					■	■
17			■	■	■	18		

5269ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಭರತ 5.ಸಮಕಾಲೀನ
7.ವರಾಹ 9.ಮನರಂಜನೆ
14.ಪುರುಷ 15.ಮಲಮಗಳು
18.ಗಡಾರಿ

ಮೇಲಿಂದ ಕೆಳಕ್ಕೆ:
1.ಭರವಸೆ 2.ಬೆಸ
3.ಕಾಕಾ 4.ದನಗಾಹಿ
8.ಹಕೀಮ 10.ನಗುಮೊಗ
11.ನೆನಪು 12.ಅನುಮತಿ
13.ವೇಷಧಾರಿ 16.ಮತ್ತು
17.ಖುಷಿ

ಸುಡೊಕು 5656

	1				5	4		9
4		7	6				5	
	6			4	8	1		
	2				7			6
5		1		6			2	
			5					7
	3	9				6		
6			8		4		3	1
		4		3		2		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5655 ಸುಡೊಕು

3	4	9	1	5	8	2	7	6
2	5	6	4	9	7	8	1	3
1	7	8	3	6	2	4	5	9
5	3	7	2	4	6	9	8	1
8	9	1	7	3	5	6	2	4
4	6	2	8	1	9	7	3	5
6	8	4	5	2	3	1	9	7
7	1	3	9	8	4	5	6	2
9	2	5	6	7	1	3	4	8

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹460
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹462

ಮ್ಯೂಚುವಲ್ ಫಂಡ್: ನಾಮನಿರ್ದೇಶನಕ್ಕೆ 31ರ ಗಡುವು

ನವದೆಹಲಿ (ಪಿಟಿಐ): ಮ್ಯೂಚುವಲ್ ಫಂಡ್‌ಗಳಲ್ಲಿ ಹಣ ತೊಡಗಿಸಿರುವವರು ಮಾರ್ಚ್ 31ರೊಳಗೆ ನಾಮನಿರ್ದೇಶನ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು. ಅಥವಾ, ತಮ್ಮ ಹೂಡಿಕೆಗೆ ಯಾರನ್ನೂ ನಾಮನಿರ್ದೇಶನ ಮಾಡುವುದಿಲ್ಲ ಎಂಬ ಹೇಳಿಕೆ ಸಲ್ಲಿಸಬೇಕು.

ಈ ಕೆಲಸವನ್ನು ಮಾರ್ಚ್ 31ರೊಳಗೆ ಮಾಡದೆ ಇದ್ದರೆ ಮ್ಯೂಚುವಲ್ ಫಂಡ್ ಹೂಡಿಕೆ ಖಾತೆಗಳಿಂದ (ಫೋಲಿಯೊ) ಹಣ ಹಿಂಪಡೆಯಲು ಸಾಧ್ಯವಾಗುವುದಿಲ್ಲ.

ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) 2022ರ ಜೂನ್ 15ರಂದು ಹೊರಡಿಸಿದ್ದ ಸುತ್ತೋಲೆಯಲ್ಲಿ, ನಾಮನಿರ್ದೇಶನ ಮಾಡುವುದನ್ನು ಅಥವಾ ಯಾರನ್ನೂ ನಾಮನಿರ್ದೇಶನ ಮಾಡುವುದಿಲ್ಲ ಎಂಬ ಹೇಳಿಕೆ ಸಲ್ಲಿಸುವುದನ್ನು ಕಡ್ಡಾಯಗೊಳಿಸಿದೆ. ಮೊದಲು ಹೀಗೆ ಮಾಡಲು 2022ರ ಆಗಸ್ಟ್ 1ರ ಗಡುವು ನಿಗದಿ ಮಾಡಲಾಗಿತ್ತು. ನಂತರದಲ್ಲಿ ಗಡುವನ್ನು ವಿಸ್ತರಿಸುತ್ತ ಬರಲಾಗಿದೆ.

ಎಫ್ ಆ್ಯಂಡ್ ಒ ವಹಿವಾಟು ತೆರಿಗೆ ಏರಿಕೆ

ನವದೆಹಲಿ (ಪಿಟಿಐ): ವಾಯಿದಾ ವಹಿವಾಟಿನ ಮೇಲಿನ ಷೇರು ವಹಿವಾಟು ತೆರಿಗೆಯನ್ನು (ಎಸ್‌ಟಿಟಿ) ಹೆಚ್ಚಿಸುವ ಪ್ರಸ್ತಾವನೆಯು 'ಹಣಕಾಸು ಮಸೂದೆ 2023'ರಲ್ಲಿ ಇದೆ. ಈ ಮಸೂದೆಗೆ ಲೋಕಸಭೆಯು ಅನುಮೋದನೆ ನೀಡಿದೆ.

ಇದು ನಿಯಮವಾಗಿ ಜಾರಿಗೆ ಬಂದ ನಂತರದಲ್ಲಿ ಎಫ್‌ಆ್ಯಂಡ್‌ಒ ವಹಿವಾಟು ವೆಚ್ಚಗಳು ಹೆಚ್ಚಲಿವೆ. ಈ ಏರಿಕೆಯು ಎಫ್‌ಆ್ಯಂಡ್‌ಒ ವಿಭಾಗದಲ್ಲಿ ಅತಿಯಾಗಿ ವಹಿವಾಟು ನಡೆಯುವುದನ್ನು ತಡೆಯಲು ಅವಕಾಶ ಮಾಡಿಕೊಡಲಿದೆ.

ಆಪ್ಷನ್ಸ್ ವಹಿವಾಟುಗಳ ಮೇಲಿನ ಎಸ್‌ಟಿಟಿ ಪ್ರಮಾಣವನ್ನು ಈಗಿರುವ ಶೇ 0.05ರಿಂದ ಶೇ 0.0625ಕ್ಕೆ ಹೆಚ್ಚಿಸುವ, ಫ್ಯೂಚರ್ಸ್ ವಹಿವಾಟು ಮೇಲಿನ ಎಸ್‌ಟಿಟಿ ಪ್ರಮಾಣವನ್ನು ಈಗಿರುವ ಶೇ 0.01ರಿಂದ ಶೇ 0.0125ಕ್ಕೆ ಹೆಚ್ಚಿಸುವ ಪ್ರಸ್ತಾವನೆಯು ಹಣಕಾಸು ಮಸೂದೆಯಲ್ಲಿ ಇದೆ.

ಎಸ್‌ಟಿಟಿ ಏರಿಕೆಯು ಸರ್ಕಾರದ ವರಮಾನವನ್ನು ಒಂದು ಹಂತದವರೆಗೆ ಹೆಚ್ಚಿಸಲಿದೆ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಸಣ್ಣ ಹೂಡಿಕೆದಾರರಲ್ಲಿ ಹಲವರು ಎಫ್‌ಆ್ಯಂಡ್‌ಒ ವಿಭಾಗದಲ್ಲಿ ಅತಿಯಾಗಿ ವಹಿವಾಟು ನಡೆಸಿ ಹಣ ಕಳೆದುಕೊಳ್ಳುವುದಕ್ಕೆ ಕಡಿವಾಣ ಬೀಳಲಿದೆ ಎಂದು ಕೂಡ ಅವರು ಅಭಿಪ್ರಾಯಪಟ್ಟಿದ್ದಾರೆ.

ಎಸ್‌ಟಿಟಿ ಹೆಚ್ಚಳ ಮಾಡಿರುವ ಸಮಯ ಸರಿಯಿಲ್ಲ ಎಂದು ಉದ್ಯಮದ ಸಂಘಟನೆ ಪಿಎಚ್‌ಡಿಸಿಸಿಐ ಅಧ್ಯಕ್ಷ ಸಾಕೇತ್ ದಾಲ್ಮಿಯಾ ಹೇಳಿದ್ದಾರೆ. ಮಾರುಕಟ್ಟೆಯಲ್ಲಿ ಅನಿಶ್ಚಿತತೆ ಇದೆ. ಈ ಸಮಯದಲ್ಲಿ ಎಸ್‌ಟಿಟಿ ಏರಿಕೆ ಮಾಡುವುದು ಹೂಡಿಕೆದಾರರ ಮೇಲೆ ಪರಿಣಾಮ ಉಂಟುಮಾಡಲಿದೆ ಎಂದು ದಾಲ್ಮಿಯಾ ಹೇಳಿದ್ದಾರೆ.

ಹಣಕಾಸು ಮಸೂದೆಯು ಲೋಕಸಭೆಯ ಅನುಮೋದನೆ ಪಡೆದಿದ್ದು ಶುಕ್ರವಾರ. ಆ ದಿನದ ವಹಿವಾಟಿನಲ್ಲಿ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಮತ್ತು ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಶೇಕಡ 1ರಷ್ಟು ಕುಸಿದಿವೆ.

ಮನೆ ಖರೀದಿ ಮುನ್ನ ಒಂದು ಲೆಕ್ಕಾಚಾರ



ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಸ್ವಂತ ಮನೆ ಹೊಂದಬೇಕು ಎನ್ನುವುದು ಪ್ರತಿಯೊಬ್ಬರ ಕನಸು. ಆದರೆ ಯಾವ ಹಂತದಲ್ಲಿ ಮನೆ ಖರೀದಿ ತೀರ್ಮಾನ ಮಾಡಬೇಕು, ಮನೆ ಕೊಳ್ಳಲು ಎಷ್ಟು ಡೌನ್‌ಪೇಮೆಂಟ್ ಮಾಡಬೇಕು, ಎಷ್ಟು ಮೌಲ್ಯದ ಸೂರು ಖರೀದಿಸಬೇಕು, ಎಷ್ಟು ಸಾಲ ಮಾಡಬೇಕು... ಹೀಗೆ ಸಾಲು ಸಾಲು ಪ್ರಶ್ನೆಗಳು ನಮ್ಮ ಮುಂದೆ ಬರುತ್ತವೆ. ಮೊದಲ ಮನೆ ಖರೀದಿ ತೀರ್ಮಾನ ಯಾವಾಗ ಮತ್ತು ಹೇಗೆ ಮಾಡಬೇಕು ಎನ್ನುವ ಬಗ್ಗೆ ತಿಳಿಯೋಣ.

50-20-40 ನಿಯಮ: ಮನೆ ಖರೀದಿ ತೀರ್ಮಾನ ಮಾಡುವಾಗ ಪ್ರಮುಖವಾಗಿ ಅನುಸರಿಸಬೇಕಾದುದು 50-20-40 ಸೂತ್ರವನ್ನು. ನೀವು ಖರೀದಿ ಮಾಡುತ್ತಿರುವ ಮನೆಯ ಮೌಲ್ಯ ನಿಮ್ಮ ಕುಟುಂಬದ ವಾರ್ಷಿಕ ವರಮಾನದ ಐದು ಪಟ್ಟಿಗಿಂತ ಜಾಸ್ತಿ ಇರಬಾರದು. ಮನೆ ಖರೀದಿಗೆ ಪಡೆಯುವ ಸಾಲದ ಅವಧಿ 20 ವರ್ಷಗಳನ್ನು ಮೀರಬಾರದು. ನೀವು ಸಾಲದ ಮಾಸಿಕ ಕಂತು ಅಂದರೆ, ಇಎಂಐ ಮೊತ್ತ, ನಿಮ್ಮ ಕುಟುಂಬದ ಒಟ್ಟು ಆದಾಯದ ಶೇಕಡ 40ಕ್ಕಿಂತ ಹೆಚ್ಚಿಗೆ ಇರಬಾರದು (ಪಟ್ಟಿ ಗಮನಿಸಿ).

'ಅ' ಎಂಬ ಕುಟುಂಬದ ₹ 12 ಲಕ್ಷ ವಾರ್ಷಿಕ ಆದಾಯವನ್ನು ಗಣನೆಗೆ ತೆಗೆದುಕೊಂಡಾಗ ಮಾಸಿಕ ಆದಾಯ ₹ 1 ಲಕ್ಷ ಆಗುತ್ತದೆ. ವಾರ್ಷಿಕ ಆದಾಯದ ಐದು ಪಟ್ಟು ಮನೆಯ ಮೌಲ್ಯವಿರಬೇಕು ಎಂದರೆ, ಮನೆಯ ಮೌಲ್ಯ ₹ 60 ಲಕ್ಷ ಆಗುತ್ತದೆ. ಸಾಮಾನ್ಯವಾಗಿ ಬ್ಯಾಂಕ್‌ಗಳು ಮನೆಯ ಮೌಲ್ಯದ ಶೇ 80ರಷ್ಟು ಮೊತ್ತವನ್ನು ಮಾತ್ರ ಸಾಲವಾಗಿ ಕೊಡುವುದರಿಂದ ₹ 12 ಲಕ್ಷ ಡೌನ್ ಪೇಮೆಂಟ್ ಮಾಡಿ ₹ 48 ಲಕ್ಷ ಸಾಲ ಪಡೆಯಬೇಕಾಗುತ್ತದೆ. ₹ 48 ಲಕ್ಷ ಸಾಲಕ್ಕೆ ಮಾಸಿಕ ಕಂತು ₹ 40,149 ಆಗುತ್ತದೆ, 20 ವರ್ಷ ಅದನ್ನು ಪಾವತಿಸಬೇಕಾಗುತ್ತದೆ.

'ಬ' ಎನ್ನುವ ಕುಟುಂಬದ ₹ 18 ಲಕ್ಷ ವಾರ್ಷಿಕ ಆದಾಯವನ್ನು ಗಣನೆಗೆ ತೆಗೆದುಕೊಂಡಾಗ ಮಾಸಿಕ ಆದಾಯ ₹ 1.5 ಲಕ್ಷ ಆಗುತ್ತದೆ. ವಾರ್ಷಿಕ ಆದಾಯದ ಐದು ಪಟ್ಟು ಮನೆಯ ಮೌಲ್ಯವಿರಬೇಕು ಎಂದರೆ, ಮನೆಯ ಮೌಲ್ಯ ₹ 90 ಲಕ್ಷ ಆಗುತ್ತದೆ. ₹ 18 ಲಕ್ಷ ಡೌನ್ ಪೇಮೆಂಟ್ ಮಾಡಿ ₹ 72 ಲಕ್ಷ ಸಾಲ ಪಡೆಯಬೇಕಾಗುತ್ತದೆ. ₹ 72 ಲಕ್ಷ ಸಾಲಕ್ಕೆ ಮಾಸಿಕ ಕಂತು ₹ 60,224 ಆಗಲಿದ್ದು, 20 ವರ್ಷಗಳ ಕಾಲ ಅದನ್ನು ಪಾವತಿಸಬೇಕಾಗುತ್ತದೆ.

'ಕ' ಎನ್ನುವ ಕುಟುಂಬದ ₹ 24 ಲಕ್ಷ ವಾರ್ಷಿಕ ಆದಾಯವನ್ನು ಗಣನೆಗೆ ತೆಗೆದುಕೊಂಡಾಗ ಮಾಸಿಕ ಆದಾಯ ₹ 2 ಲಕ್ಷ ಆಗುತ್ತದೆ. ವಾರ್ಷಿಕ ಆದಾಯದ ಐದು ಪಟ್ಟು ಮನೆಯ ಮೌಲ್ಯವಿರಬೇಕು ಎಂದರೆ, ಮನೆಯ ಮೌಲ್ಯ ₹ 1.20 ಕೋಟಿ ಆಗುತ್ತದೆ. ₹ 24 ಲಕ್ಷ ಡೌನ್ ಪೇಮೆಂಟ್ ಮಾಡಿ ₹ 96 ಲಕ್ಷ ಸಾಲ ಪಡೆದುಕೊಳ್ಳಬೇಕಾಗುತ್ತದೆ. ₹ 96 ಲಕ್ಷ ಸಾಲಕ್ಕೆ ಮಾಸಿಕ ಕಂತು ₹ 80,298, 20 ವರ್ಷಗಳ ಕಾಲ ಅದನ್ನು ಪಾವತಿಸಬೇಕಾಗುತ್ತದೆ.

ಸಾಲ ಬೇಗ ತೀರಿಸುವುದು ಹೇಗೆ?: ಮೇಲಿನ 'ಅ' ಉದಾಹರಣೆಯಲ್ಲಿ ₹ 48 ಲಕ್ಷ ತೀರಿಸಲು 20 ವರ್ಷಗಳ ಕಾಲ ಪ್ರತಿ ತಿಂಗಳು ₹ 40,149 ಪಾವತಿಸಬೇಕು. ಈ ಇಎಂಐ ಮೊತ್ತದಲ್ಲಿ ಶೇ 2ರಷ್ಟು ಹೆಚ್ಚಳ ಮಾಡಿದರೆ 20 ವರ್ಷಗಳ ಸಾಲವನ್ನು ಹದಿನೈದೂವರೆ ವರ್ಷಗಳಲ್ಲೇ ತೀರಿಸಬಹುದು. ಒಂದೊಮ್ಮೆ ತಿಂಗಳ ಕಂತಿನಲ್ಲಿ ಶೇ 5ರಷ್ಟು ಹೆಚ್ಚಳ ಪರಿಗಣಿಸಿದರೆ ಹನ್ನೆರಡೂವರೆ ವರ್ಷಗಳಲ್ಲಿ ಸಾಲ ಮರುಪಾವತಿ ಮಾಡಬಹುದು. ಪ್ರತಿ ವರ್ಷ ಸಂಬಳ/ಆದಾಯ ಒಂದಷ್ಟು ಹೆಚ್ಚಳ ಆಗೇ ಆಗುತ್ತದೆ. ಆ ಹೆಚ್ಚಳದ ಮೊತ್ತವನ್ನು ಸಾಲ ಮರುಪಾವತಿಗೆ ಬಳಸಿದರೆ ಬೇಗ ಸಾಲ ತೀರಿಸುವ ಕನಸು ನನಸಾಗುತ್ತದೆ.

ಮನೆ ಖರೀದಿಗೆ ಮುಂದಾಗುವ ಮುನ್ನ ಆರ್ಥಿಕವಾಗಿ ನೀವು ಎಷ್ಟು ಸುಸ್ಥಿರವಾಗಿದ್ದೀರಿ ಎನ್ನುವುದನ್ನು ಲೆಕ್ಕಾಚಾರ ಮಾಡುವುದು ಬಹಳ ಮುಖ್ಯ. ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಮನೆ ಖರೀದಿಗೆ ಮುಂದಾಗುವುದು ಒಳಿತು. ವಯಸ್ಸು ಚಿಕ್ಕದಿದ್ದು, ಉತ್ತಮ ಆದಾಯವಿದ್ದಾಗ ಬ್ಯಾಂಕ್‌ಗಳು ಸುಲಭವಾಗಿ ಸಾಲ ಕೊಡುತ್ತವೆ. 25ರಿಂದ 30ನೇ ವಯಸ್ಸಿನಲ್ಲಿ ಮನೆ ಖರೀದಿಗೆ ಯೋಜಿಸಬಹುದು. ಸಾಮಾನ್ಯವಾಗಿ ಗೃಹ ಸಾಲ ತೀರಿಸಲು 15ರಿಂದ 20 ವರ್ಷ ಬೇಕಾಗುವುದರಿಂದ ನಿವೃತ್ತಿ ಅಂಚಿನಲ್ಲಿರುವವರಿಗೆ ಬ್ಯಾಂಕ್‌ಗಳು ಸಾಲ ಕೊಡುವುದಿಲ್ಲ. ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದೀರಿ, ಮನೆ ಖರೀದಿಸುವ ಇರಾದೆ ಇದೆ ಎಂದಾದರೆ ಬೇಗ ಆ ಕೆಲಸ ಮಾಡುವುದು ಒಳಿತು.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

50-20-40 ಸೂತ್ರದ ವಿವರಣೆ

ವಿವರಗಳು	ಅ	ಬ	ಕ
ಕುಟುಂಬದ ವಾರ್ಷಿಕ ಆದಾಯ	₹12 ಲಕ್ಷ	₹18 ಲಕ್ಷ	₹24 ಲಕ್ಷ
ಕುಟುಂಬದ ಮಾಸಿಕ ಆದಾಯ	₹1 ಲಕ್ಷ	₹1.5 ಲಕ್ಷ	₹2 ಲಕ್ಷ
ವಾರ್ಷಿಕ ಆದಾಯದ ಐದು ಪಟ್ಟು	₹60 ಲಕ್ಷ	₹90 ಲಕ್ಷ	₹1.20 ಕೋಟಿ
ಡೌನ್‌ಪೇಮೆಂಟ್ (ಶೇ 20ರಷ್ಟು)	₹12 ಲಕ್ಷ	₹18 ಲಕ್ಷ	₹24 ಲಕ್ಷ
ಸಾಲ (ಶೇ 80ರಷ್ಟು)	₹48 ಲಕ್ಷ	₹72 ಲಕ್ಷ	₹96 ಲಕ್ಷ
ಮಾಸಿಕ ಕಂತು (ಇಎಂಐ ಶೇ 8ರ ಬಡ್ಡಿ) 20 ವರ್ಷ ಅವಧಿ	₹40,149	₹60.224	₹80,298
ಮಾಸಿಕ ಆದಾಯದಲ್ಲಿ ಇಎಂಐಗೆ ಹೋಗುವ ಪ್ರಮಾಣ	ಶೇ 40	ಶೇ 40	ಶೇ 40

ಸತತ ಮೂರನೇ ವಾರ ಕುಸಿದ ಷೇರುಪೇಟೆ

ಷೇರುಪೇಟೆ ಸೂಚ್ಯಂಕಗಳು ಸತತ ಮೂರನೇ ವಾರ ಕುಸಿತ ದಾಖಲಿಸಿವೆ. ಮಾರ್ಚ್ 24ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಕುಸಿತ ದಾಖಲಿಸಿವೆ. 57,527 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 0.79ರಷ್ಟು ಕುಸಿದಿದೆ. 16,945 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.90ರಷ್ಟು ತಗ್ಗಿದೆ. ಅಮೆರಿಕದ ಬ್ಯಾಂಕ್ ವಲಯದಲ್ಲಾಗಿರುವ ತಲ್ಲಣ, ಅಮೆರಿಕದ ಫೆಡರಲ್ ಬ್ಯಾಂಕ್ ಮತ್ತು ಬ್ಯಾಂಕ್ ಆಫ್ ಇಂಗ್ಲೆಂಡ್‌ನಿಂದ ಬಡ್ಡಿ ಹೆಚ್ಚಳ, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಷೇರುಗಳ ಮಾರಾಟ ಸೇರಿ ಹಲವು ಅಂಶಗಳು ಸೂಚ್ಯಂಕಗಳ ಕುಸಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 4.7ರಷ್ಟು, ಲೋಹ ಸೂಚ್ಯಂಕ ಶೇ 4ರಷ್ಟು, ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 3ರಷ್ಟು ಮತ್ತು ಕ್ಯಾಪಿಟಲ್ ಗೂಡ್ಸ್ ಸೂಚ್ಯಂಕ ಶೇ 2ರಷ್ಟು ಕುಸಿದಿವೆ. ಪವರ್ ಸೂಚ್ಯಂಕ ಶೇ 0.6ರಷ್ಟು ಗಳಿಸಿಕೊಂಡಿದೆ.

ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 6,654.23 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 9,430.59 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಜೊಮಾಟೊ, ಅದಾನಿ ಎಂಟರ್‌ಪ್ರೈಸಸ್, ಕೋಲ್ ಇಂಡಿಯಾ, ಅದಾನಿ ಪೋರ್ಟ್ಸ್, ಗೇಲ್ ಇಂಡಿಯಾ, ಟಾಟಾ ಪವರ್ ಕಂಪನಿ, ಡಿಎಲ್‌ಎಫ್, ವೇದಾಂತ ಮತ್ತು ಎಚ್‌ಸಿಎಲ್ ಟೆಕ್ನಾಲಜೀಸ್ ಶೇ 8ರವರೆಗೆ ಕುಸಿತ ಕಂಡಿವೆ.

ಅದಾನಿ ಗ್ರೀನ್ ಎನರ್ಜಿ, ಅದಾನಿ ಟೋಟಲ್ ಗ್ಯಾಸ್, ಅದಾನಿ ಟ್ರಾನ್ಸ್‌ಮಿಷನ್ ಮತ್ತು ಪೇಟಿಎಂ ಶೇ 7ರಿಂದ ಶೇ 26ರವರೆಗೆ ಕುಸಿದಿವೆ.

ಮುನ್ನೋಟ: ಏಪ್ರಿಲ್ 3ರಿಂದ 6ರವರೆಗೆ ಆರ್‌ಬಿಐ ಹಣಕಾಸು ನೀತಿ ಸಮಿತಿ ಸಭೆ ನಡೆಯಲಿದ್ದು ರೆಪೊ ದರ ಮತ್ತಷ್ಟು ಹೆಚ್ಚಳವಾಗುವ ಸಾಧ್ಯತೆಯಿದೆ. ಬಡ್ಡಿ ದರ ಹೆಚ್ಚಳವು ಮಾರುಕಟ್ಟೆಯ ಮೇಲೆ ನೇರ ಪರಿಣಾಮ ಬೀರಲಿದೆ. ಇನ್ನು, ಮಾರ್ಚ್ ತ್ರೈಮಾಸಿಕ ಫಲಿತಾಂಶದ ಅವಧಿ ಸಮೀಪಿಸುತ್ತಿರುವುದರಿಂದ ಹೂಡಿಕೆದಾರರ ಚಿತ್ತ ಅದರತ್ತ ನೆಟ್ಟಿದ್ದು, ಸೂಚ್ಯಂಕಗಳ ಮೇಲೆ ಅದು ಕೂಡ ಪರಿಣಾಮ ಬೀರಲಿದೆ.



ನೇಪಾಳದಲ್ಲಿ ಸ್ವಲ್ಪದರಲ್ಲೇ ತಪ್ಪಿದ ವಿಮಾನ ಅಪಘಾತ

ಕಠ್ಮಂಡು (ಪಿಟಿಐ): ಏರ್ ಇಂಡಿಯಾ ಮತ್ತು ನೇಪಾಳ ಏರ್‌ಲೈನ್ಸ್ ವಿಮಾನಗಳ ಹಾರಾಟದ ವೇಳೆ ಡಿಕ್ಕಿ ಹೊಡೆಯುವುದು ಸ್ವಲ್ಪದರಲ್ಲೇ ತಪ್ಪಿದೆ. ಆಕಾಶದಲ್ಲಿ ಈ ಎರಡೂ ವಿಮಾನಗಳ ನಡುವಿನ ಅಂತರ ಕಡಿಮೆಯಾಗುತ್ತಿದ್ದಂತೆ ಪೈಲಟ್‌ಗಳಿಗೆ ರಾಡಾರ್ ಎಚ್ಚರಿಕೆ ಸಂದೇಶ ರವಾನಿಸಿದೆ. ಇದರಿಂದ ಅನಾಹುತ ತಪ್ಪಿಸಲು ಸಾಧ್ಯವಾಗಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಈ ಸಂಬಂಧ ಮೂವರು ವಾಯುಯಾನ ಸಂಚಾರ ನಿಯಂತ್ರಣ ಅಧಿಕಾರಿಗಳನ್ನು ನೇಪಾಳ ನಾಗರಿಕ ವಿಮಾನಯಾನ ಪ್ರಾಧಿಕಾರ ಅಮಾನತುಗೊಳಿಸಿದೆ.

ಶುಕ್ರವಾರ ಬೆಳಿಗ್ಗೆ ನೇಪಾಳ ವಿಮಾನ ಕೌಲಾಲಂಪುರದಿಂದ ಕಠ್ಮಂಡುವಿಗೆ ಬರುತ್ತಿತ್ತು. ಏರ್ ಇಂಡಿಯಾ ವಿಮಾನವೂ ನವದೆಹಲಿಯಿಂದ ಕಠ್ಮಂಡುವಿನತ್ತ ಸಾಗುತ್ತಿತ್ತು.

ಏರ್ ಇಂಡಿಯಾ ವಿಮಾನವು 19 ಸಾವಿರ ಅಡಿ ಎತ್ತರದಲ್ಲಿ ಹಾಗೂ ನೇಪಾಳ ಏರ್‌ಲೈನ್ಸ್ ವಿಮಾನವು 15 ಸಾವಿರ ಅಡಿ ಎತ್ತರದಲ್ಲಿ ಹಾರಾಟ ನಡೆಸುತ್ತಿತ್ತು. ಎರಡೂ ವಿಮಾನಗಳ ನಡುವಿನ ಅಂತರ ಕಡಿಮೆಯಿದ್ದ ಬಗ್ಗೆ ರಾಡಾರ್ ಎಚ್ಚರಿಕೆ ನೀಡಿದೆ. ಬಳಿಕ ನೇಪಾಳ ವಿಮಾನವನ್ನು 7 ಸಾವಿರ ಅಡಿ ಕೆಳಕ್ಕೆ ಹಾರುವಂತೆ ಮಾಡಲಾಯಿತು. ಇದರಿಂದ ಸಂಭಾವ್ಯ ಅನಾಹುತವೊಂದು ತಪ್ಪಿದೆ ಎಂದು ವಕ್ತಾರರು ತಿಳಿಸಿದ್ದಾರೆ.

ಈ ಕುರಿತು ತನಿಖೆ ನಡೆಸಲು ನೇಪಾಳ ನಾಗರಿಕ ವಿಮಾನಯಾನ ಪ್ರಾಧಿಕಾರ ಮೂವರು ಸದಸ್ಯರ ಸಮಿತಿ ರಚಿಸಿದೆ. ಈ ಕುರಿತು ಭಾರತ ತಕ್ಷಣಕ್ಕೆ ಪ್ರತಿಕ್ರಿಯೆ ನೀಡಿಲ್ಲ.

ಭೋಜಪುರಿ ನಟಿ ಅನುಮಾನಾಸ್ಪದ ಸಾವು

ವಾರಾಣಸಿ (ಪಿಟಿಐ): ಭೋಜಪುರಿ ಚಿತ್ರರಂಗದ ಜನಪ್ರಿಯ ನಟಿ ಹಾಗೂ ನೃತ್ಯಪಟು ಆಕಾಂಕ್ಷಾ ದುಬೆ (25) ಅವರು ಇಲ್ಲಿನ ಸಾರಾನಾಥ್ ಪೊಲೀಸ್ ಠಾಣಾ ವ್ಯಾಪ್ತಿಯ ಹೋಟೆಲ್ ಒಂದರಲ್ಲಿ ಅನುಮಾನಾಸ್ಪದವಾಗಿ ಮೃತಪಟ್ಟಿದ್ದಾರೆ.

ಆಕಾಂಕ್ಷಾ ಅವರ ಮೃತದೇಹ ನೇಣುಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಆಕಾಂಕ್ಷಾ ಅವರು ಮುಂದಿನ ಚಿತ್ರಕ್ಕಾಗಿ ಶೂಟಿಂಗ್ ಮುಗಿಸಿ ಹೋಟೆಲ್‌ನಲ್ಲಿ ತಂಗಿದ್ದರು ಎಂದು ಭಾನುವಾರ ಪೊಲೀಸರು ತಿಳಿಸಿದ್ದಾರೆ.

'ಮುಜಸೆ ಶಾದಿ ಕರೋಗೆ', 'ವೀರೋನ್ ಕೆ ವೀರ್', 'ಕಸಮ್ ಪೈದಾ ಕರನೇ ಕಿ 2' ಸಿನಿಮಾಗಳಲ್ಲಿ ಮಿಂಚಿದ್ದ ಆಕಾಂಕ್ಷಾ, ಹಲವು ಭೋಜಪುರಿ ಮ್ಯೂಸಿಕ್ ಅಲ್ಬಂಗಳಲ್ಲಿ ನಟಿಸಿ ಗಮನ ಸೆಳೆದಿದ್ದರು.

ಎಫ್‌ಎಂಸಿಜಿ: ಕಡಿಮೆ ಬೆಲೆ ನಿಗದಿ ಮಾಡಿದ ರಿಲಯನ್ಸ್

ನವದೆಹಲಿ (ಪಿಟಿಐ): ಎಫ್‌ಎಂಸಿಜಿ ಮಾರುಕಟ್ಟೆಗೆ ಲಗ್ಗೆ ಇರಿಸಿರುವ ರಿಲಯನ್ಸ್ ರಿಟೇಲ್ ವೆಂಚರ್ಸ್ ಲಿಮಿಟೆಡ್ ಕಂಪನಿಯು, ತನ್ನ ಕೆಲವು ಉತ್ಪನ್ನಗಳಿಗೆ ಪ್ರತಿಸ್ಪರ್ಧಿ ಉತ್ಪನ್ನಗಳಿಗಿಂತ ಶೇಕಡ 35ರವರೆಗೆ ಕಡಿಮೆ ಬೆಲೆ ನಿಗದಿ ಮಾಡಿದೆ.



ಪ್ರತಿಸ್ಪರ್ಧಿ ಉತ್ಪನ್ನಗಳಿಗೆ ಪೈಪೋಟಿ ನೀಡುವಂತೆ ನಿಗದಿ ಮಾಡಿರುವ ಈ ಬೆಲೆಯು ಗ್ರಾಹಕರನ್ನು ಆಕರ್ಷಿಸಲಿದೆ ಎಂದು ಮಾರುಕಟ್ಟೆ ಪರಿಣತರು ನಿರೀಕ್ಷಿಸಿದ್ದಾರೆ.

ಈ ಎಫ್‌ಎಂಸಿಜಿ ಉತ್ಪನ್ನಗಳು ಈಗ ಆಯ್ದ ಮಾರುಕಟ್ಟೆಗಳಲ್ಲಿ ಮಾತ್ರ ಲಭ್ಯವಿವೆ. ಆದರೆ ಕಂಪನಿಯು ದೇಶದಾದ್ಯಂತ ಡೀಲರ್ ಜಾಲವನ್ನು ಕಟ್ಟುತ್ತಿದೆ. ಕಂಪನಿಯು ಗ್ಲಿಮ್ಮರ್, ಗೆಟ್ ರಿಯಲ್ ಮತ್ತು ಪ್ಯೂರಿಕ್ ಸೋಪುಗಳ ಬೆಲೆಯನ್ನು ₹ 25ಕ್ಕೆ ನಿಗದಿ ಮಾಡಿದೆ. ಇದು ಪ್ರತಿಸ್ಪರ್ಧಿ ಸೋಪುಗಳ ಬೆಲೆಗಿಂತ ಕಡಿಮೆ.

ಪಾತ್ರೆ ತೊಳೆಯುವ ಸೋಪುಗಳ ಬೆಲೆಯನ್ನು ಕಂಪನಿಯು ₹ 5, ₹ 10 ಮತ್ತು ₹ 15ಕ್ಕೆ ನಿಗದಿ ಮಾಡಿದೆ. ಪಾತ್ರೆ ತೊಳೆಯುವ ಜೆಲ್‌ಗಳನ್ನು ₹ 10, ₹ 30 ಹಾಗೂ ₹ 45ಕ್ಕೆ ಮಾರುಕಟ್ಟೆಗೆ ತಂದಿದೆ.

ಅಮೆರಿಕ: ಖಾಲಿಸ್ತಾನ ಬೆಂಬಲಿಗರ ಸಂಚನ್ನು ವಿಫಲಗೊಳಿಸಿದ ಪೊಲೀಸರು

ರಾಯಭಾರ ಕಚೇರಿ ಮುಂದೆ ಹಿಂಸಾಚಾರಕ್ಕೆ ಯತ್ನ

ವಾಷಿಂಗ್ಟನ್ (ಪಿಟಿಐ): ಖಾಲಿಸ್ತಾನ ಬೆಂಬಲಿಗರ ಗುಂಪೊಂದು ಇಲ್ಲಿನ ಭಾರತೀಯ ರಾಯಭಾರ ಕಚೇರಿಯ ಮುಂದೆ ಪ್ರತಿಭಟನೆ ನಡೆಸಿ, ಹಿಂಸಾಚಾರ ನಡೆಸಲು ಯತ್ನಿಸಿದೆ. ಆದರೆ ಕಾನೂನು ಜಾರಿ ಏಜೆನ್ಸಿಗಳು ಮಧ್ಯಪ್ರವೇಶಿಸಿ ಯಾವುದೇ ಹಾನಿಯಾಗದಂತೆ ತಡೆದಿವೆ.

ಇದೇ ವೇಳೆ, ಪ್ರತಿಭಟನಕಾರರು ಅಮೆರಿಕದ ಭಾರತೀಯ ರಾಯಭಾರಿ ತರಣ್‌ಜಿತ್ ಸಿಂಗ್ ಸಂಧು ಅವರಿಗೆ ಅವಾಚ್ಯ ಪದಗಳಿಂದ ನಿಂದಿಸಿ, ಬಹಿರಂಗವಾಗಿ ಬೆದರಿಕೆ ಹಾಕಿದ್ದಾರೆ. ಆದರೆ, ಪ್ರತಿಭಟನಾ ಸಮಯದಲ್ಲಿ ತರಣ್‌ಜಿತ್ ಅವರು ಕಚೇರಿಯಲ್ಲಿರಲಿಲ್ಲ.

ಪ್ರತಿಭಟನಕಾರರು ತಮ್ಮ ಭಾಷಣದಲ್ಲಿ, ರಾಯಭಾರ ಕಚೇರಿ ಆಸ್ತಿಯ ನಾಶ ಸೇರಿದಂತೆ ಭಾರತ ಮತ್ತು ಅಮೆರಿಕದಲ್ಲಿ ಹಿಂಸೆಯನ್ನು ಪ್ರಚೋದಿಸಲು ಯತ್ನಿಸಿದರು. ಅಲ್ಲದೇ ಕೆಲವು ಪ್ರತಿಭಟನಕಾರರು ರಾಯಭಾರ ಕಚೇರಿ ರಸ್ತೆಗೆ ಹೊಂದಿಕೊಂಡಿದ್ದ ಕೆಲವು ಕಟ್ಟಡಗಳ ಕಿಟಕಿ ಮತ್ತು ಗಾಜುಗಳನ್ನು ಒಡೆದುಹಾಕಿದರು.

ಒಂದು ಹಂತದಲ್ಲಿ, ಐವರು ಪ್ರತಿಭಟನಕಾರರು ತಮಗಾಗಿ ನಿಯೋಜಿಸಲಾಗಿದ್ದ ಪ್ರತಿಭಟನಾ ಸ್ಥಳದಿಂದ ರಸ್ತೆ ದಾಟಿ, ರಾಯಭಾರ ಕಚೇರಿ ಆಸ್ತಿಯ ನಾಶಕ್ಕೆ ಪ್ರಯತ್ನಿಸಿದರು.



ವಾಷಿಂಗ್ಟನ್‌ನ ಭಾರತೀಯ ರಾಯಭಾರ ಕಚೇರಿಯ ಹೊರಗಡೆ ಪ್ರತಿಭಟನೆ ನಡೆಸಿದ ಖಾಲಿಸ್ತಾನ ಪರ ಬೆಂಬಲಿಗರು —ಪಿಟಿಐ ಚಿತ್ರ

ಈ ಘಟನೆಯ ಬಗ್ಗೆ ತಿಳಿಯುತ್ತಿದ್ದಂತೆಯೇ, ಅಮೆರಿಕದ ಗುಪ್ತಚರ ದಳದ ಸಿಬ್ಬಂದಿ ಹಾಗೂ ಸ್ಥಳೀಯ ಪೊಲೀಸರು ಸ್ಥಳಕ್ಕೆ ಧಾವಿಸಿದರು. ಅಲ್ಲದೇ, ಘಟನಾಸ್ಥಳದಲ್ಲಿ ಹೆಚ್ಚಿನ ಪಡೆಗಳನ್ನು ನಿಯೋಜಿಸಲಾಯಿತು.

'ಯಾವುದೇ ಅಹಿತಕರ ಘಟನೆ ನಡೆಯುವುದಕ್ಕೂ ಮುನ್ನ ನಿಯೋಜಿಸಿದ್ದ ಸ್ಥಳಕ್ಕೆ ವಾಪಸಾಗುವಂತೆ' ಗುಪ್ತಚರ ದಳದ ಸಿಬ್ಬಂದಿ ಪ್ರತಿಭಟನಕಾರರಿಗೆ ಸೂಚಿಸಿದರು. ಬಳಿಕ, ರಾಯಭಾರ ಕಚೇರಿಯ ಬಳಿ ಮೂರು ಪೊಲೀಸ್ ವಾಹನಗಳನ್ನೂ ನಿಯೋಜಿಸಲಾಯಿತು. ಮಧ್ಯಾಹ್ನ 3 ಗಂಟೆ ಬಳಿಕ ಪ್ರತಿಭಟನಕಾರರು ಸ್ಥಳದಿಂದ ತೆರಳಿದರು. ಪ್ರತಿಭಟನಕಾರರೊಬ್ಬರ ಎಸ್‌ಯುವಿಯಲ್ಲಿ ಮರದ ಕೋಲುಗಳು ಇದ್ದದ್ದು ಕಂಡು ಬಂದಿದೆ.

ಪ್ರತಿಭಟನಕಾರರಿಂದ ಪತ್ರಕರ್ತನ ಮೇಲೆ ಹಲ್ಲೆ

ಖಾಲಿಸ್ತಾನ ಬೆಂಬಲಿಗರ ಪ್ರತಿಭಟನೆಯ ಕುರಿತು ವರದಿ ಮಾಡುತ್ತಿದ್ದ ಪಿಟಿಐ ಸುದ್ದಿಸಂಸ್ಥೆಯ ಅಮೆರಿಕ ಪ್ರತಿನಿಧಿ ಲಲಿತ್ ಕೆ. ಝಾ ಅವರ ಮೇಲೆ ಪ್ರತಿಭಟನಕಾರರು ಹಲ್ಲೆ ನಡೆಸಿದ್ದಾರೆ. ಅಲ್ಲದೆ ಲಲಿತ್ ಅವರ ಮುಖದ ಮೇಲೆ ಖಾಲಿಸ್ತಾನಿ ಧ್ವಜವನ್ನು ಹಾಕಿ, ನಿಂದಿಸಿದ್ದಾರೆ.

'ನೀನು ಏನು ವರದಿ ಮಾಡುತ್ತೀಯ ಎಂಬುದನ್ನು ನನಗೆ ಹೇಳಲೇಬೇಕು' ಎಂದು ಪ್ರತಿಭಟನಕಾರನೊಬ್ಬ ಪತ್ರಕರ್ತನಿಗೆ ಬೆದರಿಕೆ ಹಾಕಿದ್ದಾನೆ.

ಹಲ್ಲೆಗೊಳಗಾದ ಪತ್ರಕರ್ತ 911ಗೆ ಕರೆ ಮಾಡಿ ರಕ್ಷಣೆಗೆ ಕೋರಿದರು. ಬಳಿಕ ಅವರು ತನ್ನ ಸುರಕ್ಷತೆಯ ದೃಷ್ಟಿಯಿಂದ ರಸ್ತೆಯ ಮತ್ತೊಂದು ಬದಿಯಲ್ಲಿ ಪೊಲೀಸ್ ವಾಹನಕ್ಕಾಗಿ ಹುಡುಕಾಟ ನಡೆಸಿದರು.

'ಹಲ್ಲೆ ಕುರಿತು ದೂರು ದಾಖಲು ಮಾಡಲು ಬಯಸುವಿರಾ' ಎಂದು ಗುಪ್ತಚರ ದಳದ ಸಿಬ್ಬಂದಿ ಲಲಿತ್ ಕೆ. ಝಾ ಅವರನ್ನು ಕೇಳಿದಾಗ, 'ತನಗೆ ಯಾವುದೇ ದೂರು ದಾಖಲಿಸುವ ಉದ್ದೇಶವಿಲ್ಲ' ಎಂದು ಹೇಳಿದ್ದಾರೆ. ನಂತರ ಸಿಬ್ಬಂದಿಯು ಪ್ರತಿಭಟನಕಾರರಿಗೆ ಎಚ್ಚರಿಕೆ ನೀಡಿ ಕಳುಹಿಸಿದ್ದಾರೆ.

ಪಿಟಿಐ ಪತ್ರಕರ್ತನ ಮೇಲೆ ಹಲ್ಲೆಯ ಘಟನೆಯನ್ನು ಭಾರತೀಯ ರಾಯಭಾರ ಕಚೇರಿ ತೀವ್ರವಾಗಿ ಖಂಡಿಸಿದೆ.

ಬೆದರಿಕೆ ನಡುವೆಯೂ ರ‍್ಯಾಲಿ ನಡೆಸಿದ ಇಮ್ರಾನ್ ಖಾನ್

ಲಾಹೋರ್ (ಪಿಟಿಐ): ಸಾಕಷ್ಟು ಬೆದರಿಕೆಗಳು ಮತ್ತು ಅಡೆ- ತಡೆಗಳ ನಡುವೆಯೂ ಪಾಕಿಸ್ತಾನದ ಪದಚ್ಯುತ ಪ್ರಧಾನಿ ಇಮ್ರಾನ್ ಖಾನ್ ಶನಿವಾರ ರಾತ್ರಿ ಮಿನಾರ್- ಇ- ಪಾಕಿಸ್ತಾನದಲ್ಲಿ ಬೃಹತ್ ರ‍್ಯಾಲಿಯನ್ನು ಯಶಸ್ವಿಯಾಗಿ ನಡೆಸಿದರು.

ಬುಲೆಟ್‌ಪ್ರೂಫ್ ಗಾಜು ಹೊಂದಿದ್ದ ಕಂಟೇನರ್ ಒಳಗಿನಿಂದ ಭಾಷಣ ಮಾಡಿದ ಇಮ್ರಾನ್, ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ದೇಶದ ಆರ್ಥಿಕ ಪುನಶ್ಚೇತನಕ್ಕೆ ಕೈಗೊಳ್ಳುವ 10 ಮಾರ್ಗಸೂಚಿ ಅಂಶಗಳನ್ನು ಪ್ರಸ್ತುತ ಪಡಿಸಿದರು.

ವಿದೇಶಿ ನೇರ ಹೂಡಿಕೆ, ಆದಾಯ ತೆರಿಗೆ ಸಂಗ್ರಹ, ಅಕ್ರಮ ಹಣ ವರ್ಗಾವಣೆ ಸ್ಥಗಿತಕ್ಕೆ ಒತ್ತು ನೀಡುವುದಾಗಿ ಹೇಳಿದರು.

ಅಂಗಾಂಗ ದಾನಕ್ಕೆ ಮುಂದಾಗಿ: ಪ್ರಧಾನಿ

ನವದೆಹಲಿ (ಪಿಟಿಐ): 'ಒಬ್ಬರ ಜೀವ ಉಳಿಸುವ ಅಂಗಾಂಗ ದಾನಕ್ಕೆ ಜನರು ಹೆಚ್ಚು ಗಮನ ಹರಿಸಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಮಾಸಿಕ ರೇಡಿಯೊ ಕಾರ್ಯಕ್ರಮ 'ಮನ್ ಕಿ ಬಾತ್'ನ 99ನೇ ಸಂಚಿಕೆಯಲ್ಲಿ ಭಾನುವಾರ ಮನವಿ ಮಾಡಿದ್ದಾರೆ.

'ಅಂಗಾಂಗ ದಾನಕ್ಕೆ ಸರ್ಕಾರವು ಏಕರೂಪದ ನೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ದಾನಪ್ರಕ್ರಿಯೆಯನ್ನು ಸುಲಭಗೊಳಿಸಿದೆ. 'ತಮ್ಮ ಸಾವಿನ ಬಳಿಕ ಅಂಗಾಂಗ ದಾನ ಮಾಡುವವರನ್ನು 'ದೇವರು' ಎಂದೇ ಭಾವಿಸುತ್ತಾರೆ ಎಂದರು

'ದೇಶದಲ್ಲಿ ಎಲ್ಲಿ ಬೇಕಾದರೂ ಅಂಗಾಂಗಗಳನ್ನು ಸ್ವೀಕರಿಸಲು ಇದ್ದ ಅಡೆತಡೆಗಳನ್ನು ತೆಗೆದುಹಾಕಲಾಗಿದೆ. ಅಂಗಾಂಗ ದಾನ ಮಾಡಲು 65 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಾನದಂಡಗಳನ್ನು ತೆಗೆದುಹಾಕುವ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ' ಎಂದಿದ್ದಾರೆ.

ಜನಿಸಿದ 39 ದಿನಗಳ ಬಳಿಕ ಸಾವಿಗೀಡಾದ ತಮ್ಮ ಮಗಳ ಅಂಗಾಂಗಗಳನ್ನು ದಾನ ಮಾಡಿದ ಅಮೃತಸರದ ದಂಪತಿ ಜತೆಗೆ ಕಾರ್ಯಕ್ರಮದಲ್ಲಿ ಮಾತನಾಡಿದ ಮೋದಿ ಅವರು, ಅವರ ನಿರ್ಧಾರವನ್ನು ಶ್ಲಾಘಿಸಿದರು.

ಕಾಶಿಯಲ್ಲಿ 'ಕಾಶಿ-ತಮಿಳು ಸಂಗಮಂ' ನಡೆದಿದೆ. ಅಂತೆಯೇ ಏಪ್ರಿಲ್ 17ರಿಂದ 30ರ ತನಕ ಗುಜರಾತ್‌ನ ವಿವಿಧ ಭಾಗಗಳಲ್ಲಿ 'ಸೌರಾಷ್ಟ್ರ- ತಮಿಳು ಸಂಗಮಂ' ನಡೆಯಲಿದೆ ಎಂದು ಮಾಹಿತಿ ನೀಡಿದರು.

ಮುಂದಿನ ತಿಂಗಳು 'ಮನ್ ಕಿ ಬಾತ್' ಮಾಸಿಕ ಕಾರ್ಯಕ್ರಮದ 100ನೇ ಸಂಚಿಕೆ ನಡೆಯಲಿದ್ದು, ಜನರು ಈ ಕುರಿತು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುವಂತೆಯೂ ಮೋದಿ ಮನವಿ ಮಾಡಿದ್ದಾರೆ.

'ಬೇಲೂರು–ಹಾಸನ: ಹೆದ್ದಾರಿ ವಿಸ್ತರಣೆಗೆ ₹700 ಕೋಟಿ'

ನವದೆಹಲಿ: ಕರ್ನಾಟಕದ ರಾಷ್ಟ್ರೀಯ ಹೆದ್ದಾರಿ 373ರ ಬೇಲೂರಿನಿಂದ ಹಾಸನವರೆಗಿನ ವಿಭಾಗದಲ್ಲಿ ರಸ್ತೆ ವಿಸ್ತರಣೆಗಾಗಿ ₹698.08 ಕೋಟಿ ಅನುದಾನ ನೀಡಲು ಕೇಂದ್ರ ಸರ್ಕಾರವು ಅನುಮೋದನೆ ನೀಡಿದೆ ಎಂದು ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಭಾನುವಾರ ಹೇಳಿದ್ದಾರೆ.

2022–23ರ ಯೋಜನೆ ಅಡಿಯಲ್ಲಿ ಈ ಹೆದ್ದಾರಿಯ ವಿಸ್ತರಣೆ ಕಾಮಗಾರಿಯನ್ನು ಕಾರ್ಯಗತಗೊಳಿಸಲಾಗುತ್ತಿದೆ ಎಂದು ಸಚಿವರು ಟ್ವೀಟ್ ಮಾಡಿದ್ದಾರೆ.

ಸಂಚಾರ ದಟ್ಟಣೆ ತಪ್ಪಿಸಲು ಈ ರಸ್ತೆಯನ್ನು ವಿಸ್ತರಣೆ ಮಾಡಬೇಕೆಂಬುದು ಅಲ್ಲಿನ ಸ್ಥಳೀಯರ ಬಹುಕಾಲದ ಬೇಡಿಕೆಯಾಗಿತ್ತು.




ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಆರ್‌ಸಿಬಿ 'ಅನ್‌ಬಾಕ್ಸ್' ಕಾರ್ಯಕ್ರಮದಲ್ಲಿ ಕ್ರಿಕೆಟ್ ತಾರೆಗಳಾದ ಕ್ರಿಸ್ ಗೇಲ್, ಎಬಿ ಡಿವಿಲಿಯರ್ಸ್, ವಿರಾಟ್ ಕೊಹ್ಲಿ ಹಾಗೂ ತಂಡದ ಆಟಗಾರರು ಹಾಜರಿದ್ದರು (ಎಡ). ತಂಡದ ನಾಯಕ ಫಫ್ ಡುಪ್ಲೆಸಿ ಅವರ ಆಟೋಗ್ರಾಫ್‌ಗಾಗಿ ಮುಗಿಬಿದ್ದ ಅಭಿಮಾನಿಗಳು – ಪ್ರಜಾವಾಣಿ ಚಿತ್ರಗಳು/ಎಸ್‌ಕೆ. ದಿನೇಶ್

ತಾರೆಯರ ಅಭ್ಯಾಸ ಕಣ್ತುಂಬಿಕೊಂಡ ಅಭಿಮಾನಿಗಳು; ಎಬಿಡಿ, ಗೇಲ್ ಆಕರ್ಷಣೆ

ಚಿನ್ನಸ್ವಾಮಿ ಅಂಗಣದಲ್ಲಿ ಆರ್‌ಸಿಬಿ ಪ್ರತಿಧ್ವನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ಹಬ್ಬದ ವಾತಾವರಣ ಮನೆಮಾಡಿತ್ತು. ಕ್ರಿಕೆಟ್ ತಾರೆಯರಾದ ವಿರಾಟ್ ಕೊಹ್ಲಿ, ಎಬಿ ಡಿವಿಲಿಯರ್ಸ್, ಕ್ರಿಸ್ ಗೇಲ್, ಫಫ್ ಡುಪ್ಲೆಸಿ ಅವರೇ ಪ್ರಮುಖ ಆಕರ್ಷಣೆಯಾಗಿದ್ದರು.

ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಏ.2ರಂದು ಇಲ್ಲಿಯೇ ತನ್ನ ಮೊದಲ ಪಂದ್ಯ ಆಡಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ 'ಅನ್‌ಬಾಕ್ಸ್' ಕಾರ್ಯಕ್ರಮ ಭಾನುವಾರ ನಡೆಯಿತು. ಕ್ರಿಕೆಟ್‌ನಿಂದ ನಿವೃತ್ತರಾಗಿರುವ ಹಾಗೂ ಆರ್‌ಸಿಬಿಯನ್ನು ಈ ಹಿಂದೆ ಕೆಲವು ವರ್ಷಗಳವರೆಗೆ ಪ್ರತಿನಿಧಿಸಿದ್ದ ದಕ್ಷಿಣ ಆಫ್ರಿಕಾದ ಡಿವಿಲಿಯರ್ಸ್ ಹಾಗೂ ವೆಸ್ಟ್ ಇಂಡೀಸ್‌ನ ಗೇಲ್ ಕೂಡ ಈ ಸಂದರ್ಭದಲ್ಲಿದ್ದರು.

ನಿಗದಿತ ಟಿಕೆಟ್‌ಗಳನ್ನು ಖರೀದಿಸಿದ್ದ ಪ್ರೇಕ್ಷಕರು ಮಧ್ಯಾಹ್ನದ ಮೂರು ಗಂಟೆಯ ಬಿಸಿಲನ್ನೂ ಲೆಕ್ಕಿಸದೇ ಕ್ರೀಡಾಂಗಣದಲ್ಲಿ ಹಾಜರಿದ್ದರು. ಆರ್‌ಸಿಬಿ ಆಟಗಾರರು ನೆಟ್ಸ್‌ನಲ್ಲಿ ಸಂಜೆಯವರೆಗೂ ಅಭ್ಯಾಸ ನಡೆಸಿದರು.

ಕೋವಿಡ್ ಕಾರಣದಿಂದಾಗಿ 2020ರಿಂದ 2022ರವರೆಗಿನ ಮೂರು ಆವೃತ್ತಿಗಳ ಟೂರ್ನಿಗಳು 'ಬಯೋಬಬಲ್ ವ್ಯವಸ್ಥೆ'ಯಲ್ಲಿ ನಡೆದಿದ್ದವು. ಮೊದಲೆರಡು ವರ್ಷದ ಟೂರ್ನಿಗಳು ದುಬೈನಲ್ಲಿ ನಡೆದಿದ್ದವು. ಹೋದ ವರ್ಷ ಮುಂಬೈನ ಕ್ರೀಡಾಂಗಣಗಳಲ್ಲಿ ಪಂದ್ಯಗಳೂ ನಡೆದಿದ್ದವು. ಈ ವರ್ಷ ಹೋಮ್ ಹಾಗೂ ಅವೇ ಪದ್ಧತಿಯನ್ನು ಮರಳಿ ಜಾರಿ ಮಾಡಲಾಗಿದೆ. ಇದರೊಂದಿಗೆ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಐಪಿಎಲ್ ಮರಳಿದೆ.

'ಆರ್‌ಸಿಬಿಯು ಐಪಿಎಲ್‌ನಲ್ಲಿಯೇ ಅತಿ ಹೆಚ್ಚು ಅಭಿಮಾನಿ ಬಳಗವನ್ನು ಹೊಂದಿದೆ. ಮೂರು ಕೋಟಿಗೂ ಹೆಚ್ಚು ಅಭಿಮಾನಿಗಳು ತಂಡವನ್ನು ಫಾಲೋ ಮಾಡುತ್ತಿದ್ದಾರೆ. 2022ರಲ್ಲಿ ತಂಡದ ಆಟವನ್ನು 262.2 ಮಿಲಿಯನ್ ವೀಕ್ಷಕರು ಟಿ.ವಿ.ಯಲ್ಲಿ ನೋಡಿದ್ದಾರೆ. ಇದು ಐಪಿಎಲ್‌ನಲ್ಲಿರುವ ಎಲ್ಲ ತಂಡಗಳಿಗಿಂತಲೂ ಹೆಚ್ಚು. ಮೂರು ವರ್ಷಗಳ ನಂತರ ಇಲ್ಲಿ ಐಪಿಎಲ್ ಪಂದ್ಯಗಳು ನಡೆಯುತ್ತಿವೆ. ಬೆಂಗಳೂರಿನ ಕ್ರಿಕೆಟ್‌ಪ್ರಿಯರಿಗೆ ಈಗ ರಸದೌತಣ ನೀಡಲು ನಮ್ಮ ತಂಡ ಸಿದ್ಧವಾಗಿದೆ' ಎಂದು ಆರ್‌ಸಿಬಿಯ ಮುಖ್ಯಸ್ಥ ಮತ್ತು ಉಪಾಧ್ಯಕ್ಷ ರಾಜೇಶ್ ಮೆನನ್ ಸುದ್ದಿಗಾರರಿಗೆ ತಿಳಿಸಿದರು.

ಆರ್‌ಸಿಬಿ ಅಭ್ಯಾಸ ಟಿಕೆಟ್‌ಗೂ ಭಾರಿ ಬೇಡಿಕೆ

ಬೇಸಿಗೆಯ ಬಿಸಿ ಏರಿದಂತೆ 'ಕ್ರಿಕೆಟ್ ಟಿಕೆಟ್' ಬೇಡಿಕೆಯ ಕಾವು ಕೂಡ ಹೆಚ್ಚುತ್ತಿದೆ. ಮೂರು ವರ್ಷಗಳ ನಂತರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಪಂದ್ಯಗಳ ಟಿಕೆಟ್ ಪಡೆಯಲು ಅಭಿಮಾನಿಗಳು ಹರಸಾಹಸ ಪಡುತ್ತಿದ್ದಾರೆ.

ಅಷ್ಟೇ ಅಲ್ಲ; ಭಾನುವಾರ ನಡೆದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಪೂರ್ವಾಭ್ಯಾಸಕ್ಕೂ ಟಿಕೆಟ್ ಖರೀದಿಸಿದ್ದ ಸುಮಾರು ಎಂಟು ಸಾವಿರಕ್ಕೂ ಹೆಚ್ಚು ಜನರು ಕಿಕ್ಕಿರಿದು ಸೇರಿದ್ದರು. ಕಡಿಮೆ ಮೌಲ್ಯದ (₹ 650) ಟಿಕೆಟ್‌ಗಳಿಗೆ ಹೆಚ್ಚು ಬೇಡಿಕೆಯಿತ್ತು. ಅಭಿಮಾನಿಗಳು ಈ ಟಿಕೆಟ್‌ಗಳನ್ನು ಕಾಳಸಂತೆಯಲ್ಲಿ 900–950 ರೂಪಾಯಿ ತೆತ್ತು ಖರೀದಿಸಿದರು.

'ನಮಗೆ ಪಂದ್ಯದ ಟಿಕೆಟ್‌ಗಳು ಸಿಕ್ಕಿಲ್ಲ. ಆನ್‌ಲೈನ್‌ನಲ್ಲಿ ದುಬಾರಿ ಟಿಕೆಟ್‌ಗಳು ಮಾತ್ರ ಉಳಿದುಕೊಂಡಿವೆ. ಇವತ್ತು ರಜೆ ದಿನವೂ ಆಗಿರುವುದರಿಂದ ಸ್ನೇಹಿತರೊಂದಿಗೆ ಆರ್‌ಸಿಬಿಯ ಎಲ್ಲ ಆಟಗಾರರನ್ನೂ ನೋಡಬಹುದು. ಅಲ್ಲದೇ ಆಟಗಾರರು ಗ್ಯಾಲರಿಗೇ ಬಂದು ಅಭಿಮಾನಿಗಳೊಂದಿಗೆ ಸೆಲ್ಫಿ ತೆಗೆಸಿಕೊಳ್ಳುವ ಸಾಧ್ಯತೆಯೂ ಇದೆ. ಅದರಿಂದಾಗಿ ಬ್ಲ್ಯಾಕ್ ಟಿಕೆಟ್ ಕೊಂಡುಕೊಂಡಿದ್ದೇವೆ' ಎಂದು ಚಿನ್ನಸ್ವಾಮಿ ಕ್ರೀಡಾಂಗಣದ ಮುಂದೆ ಆರ್‌ಸಿಬಿ ಪೋಷಾಕು ತೊಟ್ಟು ನಿಂತಿದ್ದ ಸಂಕೇತ್ ಮತ್ತು ಸಂಗಡಿಗರು ಹೇಳಿದರು.

ಒಂದು ವಾರದ ಹಿಂದೆ ಆನ್‌ಲೈನ್‌ನಲ್ಲಿ ಆರಂಭವಾದ ಮಾರಾಟದಲ್ಲಿ ಏ.2ರ ಪಂದ್ಯದ ಬಹುತೇಕ ಟಿಕೆಟ್‌ಗಳು ಮಾರಾಟವಾಗಿವೆ. ₹ 24,200 (ಪಿ ಕಾರ್ಪೋರೇಟ್) ಟಿಕೆಟ್‌ಗಳು ಒಂದಿಷ್ಟು ಉಳಿದುಕೊಂಡಿವೆ. ಕೌಂಟರ್ (ಬಾಕ್ಸ್ ಆಫೀಸ್) ಟಿಕೆಟ್‌ಗಳೂ ಈಗಾಗಲೇ ಬಿಕರಿಯಾಗಿವೆ. ಬೆಂಗಳೂರಿನಲ್ಲಿ ನಡೆಯುವ ಇನ್ನುಳಿದ ಆರು ಪಂದ್ಯಗಳ ಟಿಕೆಟ್‌ಗಳೂ ಕೂಡ ಬಹುತೇಕ ಬುಕ್ ಆಗಿವೆ. ಈ ಪಂದ್ಯಗಳ ಬಾಕ್ಸ್ ಆಫೀಸ್ ಟಿಕೆಟ್‌ಗಳು ಇನ್ನಷ್ಟೇ ಮಾರಾಟವಾಗಬೇಕಿವೆ ಎಂದು ಆರ್‌ಸಿಬಿ ತಂಡದ ಮೂಲಗಳು ತಿಳಿಸಿವೆ.

ವೇಟ್‌ಲಿಫ್ಟಿಂಗ್: ಹರ್ಜಿಂದರ್ ಕೌರ್‌ಗೆ ಚಿನ್ನದ ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಜಾಬ್‌ನ ಹರ್ಜಿಂದರ್ ಕೌರ್ ಅವರು ಖೇಲೊ ಇಂಡಿಯಾ ಮಹಿಳೆಯರ ರಾಷ್ಟ್ರೀಯ ರ‍್ಯಾಂಕಿಂಗ್ ವೇಟ್‌ಲಿಫ್ಟಿಂಗ್ ಟೂರ್ನಿಯಲ್ಲಿ ಚಿನ್ನದ ಪದಕ ಜಯಿಸಿದರು. ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ 71 ಕೆಜಿ ಸ್ಪರ್ಧೆಯ ಸೀನಿಯರ್ ವಿಭಾಗದಲ್ಲಿ ಅವರಿಗೆ ಪದಕ ಒಲಿಯಿತು.

ಹರ್ಜಿಂದರ್ ಕೌರ್ ಒಟ್ಟು 197 ಕೆಜಿ (ಸ್ನ್ಯಾಚ್ 85 + ಕ್ಲೀನ್ ಮತ್ತು ಜರ್ಕ್ 112) ಭಾರ ಎತ್ತಿದರು.

ಫಲಿತಾಂಶಗಳು: 71 ಕೆಜಿ: ಸೀನಿಯರ್: ಹರ್ಜಿಂದರ್ ಕೌರ್ (ಪಂಜಾಬ್, ಒಟ್ಟು ಭಾರ: 197 ಕೆಜಿ: 85 + 112)–1, ಸೃಷ್ಟಿ (ಉತ್ತರ ಪ್ರದೇಶ)–2, ತೃಪ್ತಿ ಮಾನೆ (ಮಹಾರಾಷ್ಟ್ರ)–3. ಜೂನಿಯರ್: ಸೃಷ್ಟಿ (ಉತ್ತರ ಪ್ರದೇಶ, ಒಟ್ಟು ಭಾರ: 181 ಕೆಜಿ: 81 + 100)–1, ಎಂ. ಲೇಖಮಾಲ್ಯ (ತಮಿಳುನಾಡು)–2, ಎಸ್. ರಿತಿಕಾ (ಪುದುಚೇರಿ)–3. ಯೂತ್: ಎಸ್.ರಿತಿಕಾ (ಪುದುಚೇರಿ, ಒಟ್ಟು ಭಾರ: 168: 73 + 95)–1, ರಾಜನಂದಿನಿ ಅಮಾನೆ (ಮಹಾರಾಷ್ಟ್ರ)–3.

64 ಕೆಜಿ: ಸೀನಿಯರ್: ನಿರುಪಮಾ ದೇವಿ (ರೈಲ್ವೆ, ಒಟ್ಟು ಭಾರ 192 ಕೆಜಿ: 84 + 108)–1, ಎಸ್.ಪಲ್ಲವಿ (ಆಂಧ್ರಪ್ರದೇಶ)–2, ದಿತಿಮೋನಿ ಸೋನಾವಾಲ್ (ಅಸ್ಸಾಂ)–3. ಜೂನಿಯರ್: ಎಸ್. ಪಲ್ಲವಿ (ಆಂಧ್ರಪ್ರದೇಶ, ಒಟ್ಟು ಭಾರ: 191 ಕೆಜಿ: 86 + 105)–1, ದಿತಿಮೋನಿ ಸೋನಾವಾಲ್ (ಅಸ್ಸಾಂ)–2, ಎಲ್. ಕೌಶಿಕಾ (ಪುದುಚೇರಿ)–3. ಯೂತ್: ತಿಕಿ ಮೋಹಿನಿ ಮಲಿಕ್ (ಒಡಿಶಾ, ಒಟ್ಟು ಭಾರ: 149 ಕೆಜಿ: 65 + 84)–1, ಜೆನಿಸ್ ಬಾರ್ಲಾ (ಜಾರ್ಖಂಡ್)–2, ಹೇಮಾ ಮಾಂಡವಿ (ಛತ್ತೀಸಗಡ)–3.

ಮಹಿಳಾ ಪ್ರೀಮಿಯರ್ ಲೀಗ್: ಫೈನಲ್‌ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್‌ಗೆ ನಿರಾಸೆ

ಮುಂಬೈ ಇಂಡಿಯನ್ಸ್‌ಗೆ ಕಿರೀಟ



ಪ್ರಶಸ್ತಿಯೊಂದಿಗೆ ಸಂಭ್ರಮಿಸಿದ ಮುಂಬೈ ಇಂಡಿಯನ್ಸ್ ಆಟಗಾರ್ತಿಯರು– ಎಎಫ್‌ಪಿ ಚಿತ್ರ

ಮುಂಬೈ (ಪಿಟಿಐ): ಮುಂಬೈ ಇಂಡಿಯನ್ಸ್ ತಂಡವು ಚೊಚ್ಚಲ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಟೂರ್ನಿಯ ಫೈನಲ್ ಪಂದ್ಯದಲ್ಲಿ ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಮುಂಬೈ ಏಳು ವಿಕೆಟ್‌ಗಳಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಮಣಿಸಿತು.

ಮೆಗ್ ಲ್ಯಾನಿಂಗ್ ನೇತೃತ್ವದ ಡೆಲ್ಲಿ ತಂಡ ನೀಡಿದ 132 ರನ್‌ಗಳ ಗುರಿ ಬೆನ್ನತ್ತಿದ ಮುಂಬೈ 19.3 ಓವರ್‌ಗಳಲ್ಲಿ ಮೂರು ವಿಕೆಟ್ ಕಳೆದುಕೊಂಡು 134 ರನ್ ಗಳಿಸಿತು.

ನತಾಲಿ ಸಿವೆರ್ ಬ್ರಂಟ್ (ಔಟಾಗದೆ 60, 55ಎ, 4X7) ಮತ್ತು ಹರ್ಮನ್‌ಪ್ರೀತ್ (37, 39ಎ, 4X5) ಮುಂಬೈ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. 23 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡು ಆರಂಭಿಕ ಆಘಾತ ಅನುಭವಿಸಿದ್ದ ತಂಡಕ್ಕೆ ಇವರಿಬ್ಬರು ಆಸರೆಯಾದರು. 3ನೇ ವಿಕೆಟ್ ಜೊತೆಯಾಟದಲ್ಲಿ 72 ರನ್ ಸೇರಿಸಿದರು. ಅಮೆಲಿ ಕೆರ್ (ಔಟಾಗದೆ 14) ಕೊಡುಗೆ ನೀಡಿದರು. ಡೆಲ್ಲಿ ಪರ ರಾಧಾ ಯಾದವ್ (24ಕ್ಕೆ 1) ಮತ್ತು ಜೆಸ್ ಜೊನಾಸೆನ್ (28ಕ್ಕೆ 1) ತಲಾ ಒಂದು ವಿಕೆಟ್ ಗಳಿಸಿದರು.

ಗೌರವದ ಮೊತ್ತ: ಕೊನೆಯ ಕ್ರಮಾಂಕದ ಬ್ಯಾಟರ್ ರಾಧಾ ಯಾದವ್ ಹಾಗೂ ಶಿಖಾ ಪಾಂಡೆ ಅವರು ಡೆಲ್ಲಿ ತಂಡವು ಗೌರವದ ಮೊತ್ತ ಗಳಿಸಲು ಕಾರಣರಾಗಿದ್ದರು. ಮುಂಬೈ ತಂಡದ ಇಸಾಬೆಲ್ ವಾಂಗ್ (42ಕ್ಕೆ3) ಮತ್ತು ಹೇಯಲಿ ಮ್ಯಾಥ್ಯೂಸ್ (5ಕ್ಕೆ3) ಅವರ ದಾಳಿಯ ಮುಂದೆ ಡೆಲ್ಲಿ ಬ್ಯಾಟರ್‌ಗಳು ಪರದಾಡಿದರು.

ಡೆಲ್ಲಿ ತಂಡವು 79 ರನ್‌ಗಳಿಗೆ 9 ವಿಕೆಟ್ ಕಳೆದುಕೊಂಡಿತ್ತು. ಈ ಹಂತದಲ್ಲಿ ಕ್ರೀಸ್‌ಗೆ ಬಂದ ರಾಧಾ ದಿಟ್ಟ ಆಟವಾಡಿದರು. ಅವರು ಹಾಗೂ ಶಿಖಾ (27; 17ಎ) ಕೊನೆಯ ವಿಕೆಟ್ ಜೊತೆಯಾಟದಲ್ಲಿ 52 ರನ್ ಸೇರಿಸಿದರು. ರಾಧಾ 12 ಎಸೆತಗಳನ್ನು ಎದುರಿಸಿ 27 ರನ್ ಗಳಿಸಿದರು. ಅದರಲ್ಲಿ ಎರಡು ಬೌಂಡರಿ ಹಾಗೂ ಎರಡು ಸಿಕ್ಸರ್‌ಗಳಿದ್ದವು.

ಟಾಸ್ ಗೆದ್ದ ಡೆಲ್ಲಿ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತ್ತು. ಮೆಗ್ ಲ್ಯಾನಿಂಗ್ (35; 29ಎ) ಉತ್ತಮ ಆರಂಭ ನೀಡುವ ಪ್ರಯತ್ನ ಮಾಡಿದರು. ಆದರೆ, ಇನ್ನೊಂದು ತುದಿಯಲ್ಲಿ ಶಫಾಲಿ ವರ್ಮಾ, ಎಲೈಸ್ ಕ್ಯಾಪ್ಸಿ ಹಾಗೂ ಜೆಮಿಮಾ ರಾಡ್ರಿಗಸ್ ಸೇರಿದಂತೆ ಉಳಿದ ಬ್ಯಾಟರ್‌ಗಳು ಹೆಚ್ಚು ಹೊತ್ತು ನಿಲ್ಲಲಿಲ್ಲ.

ಸಂಕ್ಷಿಪ್ತ ಸ್ಕೋರು: ಡೆಲ್ಲಿ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 131 (ಮೆಗ್ ಲ್ಯಾನಿಂಗ್ 35, ಶಿಖಾ ಪಾಂಡೆ ಔಟಾಗದೆ 27, ರಾಧಾ ಯಾದವ್ ಔಟಾಗದೆ 27, ಇಸಾಬೆಲ್ ವಾಂಗ್ 42ಕ್ಕೆ3, ಅಮೆಲಿ ಕೆರ್ 18ಕ್ಕೆ2, ಹೇಯಲಿ ಮ್ಯಾಥ್ಯೂಸ್ 5ಕ್ಕೆ3) ಮುಂಬೈ ಇಂಡಿಯನ್ಸ್: 19.3 ಓವರ್‌ಗಳಲ್ಲಿ 3 ವಿಕೆಟ್‌ಗೆ 134 (ಹೇಯಲಿ ಮ್ಯಾಥ್ಯೂಸ್ 13, ನತಾಲಿ ಸಿವೆರ್ ಬ್ರಂಟ್ ಔಟಾಗದೆ 60, ಹರ್ಮನ್‌ಪ್ರೀತ್ ಕೌರ್ ರನೌಟ್ 37, ಅಮೆಲಿ ಕೆರ್ ಔಟಾಗದೆ 14). ಫಲಿತಾಂಶ: ಮುಂಬೈ ಇಂಡಿಯನ್ಸ್‌ಗೆ ಏಳು ವಿಕೆಟ್ ಜಯ ಮತ್ತು ಪ್ರಶಸ್ತಿ

ವಿಶ್ವ ಯೂತ್ ವೇಟ್‌ಲಿಫ್ಟಿಂಗ್: ಭಾರತಕ್ಕೆ 2 ಕಂಚು

ನವದೆಹಲಿ (ಪಿಟಿಐ): ಭಾರತದ ವೇಟ್‌ಲಿಫ್ಟರ್‌ಗಳಾದ ಧನುಷ್ ಲೋಗನಾಥನ್ ಮತ್ತು ಜೋಶ್ನಾ ಸಬರ್ ಅವರು ಅಲ್ಬೇನಿಯದ ಡರೆಸ್‌ನಲ್ಲಿ ನಡೆಯುತ್ತಿರುವ ಐಡಬ್ಲ್ಯುಎಫ್ ವಿಶ್ವ ಯೂತ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡರು.

ಶನಿವಾರ ರಾತ್ರಿ ನಡೆದ ಮಹಿಳೆಯರ 40 ಕೆ.ಜಿ. ವಿಭಾಗದ ಸ್ಪರ್ಧೆಯಲ್ಲಿ 14 ವರ್ಷದ ಜೋಶ್ನಾ ಅವರು ಒಟ್ಟು 115 ಕೆ.ಜಿ (ಸ್ನ್ಯಾಚ್‌ನಲ್ಲಿ 53 ಕೆ.ಜಿ + ಕ್ಲೀನ್ ಮತ್ತು ಜರ್ಕ್‌ನಲ್ಲಿ 62 ಕೆ.ಜಿ) ಭಾರ ಎತ್ತಿದರು.

ಪುರುಷರ 49 ಕೆ.ಜಿ. ವಿಭಾಗದ ಸ್ಪರ್ಧೆಯಲ್ಲಿ ಧನುಷ್ ಒಟ್ಟು 200 ಕೆ.ಜಿ (88 + 112) ಭಾರ ಎತ್ತುವ ಮೂಲಕ ಮೂರನೇ ಸ್ಥಾನ ಪಡೆದರು. 16 ವರ್ಷದ ಅವರು ಸ್ನ್ಯಾಚ್‌ನಲ್ಲಿ ಬೆಳ್ಳಿ ಗೆದ್ದರು. ಫಿಲಿಪ್ಪೀನ್ಸ್‌ನ ಪ್ರಿನ್ಸ್ ಕೆ. ಡೆಲೊಸ್ ಸಂಟೊಸ್ ಮತ್ತು ಏರೊನ್ ಬೊರೆಸ್ ಅವರು ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಪದಕಗಳನ್ನು ಗೆದ್ದುಕೊಂಡರು.

ಶಿವಂ, ಆರಾಧನಾಗೆ ಪ್ರಥಮ ಸ್ಥಾನ

ಬೆಂಗಳೂರು: ಶಿವಂ ಯಾದವ್ ಹಾಗೂ ಆರಾಧನಾ ಅವರು ಭಾನುವಾರ ನಡೆದ ಒನ್ ಏಟ್ ರನ್ ಮೊದಲ ಆವೃತ್ತಿಯಲ್ಲಿ ಕ್ರಮವಾಗಿ ಪುರುಷ ಹಾಗೂ ಮಹಿಳಾ ವಿಭಾಗದಲ್ಲಿ ಪ್ರಥಮ ಸ್ಥಾನ ಗಳಿಸಿದರು.

ಹೊಸಕೆರೆಹಳ್ಳಿಯ ನೈಸ್ ರಸ್ತೆಯ ಟೋಲ್‌ಗೇಟ್ ಬಳಿ ಓಟಕ್ಕೆ ಕ್ರಿಕೆಟಿಗ ವಿರಾಟ್ ಕೊಹ್ಲಿ ಚಾಲನೆ ನೀಡಿದರು. ಈ ಓಟದಲ್ಲಿ ಎಂಟು ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. 18 ಕಿಮೀ ವಿಭಾಗದಲ್ಲಿ ಶಿವಂ ಯಾದವ್ (59:55 ನಿಮಿಷ) ಮತ್ತು ಆರಾಧನಾ (1ಗಂಟೆ,11.23ನಿ) ವಿಜೇತರಾದರು. 10 ಕಿ.ಮೀ ಓಟದಲ್ಲಿ ವೈಷ್ಣವಿ ನವೀನ್ ಮತ್ತು ವೈಭವ್ ಪಾಟೀಲ್ ಮೊದಲ ಸ್ಥಾನ ಗಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ವಿರಾಟ್, 'ನಮಸ್ಕಾರ ಬೆಂಗಳೂರು. ದೊಡ್ಡ ಸಂಖ್ಯೆಯಲ್ಲಿ ಇಲ್ಲಿಗೆ ಆಗಮಿಸಿರುವುದಕ್ಕೆ ಧನ್ಯವಾದ. ಆರೋಗ್ಯಕರ ಜೀವನ ಮತ್ತು ಫಿಟ್‌ನೆಸ್ ಕುರಿತು ಹೆಚ್ಚಿನ ಅರಿವು ಮೂಡಿಸಲು ಪ್ರಯತ್ನ ಮಾಡುತ್ತೇವೆ. ಓಟವು ನಿಮ್ಮ ಸ್ನೇಹಿತರು ಅಥವಾ ಪಾಲುದಾರರಿಂದ ಪ್ರೋತ್ಸಾಹದೊಂದಿಗೆ ಮಾಡಬಹುದಾದ ಒಂದು ಶಿಸ್ತುಬದ್ಧ ಚಟುವಟಿಕೆ' ' ಎಂದರು.



ಬೆಂಗಳೂರು ನಗರದಲ್ಲಿ ಫಿಟ್‌ನೆಸ್ ಉತ್ತೇಜಿಸುವ ಉದ್ದೇಶದಿಂದ ಒನ್‌ಏಟ್ ರನ್ ಮೊದಲ ಆವೃತ್ತಿಗೆ ವಿರಾಟ್ ಕೊಹ್ಲಿ ಭಾನುವಾರ ಹೊಸಕೆರೆಹಳ್ಳಿಯ ದ್ವಾರಕಾನಗರದ ಟೋಲ್ ಪ್ಲಾಜಾ ಬಳಿ ಫ್ಲ್ಯಾಗ್ ಆಫ್ ಮಾಡಿದರು –ಪ್ರಜಾವಾಣಿ ಚಿತ್ರ

ಚೊಚ್ಚಲ ಚಿನ್ನ ಗೆದ್ದ ಲವ್ಲಿನಾ

ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್: ನಿಖತ್ ಜರೀನ್‌ಗೆ ಸತತ 2ನೇ ಕಿರೀಟ



ಗೆಲುವಿನ ಸಂಭ್ರಮದಲ್ಲಿ ಲವ್ಲಿನಾ ಬೊರ್ಗೊಹೈನ್ (ಎಡ) ಮತ್ತು ನಿಖತ್ ಜರೀನ್ –ಪಿಟಿಐ ಚಿತ್ರಗಳು

ನವದೆಹಲಿ (ಪಿಟಿಐ): ರೆಫರಿಯು ಲವ್ಲಿನಾ ಬೊರ್ಗೊಹೈನ್ ಅವರ ಕೈಯನ್ನು ಎತ್ತಿಹಿಡಿದು ವಿಜೇತೆ ಎಂದು ಘೋಷಿಸುತ್ತಿದ್ದಂತೆಯೇ, ಅಸ್ಸಾಂನ ಈ ಬಾಕ್ಸರ್ ಗೆಲುವಿನ ಕೇಕೆ ಹಾಕಿ ಸಂಭ್ರಮಿಸಿದರು. ಕೆ.ಡಿ.ಜಾಧವ್ ಒಳಾಂಗಣ ಕ್ರೀಡಾಂಗಣದಲ್ಲಿ ನೆರೆದಿದ್ದ ಪ್ರೇಕ್ಷಕರು ಎದ್ದುನಿಂತು ಚಪ್ಪಾಳೆ ಮೂಲಕ ಅಭಿನಂದಿಸಿದರು.

ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆಲ್ಲಬೇಕೆಂಬ ಲವ್ಲಿನಾ ಅವರ ಕನಸು ಭಾನುವಾರ ಕೈಗೂಡಿತು. 25 ವರ್ಷದ ಅವರು ಈ ಹಿಂದೆ ಎರಡು ಸಲ ಕಂಚು ಗೆದ್ದಿದ್ದರು. ಇದೀಗ ನಾಲ್ಕನೇ ಪ್ರಯತ್ನದಲ್ಲಿ ಚಾಂಪಿಯನ್ ಆದರು. 75 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಅವರು ಆಸ್ಟ್ರೇಲಿಯಾದ ಕೈಟ್ಲಿನ್ ಪಾರ್ಕರ್ ವಿರುದ್ಧ ಗೆದ್ದರು.

‘ಚಿನ್ನ ಗೆದ್ದು ದೇಶಕ್ಕೆ ಹೆಮ್ಮೆ ತಂದಿರುವುದು ಸಂತಸ ಉಂಟುಮಾಡಿದೆ’ ಎಂದು ಲವ್ಲಿನಾ ಫೈನಲ್ ಬಳಿಕ ಭಾವುಕರಾಗಿ ನುಡಿದರು. ‘ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಎರಡು ಹಾಗೂ ಒಲಿಂಪಿಕ್ಸ್‌ನಲ್ಲಿ ಒಂದು ಕಂಚು ಗೆದ್ದಿದ್ದೇನೆ. ಚಿನ್ನ ಗೆಲ್ಲಲು ಕಠಿಣ ಪ್ರಯತ್ನ ನಡೆಸಿದ್ದೆ. ನನ್ನ ಗುರಿ ಈಡೇರಿದೆ’ ಎಂದರು.

2021ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚು ಗೆದ್ದ ಬಳಿಕ ಲವ್ಲಿನಾ ಅವರು ವೃತ್ತಿಜೀವನದಲ್ಲಿ ಸಾಕಷ್ಟು ಏರಿಳಿತಗಳನ್ನು ಕಂಡಿದ್ದಾರೆ. 2022ರ ಕಾಮನ್‌ವೆಲ್ತ್ ಕೂಟದಲ್ಲಿ ಪದಕ ಗೆಲ್ಲುವಲ್ಲಿ ವಿಫಲರಾಗಿದ್ದರು. ‘ನನ್ನ ಕೋಚ್‌ಗಳಿಗೆ ನಿರಂತರ ಕಿರುಕುಳ ನೀಡಲಾಗುತ್ತಿದೆ. ಇದರಿಂದ ಕಾಮನ್‌ವೆಲ್ತ್ ಕೂಟಕ್ಕೆ ಸರಿಯಾಗಿ ಸಿದ್ಧತೆ ನಡೆಸಲು ಆಗಿಲ್ಲ’ ಎಂದು ಆರೋಪಿಸಿದ್ದರು. ಇದು ವಿವಾದಕ್ಕೂ ಕಾರಣವಾಗಿತ್ತು.

ಈ ಹಿಂದೆ 69 ಕೆ.ಜಿ ವಿಭಾಗದಲ್ಲಿ ಸ್ಪರ್ಧಿಸುತ್ತಿದ್ದ ಲವ್ಲಿನಾ, ತೂಕ ಹೆಚ್ಚಿಸಿಕೊಂಡು 75 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಲು ತೀರ್ಮಾನಿಸಿದ್ದರು.

ಎರಡನೇ ಪ್ರಶಸ್ತಿಯ ಸಂಭ್ರಮ: ನಿಖತ್ ಅವರು 52 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ವಿಯೆಟ್ನಾಂನ ಗುಯೆನ್ ಥಿ ಟಾಮ್ ವಿರುದ್ಧ ಗೆದ್ದು ಸತತ ಎರಡನೇ ಬಾರಿ ಚಾಂಪಿಯನ್ ಆದರು.

‘ಎರಡನೇ ಸಲ ವಿಶ್ವ ಚಾಂಪಿಯನ್ ಎನಿಸಿಕೊಂಡದ್ದು ಸಂತಸ ಉಂಟುಮಾಡಿದೆ. ಒಲಿಂಪಿಕ್ ಕೂಟದಲ್ಲಿರುವ ತೂಕ ವಿಭಾಗದಲ್ಲಿ ಈ ಸಾಧನೆ ಮಾಡಿರುವುದು ಹೆಮ್ಮೆಯ ಸಂಗತಿ’ ಎಂದು ನಿಖತ್ ಫೈನಲ್ ಬಳಿಕ ಪ್ರತಿಕ್ರಿಯಿಸಿದರು.



ಗಾಲ್ಫ್ ಟೂರ್ನಿ: ಓಂಪ್ರಕಾಶ್‌ಗೆ ಪ್ರಶಸ್ತಿ

ಬೆಂಗಳೂರು: ಕೊನೆಯ ಸುತ್ತಿನಲ್ಲಿ ಅಮೋಘ ಪ್ರದರ್ಶನ ನೀಡಿದ ಓಂಪ್ರಕಾಶ್ ಚೌಹಾಣ್ ಅವರು ಭಾನುವಾರ ಕೊನೆಗೊಂಡ ಯೂರೋಪಿಯನ್ ಚಾಲೆಂಜ್ ಟೂರ್‌ನ ‘ಡಂಕನ್ ಟೇಲರ್ ಬ್ಲ್ಯಾಕ್ ಬುಲ್ ಚಾಲೆಂಜ್ ಗಾಲ್ಫ್ ಟೂರ್ನಿ’ಯಲ್ಲಿ ಕಿರೀಟ ಮುಡಿಗೇರಿಸಿಕೊಂಡರು.

ಕರ್ನಾಟಕ ಗಾಲ್ಫ್ ಸಂಸ್ಥೆ ಕೋರ್ಸ್‌ನಲ್ಲಿ ನಡೆದ ಟೂರ್ನಿಯ ಅಂತಿಮ ಸುತ್ತಿನ ಸ್ಪರ್ಧೆಯನ್ನು ಅವರು 65 ಸ್ಟ್ರೋಕ್‌ಗಳೊಂದಿಗೆ ಕೊನೆಗೊಳಿಸಿದರು. ಈ ಮೂಲಕ ನಾಲ್ಕು ದಿನಗಳಲ್ಲಿ ಒಟ್ಟು 268 ಸ್ಕೋರ್‌ಗಳೊಂದಿಗೆ ಅಗ್ರಸ್ಥಾನ ಪಡೆದರು.

ಓಂಪ್ರಕಾಶ್, ಅಂತರರಾಷ್ಟ್ರೀಯ ಟೂರ್ನಿಯಲ್ಲಿ ಇದೇ ಮೊದಲ ಬಾರಿ ಚಾಂಪಿಯನ್ ಆಗಿದ್ದಾರೆ. ಟ್ರೋಫಿಯ ಜತೆ ₹ 39.52 ಲಕ್ಷ ಬಹುಮಾನ ತಮ್ಮದಾಗಿಸಿಕೊಂಡರು. ಸ್ಪೇನ್‌ನ ವಿಕ್ಟರ್ ಪಾಸ್ಟರ್ ಮತ್ತು ಇಂಗ್ಲೆಂಡ್‌ನ ಆ್ಯಶ್ಲೆ ಚೆಸ್ಟರ್ಸ್ ಜಂಟಿ 2ನೇ ಸ್ಥಾನ ಪಡೆದರು.

ಕಠಿಣ ಪರಿಶ್ರಮವೇ ಯಶಸ್ಸಿಗೆ ದಾರಿ: ನೀರಜ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಠಿಣ ಪರಿಶ್ರಮವೇ ಯಶಸ್ಸಿಗೆ ದಾರಿ. ಕ್ರೀಡಾಪಟು ಆಗುವ ಕನಸು ನಿಮ್ಮದಾಗಿದ್ದರೆ ನಿಮ್ಮ ಗುರಿ ಒಲಿಂಪಿಕ್ಸ್ ಚಿನ್ನ ಗೆಲ್ಲುವುದಾಗಬೇಕು ಎಂದು ಟೋಕಿಯೊ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಜಾವೆಲಿನ್ ಥ್ರೊ ಅಥ್ಲೀಟ್ ನೀರಜ್ ಚೋಪ್ರಾ ಹೇಳಿದರು.

ಇಲ್ಲಿಯ ಯಲಹಂಕದಲ್ಲಿರುವ ವಿಶ್ವ ವಿದ್ಯಾಪೀಠ ಶಾಲೆಯ ಕ್ರೀಡಾ ಕಾರ್ಯಕ್ರಮದಲ್ಲಿ ಶನಿವಾರ ಪಾಲ್ಗೊಂಡಿದ್ದ ಅವರು ಮಕ್ಕಳಿಗೆ ಕಿವಿಮಾತು ಹೇಳಿದರು.

‘ನಾನು ಚಿನ್ನದ ಪದಕ ಗೆದ್ದಿದ್ದಕ್ಕೆ ನಮ್ಮ ರಾಷ್ಟ್ರಗೀತೆಯು ಒಲಿಂಪಿಕ್ ಅಂಗಣದಲ್ಲಿ ಮೊಳಗುವಂತಾಯಿತು. ವೈಫಲ್ಯಗಳಿಗೆ ಕುಗ್ಗದೆ ಮುನ್ನುಗ್ಗಬೇಕು’ ಎಂದು ನೀರಜ್ ನುಡಿದರು. ತಮ್ಮ ಸಾಧನೆಯ ಹಿಂದಿನ ಶ್ರಮದ ಕುರಿತು ಮಕ್ಕಳೊಂದಿಗೆ ಹಂಚಿಕೊಂಡರು. ಕಾರ್ಯಕ್ರಮದ ಬಳಿಕ ಚೋಪ್ರಾ ಬಳ್ಳಾರಿಯ ಇನ್‌ಸ್ಪೈರ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೋರ್ಟ್‌ಗೆ ತೆರಳಿದರು.



ಶಾಲಾಮಕ್ಕಳಿಗೆ ಆಟೊಗ್ರಾಫ್ ನೀಡಿದ ನೀರಜ್ ಚೋಪ್ರಾ

ಹಾಕಿ ಟೂರ್ನಿ: ಬೇರೆರ ತಂಡಕ್ಕೆ ಗೆಲುವು

ನಾಪೋಕ್ಲು (ಕೊಡಗು ಜಿಲ್ಲೆ): ಬೇರೆರ ಬಿಪಿನ್ ಬೋಪಣ್ಣ ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನೊಂದಿಗೆ ಬೇರೆರ ತಂಡವು ಚಿಕ್ಕಂಡ ತಂಡದ ವಿರುದ್ಧ 5-0 ಅಂತರದಿಂದ ಗೆಲುವು ಸಾಧಿಸಿತು.

ಸಮೀಪದ ಚೆರಿಯ ಪರಂಬುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕೊಡವ ಕೌಟುಂಬಿಕ ಟೂರ್ನಿಯಲ್ಲಿ ಭಾನುವಾರ ಕಾಂಗಿರ ತಂಡ ಕಿರಿಯಮಾಡ ತಂಡದ ವಿರುದ್ಧ 1-0ಯಿಂದ, ಮಚ್ಚಾರಂಡ ತಂಡ ತೀತಿರ (ಹುದಿಕೇರಿ) ವಿರುದ್ಧ 5-1ರಿಂದ, ಮುಂಡಚಾಡಿರ ಪೋರಂ ಗಡ ವಿರುದ್ಧ 2-0ಯಿಂದ ಜಯ ಸಾಧಿಸಿತು.

ಚೆರುವಾಳಂಡ ತಂಡ ಮಾಪಂಗಡ ತಂಡದ ವಿರುದ್ಧ, ಮಾರ್ಚಂಡ ತಂಡವು ಮುಕ್ಕಾಟಿರ (ಮೂವತ್ತೋಕ್ಲು) ತಂಡದ ವಿರುದ್ಧ 3- 1, ಕುಲ್ಲಚಂಡ ತಂಡವು ಬಾಳೆಯಡ ವಿರುದ್ಧ 2-1 ಮತ್ತು ಕಳ್ಳಿಚಂಡ ಮೇವಡ ತಂಡದ ವಿರುದ್ಧ 2-0 ಅಂತರದ ಜಯ ಸಾಧಿಸಿದವು.

ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿ

ಸಾತ್ವಿಕ್–ಚಿರಾಗ್ ಚಾಂಪಿಯನ್



ಸ್ವಿಸ್ ಓಪನ್ ಪ್ರಶಸ್ತಿಯೊಂದಿಗೆ ಚಿರಾಗ್ ಶೆಟ್ಟಿ (ಎಡ) ಮತ್ತು ಸಾತ್ವಿಕ್ –ಎಸ್‌ಎಐ ಮೀಡಿಯಾ ಟ್ವಿಟರ್ ಚಿತ್ರ

ಬಾಸೆಲ್ (ಪಿಟಿಐ): ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಸ್ವಿಸ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಚಾಂಪಿಯನ್ ಆದರು.

ಭಾನುವಾರ ನಡೆದ ಪುರುಷರ ಡಬಲ್ಸ್ ವಿಭಾಗದ ಫೈನಲ್‌ನಲ್ಲಿ ಭಾರತದ ಜೋಡಿ 21–19, 24–22 ರಲ್ಲಿ ಚೀನಾದ ರೆನ್ ಕ್ಸಿಯಾನ್ ಯು–ತಾನ್ ಕ್ವಿಯಾಂಗ್ ವಿರುದ್ಧ ಗೆದ್ದಿತು.

ಇಲ್ಲಿ ಎರಡನೇ ಶ್ರೇಯಾಂಕ ಪಡೆದಿದ್ದ ಸಾತ್ವಿಕ್-ಚಿರಾಗ್ ಅವರು ಪ್ರಬಲ ಸ್ಮ್ಯಾಷ್‌ಗಳು ಮತ್ತು ಚುರುಕಿನ ರಿಟರ್ನ್‌ಗಳ ಮೂಲಕ ಎದುರಾಳಿಗಳ ಮೇಲೆ ಒತ್ತಡ ಹೇರಿ 54 ನಿಮಿಷಗಳಲ್ಲಿ ಗೆಲುವು ಒಲಿಸಿಕೊಂಡರು.

ಸಾತ್ವಿಕ್ ಮತ್ತು ಚಿರಾಗ್ ಅವರು ಹಿಂದಿನ ಮೂರು ಪಂದ್ಯಗಳಲ್ಲೂ ಮೂರು ಗೇಮ್‌ಗಳನ್ನು ಆಡಿ ಫೈನಲ್ ಪ್ರವೇಶಿಸಿದ್ದರು. ಚೀನಾದ ಜೋಡಿ ಎದುರಾಳಿಗಳಿಗೆ ಯಾವುದೇ ಗೇಮ್ ಬಿಟ್ಟುಕೊಡದೆ ಫೈನಲ್ ಪ್ರವೇಶಿಸಿತ್ತು.

ಭಾರತದ ಆಟಗಾರರಿಗೆ ಈ ಋತುವಿನಲ್ಲಿ ದೊರೆತ ಚೊಚ್ಚಲ ಪ್ರಶಸ್ತಿ ಇದಾಗಿದೆ. ಈ ಮೂಲಕ ಕಳೆದ ವಾರ ನಡೆದಿದ್ದ ಆಲ್ ಇಂಗ್ಲೆಂಡ್ ಓಪನ್ ಚಾಂಪಿಯನ್‌ಷಿಪ್‌ನಲ್ಲಿ ಎದುರಾಗಿದ್ದ ನಿರಾಶೆಯನ್ನು ಮರೆಸುವಲ್ಲಿ ಯಶಸ್ವಿಯಾದರು. ಅಲ್ಲಿ ಎರಡನೇ ಸುತ್ತಿನಲ್ಲಿ ಹೊರಬಿದ್ದಿದ್ದರು.

ಭಾರತದ ಜೋಡಿ ವಿಶ್ವ ಟೂರ್‌ನಲ್ಲಿ ಒಟ್ಟಾರೆಯಾಗಿ ಐದನೇ ಪ್ರಶಸ್ತಿ ಗೆದ್ದ ಸಾಧನೆ ಮಾಡಿದೆ. ಕಳೆದ ವರ್ಷ ಇಂಡಿಯನ್ ಓಪನ್ ಮತ್ತು ಫ್ರೆಂಚ್ ಓಪನ್‌ನಲ್ಲಿ ಚಾಂಪಿಯನ್ ಆಗಿತ್ತು. ಅದಕ್ಕೂ ಮುನ್ನ 2019ರಲ್ಲಿ ಥಾಯ್ಲೆಂಡ್ ಓಪನ್ ಹಾಗೂ 2018ರಲ್ಲಿ ಹೈದರಾಬಾದ್ ಓಪನ್ ಪ್ರಶಸ್ತಿ ಜಯಿಸಿತ್ತು.

ಸಾತ್ವಿಕ್ ಮತ್ತು ಚಿರಾಗ್ ಕಳೆದ ವರ್ಷ ನಡೆದಿದ್ದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದರು. ಸ್ವಿಸ್ ಓಪನ್‌ನ ಡಬಲ್ಸ್ ವಿಭಾಗದಲ್ಲಿ ಭಾರತದ ಆಟಗಾರರು ಚಾಂಪಿಯನ್ ಆಗಿದ್ದು ಇದೇ ಮೊದಲು.

ಟಿ20: ದಕ್ಷಿಣ ಆಫ್ರಿಕಾಕ್ಕೆ ದಾಖಲೆ ಜಯ

ಸೆಂಚುರಿಯನ್, ದಕ್ಷಿಣ ಆಫ್ರಿಕಾ (ಎಎಫ್‌ಪಿ): ದಕ್ಷಿಣ ಆಫ್ರಿಕಾ ತಂಡದವರು ಟಿ20 ಕ್ರಿಕೆಟ್‌ನಲ್ಲಿ ಅತಿದೊಡ್ಡ ಮೊತ್ತವನ್ನು ಬೆನ್ನಟ್ಟಿ ಗೆಲುವು ಪಡೆದು ವಿಶ್ವದಾಖಲೆ ಮಾಡಿದರು.

ಭಾನುವಾರ ನಡೆದ ಪಂದ್ಯದಲ್ಲಿ ಏಡನ್ ಮರ್ಕರಂ ಬಳಗ ಆರು ವಿಕೆಟ್‌ಗಳಿಂದ ವೆಸ್ಟ್ ಇಂಡೀಸ್ ತಂಡವನ್ನು ಮಣಿಸಿತು.

ಮೊದಲು ಬ್ಯಾಟ್ ಮಾಡಿದ ವೆಸ್ಟ್ ಇಂಡೀಸ್ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 258 ರನ್ ಪೇರಿಸಿತು. ಜಾನ್ಸನ್ ಚಾರ್ಲ್ಸ್ (118 ರನ್, 46 ಎ., 4X10, 6X11) ಮತ್ತು ಕೈಲ್ ಮೇಯರ್ಸ್ (51 ರನ್, 27 ಎ., 4X5, 6X4) ಅವರು ಅಬ್ಬರದ ಆಟವಾಡಿದರು.

ದಕ್ಷಿಣ ಆಫ್ರಿಕಾ 18.5 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 259 ರನ್ ಗಳಿಸಿ ಗೆದ್ದಿತು. ಕ್ವಿಂಟನ್ ಡಿಕಾಕ್ (100 ರನ್, 44 ಎ., 4X9, 6X8) ಮತ್ತು ರೀಜಾ ಹೆಂಡ್ರಿಕ್ಸ್ (68 ರನ್, 28 ಎ., 4X11, 6X2) ಅವರ ಸ್ಫೋಟಕ ಬ್ಯಾಟಿಂಗ್ ತಂಡದ ಗೆಲುವಿಗೆ ಕಾರಣವಾಯಿತು.

ಕಳೆದ ವರ್ಷ ನಡೆದಿದ್ದ ಪಂದ್ಯದಲ್ಲಿ ಬೆಲ್ಜಿಯಂ ತಂಡವು ಸರ್ಬಿಯಾ ನೀಡಿದ್ದ 246ರನ್‌ಗಳ ಗುರಿ ಬೆನ್ನಟ್ಟಿ ಗೆಲುವು ಸಾಧಿಸಿದ್ದು ಇದುವರೆಗಿನ ದಾಖಲೆಯಾಗಿತ್ತು.

ಸಂಕ್ಷಿಪ್ತ ಸ್ಕೋರ್: ವೆಸ್ಟ್ ಇಂಡೀಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 258 (ಕೈಲ್ ಮೇಯರ್ಸ್ 51, ಜಾನ್ಸನ್ ಚಾರ್ಲ್ಸ್ 118, ರೊಮಾರಿಯೊ ಶೆಫರ್ಡ್ ಔಟಾಗದೆ 41, ಮಾರ್ಕೊ ಜೆನ್ಸೆನ್ 52ಕ್ಕೆ 3, ವೇಯ್ನ್ ಪಾರ್ನೆಲ್ 43ಕ್ಕೆ 2) ದಕ್ಷಿಣ ಆಫ್ರಿಕಾ 18.5 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 259 (ಕ್ವಿಂಟನ್ ಡಿಕಾಕ್ 100, ರೀಜಾ ಹೆಂಡ್ರಿಕ್ಸ್ 68, ಏಡನ್ ಮರ್ಕರಂ ಔಟಾಗದೆ 38, ರೊವ್ಮನ್ ಪೊವೆಲ್ 27ಕ್ಕೆ 1) ಫಲಿತಾಂಶ: ದಕ್ಷಿಣ ಆಫ್ರಿಕಾಕ್ಕೆ 6 ವಿಕೆಟ್ ಗೆಲುವು

ವಿಶ್ವಕಪ್ ಶೂಟಿಂಗ್: ಸಮ್ರಾಗೆ ಕಂಚು

ಭೋಪಾಲ್ (ಪಿಟಿಐ): ಭಾರತದ ಯುವ ಶೂಟರ್ ಸಿಫ್ತ್ ಕೌರ್ ಸಮ್ರಾ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡರು.

ಭಾನುವಾರ ನಡೆದ ಮಹಿಳೆಯರ 50 ಮೀ. ರೈಫಲ್ 3ಪಿ ವಿಭಾಗದಲ್ಲಿ ಅವರು ಈ ಸಾಧನೆ ಮಾಡಿದರು. ಅಂತರರಾಷ್ಟ್ರೀಯ ಕೂಟದ ಸೀನಿಯರ್ ವಿಭಾಗದಲ್ಲಿ ಸಮ್ರಾಗೆ ದೊರೆತ ಎರಡನೇ ಪದಕ ಇದು. ಕಳೆದ ವರ್ಷ ಚೀನಾದ ಚಾಂಗ್ವಾನ್‌ನಲ್ಲಿ ನಡೆದಿದ್ದ ವಿಶ್ವಕಪ್‌ನಲ್ಲಿ ಅವರು ಕಂಚು ಜಯಿಸಿದ್ದರು.

ಚೀನಾದ ಜಾಂಗ್ ಕ್ವಿಯಾಂಗ್‌ಯು ಚಿನ್ನ ಗೆದ್ದುಕೊಂಡರೆ, ಜೆಕ್ ಗಣರಾಜ್ಯದ ಅನೆಟಾ ಬ್ರಾಬ್ಕೊವಾ ಬೆಳ್ಳಿ ತಮ್ಮದಾಗಿಸಿಕೊಂಡರು.ಸಮ್ರಾ ಅವರು ರ‍್ಯಾಂಕಿಂಗ್ ಸುತ್ತಿನಲ್ಲಿ 403.9 ಪಾಯಿಂಟ್ಸ್ ಗಳಿಸಿ 3ನೆಯವರಾದರು. ಚಿನ್ನಕ್ಕಾಗಿ ನಡೆದ ಪೈಪೋಟಿಯಲ್ಲಿ ಜಾಂಗ್ 16–8 ರಲ್ಲಿ ಜೆಕ್ ಶೂಟರ್ ವಿರುದ್ಧ ಗೆದ್ದರು.

ಸಂಕ್ಷಿಪ್ತ ಸುದ್ದಿ

‘ಮೈಸೂರು ಓಪನ್’ ಟೆನಿಸ್ ಇಂದಿನಿಂದ

ಮೈಸೂರು: ಅರಮನೆ ನಗರಿಯಲ್ಲಿ ಸೋಮವಾರದಿಂದ ಐಟಿಎಫ್ ಮೈಸೂರು ಓಪನ್ ಟೆನಿಸ್ ಟೂರ್ನಿ ನಡೆಯಲಿದೆ. ಇಲ್ಲಿಯ ಚಾಮರಾಜಪುರಂನಲ್ಲಿರುವ ಪ್ರತಿಷ್ಠಿತ ಮೈಸೂರು ಟೆನಿಸ್ ಕ್ಲಬ್‌ನಲ್ಲಿ ಎಂಟು ವರ್ಷದ ನಂತರ ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಆಶ್ರಯದಲ್ಲಿ ಐಟಿಎಫ್ ಟೂರ್ನಿ ನಡೆಯಲಿದೆ.

‘ಟೂರ್ನಿಯ ಮುಖ್ಯಸುತ್ತಿನ ಹಣಾಹಣಿ ಮಾರ್ಚ್ 28ರಿಂದ ನಡೆಯಲಿದೆ. 32 ಮಂದಿ ಕಣದಲ್ಲಿದ್ದು, ನಾಲ್ವರು ವೈಲ್ಡ್ ಕಾರ್ಡ್ ಮೂಲಕ ಪ್ರವೇಶ ಪಡೆದಿದ್ದಾರೆ. 8 ಮಂದಿ ಅರ್ಹತಾ ಸುತ್ತಿನ ಮೂಲಕ ಬರಲಿದ್ದಾರೆ. ಡಬಲ್ಸ್‌ನಲ್ಲಿ 16 ತಂಡಗಳು ಆಡಲಿವೆ’ ಎಂದು ಟೂರ್ನಿಯ ನಿರ್ದೇಶಕ ಪೀಟರ್ ವಿಜಯ್ ಕುಮಾರ್ ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಡೇಜಗೆ ಬಡ್ತಿ

ನವದೆಹಲಿ (ಪಿಟಿಐ): ಭಾರತ ತಂಡದ ಆಲ್‌ರೌಂಡರ್ ರವೀಂದ್ರ ಜಡೇಜ ಅವರು ಬಿಸಿಸಿಐ ವಾರ್ಷಿಕ ಗುತ್ತಿಗೆ ಪಟ್ಟಿಯಲ್ಲಿ ‘ಎ ಪ್ಲಸ್’ ದರ್ಜೆಗೆ ಬಡ್ತಿ ಪಡೆದಿದ್ದಾರೆ. ಮಂಡಳಿಯು ಭಾನುವಾರ ಗುತ್ತಿಗೆಯನ್ನು ಪ್ರಕಟಿಸಿದೆ.

ಬ್ಯಾಟರ್ ಕೆ.ಎಲ್. ರಾಹುಲ್ ಅವರು 'ಬಿ’ ದರ್ಜೆಗೆ ಹಿಂಬಡ್ತಿ ಪಡೆದಿದ್ದಾರೆ. ಭುವನೇಶ್ವರ್ ಕುಮಾರ್, ಅಜಿಂಕ್ಯ ರಹಾನೆ ಮತ್ತು ಇಶಾಂತ್ ಶರ್ಮಾ ಪಟ್ಟಿಯಲ್ಲಿ ಸ್ಥಾನ ಪಡೆದಿಲ್ಲ.